MADRAS GOVT. ORIENTAL MANUSCRIPTS SERIES NO. 20.

వేంకామాత్యకవి విరచితం

శ్రీమద్రామాయణం

# సుందరకాండం

# SUNDARAKĀṆḌAM

(RĀMĀYAṆAM) of VENKĀMĀTYA

*Edited By*

T. CHANDRASEKHARAN, M.A., L.T.,

*Curator, Government Oriental Manuscripts Library, Madras.*

AND

THE STAFF OF THE LIBRARY

UNDER THE ORDERS OF THE GOVERNMENT OF MADRAS.

1952

[Price Rs. 4—0—0

MADRAS GOVT. ORIENTAL MANUSCRIPTS SERIES NO. 21.

ವೆಂಕಾಮಾತ್ಯಕವಿ ವಿರಚಿತಂ

ಶ್ರೀಮದ್ರಾಮಾಯಣಂ

# ಸುಂದರಕಾಂಡಂ

# SUNDARAKĀṆḌAM

(RĀMĀYAṆAM) of VENKĀMĀTYA

*Edited By*

T. CHANDRASEKHARAN, M.A., L.T.,

*Curator, Government Oriental Manuscripts Library, Madras.*

AND

THE STAFF OF THE LIBRARY

UNDER THE ORDERS OF THE GOVERNMENT OF MADRAS.

*1952*

[Price Rs. 4—0—0

PRINTED AT
THE SREEVATHSA PRESS
ROYAPETTAH, MADRAS.

# Introduction

Ramayana and Mahabharata, the great epics of India stand foremost in the whole range of Indian literature for their literary eminence and for the great moral influence which they command not only among the Hindu society but also among others who come under their sway. Of these, the Ramayana of Valmiki is considered to be one of the favourite epics of the country as it deals with the more essential facts and events necessary for securing perfection in family life in its various aspects according to Hindu conception. On account of this special feature, the popular story of Ramayana or particular portions of it, have been often taken up by innumerable authors and poets of India and woven beautifully in their own languages. In Kannada literature, there are several works on Ramayana, written in various forms and metres such as Campu, Vacana and Satpadi by different authors namely Pampa Ramayana of Abhinava Pampa, Torave Ramayana by Kumara Valmiki, Kumudendu Ramayana by Kumudendu Kavi etc. The Ramayana of Abhinava Pampa is based on the Jaina traditions and has no comparison with the work of Valmiki except the title. The other works, although based on the original work of Valmiki, seem to have given greater attention to the poetic effect. But the Ramayana of Poet Venkamatya deserves special attention as it is composed in Vardhaka Satpadi the gem of Kannada metres and very closely follows the Ramayana of Valmiki in every detail. No other Satpadi poet has written the whole Ramayana in Vardhaka satpadi metre. It is for this reason that this work is taken up for publication for the benefit of the Kannadigas and those who are interested in Kannada literature.

The present work Sundarakanda is taken from a single palm-leaf manuscript of Ramayana by Venkamatya, preserved in the Government Oriental Manuscripts Library, Madras, bearing Kannada D. No. 1731. It is stated in the end that the whole work contains 195 chapters and 9865 verses. But some portions in the beginning and more than half of the portion in Aranyakanda are wanting. The condition of the manuscript and mode of writing are good. Sundarakanda is complete in 22 sandhis and 1070 verses. In the beginning of each Sandhi, the poet has given the substance of the story contained therein. The author has succeeded in giving us a beautiful and faithful version of the immortal story as recorded by Valmiki besides giving the colour of his own individul ideas and ideals for the general benefit of Kannada readers. The language is quite simple and lucid. The literary and

poetic excellence of this unique work can be observed not only by scholars but also by Kannada populace. It will be found that the poem is teeming with excellent and simple figures of speech.

It is said in the Karnataka Kavicarite that the author of this work Venkamatya is the son of Ramapuri Hampeyamatya. His mother was Vamambe. The poet says that he acquired the poetic skill by the blessings of Anjaneya. His other works are Indirabhyudaya, Hanumadvilasa and Alankaramanidarpana. It is stated that Venkamatya was the Minister of Hyderali Khan, King of Mysore. Hence, his date may be 1770 A. D.

It is hoped that this popular work will be widely read and appreciated in the whole of Karnataka.

My thanks are due to Sri V. Hanumanthachar, M.A., L.T., Librarian and Sri P. Subraya Bhat, Pandit of this library for preparing the press copy and correcting the proofs. I have also to thank the Sreevathsa Press for completing the printing in an efficient manner within a short period.

*Govt. Oriental Mss. Library,*
*Madras.*
3—1—1952.

T. CHANDRASEKHARAN,
*Curator.*

# ಮುನ್ನುಡಿ

ಒಂದು ದೇಶದ ಸಂಸ್ಕೃತಿಯು ಅದರ ಹಿಂದಣಕಾಲದಿಂದ ಪರಂಪರಾನುಗತವಾಗಿ ಬಂದ ಐತಿಹ್ಯಗಳಿಂದಲೇ ಪೋಷಣೆಯನ್ನು ಹೊಂದುವುದೆಂಬುದು ಸರ್ವವಿದಿತವಾದುದಷ್ಟೆ! ಭಾರತೀಯರಿಗೆ, ಅದರಲ್ಲೂ ಹಿಂದುಗಳಿಗೆ, ರಾಮಾಯಣ ಮಹಾಭಾರತಗಳಿಗಿಂತ ಪವಿತ್ರವಾದ ಮತ್ತು ವಿಶೇಷ ಪರಿಚಯವುಳ್ಳ ಐತಿಹ್ಯಗ್ರಂಥವು ಬೇರೊಂದಿಲ್ಲ. ಇವು ಭಾರತೀಯ ಜನಜೀವನದ ಜೀವಾಳಗಳು. ಏಕೆಂದರೆ ನಮ್ಮ ಪೂರ್ವಿಕರ ಜೀವನಕ್ರಮಗಳೆಲ್ಲವೂ ಇವುಗಳಲ್ಲಿ ಪ್ರತಿಬಿಂಬಿಸುತ್ತಿವೆ. ಇವುಗಳಲ್ಲಿ ಆದಿಕಾವ್ಯವೆಂದು ಲೋಕಪ್ರಸಿದ್ಧವಾದುದು ವಾಲ್ಮೀಕಿ ರಾಮಾಯಣವು. ಈ ರಾಮಾಯಣದ ಕಥೆಯನ್ನು ಸೂತ್ರವಾಗಿಟ್ಟುಕೊಂಡು ನಿರಂಕುಶರಾದ ಕವಿಪುಂಗವರು ತಮ್ಮ ಮನಬಂದಂತೆ ಕಥೆಯನ್ನೋ ವರ್ಣನೆಯನ್ನೋ ವ್ಯತ್ಯಾಸಮಾಡಿಕೊಂಡು ತಂತಮ್ಮ ಕವಿತಾಜಾಲವನ್ನು ಹೆಣೆದಿರುವರು. ನಮ್ಮ ಪೂರ್ವದ ಕನ್ನಡ ಕವಿಗಳೂ ರಾಮಾಯಣವನ್ನು ಕಥಾವಸ್ತುವನ್ನಾಗಿಟ್ಟುಕೊಂಡು ಬೇಕುಬೇಕಾದ ಮಾರ್ಪಾಟುಗಳನ್ನು ಮಾಡಿಕೊಂಡು ಚಂಪೂರೂಪವಾಗಿಯೂ ಷಟ್ಪದೀರೂಪವಾಗಿಯೂ ವಚನರೂಪವಾಗಿಯೂ ಕಾವ್ಯಗಳನ್ನು ಕಟ್ಟಿರುವರು. ಮುಖ್ಯವಾಗಿ ನಾಗಚಂದ್ರನ ಪಂಪರಾಮಾಯಣ, ಕುಮಾರವಾಲ್ಮೀಕಿಯ ತೊರವೆರಾಮಾಯಣ, ಕುಮುದೇಂದುಕವಿಯ ಕುಮುದೇಂದು ರಾಮಾಯಣ ಮುಂತಾದುವು ಪ್ರಸಿದ್ಧವಾಗಿವೆ. ಪಂಪರಾಮಾಯಣವು ಜೈನಸರಣಿಯನ್ನನುಸರಿಸಿ ಬರೆಯಲ್ಪಟ್ಟಿದೆ. ಇಷ್ಟೆಲ್ಲಾ ರಾಮಾಯಣಗಳಿದ್ದರೂ ಷಟ್ಪದಿಗಳಲ್ಲಿ ಹಿರಿದೆನಿಸಿದ ವಾರ್ಧಕ ಷಟ್ಪದಿಯಲ್ಲಿ ಬರೆದ ರಾಮಾಯಣಗಳಾವುವೂ ಇದುವರೆಗೆ ಪ್ರಕಟವಾಗಿಲ್ಲ. ಮಾತ್ರವಲ್ಲ, ವಾಲ್ಮೀಕಿರಾಮಾಯಣದ ಕಥೆಯನ್ನೇ ಯಥಾವತ್ತಾಗಿ ಕನ್ನಡಕ್ಕೆ ಕಾವ್ಯರೂಪದಲ್ಲಿ ಪರಿವರ್ತಿಸಿದ ಗ್ರಂಥಗಳಾವುವೂ ಈತನಕ ಬೆಳಕಿಗೆ ಬಂದಿಲ್ಲ. ಈ ಕೊರತೆಯನ್ನು ನಿವಾರಿಸಲು ಕೈಗೊಂಡ ಪ್ರಯತ್ನದ ಫಲ ರೂಪವಾಗಿ ಕನ್ನಡಿಗರಿಗೆ ಅರ್ಪಿಸಿರುವ ಮೊದಲ ಪುಷ್ಪವೇ ಈ ಸುಂದರಕಾಂಡವು.

ಶ್ರೀಮದ್ರಾಮಾಯಣದಲ್ಲಿ ಸುಂದರಕಾಂಡವೊಂದನ್ನುಳಿದು ಮಿಕ್ಕ ಕಾಂಡಗಳೆಲ್ಲಕ್ಕೂ ಆಯಾ ಕಥಾಸಂದರ್ಭವನ್ನನುಸರಿಸಿ ಅನ್ವರ್ಥನಾಮಗಳಿವೆ. ಸುಂದರಕಾಂಡಕ್ಕೆ ಮಾತ್ರ ಈ ಹೆಸರು ಬರಲು ಕಾರಣವನ್ನು ಹಲವರು ಹಲವು ಪ್ರಕಾರವಾಗಿ ಹೇಳುವರು. ಸುಂದರ ಶಬ್ದವು ಕಪಿವಾಚಕವು ; ಈ ಕಾಂಡದಲ್ಲಿ ವಾನರಶ್ರೇಷ್ಠನಾದ ಆಂಜನೇಯನ ಸಾಹಸಕಾರ್ಯಗಳೇ ವಿಶೇಷವಾಗಿ ವರ್ಣಿತವಾಗಿರುವುದರಿಂದ ಇದಕ್ಕೆ ಸುಂದರಕಾಂಡವೆಂಬಂಕಿತವು ಅನ್ವರ್ಥವಾಗಿದೆಯೆಂದು ಕೆಲವರು; ಈ ಕಾಂಡದುದ್ದಕ್ಕೂ ಅಲ್ಲಲ್ಲಿ ಸೀತಾರಾಮರ ಸೌಂದರ್ಯಾತಿಶಯವನ್ನು ವರ್ಣಿಸಿರುವುದರಿಂದ ಸೌಂದರ್ಯ ಪ್ರಧಾನವಾದ ಈ ಭಾಗಕ್ಕೆ ಸುಂದರಕಾಂಡವೆಂಬ ಹೆಸರು ಬಂತೆಂದು ಇನ್ನು ಕೆಲವರು, ಹನುಮಂತನು ಸೀತಾರಾಮರ ವಿಯೋಗದುಃಖವನ್ನು ಪರಸ್ಪರರಿಗರುಹಿ, ಅವರು ಸಂತುಷ್ಟರಾಗುವಂತೆ ಮಾಡಿದುದರಿಂದ

ಈ ಹೆಸರು ಬಂದಿರಬೇಕೆಂದು ಮತ್ತೆ ಕೆಲವರು ಅಭಿಪ್ರಾಯಪಡುವರು. ಅದು ಹೇಗೂ ಇರಲಿ. ಮುಖ್ಯವಾಗಿ ಶಬ್ದಾರ್ಥರಚನೆಯಲ್ಲಿ, ಕಥಾಭಾಗದಲ್ಲಿ, ವರ್ಣನಾವೈಖರಿಯಲ್ಲಿ ಸಕಲಜನಮನೋರಂಜನವಾಗಿದ್ದು ನಿತ್ಯಪಾರಾಯಣಕ್ಕೆ ಯೋಗ್ಯವೆನಿಸಿ ಸಕಲಾರ್ಥಸಿದ್ಧಿಪ್ರದವಾಗಿರುವುದರಿಂದ ಈ ಭಾಗಕ್ಕೆ ಸುಂದರಕಾಂಡವೆಂಬ ಹೆಸರು ಒಪ್ಪವಿಟ್ಟಂತೊಪ್ಪುವುದೆನ್ನಬಹುದು.

ಸುಂದರಕಾಂಡವೆಂಬೀ ರಾಮಾಯಣ ಕಥಾಭಾಗವು ಶ್ರೀಮತ್ ವೆಂಕಾಮಾತ್ಯ ಕವಿಯಿಂದ ರಚಿತವಾದ ಶ್ರೀಮದ್ರಾಮಾಯಣ ಮಹಾಕಾವ್ಯದಿಂದ ಆರಿಸಲಾಗಿದೆ. ಗ್ರಂಥವಿದು ವಾರ್ಧಕಷಟ್ಪದೀ ರೂಪವಾಗಿದೆ. ಇದರ ಮಾತೃಕೆಯು ಮದ್ರಾಸ್ ಸರಕಾರದ ಪ್ರಾಚ್ಯ ಹಸ್ತಲಿಖಿತ ಪುಸ್ತಕಭಾಂಡಾಗಾರದ ಕನ್ನಡ ವಿಭಾಗದ D. No. 1731 ರಲ್ಲಿ ವರ್ಣಿತವಾದ ತಾಳೆಯೋಲೆಯ ಪ್ರತಿಯಾಗಿದೆ. ಈ ಗ್ರಂಥದಲ್ಲಿ ಬಾಲಕಾಂಡದ ಆದಿಯ ಸ್ವಲ್ಪಭಾಗವೂ ಅರಣ್ಯಕಾಂಡದಲ್ಲಿ ಅರ್ಧಕ್ಕಿಂತ ಹೆಚ್ಚಿನ ಭಾಗವೂ ಲುಪ್ತವಾಗಿ ಹೋಗಿದೆ. ಮಿಕ್ಕ ಕಾಂಡಗಳೆಲ್ಲವೂ ಸಂಪೂರ್ಣವಾಗಿವೆ. ಒಟ್ಟು ಸಂಧಿಗಳು 195, ಪದ್ಯಸಂಖ್ಯೆ 9865 ಎಂದು ಗ್ರಂಥಾಂತ್ಯದಲ್ಲಿ ಗೊತ್ತಾಗುತ್ತದೆ. ಈ ರಾಮಾಯಣ ಕಥೆಯನ್ನು ಶಿವನು ಪಾರ್ವತಿಗೆ ಹೇಳಿದಂತೆಯೂ ಆಮೇಲೆ ಸೂತನು ಋಷಿಗಳಿಗೆ ಹೇಳಿದಂತೆಯೂ ತಿಳಿಯುತ್ತದೆ. ಪ್ರತಿಯೊಂದು ಕಾಂಡದ ಕೊನೆಯಲ್ಲಿ ಈ ಕೆಳಗಿನ ಗದ್ಯವಿದೆ :

"ಇದು ರಾಮಚಂದ್ರ ಪಾದಾರವಿಂದ ವಂದನ ಪವನನಂದನ ವರಪ್ರಸಾದಾಸಾದಿತ ಸರಸಸಾಹಿತ್ಯ ಸಾಮ್ರಾಜ್ಯ ಸರ್ವಂಕಷ ಚತುರ್ವಿಧಕವಿತಾ ಪರಿಶೀಲನಾತ್ಮನಿಷ್ಠಾಗರಿಷ್ಠ ಗಾಂಧರ್ವಕಳಾವಿದ ವಿದ್ವಜ್ಜನೋಪಲಾಲನೀಯ ರಾಮಪುರೀ ಹಂಪೆಯಾಮಾತ್ಯತನೂಭವ ವೆಂಕಾಪ್ಪಯ ವಿರಚಿತಮಾದ ಶ್ರೀಮದ್ರಾಮಾಯಣ ಮಹಾಪ್ರಬಂಧದೊಳ್............ಸಮಾಪ್ತಂ"

ಗ್ರಂಥಕರ್ತೃವಿನ ವಿಚಾರವಾಗಿ ಕರ್ಣಾಟಕ ಕವಿಚರಿತ್ರಕಾರರು ಹೀಗೆ ಬರೆಯುತ್ತಾರೆ: "ಈತನು ರಾಮಾಯಣ, ಇಂದಿರಾಭ್ಯುದಯ, ಅಲಂಕಾರಮಣಿದರ್ಪಣ, ಹನುಮದ್ವಿಲಾಸಗಳೆಂಬ ಗ್ರಂಥಗಳನ್ನು ಬರೆದಿದ್ದಾನೆ. ಇವನು ಬ್ರಾಹ್ಮಣಕವಿ. ಈತನ ತಂದೆ ರಾಮಪುರೀ ಹಂಪೆಯಾಮಾತ್ಯ. ತಾಯಿ ವಾಮಾಂಬೆ. ರಾಮಾಯಣದ ಕೊನೆಯ ಗದ್ಯದಲ್ಲಿ ತಾನು ಆಂಜನೇಯ ವರಪ್ರಸಾದದಿಂದ ಸರಸಸಾಹಿತ್ಯ ಸಾಮ್ರಾಜ್ಯವನ್ನು ಪಡೆದವನೆಂದೂ ಚತುರ್ವಿಧಕವಿತಾವಿಶಾರದನೆಂದೂ ಗಾಂಧರ್ವಕಳಾವಿದನೆಂದೂ ಹೇಳಿಕೊಂಡಿದ್ದಾನೆ. ಇವನ ಅಲಂಕಾರಮಣಿದರ್ಪಣದಲ್ಲಿ ಇವನಿಗೆ ಷಡ್ದರ್ಶನೀವಲ್ಲಭ, ಘಟಿಕಾಪ್ರಬಂಧ ರಚನಾವಿದಗ್ಧ ಎಂಬ ವಿಶೇಷಣಗಳು ಹೇಳಿವೆ. ಇವನು ಹೈದರಲ್ಲಿಖಾನನಲ್ಲಿ ಮಂತ್ರಿಯಾಗಿದ್ದಂತೆ ತಿಳಿದುಬರುವುದರಿಂದ ಇವನ ಕಾಲವು ಸು. 1770 ಆಗಬಹುದು. ಪೂರ್ವಕವಿಗಳಲ್ಲಿ ಭಾಸ, ಬಾಣ, ಮಯೂರ, ದಂಡಿ, ಕಾಳಿದಾಸಾದಿ ಸಂಸ್ಕೃತ ಕವಿಗಳನ್ನು ಹರೀಶ್ವರ ರುದ್ರಭಟ್ಟ—ಈ ಕನ್ನಡ ಕವಿಗಳನ್ನು ಸ್ಮರಿಸಿದ್ದಾನೆ."



ಸುಂದರಕಾಂಡದಲ್ಲಿ ಸಂಧಿಗಳು ೨೨. ಒಟ್ಟು ಪದ್ಯಸಂಖ್ಯೆ ೧೦೭೧. ಕವಿಯು ಪ್ರತಿಯೊಂದು ಸಂಧಿಯ ಕಥಾಭಾಗವನ್ನು ಆಯಾಸಂಧಿಯ ಮೊದಲಲ್ಲಿ ಸೂಚನಾರೂಪವಾಗಿ ಕೊಟ್ಟಿರುವನು. ಮಂಗಲಾಚರಣಾನಂತರ ಇಡೀ ಸುಂದರಕಾಂಡದ ಕಥಾಭಾಗವನ್ನು ಸಂಗ್ರಹಿಸಿ ಈ ಕೆಳಗಿನ ಪದ್ಯದಲ್ಲಿ ಹೇಳಿರುವನು.—

ಸಿಂಧುವನ್ನಂಘುವೆನೆ ತಿಳಿದು ಛಾಯಾಗ್ರಹವ |
ಕೊಂದು ಲಂಕಿಣಿಯಮರ್ದಿಸಿ ನಿಶೆಯೊಳಾಧರಾ |
ನಂದನೆಯ ನೋಡಿ ಶ್ರೀರಾಮಮುದ್ರೆಯನಿತ್ತು ಕೊಂಡು ಚೂಡಾಮಣಿಯನು ||
ನಂದನವ ಸಂಹರಿಸುತಕ್ಷಾದಿಗಳ ಗೆಲಿದು |
ಮಂದಮತಿ ರಾವಣನ ಧಿಕ್ಕರಿಸಿ ಮರಳಿ ಕಪಿ |
ವೃಂದಮಂ ಹರುಷಗೊಳಿಸಿದ ಮರುತಭವನೆಮಗೆ ಕುಡುಗೆ ಸಾಂದ್ರಾನಂದಮಂ ||

ಈ ಗ್ರಂಥದ ಬಂಧವು ಲಲಿತವಾಗಿಯೂ ಮೃದುಮಧುರಗಂಭೀರವಾಗಿಯೂ ದೇಶ್ಯಪದಭೂಯಿಷ್ಠವಾಗಿಯೂ ಇದ್ದು ಸರಾಗವಾಗಿ ಪ್ರವಹಿಸುತ್ತಿದೆ. ಭಾಷಾದೃಷ್ಟಿಯಿಂದ ನೋಡಿದರೆ, ಇದರಲ್ಲಿಹೊಸಗನ್ನಡ ಶಬ್ದಪ್ರಯೋಗಗಳು ಹೆಚ್ಚಾಗಿ ಕಂಡುಬರುತ್ತಿವೆ. ಕನ್ನಡನಾಡಿನಲ್ಲಿ ಬಳಕೆಯಲ್ಲಿರುವ ಹಲವು ನ್ಯಾಯನೀತಿಗಳು ನಾಡಗಾದೆಗಳು ಛಂದೋರೂಪದಲ್ಲಿ ಬಂಧಿಸಲ್ಪಟ್ಟಿವೆ. ಈ ಸುಂದರಕಾಂಡದಲ್ಲಿ ಮುಖ್ಯವಾಗಿ ದೂತಲಕ್ಷಣವೂ ಸ್ತ್ರೀಯರ ಶೀಲ ಸ್ವಭಾವಾದಿಗಳೂ ಅವರಿಗೆ ಬೇಕಾದ ಪಾತಿವ್ರತ್ಯಾದಿ ಗುಣಗಳೂ ಎಲ್ಲರಿಗೂ ಸುಲಭವಾಗಿ ಅರ್ಥವಾಗುವಂತೆ ಸರಳ ಸುಂದರ ಶೈಲಿಯಲ್ಲಿ ಬೋಧಿಸಲ್ಪಟ್ಟಿವೆ. ಇಂತಹ ಅಮೂಲ್ಯವಾದೀಗ್ರಂಥವು ಕನ್ನಡಿಗರೆಲ್ಲರ ಮೆಚ್ಚುಗೆಗೆ ಪಾತ್ರವಾಗದಿರದೆಂದು ಆಶಿಸಲಾಗಿದೆ.

ಇದರ ಮುದ್ರಣಪ್ರತಿಯನ್ನು ಸಿದ್ಧಪಡಿಸಿ ಪ್ರೂಫ್‌ಗಳನ್ನು ತಿದ್ದಿಕೊಟ್ಟ ಶ್ರೀ. ಹನುಮಂತಾಚಾರ್ ಎಮ್. ಎ. ಎಲ್. ಟಿ. ಮತ್ತು ಲೈಬ್ರೆರಿಯಲ್ಲಿ ಕನ್ನಡ ಪಂಡಿತರಾಗಿರುವ ವಿದ್ವಾನ್ ಶ್ರೀ. ಪಿ. ಸುಬ್ರಾಯ ಭಟ್, ಇವರ ಕಾರ್ಯದಕ್ಷತೆಯು ಸಂಸ್ಮರಣೀಯವು.

ಕೊನೆಯದಾಗಿ ಈ ಗ್ರಂಥವನ್ನು ಸಕಾಲದಲ್ಲಿ ಅಂದವಾಗಿ ಅಚ್ಚುಮಾಡಿಕೊಟ್ಟಿರುವ ಶ್ರೀವತ್ಸಮುದ್ರಣಾಲಯದವರಿಗೆ ನಮ್ಮ ಕೃತಜ್ಞತೆಯು ಸಲ್ಲಬೇಕಾಗಿದೆ.

ಗವರ್ನಮೆಂಟ್ ಓರಿಯಂಟಲ್
ಮಾನ್ಯುಸ್ಕ್ರಿಪ್ಟ್ಸ ಲೈಬ್ರರಿ,
ಮದರಾಸ್—5

**ತಿ. ಚಂದ್ರಶೇಖರನ್.**

## ಶುದ್ಧಾಶುದ್ಧ ಪತ್ರಿಕೆ

| ಪುಟ | ಪಂಙ್ತಿ | ಅಶುದ್ಧ | ಶುದ್ಧ |
|---|---|---|---|
| 6 | 35 | ಯೂಹ | ಯೂರು |
| 23 | 21 | ಪೇಳ್ದರುಹೆ | ಪೇಳ್ದರುಗೆ |
| 80 | 9 | ಉಪ್ಪ್ರಮುಪೋತ್ರಿ | ಘೃಷ್ಟಿಯಂ ಉಪ್ಪ್ರಮು |
| 109 | 19 | ಚತುರ್ಥೀಚಂದು | ಚತುರ್ಥೀಂದು |
| 132 | 6 | ಮದಲಿಂಗ | ಮದದಿಂದ |
| 136 | 19 | ಕೃ | ಕುಲ |
| 148 | 36 | ಮೊದಲೊಳ್ಪುಹಸ್ತ | ಮೊದಲೊಳ್ಪ್ರಹಸ್ತ |
| 185 | 29 | ನಿಯುತಪರ್ಬುದ | ನಿಯುತಮರ್ಬುದ |
| 190 | 10 | ಸಂಪದವನಿತ್ತು ಸಲಹಿ | ಸಂಪದವನಿತ್ತು ಕೃಪೆವೆತ್ತು ಸಲಹಿ |

ಶ್ರೀಃ

ವೆಂಕಾಮಾತ್ಯಕವಿ ವಿರಚಿತಂ

# ಶ್ರೀಮದ್ರಾಮಾಯಣಂ

## ಸುಂದರಕಾಂಡಂ

### ಮೊದಲನೆಯ ಸಂಧಿ

( ಮಂಗಲಾಚರಣೆ )

ಶ್ರೀ ಜಾನಕೀಶಿರೋರತ್ನಮಂ ಸಂಪತ್ಸ |
ಮಾಜಗಳ ಕೈಗೈವ ಯತ್ನಮಂ ಶುಭವಿಭವ |
ರಾಜಿಗಳನೊಲಿದೀವ ನೂತ್ನಮಂ ತಂದಿತ್ತ ಮಾರುತಿಯ ನೋಡಿ ಮುದದಿ ||
ರಾಜಶೇಖರಹರಿವಿರಿಂಚಿಗಳಿಗಳವಡದ |
ರಾಜೀವಸ್ವಾತ್ಮಪ್ರಧಾನಮಂ ದಯೆಗೈದ |
ರಾಜೀವಸಖಕುಲವನಧಿಚಂದ್ರನೆಮಗೀಯಲಾನಂದಸಂದೋಹಮಂ || ೧ ||

ಸಿಂಧುವನ್ನಂಥುವೆನೆ ತಿಳಿದು ಛಾಯಾಗ್ರಹವ |
ಕೊಂದು ಲಂಕಿಣಿಯ ಮರ್ದಿಸಿ ನಿಶೆಯೊಳಾ ಧರಾ |
ನಂದನೆಯ ನೋಡಿ ಶ್ರೀರಾಮಮುದ್ರೆಯನಿತ್ತು ಕೊಂಡು ಚೂಡಾಮಣಿಯನು ||
ನಂದನವ ಸಂಹರಿಸುತಕ್ಷಾದಿಗಳ ಗೆಲಿದು |
ಮಂದಮತಿ ರಾವಣನ ಧಿಕ್ಕರಿಸಿ ಮರಳಿ ಕಪಿ |
ವೃಂದಮಂ ಹರುಷಗೊಳಿಸಿದ ಮರುತಭವನೆಮಗೆ ಕುಡುಗೆ ಸಾಂದ್ರಾನಂದಮಂ || ೨ ||

( ಪೀಠಿಕೆ )

ರಾಮಚರಿತಾಮೃತಂ ರಮಣೀಯತರಭವ |
ತ್ಕೋಮಲ ಸುವಾಣಿಯಿಂ ಕಲಿತಮಾದಡೆ ಶ್ರವಣ |
ದಾ ಮಹಾ ಸಾಮ್ರಾಜ್ಯಮಂ ಸವಿದು ಪೆರಸಾರದೆನ್ನ ಮಾನಸ ಮಹೇಶ ||
ಶ್ರೀಮತ್ಸಮೃದ್ಧಿಕರ ಸುಂದರ ಸುಕಾಂಡಮಂ |
ಪ್ರೇಮದಿಂ ಬಿತ್ತರಿಸಿ ಕೃತಿಯೆನಿಸವೇಳ್ಕೆಂದು |
ಸೋಮಶೇಖರಗೆ ಪಾರ್ವತಿ ಬಿನ್ನಪಂಗೈದರಾ ವೃಷಧ್ವಜ ನುಡಿದನು || ೩ ||

ಪರಮಪಾವನಚರಿತೆ ಪಾರ್ವತಿ ಭವತ್ಪುಣ್ಯಾ |
ಪರಿಕರವನೆಂತೆನುತ ನುತಿಪೆ ಶ್ರೀರಾಘವನ |
ವರ ಚರಿತ್ರೆಯ ಭಕ್ತಿಯಿಂದ ಪರಿಭಾವನಂಗೈದಾಲಿಸುವೆ ಮೋದದಿ ||
ಸುರರೊಳಗ್ಗಳೆ ನೀನೆ ಯಾದರಾಲಿಪುದು ಶ್ರೀ |
ಕರ ಶುಭೋದಯಗಳಂ [1]ಸ್ಮರಣಮಾತ್ರದೊಳೀವ |
ಪರಮ ಹರುಷೋನ್ನತಿಯ ಸುಂದರ ಸುಕಾಂಡಮಂ ಪೇಳ್ವೆನಾನಂದದಿಂದೆ || ೪ ||

---

1 ಸ್ಮರಣೆ.

( ಕಥಾವಸ್ತು )

ಒಲಿದ ಸಂಪತ್ಸಮೃದ್ಧಿಗೆ ಫಲಂ ಕರುಣದಿಂ |
ಕುಲವ ಸಂರಕ್ಷಿಸುವದೆಂದೆನುತ ಮಾರುತಿಯು |
ನಲವಿಂ ಮಹೇಂದ್ರಶಿಖರವನೇರ್ದ ದಿನನಾಥನುದಯಾದ್ರಿಯಡರುವಂತೆ ||
ಗೆಲವಿಂದ ಜಾಂಬವಾದ್ಯಖಿಳಬಾಂಧವರೆಲ್ಲ |
ಪಲವುವಿಧ ಹರ್ಷದಿಂ ಪೊಗಳುತಿರಲನಿಲಸುತ |
ಜಲರಾಶಿಯಂ ಮುದದೊಳೀಕ್ಷಿಸಿದನೆರಡನೆಯ ಕಲಶಭವನೆಂಬಂದದಿ || ೫ ||

ಪದಘಟ್ಟಣೆಗೆ ಶೈಲಮದುರೆ ಹರಿ ಶಾರ್ದೂಲ |
ಮದಕರಿಯು ಚಮರ ಸೃಮರಂಗಳೆಲ್ಲವು ಭಯದಿ |
ಚದರಿ ನಾಲ್ದೆಸೆಗೈದಲಾ ಗುಹಾಶಯಗಳಲಿ ಕ್ರೀಡಿಸಲು ನೆರೆದು ತೋರ್ಪ ||
ಚದುರಗಂಧರ್ವಕಿನ್ನರ ಯುವತಿಯರು ಬೆಚ್ಚಿ |
ಕದಬದಲ್ವ್ಯತ್ಯಸ್ತಕರಭೂಷಣಂಗಳಿಂ |
ದೊದಗಿ ಪತಿಗಳನಪ್ಪಿ ಬಾನೆಡೆಯನಡರಿದರು ಪ್ರಳಯ ಸಮನಿಸಿತೆನ್ನುತ || ೬ ||

ತೋಳ ಬಿರುಗಾಳಿಯಿಂ ವಿಟಪಿಗಳು ಭೂತಳಕೆ |
ಬೀಳುತಿರೆ ಸಿದ್ಧಚಾರಣ ಮೌನಿಸಂತತಿಗ |
ಳಾಳದಡಿಗಂಜುತಂಬರಮಡರಲನಿಲಸುತ ಶೈಲಾಗ್ರವೇರಿ ಕುಳಿತು ||
ಕೋಳಾಹಳಧ್ವನಿಯ ನೀರಧಿಯ ಕಂಡು ಕ |
ಟ್ಟಾಳುತನದಿಂ ತ್ರಿವಿಕ್ರಮರೂಪ ಚಿತ್ತದೊಳ್ |
ತಾಳುತಾಕ್ಷಣ ಸದೃಕ್ಷತೆಯಾಂತನಾಯೋಗಸಂಯಮದ ಬಲಮೆಂತುಟೊ || ೭ ||

ಜಾಂಬವಪ್ರಮುಖ ಕಪಿನಾಯಕರೊಳಿಂತೆಂದ |
ನಂಬುಧಿಯ ದಾಂಟುವರೆ ತಾತಪಾದಂ ಜವಾ |
ಡಂಬರದ ವಿನತೆಯಣುಗಂ ಮತ್ತದಾನೊರ್ವನುಳಿದನ್ಯರಿದರ ಪೆಸರ ||
ಕೊಂಬುದರಿದಾದಿತ್ಯಪಥವಿಡಿದು ಮಗುಳಿತರ |
ರಂಬರದಿ ಚರಿಸರಿದು ನನ್ನಿ ಸೀತಾಧವ ಪ |
ದಾಂಬುಜ ಸ್ಮರಣೆಯಿಂ ಭವದೀಯ ಕೃಪೆಯಿಂದ ಗೋಷ್ಪದೀಕೃತಿಗೈವೆನು || ೮ ||

ವರುಣಾಲಯವ ಕಳೆದು ಲಂಕಾಪುರವ ಪೊಕ್ಕು |
ಧರಣಿಜಾತೆಯನರಸಿ ಪಾವನತರಾಂಘ್ರಿಗಳ |
ದರುಶನಂ ಗೈವನ್ನ[1]ಮುಣೆನೊರಗೆ ನಿಲೆನೊಂದು ತಾಣಮಂ ಬಯಸೆನೆನುತ ||
ನೆರೆದಿರ್ಪ ದೇವಋಷಿಗಣ ಸಾಕ್ಷಿಯೆನುತ ಕಪಿ |
ವರರ ಮುಂಗಡೆಯೆ ಶಪಥಂಗೆಯ್ಯಲಾನಂದ |
ಭರಿತರಾಗುತ ಮಾರುತಾತ್ಮಜನ ಪೊಗಳಿದರ್ ಪರಿಪರಿಯಲಾ ವೀರರು || ೯ ||

ಎನುತೊರೆದು ತನುವ ಪೆರ್ಚಿಸುತುಭಯಹಸ್ತಂಗ |
ಳನು ಶಿಲೋಚ್ಚಯದೆಡೆಯಲೂರಿ ಪದಗಳ ಪಿಂದ |
ಕನುಗೈದು ವಾಲಧಿಯನೆತ್ತಿ ಶ್ರವಣಂಗಳಂ ಬಾಗಿಸುತ ವೇಗದಿಂದ ||
ಮನಕಲಿತಪ್ರಾಣಮಂ ಹೃದ್ದೇಶದೊಳು ಬಲಿದು |
ವನಜಬಾಂಧವ ಪ್ರತೀಕಾಶವದನದೆ ವೀರ |
ವನು ತುಳುಕಿ ತನುವನೊನೆದಡೆ ಶೈಲ ಸೆಳೆಮುಂಚದಂತಾದುದೇನೆಂಬೆನು || ೧೦ ||

1 ಉಣಲೊರಗೆ.



ಇನಶಶಿಗಳು[1]ಭಯ ಕುಂಡಲಮಾಗೆ ತಾರೆಗಳ್ |
ಮಿನುಗೆ ಗ್ರೈವೇಯದಂತಾ ಗ್ರಹಾದಿಗಳೆಲ್ಲ |
ತನುವಿನೊಳಗಲ್ಲಲ್ಲಿ ತೊಟ್ಟಭೂಷಣಗಳಂತೆಸೆಯಲೌತ್ತಾನಪಾದಂ ||
ಅನುವಡಿಸಿ ವಾಲಾಗ್ರದಗ್ರಮುಕ್ತಾಫಲಿತ |
ವೆನಿಸೆ ಕೈಲಾಸ ಪಾಂಡುರಗೋಪತೀರೂಪ |
ನೆನಿಪಂತೆ ಗಿರಿತಟದಿ ವೀರ ಮಾರುತಿ ತೋರ್ದನದ್ಭುತಾವೇಶದಿಂದ || ೧೧ ||

[2]ಗವಿಯೊಳೆಳೆಯಲರುಂಬ ಭುಜಗಸಂದೋಹಕಂ |
ದವಿರಳದ[3]ನಿಶ್ವಾಸ ಮರುತನ ಬಲಾಹಾರ |
ಬವಣೆಯಿಂದಮಜೀರ್ಣಮಾಗಿ ವಮನಂಗೆಯ್ಯೆ ವಿಷಮವಿಷದುರುಬೆಯಿಂದ ||
ತವಕದಿಂ ಗರಹರಣಮೂಲಿಕಾ ಸಂತತಿಗ |
ಳವಿವೇಕದಿಂದ ಹಾಲಾಹಲವ ಪರಿಹರಿಸೆ |
ಜವಮಿಲ್ಲದಲ್ಲಲ್ಲಿ ಕರದೀಪಿಕಾತತಿಗಳೆಂಬಂತೆ ತೋರ್ದವಾಗ || ೧೨ ||

ನಡುಗೆ ಪರ್ವತ ಪಾದಪಾಗ್ರಂಗಳಿಂದಾಗ |
ಳಡಿಗಡಿ[4]ಗುದಿರ್ವ ಕುಸುಮಗಳಿಂದಮಾ ಶೈಲ |
ಮೊಡನೆ ತೋರ್ದುದು ಕುಸುಮಮಯಗಂಧಮಾದನದ ಪ್ರತಿಬಿಂಬಮೆಂಬೊಲಾಗ ||
ತುಡುಕಿರ್ಪ ಕರಪದದ ಘಟ್ಟಣೆಗೆ ಶೈಲಾಂತ |
ಜಡಭಾವ ಪೊರಮಟ್ಟುದೆಂಬಂತೆ ಕರಿ ಮದವ |
ಬಿಡುವ ತೆರದೊಳು ರಜಸ್ರಾವ ಪೊರಮಟ್ಟುದಾ ಕಂದರಾಂತರಗಳೆಡೆಯ || ೧೩ ||

ಪಾದಾಭಿಘಾತದಿಂ ತದ್ಗುಹಾಂತರ್ವರ್ತಿ |
ಯಾದ ಭೂತಂಗಳುಂ ಘೋರ್ಮೊರೆಯೆ ಶೈಲೇಂದ್ರ |
ಬಾಧೆಯಂ ಸಹಿಸದಲೆ ನಾದಗೊಡುವನೊ ಯೆನಲ್ ಶಬ್ದಾಯಮಾನಮೆನಿಸೆ ||
ಆದುದಾಯಾಸಮೆಂಬಂತಲ್ಲಿಗಲ್ಲಿಗೆ ವಿ |
ನಾದದಿಂ ಕೆಡೆವ ಕೇಸರಿ ಪುಂಡರೀಕಗಳ |
ಭೇದ ಕರದಿಂ ತೋರ್ಪುವಂಜನಾಸುತನಘಟು ಸೈರಿಸುವರಳವಪ್ಪುದೆ || ೧೪ ||

ಬೆಚ್ಚಿ ಸುರಚಾರಣರ್ ಬಾನೆಡೆಯನಡರಿ ನಿಂ |
ದಚ್ಚರಿಯೊಳೀಕ್ಷಿಸುತ ಮುನಿಗಳುಂ ಪೊಗಳುತಿಹ |
ಹೆಚ್ಚಳವನುಂ ಕೇಳಿ ಸಂಭ್ರಮಂಗೊಳುತಮಿರೆ ಕೊಡಪಿ ಕಿವಿಗಳನು ನಿಮಿರಿ ||
ಪೊಚ್ಚ ಪೊಸ ಸುರಚಾಪದಂತೆಸೆವ ವಾಲಧಿಯ |
ಚರ್ಚೆಗೈವುತಮಣೆದು ಕೊರಳ ಕೊಂಕಿಸಿ ಮರುತ |
ನಚ್ಚರಿಯ ಕುವರ ನೀರಧಿಯನುಲ್ಲಂಘಿಸುವಡುಲ್ಲಾಸದಿಂದೆಸೆದನು || ೧೫ ||

ಚರಣಹತಿಯಿಂದಲೆಲ್ಲಂ ನಡುಗುತಿರೆ ಕಂಡು |
ಶರನಿಧಿ ಸ್ಮರಿಸಿದಶರೀರಸಂಭೂತನಹ |
ನುರುಬೆಯಂ ಪರಶುಧರನದಟನನುಭವಿಸಿ ತಳ್ಳಂಕಗೊಳುತಿರುತಿರ್ದನು ||
ಹರಿರೂಪನಾಂತು ಗಿರಿಶಿಖರದೊಳ್ನಿಂದು ಗಜ |
ಹರನೆನ್ನ ನಿಟ್ಟಿಸುವನೇಂ ಗೈವೆನೆಂದೆನುತ |
ಪರಿಪರಿಯ ಚಿಂತೆಯಿಂ ನಡುಗುತಿರೆ ಸುರರೆಲ್ಲ ಬೆರಗಾಗಿ ನೋಡುತಿರಲು || ೧೬ ||

1 ಭಯಮಂಡಲ. 2 ಅವಿಯೊಳೆಳೆರುಂಬ. 3 ವಿಶ್ವಾಸ. 4 ಗುದುರ್ವ.

ಆ ಸಮಯದೊಳು ಮಹಾನೀರನಿಧಿಯಂ ದಾಂಟಿ |
ವಾಸವಾದ್ಯಷ್ಟದಿಕ್ಪಾಲಾಜಭವ ಜಗ |
ದ್ವಾಸರಿಂಗಭಿನಮಿಸಿ ಭೂಸುರೋತ್ತಮ ಸಕಲ ಋಷಿಗಳಿಂಗೆರಗಿ ಮುದದಿ ||
ಭಾಸುರ ಶ್ರೀ ವೀರರಸ ಪೆರ್ಚುತಾಗ ವನ |
ರಾಶಿಯಂ ನೋಡಿ ಕುಲವೃದ್ಧಬಾಂಧವಕಲಿತ |
ವಾಸವಾತ್ಮಜನಣುಗನೊಡನೆಂದ ಪವನಸುತ ಹರುಷಗೊಳೆ ಕೀಶವೃಂದ || ೧೭ ||

ಕೇಳಿರೈ ಕಪಿವೀರರೆಲ್ಲ ಮದ್ವಿಕ್ರಮವ |
ನೇಳು ನೀರೊಟ್ಟಲಂ ನಿಮಿಷಾಂತರದಿ ದಾಂಟಿ |
ಕೋಳುಗೊಂಡಪೆ ತಮೋಭೂಯಿಷ್ಠಭೂತಳದ ನಿಶಿಚರರ ಜಂಗುಳಿಯನು ||
ನೀಲಕಂಠಪ್ರಮುಖರರಿವಂತೆ ಶ್ರೀ ರಾಮು |
ನಾಳೀಕವೇಗದಿಂ ಪೋಪೆನಗೆ ಜಳರಾಸಿ |
ಜಾಳೆನಿಸದಿದಿರಾಗಲೆನಿತುಂಟು ನೂರುಯೋಜನ ಮಾತ್ರ ಬಳಿಕೆಂದನು || ೧೮ ||

ಗಗನಪಥವಿಡಿದೈದಿ ರಾವಣಾಸುರನಿರ್ಪ |
ನಗರದೊಳು ನೋಡಿ ಜಾಕಿಯ ಕಂಡುಂಗುರವ |
ರಘುವರನ ಸತಿಗಿತ್ತು ಚೂಡಾಮಣಿಯ ಕೊಂಡು ಕೃತಕೃತ್ಯನೆನಿಸಿ ಮುದದಿ ||
ಅಗಣಿತದ ರಕ್ಕಸರ ತರಿದು ರಾವಣಬಲವ |
ಮಿಗೆ ಪಳಿದು ಪಟ್ಟಣವನುರುಹಿ ಮಗುಳ್ಳೆತಪ್ಪೆ |
ಜಗದೀಶ ರಾಮನಂಘ್ರಿಯ ನೆನೆವುತೆಲ್ಲರುಂ ಕಾಣಲತಿಮೋದದಿಂದೆ || ೧೯ ||

ಎನುತೆಲ್ಲರೊಳು ಪೇಳ್ದು ಬೀಳ್ಕೊಂಡು ಶ್ರೀ ರಾಮ |
ಜನಕಸುತೆ ಲಕ್ಷ್ಮಣಂಗಭಿವಾದನಂಗೈದು |
ವನಜಭವಭವಮುಖ್ಯರಂ ನೆನೆದು ತನ್ನ ಪಿತನಂಘ್ರಿಗಾನತನಾಗುತೆ |
ಮನಮರುತ್ತುಗಳೊಂದುಗೂಡಿ ನಿಜಮೂರ್ತಿಯಂ |
ತೊನೆದಾಡಿ ಜಯ ರಘೂತ್ತಮ ರಾಮುಚಂದ್ರಯೆಂ |
ದೆನುತ ಪುಟನೆಗೆದನಂಬರಕೆ ವಿನತಾತನಯನೆಂಬಂತೆ ಸಂಭ್ರಮದೊಳು || ೨೦ ||

ಊರುವೇಗದೊಳುಬ್ಬಿ ಮುಂದೈದಲಾ ಗಿರಿಯ |
ಸಾರವತ್ತಾದ ವೃಕ್ಷಗಳೆಲ್ಲ ಪಿಂದೈದು |
ತೋರಂತೆ ನಿಜ ಬಂಧುಗಳನು ಬೀಳ್ಕೊಡುವಂತೆ ಮೌಹೂರ್ತಮನುಸರಿಸಲು ||
ಭಾರಣೆಯ ಗಂಡಶೈಲಗಳೆಲ್ಲ ಗಮನದುರು |
ಮಾರುತನ ಗತಿವಿಡಿದು ಪಡಿಬಲವು ಮುಂಕೊಂಡು |
ಧಾರಿಣೀಶನ ಸುತ್ತಿಪೋಪಂತದೇಂ ಬೆಡಗ ತೋರುವುದೊ ತತ್ಸಮಯದಿ || ೨೧ ||

ಕೆಲವು ತರುಗುಲ್ಮಂಗಳುನ್ಮೂಲತೆ[1]ಯೊಳ್ಳೈದಿ |
ಜಲರಾಶಿಯೊಳ್ಕೆಡೆಯೆ ಪರಪಿರ್ದ ಕುಸುಮಚಯ |
ದೊಲವಿಂದ ತಾರಕಿತದಪರನಭಮೆಂಬಂತೆ ನೀರಧಿಯು ತೋರುತಿರಲು ||
ಲಲಿತಜ್ಯೋತಿರ್ಲತೆಗಳಲ್ಲಲ್ಲಿ ಕೆಡೆದಿರಲು |
ಚೆಲುವ ಸೌದಾಮಿನಿಯನಾಂತ ಘನಸಂಕುಲವ |
ಜಲರಾಶಿಯನುಕರಿಸಿತೇನೆಂಬೆನಚ್ಚರಿಯ ಮಾರುತಿಯ ಚರ್ಯೆಗಳನು || ೨೨ ||

1 ಯೊಳ್ಳೈದಿ.



ಬೆದರಿದನಗಸ್ತ್ಯಂ ತ್ರಿಶಂಕು ತಲ್ಲಣಗೊಂಡ |
ಚದರಿ ಪೊರಪಾಳೆಯಂ ಪಾಳಾಯ್ತು ಶಮಲೋಕ |
ಮದಿರಿರ್ದರ್ಕ್ಷತಿಗಳಂಬರಮಣಿಯು ಬೆಚ್ಚಿ ಘನವ ಮರೆಗೊಂಡನಾಗ ||
ಮುದದೊಳ್ಳೆದುವ ಮಾರುತಿಯ ಕಂಗಳಂಬರದಿ |
ಚದುರರವಿಶಶಿಗಳಂತೆಸೆಯೆ ಲಾಂಗೂಲ ಸ |
ಮ್ಮುದದಿ ಕಂಗೊಳಿಸಿದುದು ಪಾಕಶಾಸನನೆತ್ತಿದತುಲವಿಜಯಧ್ವಜಮೆನೆ || ೨೩ ||

ಚಂಡೀಶಮಕುಟತಟವಿಲಸತ್ಕಲಾಕುಟಿಲ |
ಶೌಂಡೀರ ಜೋರತರ ಕೋರದಾಡೆಗಳ ಕಳೆ |
ಪಾಂಡರಾಕೃತಿಯ ತಾಳ್ದೆಸೆವ ಪರಿವೇಷದಂತೆಸೆಯೆ ತನ್ಮುಖಮಂಡಲ ||
ಚಂಡಭಾಸ್ಕರನಂತೆ ತನ್ಮಧ್ಯದೊಳು ತೋರ |
ಲಂಡಲೆದು ಮೇಘಗಳ ಮರೆಗೊಂಡು ನಡೆದನು |
ದ್ದಂಡಗತಿಯಿಂದ ದೃಶ್ಯಾದೃಶ್ಯಮೆಂಬಂತದೇಂ ಪೇಳ್ವೆನತಿಶಯಗಳ || ೨೪ ||

ಮರುತನೇಂ ಮೂರ್ತಿಯಾಂತೈದುವನೊ ಮೇರುಗಿರಿ |
ಯುರುಪಕ್ಷದಾಡಂಬರದ ಗತಿಯಲೊಪ್ಪಿಹುದೊ |
ಹರುಷದಿ ಗರುತ್ಮಂತ ಸಂಚರಣೆಗೈದಿದನೊ ಎನಲಾಗಸದ ಪಥದೊಳು ||
ಬರುವ ಮಾರುತಿಯ ಪ್ರಾರ್ಥನೆಗಯ್ಯೆ ಪಿಂತೆಡೆಯ |
ಲುರಗರಾಜನದೇನು ಬಂದಪನೊಯೆನೆ ವಾಲ |
ಕರಮೆಸೆದುದಾ ವ್ಯೋಮಚರರೆಲ್ಲ ಬೆರಗಾಗಿ ನೋಡುತಚ್ಚರಿಗೊಳುತಿರೆ || ೨೫ ||

ಆವಾವದೇಶದೊಳಗೀತನ ತನುಚ್ಛಾಯೆ |
ಶೀವಿಯಿಂ ತೋರುವುದೊ ನೀರಧಿಯು ಸೋನ್ಮಾದ |
ಭಾವಮಂ ತೋರ್ಪಡಿಸಿ ತಲ್ಲಣಂಗೊಳುತಿರ್ಪುದಲ್ಲಲ್ಲಿ ಬಿರುಗಾಳಿಯ ||
ರಾವದಿಂದೂರುವೇಗದಿ ಕ್ಷೋಭೆಯಾಂತುದಧಿ |
ಜೀವನಂ ಕಳವಳಿಸೆಯಾಗಸಗಳೆಲ್ಲ ಭಯ |
ಭಾವದಿಂದನ್ಯೋನ್ಯ ಪಿಂಡೀಕೃತಾಂಗಂಗಳುದಿರ್ದವಬ್ಧಿಯ ತಳಕ್ಕೆ || ೨೬ ||

ಮೇರುಮಂದರಗಳೆನೆ ಬರುವ ಪೆರ್ದೆರೆಗಳ |
ನ್ನೂರುವೇಗದಿ ಬರಾಬರಿಗೈದು ನೀರಧಿಯ |
ಪೀರುವವೊಲ್ಲೆತಪ್ಪ ಮಾರುತಿಯ ನಿಟ್ಟಿಸುತ ನಕ್ರಕೂರ್ಮಂಗಳೆಲ್ಲ ||
ತೋರಭಯದಿಂದೊಂದನೊಂದೊರಸಿ ವಿತಳಮಂ |
ಸಾರುತಿರಲಡಿಗಡಿಗೆ ಭೀಕರಂಗೊಳಿಸಿ ಕಪಿ |
ವೀರನಂಬರಗಮನವಿಡಿದೈದುತಿರ್ದ ನಿಃಶಂಕೆಯಿಂದಚ್ಚರಿಯೆನೆ || || ೨೭ ||

ಪತ್ತುಯೋಜನದಗಲ ಮೂವತ್ತುಯೋಜನಂ |
ಬಿತ್ತ ನೀಳದೊಳಬ್ಧಿಯೊಳ್ ಛಾಯೆ ಕಂಗೊಳಿಸೆ |
ತತ್ತರಂಗೊಳುತುರಗಸಂದೋಹನಕ್ರನೀರಾನೆಗಳ್ತುಳಿದಾಟದಿ ||
ಮತ್ತೊಂದನೊಂದಲೆದು ಪಾತಾಳದೆಡೆಗೈದೆ |
ಬಿತ್ತರದ ವಾರ್ಧಿ ನಿರ್ಜಂತುಕಮದಾಗಿ ತಲೆ |
ಯೆತ್ತಲಮ್ಮದೆ ದ್ರೋಣಿಯಂತೆ ಕಂಗೆಸೆದುದಾ ವಿಸ್ಮಯಮನೇನೆಂಬೆನು || ೨೮ ||

ಪದಹತಿಗೆ ಮಾಹೇಂದ್ರಶೈಲ [1]ಭೂಮಿಯ ತಳದಿ |
ಹುದುಗಿದುದು ಭಯದಿಂದ ಗ್ರಹಗಳೆಲ್ಲಂ ಚದರಿ |
ಕದಬದಂಗೊಳ್ಳಲಂಬರಮಣಿ ಸುಧಾಕರರ್ಮರೆಗೊಳ್ಳಲಭ್ರಗಳನು ||
ಒದಗಿಂದ ರಾಮಕಾರ್ಯಾರ್ಥಕ್ಕೈದುವ ಕಪಿಯ |
ಮುದದೊಳೀಕ್ಷಿಸಿ ದೇವಗಂಧರ್ವಸಂದೋಹ |
ಚದುರಿಂದ ಪೂವಳೆಯ ಕರೆದು ಪಾಡಿದರಾ ಮರುತ್ಸುತನ ಕೀರ್ತಿಗಳನು || ೨೯ ||

ಇಂತಂಬರದ ಗಮನವಿಡಿದು ಗಮಿಸುವ ಕೀಶ |
ಕಾಂತನಂ ಕಂಡಬ್ಧಿರಾಜ ಸಂತಸಗೊಂಡು |
ಪಿಂತೆ ರವಿಕುಲದರಸುಗಳ ಬಾಹುಬಲದಿಂದಮಾಂ ವೃದ್ಧಿಕರನಾದೆನು ||
ಸಂತ ರಘುಕುಲಕಾಂತದೂತನೈದುತಮಿರ್ಪ |
ನೆಂತಾದರೀತಗುಪಕೃತಿಯೆಸಗಿ ಮಾಡುವೆಂ |
ಸಂತೋಷಕರವನೆಂದಬ್ಧಿ ಮೈನಾಕನಂ ಕರೆದಾತನೊಡನೆಂದನು || ೩೦ ||

ಗಿರಿರಾಜ ಕೇಳ್ ಸಗರವಂಶಸಂಭೂತ ನಾಂ |
ದೊರೆ ರಘೋತ್ತಮನೆನಗೆ ತತ್ಕಾರ್ಯಕೆಂದೈದೆ |
ಮರುತಸುತನೈದುತಿಹನೀತನಿಗೆ ಸಾಹಾಯ್ಯಮೆಸಗಿ ಕೃತಿಯೆನಿಪೆನೆಂದು ||
ಭರದಿಂದ ಯೋಚಿಸಿಯೆ ಸೂರ್ಯಮಂಡಲದೆಡೆಗೆ |
ಪರಿಯೆ ನೀನಗ್ಗಳ ಬಲಾಢ್ಯ ನಿನ್ನಯ ನೇಹ |
ವೆರದಿರ್ದು ಮನ್ಮನೋರಥ ಬೆಳೆವುದತಿಶಯಮೆ ಕೃಪೆಗೆಯ್ಯವೇಳ್ಕೆಂದನು || ೩೧ ||

ಮಧುರತರ ಕಂದಮೂಲಾದಿ ಪುಷ್ಪಂಗಳಂ |
ಮಧುಗಳಾಂತೆಸೆವ ತರುನಿಚಯಗಳ ತಂಬೆಲರ |
ಚದುರ ಬೀರುವ ಲತಾಮಂಟಪಸ್ಥಾನಗಳ ದಿವ್ಯತರ ಸರಸಿಗಳನು ||
ಪದುಳದಿಂ ಕಾಣ್ಬಡಿಸಿ ನಿಂದು ಕಪಿ ವಿಶ್ರಮಿಸಿ |
ಮುದವಾಂತು ನಡೆವಂತೆ ಮಾಳ್ಪುದೆಂದತಿವಿನಯ |
ಮೊದವಿ ನೇಮಿಸಲಬ್ಧಿರಾಜ ಸಂತಸಗೊಳುತ ಮೈನಾಕನಿಂತೆಂದನು || ೩೨ ||

ರಾಮಕಾರ್ಯಕೆ ಪೋಪ ಕಪಿವರನ ಸಂತವಿಸೆ |
ತಾಮಸಮದೇನುಂಟು ಮರುತಸುತನೆನಗತುಲ |
ಪ್ರೇಮಕರನಾತಗುಪಕೃತಿಯೆಸಗಿ ಕೃತಕೃತ್ಯನೆನಿಪೆನೆನುತದ್ರಿಪತಿಯು ||
ತಾಮರಸಮಿತ್ರನಂ ನೋಳ್ಪರೈದುವನಂತೆ |
ಭೀಮಶಾರೀರದಿಂದಂಬರವ ಚುಂಬಿಪ ನಿ |
ಕಾಮಸಂಭ್ರಮಗಳಂ ತೋರಿದಂ ಮೈನಾಕ ಮುಂಗಡೆಯೆ ಮರುತಸುತಗೆ || ೩೩ ||

ಉದಿತಭಾಸ್ಕರನೆನೆ [2]ಸಮುದ್ಧೃತದ ಶೃಂಗಗಳ |
ನದುಭುತದ ಸೌವರ್ಣಶೈಲ ಮುಂಗಡೆಯ ಸಂ |
ಪದವ ತೋರ್ದುದು ಶಿಖರಿಯೆಡೆಯ ದೇವಾಕಾರವೆತ್ತೊರ್ವ ಪುರುಷನಿಂದು ||
ಚದುರತನದಿಂದ ಮೂದಲಿಸಲೀಕ್ಷಿಸಿ ಕ್ರೋಧ |
ಮುದಿಸೆ ಮಾರುತಿಯೂಹ ವೇಗದಿಂ ಧಿಕ್ಕರಿಸಿ |
ಪದವಿವಿಡಿದೈದುತಿರೆ ಮೈನಾಕ ಮೃದುಮಧುರನುಡಿಯಿಂದಮಿಂತೆಂದನು || ೩೪ ||

1 ಭೂಮಿಾ. 2 ಸಮುಭ್ರೃತದ.



ವೀರರಗ್ರೇಸರ ಕುಮಾರ ಕೇಳೆಂಬುದಂ |
ಮಾರುತಾತ್ಮಜನೆನಗೆ ಕಾರುಣ್ಯಪಾತ್ರ ನೀ |
ನೋರಂತೆ ದಶರಥಕುಮಾರಕಾರ್ಯಕೆ ಪೋಪೆ ಪ್ರಿಯನತಿಥಿಯಿಂದೆನ್ನೊಳು |
ಚಾರುತರಮಧುಪಕ್ವಫಲಗಳಂ ಕೊಂಡು ರಘು |
ವೀರಕಾರ್ಯಾರ್ಥಕ್ಕೈದುವುದೆಂದು ಸಾಗರಂ |
ತೋರದಯದಿಂದೆನ್ನ ಕಳುಪಿರ್ಪನೆಂದರಿತು ಲಾಲಿಪುದು ಮದ್ವಾಕ್ಯವ || ೩೫ ||

ಕಾಲದಲಿ ಬಂದತಿಥಿ ವಿಷ್ಣುರೂಪನೆನುತ್ತೆ |
ಮೂಲೋಕಜನರಾಡುತಿರ್ಪರಾ ಋಷಿದೇವ |
ಜಾಲಪಾವಿತ್ರ ಮಾರುತಪುತ್ರ ಶ್ರೀರಾಮದೂತನತಿವಿಖ್ಯಾತನು ||
ಶೀಲಸದ್ಗುಣನಿಲಯ ದಯದಿಂದ ಪಕ್ವಫಲ |
ಮೂಲಾದಿಗಳ ಕೊಂಡು ಕ್ಷಣಮಾತ್ರ ವಿಶ್ರಮಿಸಿ |
ಮೇಲೆ ದಯಗೈವೇಳ್ಕು ಪ್ರೀತಿಗೈವರೆ ಬಾಧ್ಯಮೊಂದುಂಟು ಪೇಳ್ವೆ ಕೇಳು || ೩೬ ||

ಗಿರಿಗಳೆಲ್ಲವು ಪಕ್ಷವಾಂತು ಪೂರ್ವದಿ ಚರಿಸು |
ತಿರಲಂಜಿ ಪಾಕಾರಿಗರುಪಲವ ಕೋಪಿಸುತ |
ತ್ವರಿತದಿಂ ಪಕ್ಷವಿಚ್ಛೇದಗೈವುತ ಬರಲ್ಕಾನಂಜಿ ಪ್ರಾರ್ಥಿಸಿದಡೆ ||
ಮರುತ ಕೃಪೆಗೈದೆನ್ನ ಶರನಿಧಿಗೆ ತಂದಿಟ್ಟು |
ಪೊರೆದನದರಿಂ ಭಯತ್ರಾತ ಜೀವನದಾತ |
ಗುರುವೆಂದು ಧರ್ಮಶಾಸ್ತ್ರಗಳೆಲ್ಲ ಪೇಳ್ದಪುವು ಸಕಲಶ್ರುತಿಮತವ ಪಿಡಿದು || ೩೭ ||

ಆ ಮಹಾದೇವನ ಕೃಪಾಪುತ್ರನೆಂದೆನಿಸು |
ತೀ ಮಹಾಸಾಗರದೊಳಿರ್ಪೆ ಗುರುವಿಷಯದೊಳು |
ನೇಮದಿಂ ಭಕ್ತಿಗೈವಂತವರ ಪುತ್ರರಂ ಪೂಜನಂ ಗೈವುದೆನುತೆ ||
ಧೀಮಂತರಭಿಮತ ಜಗತ್ಪ್ರಾಣಸುತ ನಿನಗೆ |
ಪ್ರೇಮಾಸ್ಪದನೆನುತ್ತ ವಚನಮಂ ಪತಿಕರಿಸಿ |
ಸೌಮನಸ್ಯದಿಯೆನ್ನ ಕಾದಪುದೆನುತ್ತಮಾ ಮೇನಕಾತ್ಮಜ ನುಡಿದನು || ೩೮ ||

ಸಂಬಂಧದಿಂದ ಸಹಜಾತನಹೆ ನೀನೆನಗೆ |
ಶಂಬರಾಂತಕಹರ ಪ್ರತಿಬಿಂಬ ನೀನೆನಗೆ |
ದಂಭವಿರಹಿತ ತಥ್ಯಮಿಾ ನುಡಿಗಳೆನುತರಿತು ಮನ್ನಿಸುತಮಾತಿಥ್ಯಮಂ ||
ಕೊಂಬುದುಚಿತಮೆನುತ್ತ ಬಹುವಿಧದೊಳುಪಚರಿಸೆ |
ತುಂಬಿದಾನಂದದಿಂ ಪಾವಮಾನಿಯು ಹರುಷ |
ಗೊಂಬಂತೆ ಮೈನಾಕನೊಡನೆ ಬೆಸಸಿದನಮಿತಮೃದುಮಧುರನುಡಿಗಳಿಂದೆ || ೩೯ ||

ಗಿರಿರಾಜ ನೀಂ ಪೇಳಿದರ್ಥವೆಲ್ಲವು ಸತ್ಯ |
ಗುರುಸಮರುಮೆನಗೆ ನೀವೆಂದು ಭಾವಿಪೆ ಭವ |
ತ್ಕರುಣದಾತಿಥ್ಯದಿಂದಾನಂದಮಯನಾದೆನಧ್ವಬಾಧೆಗಳ ಪಳಿದೆ ||
ಧರಣಿಜೆಯ ಕಂಡಲ್ಲದೊಂದೆಡೆಯೆ ನಿಲೆನೆನುತ |
ನೆರೆದ ಬಾಂಧವರೆಡೆಯ ಶಪಥಮಂ ಮಾಡಿರ್ಪ |
ಪರಿಯಿಂದಮುಪ್ಪಣೆಯ ಕೇಳ್ಪೆನಲ್ಲದೆ ಚರಣ[1]ಕೆರವಿಗನೆ ಗಿರಿವರೇಣ್ಯಾ || ೪೦ ||

1 ಕರಗಿವನೆ.

ಸೀತಾಪತಿಯ ಕಾರ್ಯ ನಿಮ್ಮದೆಂದರಿತೆನ್ನ |
ಪ್ರೀತಿಯಿಂ ಪರಸಿ ಬೀಳ್ಕೊಡವೇಳ್ಕುಮೆನಲದ್ರಿ |
ಜಾತ ಸಂತಸಗೊಂಡು ಸೆಳೆಸೆಳೆದು ಬಿಗಿಯಪ್ಪಿ ಕುಸ್ತರಿಸಿ ಮಗುಳೆಂದನು ||
ಶೀತಾಂಶುಹಸ್ತವಿನ್ಯಸ್ತದಿಂದಂ ತಾಪ |
ಜಾತುಚಿತು ನಿಂದಪುದೆ ಸರ್ವಾರ್ಥಸಿದ್ಧಿ ವಾ |
ಜ್ಯಾತುರದಿ ನೆನೆದರಿಂಗಪ್ಪಲ್ಲಿ ಪತಿಕಾರ್ಯಮಪ್ಪುದೇನಾಶ್ಚರ್ಯವು || ೪೧ ||

ಸಕಲಪೇವಾತ್ಮಕಂ ನೀನಿಚ್ಛೆಗೈದುದತಿ |
ಸುಕರದಿಂದಪ್ಪುದೆಂದೊರೆದು ಬೀಳ್ಕೊಡೆ ಬುಧ |
ಪ್ರಕರ ಜಯಜಯಮೆನುತ ಸುರಿಯೆ ಪೂಮಳೆಯನಾಮಾರುತಿಯು ಮುಂದೈದಲು ||
ಅಕಳಂಕನದ್ರಿಪತಿ ಶ್ರೀರಾಮಚಂದ್ರಮನ |
ಭಕುತಗುಪಕೃತಿಗೈದನೆನುತ ಸಂಭ್ರಮದಿಂದ |
ಚಕಚಕಿಪ ಭೂಷಣಾಂಬರಗಳಿತ್ತುಪಚರಿಸಿ ವರಗಳಂ ಪಾಲಿಸಿದನು || ೪೨ ||

ಚಿರತರವಿಪತ್ತುಗಳು ಪರಿದೋಡಿದವು ರಾಮ |
ಚರಣಸೇವಕನ ದರ್ಶನಮಾತ್ರದಿಂದೆನುತ |
ಶರನಿಧಿಯು ತುಹಿನಾದ್ರಿಜಾತ ಪ್ರಿಯಬಾಂಧವನೆನುತ್ತ ಮನ್ನಣೆಗೈದನು ||
ದೊರೆಯೆ ಸತ್ಸಂಗ ಸಲ್ಲಾಪಮಾತುರ[1]ದವರಿ |
ಗರಿದವೇನಿಹುದು ರಘುವರನ ಶರಣನ ಕಂಡ |
ಗಿರಿವರಂ ಸುರಪನಿಂದಕುತೋಭಯದೆ ಸುಖದೊಳಿರ್ದನುದಧಿಯ ಮಧ್ಯದಿ || ೪೩ ||

ಮೇನಕಾಸುತನ ಬೀಳ್ಕೊಂಡು ಜವದಿಂದ ಪವ |
ಮಾನಸುತ ಪಿಡಿದಾ ಮರುನ್ಮಾರ್ಗದೊಳಗೆ ಸು |
ಮ್ಮಾನದಿಂದೈದುತಿರೆ ನೋಡುತಿಂದ್ರಾದಿಗಳ್ ಬಲಪರೀಕ್ಷಣೆಗೈವಡೆ ||
ಮಾನಿನಿಯ ನಾಗಮಾತೆಯ ಸುರಸೆಯಂ ಕರೆದು |
ನೀನೈದಿ ಕಪಿಕುಲೋತ್ತಮ ಪೋಪ ಗಗನಪಂ |
ಥಾನಮುಂ ತಡೆ ರಕ್ಕಸಾಕೃತಿಯ ಕೈಕೊಂಡು ತಿಳಿವುದು ಬಲಾಬಲಗಳಂ || ೪೪ ||

ಎಂದಪ್ಪಣೆಯನಿತ್ತಡಿಂದ್ರನನುಮತಿಯಿಂದ |
ಬಂದು ರಕ್ಕಸಿಯ ರೂಪಿಂದ ಪವನಾತ್ಮಜನ |
ಮುಂಗಡೆಯೆ ನಿಂದು ಮತ್ತೆಂದಳೆಲೆ ಕಪಿಯೆ ಕೇಳ್ ಚಿರಕಾಲ ಪಸಿದಿರ್ದೆನು ||
ಇಂದು ಜಠರಾನಲನ ಬಾಧೆ ತಪ್ಪಿತು ಬೇಗ |
ಬಂದೆನ್ನ ವದನಪ್ರವೇಶಗೈವುದೆನುತ್ತ |
ಮುಂದುಸಿರ್ದ ರಕ್ಕಸಿಯ ನೋಡಿ ಮಾರುತಿ ನುಡಿದನಧಿಕತರಧೈರ್ಯದಿಂದ || ೪೫ ||

ದೇವಿ ನೀಂ ಪೇಳ್ದ ನುಡಿ ಸತ್ಯಮೆನಗಭಿಮತಂ |
ಜೀವನಗಳಂ ತೃಪ್ತಿಗೊಳಿಸುವುದಕಿಂತಧಿಕ |
ಪಾವನತಪಸ್ಸಿಲ್ಲ ಕೃತಕೃತ್ಯನಾದೆ ನಾನಿದ ಪೇಳ್ವೆ ಕೇಳು ಸೊಲ್ಲ ||
ದೇವರಘುಪತಿಯ ಕಾರ್ಯಕ್ಕೆಂದು ಪೋಪೆ ಲಂ |
ಕಾವನಿಗೆ ಜನಕಜೆಯ ಕಂಡು ಕಪಿವೀರರಿಂ |
ಗಾ ವಾರ್ತೆಯಂ ಪೇಳಿ ಮಗುಳೆ ಬಂದುಂ ಪುಗುವೆ ಭವದೀಯವದನವನ್ನು || ೪೬ ||

1 ರವ.



ನುಡಿದೆರಡನಾಡೆನಿದು ನನ್ನಿಯೆಂದೆನುತ ತಿಳಿ |
ದೊಡನಪ್ಪಣೆಯನಿತ್ತಡೈದಿ ಸುರಕಾರ್ಯಮಂ |
ತಡೆಯದೆಸಗಿಯೆ ಬರ್ಪೆನೆಂದು ಮಾರುತಿ ನುಡಿಯೆ ಸುರಸೆ ಖತಿಯಿಂದೆಂದಳು ||
ಮೃಡನಾದರೆನ್ನ ಮುಂಗಡೆಯಿಂದಂ ಪೋಗದೊಲು |
ಜಡಜಪೀಠನ ವರಂ ಪೊಕ್ಕೆನ್ನ ಬಾಯಿಂದ |
ಕಡೆಗೆ ಬಂದಡೆ ಬಲವ ತಿಳಿದು ಬಿಟ್ಟಪೆ ಸ್ವಾಮಿಕಾರ್ಯಪರನಹುದೆನ್ನುತ || ೪೭ ||

ಕಾಮರೂಪಿನ ವಾಮೆಯುಸಿರ್ದರಾಲಿಸುತಾಗ |
ರಾಮದೂತಂ ನುಡಿದನೊಳ್ಳಿತಾದರೆ ಪಿಡಿಯು |
ಲೀ ಮಹಾಕಾಯಮಂ ವಿಸ್ತರಿಸು ವದನವನೆನಲ್ಕೆ ಸುರಸೆಯು ಕೋಪದಿ ||
ಭೀಮಪಾತಾಳಸನ್ನಿಭವದನಮಂ ತೆರೆದ |
ಳಾ ಮಹತ್ಕಾ[1]ಯ ಪೋಪಂತೆ ದಶಯೋಜನಾ |
ಯಾಮದಿಂ ರಂಜಿಸಲು ಕಂಡು ಮಾರುತಿ ಬೆಳೆದನಿಪ್ಪತ್ತು ಯೋಜನವನು || ೪೮ ||

ನೋಡಿ ವಿಸ್ಮಿತಳಾಗಿ ಮೂವತ್ತುಯೋಜನವ |
ಮಾಡೆ ವದನವ ಹನುಮ ನಾಲ್ವತ್ತುಯೋಜನವ |
ಕೂಡೆ ಬೆಳೆಯಲ್ಕಾಣುತೈವತ್ತುಯೋಜನದ ವಿಸ್ತರದಿ ಬಾಯ್ದೆರೆಯಲು ||
ರೂಢಿಯಿಂದರುವತ್ತುಯೋಜನವ ಪವನಸುತ |
ಮಾಡೆ ಮೂರ್ತಿಯನು ಮಗುಳೆಪ್ಪತ್ತುಯೋಜನವ |
ನೂಡುವಂದದಿ ಬಾಯತೆರೆದಳಾ ಸುರಸೆಯಪಮೃತ್ಯುವೆನಲತಿಚಿತ್ರದಿ || ೪೯ ||

ತೆರೆದಣಲ ಕಂಡು ಮಗುಳೆಂಭತ್ತುಯೋಜನವ |
ಶರಿರಮಂ ಪೆರ್ಚಿಸಲು ಪವನಜಂ ಮತ್ತಸುರೆ |
ಭರದಿಂದ ತೊಂಭತ್ತುಯೋಜನನ ಬಾಯ್ದೆರೆಯೆ ಶತಯೋಜನೋನ್ನತಿಯನು ||
ಮರುತಸುತ ಬೆಳೆದು ತನ್ನೊಳು ತಾನೆ ಚಿಂತಿಸಿದ |
ಪರಮಾಂತರಾಯ ಬಂದಡಸಿತೆನ್ನುತುಪಾಯ |
ವೆರಸಿ ತನುಸಂಕೋಚಗೈದು ಸುರಸೆಯೊಳೆಂದನಂದು ನಿಜಸತ್ವದಿಂದಂ || ೫೦ ||

ಪುಗುವೆನಂಗುಷ್ಠಮಾತ್ರದಿ ಕೇಳು ಘೋರತರ |
ಮೊಗವನೆಂದೆನುತ ಧುಮ್ಮಿಕ್ಕಿ ವದನವ ಪೊಕ್ಕು |
ಬಗಿದೊಡಲ ಪೊರಮಟ್ಟು ಮೇಘಜಾಲವ ಕಳೆದು ಪೊರಬೀಳ್ವರವಿಯಂದದೆ ||
ಗಗನಪಥದೊಳ್ನಿಂದು ಸುರಸೆಯೊಡನಿಂತೆಂದ |
ಸುಗುಣೆ ಭವದೀಯವಚನವ ಸತ್ಯಮಂ ಮಾಡೆ |
ಪುಗುತೊಡಲ ಪೊರಮಟ್ಟೆನೆನುತ ದಾಕ್ಷಾಯಣಿ ನಮೋಸ್ತು ದಯದಿಂದೀಕ್ಷಿಸು || ೫೧ ||

ಪೋಗಿ ಬಹೆ ವೈದೇಹಿಯಿಪ್ಪ ತಾಣಕ್ಕೆನುತ |
ಮಾಗ ಮಾರುತಿ ನುಡಿಯಲಖಿಳಸುರಚಾರಣರ್ |
ಮೇಗೆ ಜಯಜಯಮೆನುತ ಪೂವಳೆಯುಮಂ ಕರೆಯಲಸುರೆ ನಗುತಿಂತೆಂದಳು ||
ನಾಗಮಾತೆಯು ತಾನು ನಿನ್ನಯ ಬಲಾಬಲವ |
ಬೇಗ ತಿಳಿವೈತರುವುದೆಂದು ಸುರಪಂ ಕಳುಪ |
ಲಾಗಿ ಬಂದಿರ್ದೆ ನೀಂ ದಕ್ಷ ಸುಬಲಾಢ್ಯಕ್ಷನರಿಗಜಕೆ ಹರ್ಯಕ್ಷನು || ೫೨ ||

1 ತ್ಕಾರ್ಯ.

ದಶಗಳ ಪ್ರಮುಖರಕ್ಕಸರೆಲ್ಲ ತೃಣದಂತೆ |
ವಶವರಪ್ಪರೈ ನಿನಗೆ ರಾಮಕಾರ್ಯಕೆ ನೀನೆ |
ಪಶುಪತಿಸಮಾನ ಸುಖದಿಂ ಪೋಗಿ ಬಹುದೆನುತ ಪರಸಿ ಬೀಳ್ಕೊಟ್ಟು ನಡೆಯೆ ||
ಶಶಿರವಿಗಳೆಡೆಯಾಟ ಮಾರ್ಗವಿಡಿದಲ್ಲಲ್ಲಿ |
ಗೆಸೆವ ಋಷಿಸಿದ್ಧರಂ ಕಾಣುತ್ತ ನಕ್ಷತ್ರ |
ಋಷಿಗಳುಂ ಸಂಚರಿಪ ಶುಭಪಥದ ಸೇವನೆಯೊಳೈದಿದಂ ಪವನಭವನು || ೩೩ ||

ಮಾರುತನ ವೇಗಮಂ ಮುಂಕೊಂಡು ಮೇಘಗಳ |
ತೂರಿ ಶಶಿರವಿಗಳಂ ಮಿಕ್ಕುತಾರಕೆಗಳ |
ನ್ನೋರಂತೆ ಪಿಂದುಳುಪಿ ಗಾಂಧರ್ವಸುರಯಕ್ಷಸಪ್ತಋಷಿಪಥವ ಪಿಡಿದು ||
ಮಾರುತಿಯು ಪೋಗುತಿರೆ ನೆಳಲು ಪ್ರತಿಫಲಿಸಲಾ |
ನೀರಧಿಯೊಳಿರ್ದ ಸಿಂಹಿಕೆ ಕಂಡು ಮನದೊಳಗೆ |
ತೋರ ಸಂತಸಗೊಂಡು ಹಿಗ್ಗಿದಪ್ಪಡಿನೆಳಲ ಕಾಣುತಾಶ್ಚರ್ಯಗೊಂಡು || ೩೪ ||

ಪಲಕಾಲ ಪಸಿದು ಜಲರಾಶಿಯೊಳು ಕೆಡೆದಿರ್ದ |
ರೊಲಿದೆನೆಗೆ ಕ್ಷುತ್ಪಿಪಾಸೆಗಳ ತೀರ್ಚಿದರಿಲ್ಲ |
ಸುಲಭದಿಂದಂ ತಾನೆ ಬಂದುದೆನ್ನಯ ಮುಂದೆ ನಿಂದುದಾಹಾರಮಿಂದು ||
ಜಲಜಭವನಾಜ್ಞೆಯಿನ್ನೆಂತುಟೋಯೆನುತ ಮನ |
ವೊಲಿದು ನೆಳಲಂ ಪಿಡಿದು ನುಂಗಲನುಗೈದಳದ |
ಸುಲಿವುದೇನು ವಿಚಿತ್ರ ಸಾಹಸಮುದಾರಿಂದಲೇರುವುದು ಭೂತಳದೊಳು || ೩೫ ||

ನೆಳಲ ನುಂಗಿದ ಮಾತ್ರದಿಂದ ಬಾನೆಡೆಯೊಳಂ |
ತೊಳಲಲಾದುದು ಪದಂ ದೀರ್ಘಸೂತ್ರದಿ ಸಿಲ್ಕಿ |
ಬೆಳಗುವ ಪಟಾಕೃತಿಯ ತಾಳ್ದುದಂದೆಡಬಲನ ನೋಡುತಾರನು ಕಾಣದೆ ||
ಬಳಲಿ ಚಿಂತಿಸಿದನೇಂಗೈವೆ ಪಜ್ಜೆಗಳೇಳ |
ದುಳಿದಿವೆಯೆನುತ್ತ ನೀರಧಿಯ ನೋಡುತ ಕಂಡ |
ನೊಳಗಿಂದ ಮೂಡಿರುವ ಘೋರ ರಕ್ಕಸರೂಪ ನಿಟ್ಟಿಸುತ ಬೆರಗಾದನು || ೩೬ ||

ಮೂಗಿನಲಿ ಬೆರಳಿಟ್ಟು ಮತ್ತೆ ಮಕುಟವನೊಲೆದು |
ಸಾಗರವ ನೋಡುತಿರಲನ್ನೆಗಂ ತರಣಿಸುತ |
ನಾಗ [1]ಪೇಳ್ದಾನುಡಿಯು ಸ್ಮೃತಿಗಾಗಿ ಬರಲರಿದನದ್ಭುತಾಕಾರದಿರವ ||
ಪೋಗಗೊಡದಿದುವೆ ಛಾಯಾಗ್ರಾಹಿಯೆನುತಮತಿ |
ವೇಗದಿಂ ನೀರಧಿಯ ನಿಟ್ಟಿಸುತ ಬಂದು ಪೊ |
ಕ್ಕಾಗ ಜಠರವ ಬಗಿದು ಸೀಳ್ದಿಟ್ಟು ಪೊರಮಟ್ಟು ಮುಗುಳಂಬರವನಡರಿದಂ || ೩೭ ||

ನೋಡಿ ವಿಸ್ಮಿತರಾದರಖಿಲದೇವರ್ಕಳುಂ |
ಕೂಡೆ ಋಷಿಗಂಧರ್ವರಚ್ಚರಿಯೊಳಿಂತೆಂದ |
ರೀಡಿಲ್ಲದತಿಬಳಂ ಭಳಿರೆ ಭರ್ಗನರೂಪನಹುದಲ್ಲದುಳಿದರಿಂಗೆ ||
ಕೂಡುವುದೆ ಘೋರರಕ್ಕಸಿಯ ವಧೆಯೆಂದೆನುತ |
ಮೂಡಿ ಸಂತೋಷದಿಂ ನೆರೆದಖಿಲಸುರರೆಲ್ಲ |
ನೋಡಿ ನಿಜನಿಜಶಕ್ತಿಯುಳ್ಳನಿತು ವರಗಳಂ ಕೊಟ್ಟರಾನಂದದಿಂದ || ೩೮ ||

1 ಪೇಳ್ದಂ.



ಮತಿಧೃತಿಯು ಧೃಷ್ಟಿದಾರ್ಕ್ಷ್ಯಗಳೆಲ್ಲ ಪೆರ್ಚಿಬರೆ |
ಮತಿಯುತರೊಳಗ್ಗಳ ಮಹಾಕಪಿಯು ಗಮನದಿಂ |
ಶತಯೋಜನಾಬ್ಧಿಯಂ ದಾಂಟೆ ಪಾರವನಂಟೆ ಕಂಡ ವನರಾಜಿಗಳನು ||
ಅತಿಶಯದ ಮಲಯಗಿರಿಯೋ ಸುರಪನುಪವನವೊ |
ಸತತ ವೈಶ್ರವಣನಿಹ ವಿಪಿನವೋ ಗಾಂಧರ್ವ |
ತತಿಗಳೇಂ ಕ್ರೀಡಿಸುವ ನೆಲನೊಯೆನಲಚ್ಚರಿಯಲೆಸೆದುದುಪವನ ತಟದೊಳು || ೩೯ ||

ತ್ವರಿತಗಮನದಿ ಪ್ರಯೋಜನವೇನು ಮೆಲ್ಲನೀ |
ಪರಿಯೊಳಗೆ ಚರಿಸೆಂದು ತರಳಗುಪದೇಶಮಂ |
ಕರುಣಿಸುವರೈತಂದ ತಂದೆಯಂದದಿ ಮಂದಮರುತ ಮುಂಗಡೆಯೆ ಸುಳಿಯೆ ||
ಕರಣಂಗಳೆಲ್ಲ ಸಂತುಷ್ಟಿವಡೆದುವು ಕೂಡೆ |
ಹರುಷವಾ ತೀರದೊಳ್ತನುವ ಸಂಕೋಚಿಸುತ |
ಮರುತಸುತನಾ ಬನವ ಪೊಕ್ಕು ನಿಟ್ಟಿಸಿ ಹರುಷಗೊಂಡನಾನಂದದಿಂದ || ೪೦ ||

ಹರವಿರಿಂಚಿಪ್ರಮುಖರುಪವನದ ಪೊರೆಯ ಸಂ|
ಚರಿಸಲಕ್ಕುಮೆ ಮಹಾಬಲ ದಶಾಸ್ಯಂ ತಪೋ |
ಭರದಿಂದಮಾರ್ಜಿಸಿದನಲ್ಲದುಳಿದವರಿಗೀ ವೈಭವಗಳೇಂ ದೊರೆಗುಮೇ ? ||
ಮರುತ ಸುಳಿಯಲದಮ್ಮನೆಮ್ಮನೀ ನೆಲದೊಳಾ |
ಚರಿಸಲೀವರದಾರು ಶ್ರೀ ರಾಮಪುರದರಸ |
ನುರುಕೃಪೆಯೊಳಾಂ ಪೊಕ್ಕು ಪೊರಮಟ್ಟುಬಹೆನೆನುತ ಸಂತಸಂದಳೆದನಂದು || ೪೧ ||

**ಮೊದಲನೆಯ ಸಂಧಿ ಸಮಾಪ್ತಂ.**

# ಎರಡನೆಯ ಸಂಧಿ

ಸೂಚನೆ ‖ ಅಮರಾವತಿಯ ಪೋಲ್ವ ಲಂಕಾಪುರವ ಕಂಡು |
ವಿಮಲಮತಿ ಮಾರುತಿಯು ವಿಸ್ಮಯದಿ ರವಿಯಸ್ತ |
ಸಮಯಮಂ ನೋಡುತಾ ಪುರವನೊಳಪೊಕ್ಕನತಿಸೂಕ್ಷ್ಮದ ಶರೀರದಿಂದ ‖

ಬಲಮೆನಿತೊ ಶತಯೋಜನವ ದಾಂಟೆ ಕ್ಲೇಶಸಂ |
ಕಲಿತನಾಗದಲೆ ಪ್ರತ್ಯೂಹಶತ ಬಂದಡಸ |
ಲೊಲಿದವ ನಿರೀಕ್ಷಿಸದೆ ಬೆಮರಿಡದೆ ನಿಟ್ಟುಸಿರಬಿಡದೆ ಸಂತಾಪಬಡದೆ ‖
ಲಲಿತಲಂಕೋಪವನದೆಡೆಯೆ ಸೌಖ್ಯದಿ ಕುಳಿತು |
ನಲವಿಂದ ಸ್ವಸ್ಥಮಾನಸನಾಗಿ ಪತಿಕಾರ್ಯ |
ಗಳ ನೆನೆಯುತಿರ್ದನೇಂ ಸಾಹಸಿಯೊ ಪವನಸುತ ತಿಳಿವರೆಂತದ್ರಿಜಾತೆ ‖ ೧ ‖

ಮೇರೆಯಿಲ್ಲದ ಸಪ್ತಶರಧಿಗಳ ಗೋಷ್ಪದೀ |
ಕಾರಗೈದೈದುವಗೆ ಗಣನೆಯಂ ಸೂಚಿಸುವ |
ನೂರುಯೋಜನದಗಲ ಶರಧಿಲಂಘನಮದೇಂ ಗಣನೆಯೆನುತಲ್ಲಿ ಕುಳಿತು ‖
ಚಾರುತರವನವ ಸೌಗಂಧಿಕಾಪುಷ್ಪನವ |
ಸಾರದ ಝುರೀನಿವಹಗಳ ನೋಡಿ ಹರುಷ ಸಂ |
ಪೂರಿತಾಂತಃಕರಣನಾಗಿ ಪವನಾತ್ಮಭವ ನಿಟ್ಟಿಸಿದನಾ ಲಂಕೆಯಂ ‖ ೨ ‖

ಸಾಗರದ ಸೀಮಂತಮಣಿಯೊ ಕನಕಾಚಲದ |
ಮೇಗೆಸವ ಜ್ಯೋತಿರ್ಲತಾಕಣಿಯೊ ಪಾಕಾರಿ |
ಯಾಗಾರಮಂ ಬೆಳಗುವತಿಶಯದ ಕಾಂತಿ ನೀರೊಟ್ಟಿಲೊಳು ಖನಿಯಾದುದೊ ‖
ಭೋಗವತಿ ಜಲಧಿಯಂ ನೋಳ್ಪರೈತಂದಿಹುದೊ |
ಭಾಗೀರಥೀಪಿತನ ಗತಿಗೆ ತೌರಿದೆಯೆನುತ |
ನಾಗ ಕಪಿವೀರ ವಿಸ್ಮಿತನಾಗಿ ನೋಡುತ್ತ ಬೆರಗಿನಿಂ ಕುಳ್ಳಿರ್ದನು ‖ ೩ ‖

ಮಿಸುನಿಯೆರಕದಲೆಸೆವ ಪ್ರಾಕಾರಸಪ್ತಕಗ |
ಳಸುವೀವ ರನ್ನಗಳ ತೆನೆಗಳಿಂ ವೈಡೂರ್ಯ |
ವಸರಮೆನಲಾಳ್ವೇರಿ ನೀಲದಗಳಲ್ಲಲ್ಲಿ ಪಚ್ಚೆಗಳ ಪಡಿಗೋಟೆಯು ‖
ಸಸಿಗಲ್ಲ ಕೊತ್ತಳಗಳಗಣಿತದ ವೈಡೂರ್ಯ |
ವೆಸಕಮಾಂತಿರುವ ಕಿರುವಾಗಿಲುಗಳಡಿಗಡಿಗೆ |
ವಸುರನ್ನತಿಂತಿಣಿಗಳಾಂತಿರುವ ತಳ್ಕುಗಳಲೆಸೆದುವಾ ಪಾಲಕಗಳು ‖ ‖ ೪ ‖

ನವರತುನಮಯ ತೋರಣಂಗಳ ವಿಲಾಸದಿಂ |
ವಿವಿಧತರಚಿತ್ರಿತದ ಬಜ್ಜರಕವಾಟದಿಂ |
ದವಿರಳಸುರಾಗವಿದ್ರುಮವೇದಿಕಾಂತರಗಳಿಂದಮಿತದ್ವಾರಂಗಳು ‖
ಶಿವನಿರ್ಪ ಲೋಕ ಜ್ಯೋತಿರ್ಲೋಕಮೆರಡ ನೀ |
ಲವಲವಿಕೆ ಧಿಕ್ಕರಿಸುತಿದೆ ವಿಶ್ವಕರ್ಮಮಯ |
ನವನಿರ್ಮಿತೋತ್ಸವಮೆನುತ್ತ ಕಪಿನಾಯಕಂ ನೋಡುತ್ತ ಬೆರಗಾದನು ‖ ೫ ‖



ಕೈಲಾಸಶಿಖರಮೇಂ ವಿಶ್ವಾಕೃತಿಯ ತಳೆದು |
ಲೀಲೆಯಿಂ ಸೌಧಂಗಳಾಗಿ ರಾರಾಜಿಪುದೊ |
ಭೂಲೋಕಕಚ್ಚರಿಯ ತೋರಲಳಕಾನಗರ ಮೇಣಪರವೆಸರಾಂತುದೊ ‖
ಲಾಲಿತ್ಯಕರದ ಗಾಂಧರ್ವಲೋಕಮೊ ಸುರಪ |
ಜಾಲನಗರಾಕೃತಿಯಲೆಸೆದಿಹುದೊ ರಘುವೀರ |
ಮೂಲೋಕಕಚ್ಚರಿಯಕರ ನಗರಮೇಂ ಪೊಳೆವುದೆಂದೆನುತ ನಿಟ್ಟಿಸಿದನು ‖ ೬ ‖

ಪಿಡಿದು ಬತ್ತೀಸಾಯುಧಂಗಳಂ ರಕ್ಕಸರ |
ಪಡೆಯು ನಾಲ್ದಿಕ್ಕಿನೊಳು ಕಾಯ್ದಿರ್ಪುದೆಡೆವಿಡದೆ |
ಕಡಲಪ್ರತಿಬಿಂಬದಂತಗಳು ತೋರ್ಪುದು ಗುಣತ್ರಯಮೂರ್ತಿಯಾದಂದದಿ ‖
ಕಡಲಮಧ್ಯದಿ ತ್ರಿಕೂಟಾಚಲಂ ತೋರುವುದು |
ಮೃಡವಿರಿಂಚಿಪ್ರಮುಖರಾರಾಧನಾ ಬಲದಿ |
ಪಡೆದನೀ ದಶಕಂಠನಲ್ಲದುಳಿದವರಿಂಗೆ ಲಭ್ಯಮಾಗುವುದಿದಲ್ಲ ‖ ೭ ‖

ನೀರಮಧ್ಯದಲಿ ತ್ರಿಕೂಟಶೈಲಂ ಮತ್ತ |
ದಾರು ಮತ್ತೊಂದೆಣಿಕೆಯಾಂತ ಪ್ರಾಕಾರಗಳು |
ದಾರ ಕಡಲಂತೆಸೆವ ಪರಿಪರಿಜಗವ ಜಯಿಸುವತಿಬಲಾಢ್ಯರ ಕಾವಲು ‖
ವೀರದಶಮೌಳಿಗಾಶ್ರಯಮಿಾ ಪುರೋತ್ತಮವ |
ನಾರು ನಿಟ್ಟಿಸಿ ಬಾಳ್ವರಕಟಕಟ ಪೆಸರ್ಗೊಂಡ |
ದಾರು ಜೀವದೊಳಿರ್ಪರೆನುತನಿಲಸಂಭವಂ ಚಿಂತಿಸಿದ ಮುಂದರಿಯದೆ ‖ ೮ ‖

ಶತಯೋಜನವ ದಾಂಟೆ ಬಹ ಸಮರ್ಥರದಾರು |
ಖತಿಯಿಂದಮೊಮ್ಮೆ ಬಂದೇಂ ಗೈವುದೀ ನೆಲದಿ |
ಕ್ಷಿತಿಯರಸ ರಘುನಾಥಗೆಂತು ಜಯ ಸಮನಿಪುದು ರಕ್ಕಸಾಲಯವು ನೋಡೆ ‖
ಮತಿದಾನ ಭೇದಾದ್ಯುಪಾಯಗಳಿಗೊಳಗಾಗ |
ದತಿಶಯಬಲಾಢ್ಯರಿಹ ತಾಣಮಿದಕಿನ್ನೇನು |
ಗತಿಯೆನುತ ಮರುತಸುತ ತನ್ನೊಳಾಳೋಚಿಸುತ ಮಗುಳೆ ಮಗುಳೀಕ್ಷಿಸಿದನು ‖ ೯ ‖

ತರಣಿಸುತ ನೀಲನಂಗದರೀ ಧರಾತಳಕೆ |
ಬರಲಶಕ್ಯಮೆನುತ್ತ ತೋರುತಿದೆ ಕಷ್ಟದಿಂ |
ಶರಧಿಯಂ ದಾಂಟೆ ಬಂದೇನು ಫಲಮಿಾಶೈಲ ನೋಡುವರದಾರಿಗಳವು ‖
ಅರಿಯದೆ ಪ್ರತಿಜ್ಞೆಗೈದುದು ನಿಷ್ಫಲತೆಯಾಂತು |
ಮೆರೆವುತಿದೆ ಮೇಣೊಂದುಪಾಯ ತೋರದೆ ಮಹಾ |
ಪುರವ ಪೊಕ್ಕರಸುವಡದೆಂತೆನುತ ಚಿಂತಿಸಿದ ಪವನಸುತ ಕಾರ್ಯಮೆಣಿಸಿ ‖ ೧೦ ‖

ಈ ರೂಹಿನಿಂದ ಮಾನಿರ್ದಡೆಯು ರಕ್ಕಸರು |
ದೂರದಿರರಸುರಪತಿ ಕೇಳ್ದರೆ ಕುತೂಹಲಂ |
ತೋರುತೆನ್ನಂ ಪಿಡಿವರಸುರರೊಡನಾಟದಿಂದರಸಲ್ಕಶಕ್ಯಮಹುದು ‖
ಆರಾದರುಂ ತಿಳಿದು ಪೇಳುವರೆ ರಘುಪತಿಗೆ |
ಕಾರಿಯಮದೆಂತು ಕೈಸಾರುವುದು ನೋಡುವರೆ |
ದಾರಿ ತೋರದೆನುತ್ತೆ ಪವನಸುತ ತನ್ನೊಳಗೆ ತಾನೆ ಚಿಂತಿಸುತಿರ್ದನು ‖ ೧೧ ‖

ಸುಲಭಮಲ್ಲದ ಕಾರ್ಯ ಚಿಂತೆಯಿಂದಹುದೆಂತು |
ತೊಲಗುವುದು ಧೈರ್ಯ ರವಿಯುದಿಸೆಮರಿಗದರಿಂದ |
ಸುಲಭದಿಂ ಕಳ್ತಲೆಯು ಜಾರಿ ಚಿತ್ತಕೆ ನಲವ ತೋರುವುದೆನುತ್ತ ತಿಳಿದು ||
ಉಲಿಯಪಾರೊಡನೆ ತನು ಸಂಕೋಚಗೈವುತ್ತ |
ಬಲುತರೋಪಾಯಗಳ ತನ್ನೊಳಾಳೋಚಿಸುತ |
ಜಲಜಬಾಂಧವ ಚರಮಗಿರಿಯಗ್ರಕಿಳಿವುದಂ ನಿಟ್ಟಿಸುತುಮಿರ್ದನೊಲಿದು || ೧೨ ||

ಉದಯಮಾದಾ ಕ್ಷಣದಿ ಮಾತೃನೇಮುವನಾಂತು |
ಕ್ಷುಧೆಯನಪಹರಿಪ ಫಲಮೆಂದೆನ್ನ ಪಿಡಿಯಲಿಂ |
ದೊದಗಿ ಬಾನೆಡೆಯ ಗತಿವಿಡಿದು ತರುಣಾವಸ್ಥೆಯಲ್ಲಿ ತಿನಲೆಳಸಲಾಗ ||
ಬುಧರರಸನಿಂದುಳಿದೆನಾ ಪುರುಷ ಯೌವನಾ |
ಭ್ಯುದಯದಿಂದೀಕ್ಷಿಸುವನೇಂ ಗೈವನೋಯೆನುತ |
ಬೆದರಿ ಕಮಲಾಪ್ತ ಪಶ್ಚಿಮಗಿರಿಯ ತಪ್ಪಲಂ ಮರೆಗೊಂಬರಿಳಿದ ಜವದಿ || ೧೩ ||

ದ್ವಿಜರ ಸರ್ವಸ್ವಮಂ ಸೆಳೆದು ಪುಷ್ಪಿಣಿಯರಂ |
ಭಜಿಸಿ ಗೋತ್ರೋದ್ವೇಗಮೆಸಗಿ ಕುವಲಯಸುಖ |
ತ್ಯಜನೆಯಂ ಮಾಡಿ ಸತ್ಸಂತತಿಯ ಸಂತತಂ ಪಳಿದ ಪಾತಕದಿಂದಲಿ ||
ಗಜರಲ್ಕಧೋಗತಿಯು ಕಂಡು ರವಿಯಂಬರವ |
ತ್ಯಜಿಸುತ ವಿರಕ್ತಿಯಿಂ ಚರಮಗಿರಿಯೊಳ್ದೀವ |
ಯಜನಗೈದಘವರಿದು ವಿಮಲನೆಂದೆನಿಸುವಡೆ ಪೋಪನೋಯೆನೆ ಜರಿದನು || ೧೪ ||

ಕಾಯಬಲವಸುವೃದ್ಧಿಯೆಸೆವ ಕಾಲದಲತ್ಯು |
ಪಾಯದಿಂ ಸವಿನುಡಿಯ ಸರಸ ಲಲ್ಲೆಗಳಿಂದ |
ನೋಯದಲೆ ಸರ್ವಸ್ವಮಂ ಕೊಂಡು ಸುಖಮಿರ್ದು ಜವಸತ್ವ ನಿಲುತ ಬರಲು ||
ಬೀಯಲನುಗೆಯ್ಯಲಂಬರಗಣಿಕೆ ಕಂಡಿನ್ನ |
ಪಾಯ ಬಹುದೆಂದೆನುತ ನಾಣ್ಚೆ ಜವದಿಂದೈದಿ |
ಭೂಯಿಷ್ಠತಪಮೆಸಗಲೆಳಸಿದನೊ ರವಿಯೆನಲ್ ಚರಮಗಿರಿಯೆಡೆಗೈದಿದಂ || ೧೫ ||

ಅಂಬರದ ಬವಣಿ ಪ್ರತಿದಿನ ಬಿಡದು ಪಥ[1] ನಿರಾ |
ಲಂಬಲಂಬಂ ನೀರು ನೆಳಲಿಲ್ಲ ತನುತಾಪ |
ಮಿಂಬಾದುದಿದ ಸಹಿಸಲಳವಲ್ಲ ನೀರಡಿಕೆಗೆಂದೆನುತ ಚಿಂತೆಗೊಳುತ ||
ಅಂಬುಧಿಯ ಪೊರೆಗೈದಲೆಂದು ರವಿವೇಗದಿಂ |
ಸಂಭ್ರಮದೊಳೈದಿ ಪಶ್ಚಿಮಗಿರಿಯ ಸಾರುವನ |
ದೆಂಬಂತೆ ತವಕದಿಂ ಮೆಲ್ಲಮೆಲ್ಲನೆ ನಭವನಿಳಿದನಾಗಿರಿಯ ತಟಕೆ || ೧೬ ||

ಪಳಿದು ಸತ್ಸಂತತಿಯ ರಾಜವಸುಗಳ ಕೊಂಡು |
ನೆಳಲಿಲ್ಲದಂತೆಸಗಿ ತಮದ ತಿಂತಿಣಿಗೆ ನಿಜ |
ಬಲಕಾಲದೊಳಗಿನಿತು ಲೋಕೋಪಕಾರಮಂ ಗಳಿಸುತಿಪ್ಪನಮುಡುಗಲು ||
ಮುಳಿದು ರಾಜಾಜ್ಞೆಯಿಂ ತಮವು ತಲೆದೋರುತಿರೆ |
ತಿಳಿದು ರವಿ ಜೀವನವನುಳುಹಿಕೊಳೆ ಚರಮಗಿರಿ |
ಗಿಳಿದನೋ ಇಳೆಯೊಳಾರಾರ್ಗೆ ರಾಜವಿರೋಧ ವೃದ್ಧಿಕರಮೆಂದೆನಿಪುದೆ || ೧೭ ||



ವರುಣನರಸಿಯ ರನ್ನಗನ್ನಡಿಯೊ ಸಿಂಧುರವ |
ನರೆವ ಸಾಣೆಯೊ ನಭೋಮಾತಂಗಮಸ್ತಕದ |
ಕುರುವಿಂದದಳಖಚಿತದರಳೆಲೆಯೊ ನಟಣೆಯಂಗೈವ ಧೂರ್ಜಟಿಯ ಪಣೆಯೊಳ್ ||
ಎರಕವೆನೆ ತೋರುವಿಂಗಳಗಣ್ಣೊ ಫಣಿರಾಜ |
ನುರುಶಿರೋರತ್ನಮೋಯೆನಲು ಭಾಸ್ಕರಬಿಂಬ |
ಚರಮಗಿರಿಯಗ್ರದೊಳ್ ತೋರ್ದುದಚ್ಚರಿಯೊಳಾ ಶೈಲಚೂಡಾಮಣಿವೊಲು || ೧೮ ||

ಜನಿಸೇನು ಬ್ರಹ್ಮಸ್ವರೂಪಿನಿಂ ಲೋಕಮಂ |
ಘನಮಹೇಶ್ವರನಾಗಿ ಬೆಳಗೇನು ಶ್ರೀ ವಿಷ್ಣು |
ವನಜಾಕ್ಷ ತಾನಾಗಿ ತೋರ್ದೇನು ಕಾಲವಶನಾದಲ್ಲಿ ಜನನ ಮರಣ ||
ತನುವನೆತ್ತಿದವರ್ಗೆ ತಪ್ಪದಾನೇ ಸಾಕ್ಷಿ |
ಯೆನುತಿನಂ ತೋರ್ಪನೆನೆ ಚರಮಗಿರಿಯಿಂ ಮಹಾ |
ವನಧಿಯೊಳ್ದುಮ್ಮಿಕ್ಕಿ ಮುಳುಗಿದಂ ಮಿತ್ರಾಬ್ಜವಾಗೈದೆ ಬಸವಳಿದುವು || ೧೯ ||

ಲೋಕಬಾಂಧವ ದಿವಸ ರತ್ನಮಿತ್ರಂ ದ್ವಿಜಾ |
ನೀಕಪೋಷಕ ಧರ್ಮಸಾಕ್ಷಿ ಹಂಸಂ ಸರ್ವ |
ಲೋಕೈಕಚಕ್ಷು ಸನ್ಮಾರ್ಗಿ ಕಾಲಾನುಗತಿವಿಡಿದು ಬರೆ ಚರಮಗಿರಿಯು ||
ಪ್ರಾಕಟಿಸಿ ರಾಗಮಂ ಚೂಡಾಮಣಿಸ್ಥಾನ |
ದಾಕಾರದಿಂದಮುಪಚರಣೆಯಂ ಗೈದನೀ |
ಲೋಕದೊಳಗುತ್ತಮರ್ಘನಮುಖರ ಸತ್ಕರಿಸದಿರುವರೆಂತೆಂಬೊಲಾಗ || ೨೦ ||

ರವಿಯೆನಿಪ ರನ್ನಗೊಳಗವನೊಂದ ಪಿಡಿದು ಬಿದಿ |
ಪವಣಿಂದಮುಖಿಳಪ್ರಾಣಿಗಳಾಯುರಾಶಿಯಂ |
ನವನವಕಮೆನಲಳೆದು ಕೈಸೋತು ಚರಮಗಿರಿಯಗ್ರದಿಂ ಬೀಸಿಡಲ್ಕೆ ||
ಜವದಿಂದಮುದಧಿಯೊಳ್ ಕೆಡೆಯಲಿನಬಿಂಬ ತ |
ನ್ನವರಿಗಪಕೃತಿಯಿವರ್ಗೈತಂದ ಬಾಡಬನ |
ಕುವರನೋ ಯೆನುತಂಜಿ ನುಂಗಿ ಭೋರ್ಮೊರೆವುದೋಯೆನೆ ಶರಧಿ ಕಳವಳಿಸಿತು || ೨೧ ||

ಒಂದೆ ಗಾಲಿಯ ಪೂಡಿ ಸಪ್ತಗಾಂಧರ್ವಂಗ |
ಳಿಂದ ಮರುತನ ರಜ್ಜು ಸಾರಥಿಯನೂರು ನಭ |
ದಿಂದ ವೀಯಸಮಾರ್ಗಗಮನ ನಿರ್ವಾಹದಿಂದನುದಿನಂ ತಿರುಗಲೇನು ||
ಬಂಧುರದ ಸಾಸಿರದ ಕರಗಳಿಂ ಬೆಳಗೇನು |
ವೊಂದಾದರುಪಕೃತಿಯನೆಸಗದಾದುವು ವಿಧಿಯು |
ಬಂದತಪಿ ಪತಿಕೂಲಮೆನಿಸಲಾರಿಂದೇನೆನುತ್ತ ರವಿ ವನಧಿಗುರುಳ್ದಂ || ೨೨ ||

ಪಿತನಿದಿರುಗೊಳಲೆಂದು ಚಂದ್ರಗಾವಿಯನುಟ್ಟು |
ವಿತತ ಸದ್ರತ್ನಭೂಷಣ ನಿಚಯಗಳ ತೊಟ್ಟು |
ಹಿತದಿಂದ ಕಾಳಿಂದಿ ಕುಂಕುಮದ ರಸಭರಿತರನ್ನದಾರತಿಯ ಪಿಡಿದು ||
ಅತಿಶಯದ ಪ್ರೇಮದಿಂ ಬೆಳಗಿ ಚೆಲ್ಲಿದರೆ ರಸ |
ದತುಲರಾಗಂ ದಿಶೆಯೊಳೆಸೆದಪುದೊಯೆನೆ ತೋರ್ದು |
ದತಿಶಯದ ಸಂಜೆಗೆಂಪವಸರದಿ ರವಿಗೆ ಸುತೆಯನುರಾಗಪರಪಿದಂತೆ || ೨೩ ||

ಸ್ಮರನ ವಿಜಯೋತ್ಸವದ ರತುನದ ಪತಾಕೆಯಿದೊ |
ವರುಣಸೌಧಸ್ತಗಿತಪದ್ಮರಾಗದ ಕೆಂಪೊ |
ಹರನ ಜಟೆಗಳ ಕಾಂತಿ ಪರಕಲಿಸಿ ತೋರುವುದೊ ಕೆಂಗಣ್ಗೊನೆಯ ಕಾಂತಿಯೊ ||
ತರಣಿಯೈತಹ ಮಾರ್ಗರತ್ನಸೋಪಾನಂಗ |
ಳುರುಕಾಂತಿ ಪಸರಿಸಿತೊಯೆನಲು ಸಂಧ್ಯಾರಾಗ |
ಕರಮೆಸೆದುದಂಬರದ ಮಣಿ ಸರಿಯಲೊಡನೆ ಬರುವರುಣದೇಹಚ್ಛವಿವೊಲು || ೨೪ ||

ತನುತನುಗಳೊಂದೆನಿಸಿ ಮನಮನಗಳೆರಕದಿಂ |
ದನುದಿನಂ ಸುಖರಸದಿ ಸಂತಸಂಗೊಳಿಸುತಿ |
ರ್ಪನಗೆ ಪಶ್ಚಿಮದಿಶೆಯು ಸಮನಿಸಲು ಕುಮುದಿನಿಯರೆಡೆಯಲಾವಿರೆವೆನ್ನುತ ||
ಕನಲಿ ಕಿಚ್ಚನು ಪೊಕ್ಕುವೈಸೆ ಕಿರಣಗಳು ತ |
ನ್ನಿನಿಯ ಚರಮಾವಸ್ಥೆಯಾಂತಡಾ ಸಾಧ್ವಿಯರು |
ಮನದೊಲವಿನಿಂದೈದದುಳಿಯರೆಂಬುದ ಲೋಕವರಿಯಲೇಂ ಕರಮೆಸೆದುದೊ || ೨೫ ||

ಆದುದಿನಗಬ್ಧಿಯೊಳಗಾವಾಸ ದ್ವಿಜತತಿಗೆ |
ಮೇದುರದ ದುಮ್ಮಾನಮೆನಿಸೆ ದೋಷಾಕರೋ |
ದ್ಬೋಧಮಾದಪುದಿನ್ನು ಕುಮುದಿನೀಗಣ ಜಾರಚೋರರೇಳ್ಗೆಯು ಬಲಿದುದು ||
ಆದರಿಪರಿಲ್ಲದೆಡೆ ಹಾದರಿಗಳಿರ್ಪೆಡೆಯು |
ಮೋದಕರಮಹುದೆ ಸಾಧ್ವೀಜನಕ್ಕೆಂಬ ಸಂ |
ಬಾಧದಿಂ ಕಂಗಳಂ ಮುಗಿದುವೆನೆ ಕಮಲಂಗಳೆಡೆಗೆಡೆಗದೇಂ ತೋರ್ಪುವೊ || ೨೬ ||

ಸ್ಮರಗಂಬು ಸಿರಿಗೆ ಮನೆ ಹರಿಗೆ ನೇತ್ರಂ ಬಿದಿಗೆ |
ಸುರುಚಿರದ ಗದ್ದುಗೆಯು ದಿನಮಣಿಗೆ ಪ್ರೇಮಕರ |
ದಿರವಾಗಿ ಫಲಮದೇನರಿಗಳೆಡೆಯೊಳ್ ಸಿಲ್ಕಿ ತಾವರೆಗಳಾದ ಬಳಿಕ ||
ಧರೆಯೊಳಂ ಜೀವನದಿ ತಲೆಯೆತ್ತಿ ನಿಂದಿರಲ್ |
ದುರುಳ ದೋಷಾಕರಕರಸ್ಪರ್ಶಮಾದಲ್ಲ |
ದಿರದೆನುತ ನಾಣ್ಚಿ ಕಂಗಳ ಮುಗಿದ ಮಾಳ್ಕೆಯೊಳ್ ಮುಗಿದಿರ್ದವಬ್ಜಂಗಳು || ೨೭ ||

ಅರ್ಕನಸ್ತಮಿಸಲಿರುಳೆರೆಯ ಬಹನವನ ಸಂ |
ಪರ್ಕಮಹುದೆಂದಂಜಿ ಚಕ್ರವಾಕಿಗಳು ಮೇ |
ಲುರ್ಕುವತಿಸಂಕಟದೊಳೈದಲವನರಸುತ್ತ ಚಕ್ರಂಗಳಳಲಿ ಬಳಲಿ ||
ನೀರ್ಕುಡಿಯದಲ್ಲಲ್ಲಿ ಬೆದಕಿ ಪಕ್ಕಗಳೆಳೆದು |
ಮಾರ್ಕೊಂಡು ಸರಸಿಗಳ ಪೊರೆಯ ಮಿಡುಕುತಲಿ[1]ಹೆ |
ಮ್ಮರ್ಕಕ್ಕಳನ್ನರಸುವತಿದೈನ್ಯತೆಗಳಲ್ಲಲ್ಲಿ ತೋರ್ದುವಾಕಾಲದಲ್ಲಿ || ೨೮ ||

ಇಲ್ಲಿ ಗುಟುಕಿಟ್ಟೆವಾವಿಲ್ಲಿ ಬಾಯ್ಗೂಡಿದೆವ |
ದಿಲ್ಲಿ ಸರಸಕ್ಕೆಳಸಿ ಕೂಡಿದೆವು ವಲ್ಲಭೆಯ |
ರಿಲ್ಲಿ ಸಂತಸಗೊಂಡರೆನುತ ಪಲುಬುತಮಲ್ಲಿಗಲ್ಲಿಗೆಡೆಯಾಡುತಳುತ ||
ಪುಲ್ಲಶರನುರುಬೆಯಂ ತಾಳಲಮ್ಮದೆ ಕಾಮ[2] |
ನಲ್ಲಿ ಚಕ್ರಗಳು ಭೂತಳಕೊರಗಿ ಭೀತಿಯಿಂ |
ಪುಲ್ಲಕಚ್ಚಿದುವೊಯೆನೆ ಪಲ್ಲೊಳಂಟಿಹ ಪಾಸೆಯೇಂ ಚೋದ್ಯಕರಮೆನಿಪುದೊ || ೨೯ ||

1 ವಿಡ.ಕುತಮಿ. 2 ಕಾರ.



ದ್ವಿಜರ ಗುಟುಕಂ ಸೆಳೆದು ಸನ್ಮಾರ್ಗಮಂ ಪಳಿದು |
ರಜಸಾಂಗನೆಯರೊಡನೆ ಬೆರೆದು ಗೋತ್ರೋದ್ದಳನ |
ನಿಜನಿಷ್ಠೆ[1]ಗೈದು ಜಡಸಂಬಂಧದಿಂದಮಾ ವಾರುಣಿಯೊಳನುರಾಗವು ||
ಕುಜನಸಂಸೇವ್ಯಕರ ಪಾತಿತ್ಯಮಾಳ್ದ ರವಿ |
ಭಜಕ ದುರ್ಯಶಬಂಧು ಸರ್ವಜೀವರನಾಂಧ್ಯ |
ಭಜಕರಂ ಮಾಡಿದನೊಯೆನೆ ಮಬ್ಬು ಪರ್ಬಿದುದು ಜವದೊಳೆಲ್ಲಾದೆಸೆಯೊಳು || ೩೦ ||

ಕರಿಯ ಪಟ್ಟೆಯನುಟ್ಟು ಕಣ್ಗೆ ಕಾಡಿಗೆಯಿಟ್ಟು |
ಹರಿನೀಲತೊಡವುಗಳ ತೊಟ್ಟು ಕುಚಕಲಶಗಳ |
ಪೊರೆಯ ಕತ್ತುರಿಯ ಸೊಬಗಳವಟ್ಟು ಪಣೆಗೆ ಮೃಗಮದಸಾರತಿಲಕಮಿಟ್ಟು ||
ಧರೆಯ ಜಂತುಗಳೆಲ್ಲ ಮೋಹದಿಂ ಪರವಶತೆ |
ವೆರೆದಂತೆ ಪ್ರತ್ಯಂಗದಾಲಿಂಗನಂಗೈದು |
ಬರುವಳೋ ಮಾಯೆಯೆಂಬಂತೆ ಕಳ್ತಲೆಯದೇಂ ಕವಿದುದೋ ಭೂತಳವನು || ೩೧ ||

ಜಲಜಮಿತ್ರಂ ಸರಿಯೆ ಕೋಕಾಂಗನೆಯರ ಹೃ |
ನ್ನಿಲಯದೊಳ್ ವಿರಹಾಗ್ನಿ ಪೆರ್ಚಿ ಪೊಗೆ ಪೊರಮಟ್ಟು |
ನೆಲದಿಂದಮಾಗಸವ್ಯಾಪಿಯೆಂದೆನಿಸಿದುವೊ ತಾರಕಾಸಿಕ್ಥಮುಣಲು ||
ಗೆಲವಿನಿಂ ಬರ್ಪವೋ ಖಲಸಮೂಹಚ್ಛಾಯೆ |
ಬಲುಹಿಂದ ಪರ್ಬಿದುದೊ ನಭದಂಜನಾಸಾರ |
ಕಲೆಯೊಯೆನಲಂಧಕಾರಂ ಪರಪಿತೆಣ್ದೆಸೆಗೆ ನಿಬರೀಸಮಾಗಿ ಜವದಿ || ೩೨ ||

ಚೋರಸಂತತಿಯ ಸಿದ್ಧಾಂಜನಮೊ ತಿಳಿವಡಿದು |
ಜಾರಸಂತತಿಯ ದೃಶ್ಯಾಂಜನಮೊ ದಾನವರು |
ದಾರಬಲಪೌರುಷವ ಪೆರ್ಚುಗೆಯ ಕೈಗೈವ ವಿಜಯಾಂಗನಾರೂಪಮೊ ||
ಮಾರಭೂಪತಿಯ ಸಮ್ಮೋಹನಾಂಜನಮೊ ಎನೆ |
ಕಾರುಗತ್ತಲೆ ಕವಿದುದಲ್ಲಲ್ಲಿ ಮನ್ಮಥವಿ |
ಚಾರಪರರಡಿಗಡಿಗೆ ಪೆರ್ಚಿ ನಿಜವೈಭವಗಳೆಡೆಗೆಡೆಗೆ ಪೊಗಳುತಿರಲು || ೩೩ ||

ಮನದೊಲವಿನಿಂದಮಾಬಾಲ್ಯದೊಡನಾಟದಿಂ |
ಸನುಮತವಿಲಾಸದಚ್ಚರಿಗಳಿಂ ಸಂತವಿಸು |
ವಿನನಸ್ತಮಯನಾಗಲಾತನ ಚಮತ್ಕೃತಿಗಳೆಣಿಸುತಂಬರನಾರಿಗೆ ||
ಮನುಮಥಾನಲ ಪೆರ್ಚಲಳುಕಿ ಬಳುಕುತ ನಡುಗಿ |
ತನುವಿನೊಳು ಸಾತ್ವಿಕಾವಸ್ಥೆ ತೋರಲ್ಬೆಮ |
ರ್ವನಿಗಳೇಂ ಚೆಲ್ಲಿದುವೊ ಯೆನೆ ತಾರಕಾವಳಿಗಳೆಸೆದುವಾಗಸದೊಳಾಗ || ೩೪ ||

ಮದದಿ ಪೂರ್ವೇತರೋದಧಿಯ ಜಲಮಂ ಕೊಂಡು |
ಮುದದಿಂದಮಭ್ರಮಾತಂಗ ಫೂತ್ಕರಿಸಲ್ಕೆ |
ಚದರಿ ಪನಿಗಳ್ಗಗನತಳದಿ ಪರಕಲಿಸಿದುವೊ ಯೆನಲು ನಕ್ಷತ್ರತತಿಯು ||
ಚದುರ ಬೀರಿದವಮೃತರಸವ ಬುಧರುಣುವೆಡೆಯ |
ಲುದಿರ್ದ ಕಣಮುಡುನಿಕಾಶದಲೆಸೆವುವೋ ಗಗನ |
ಸುದತಿಯ ಕರೋನ್ಮುಕ್ತಮುಕ್ತಾಕ್ಷತೆಗಳೆನಲ್ಬೆಡಗ ಬೀರ್ದುವು ತಾರೆಗಳ್ || ೩೫ ||

1 ಗೀಷೆ.

ಅತಿವಿಶಾಲಪ್ರತನಜೀರ್ಣಮಂಬರಮದೀ |
ಕ್ಷಿತಿಗೆ ಸುರಿದಪುದೆಂದು ಪದ್ಮಸಂಭವ ತನ್ನ |
ಮತಿಯೊಳಾಳೋಚನಂಗೈದು ತನ್ನೊಳ್ತಾನೆ ಜೇರೊಂದು ಪರಿಯ ತಿಳಿದು ||
ಜತನಮಾಗಿರಲೆಂದು ರೌಪ್ಯಮಯಕೀಲುಗಳ |
ವಿತತನಭಕಲ್ಲಲ್ಲಿ ಬಲಿದನೋ ಯೆನೆ ಖುಕ್ಷ |
ತತಿಗಳೇನಚ್ಚರಿಯ ಬೀರಿದುವೊ ಬಾನೆಡೆಯ ಮೋಹನದ ಗುಟಕೆಗಳಿನೆ || ೩೬ ||

ದಿನಪನಸ್ತಮಿಸಿದಂ ಪೋಯ್ತು ಸಂಧ್ಯಾರಾಗ |
ಘನಮುರ್ಬುಿ ಪರ್ಬಿತ್ತು ತಾರಕೋನ್ಮೇಷದೊಳು |
ಮನುಮಥನ ಬಾಗರೆಯೆ ಮರುಗುತಿಹ ತಾವರೆಯ ಕಂಡು ಚಕ್ರಗಳಳುತಿರೆ ||
ಮನದೊಲವು ಕೈಸಾರ್ದುದೆಂದು ಪುಂಶ್ಚಲಿಯರುಂ |
ಬಿನದದಿಂ ಶೃಂಗರಿಸಿ ಸಂಕೇತ ಮಂದಿರಗ |
ಳನು ಕುರಿತು ಪೋಗಲನುಗೈದರಚ್ಚರಿಗಳನದೇನೆಂಬೆನತಿಶಯುಗಳ || ೩೭ ||

ಕಂಗದಿರು ಸೂಸದೊಲು ನಗೆಮೊಗದೊಳೊಗೆವ ಬೆ |
ಳ್ದಿಂಗಳೋಸರಿಸದೊಲು ಹಂಸಕಧ್ವನಿ ಸೂಚ |
ನಂಗೆಯ್ಯದೊಲು ತನುಚ್ಛಾಯೆ ಪೊರಪೊಣ್ಮದೊಲುಪಾಯಂಗಳೆಸಗಿ ಬಳಿಕ ||
ಸಿಂಗರದ ನೀಲಪಟಮಂ ಮುಸುಕನಿಟ್ಟುಕೊಂ |
ಡಂಗನಾಮಣಿಯೊರ್ವೆ ಕಳ್ತಲೆಯನೊಳಪೊಕ್ಕ |
ಳಂಗಜನ ಮಸದಲಗನೇಂ ನಿಷಂಗದಲಿಟ್ಟರೆಂಬಂತೆ ಕರಮೆಸೆದುದು || ೩೮ ||

ಪೆರೆನೊಸಲೊಳಗೆ ಕತ್ತುರಿಯ ತಿಲಕಮನ್ನಿಟ್ಟು |
ತುರುಬಿಂಗೆ ಕನ್ನೈದಿಲೆಯ ಪುಷ್ಪಮಂ ತೊಟ್ಟು |
ಸುರುಚಿರಾಂಗಂಗಳಿಗೆ ಹರಿನೀಲಭೂಷಣವ ತೊಟ್ಟು ಮಿಂಚುಗಳ ಕದಿರ ||
ಪರಪುವಂಬಕಗಳಿಗೆ ಕಾಡಿಗೆಯನೆಚ್ಚುತಾ |
ರರಿಯದಂದದಿ ಜಾರೆ ಮೆಲ್ಲನೈತರೆ ಕಂಡು |
ಕರವಿಡಿದು ಸಂಕೇತತಾಣಕ್ಕೈದಿದನೊರ್ವ ದರ್ಪಕಂ ಮಿಗೆ ಪೆರ್ಚಲು || ೩೯ ||

ಮುನಿಯದಿರು ಮಗುಳಾಸರಿಂದ ನಿಟ್ಟುರಗೈದು |
ಮನವ ಕದಡೆನಿಸದಿರು ಮತ್ತಾ ನಖಕ್ಷತಗ |
ಳನು ತಾಳಿ ಸೀತ್ಕಾರದಿಂದ ಪೊತ್ತಂಗಳೆದು ಪಲ್ಗುರುಪನಾಂತು ಬಳಲಿ ||
ಕನಲದೊಲುಪಾಯದಿಂ ಕಾಮನಂ ಪ್ರಿಯಗೊಳಿಸು |
ತಿನನೇಳ್ವಸಮಯಕ್ಕೈತಹುದೆಂದು ಸಖಿಯಳಂ |
ಬಿನದದಿಂ ಕಳುಪಿದಳದೊಂದೆಡೆಯೊಳೊರ್ವೆಯೇಂ ಸಂಪ್ರದಾಯೋದ್ವರ್ತಳೊ || ೪೦ ||

ಕೂರುಗುರು ನಾಟದೊಲ್ಪಿಡಿ ಕುಚಂಗಳ ರದನ |
ಧಾರೆಸೋಂಕದ ತೆರದಿ ಮುತ್ತನಿಡು ಬಾಸುಳಂ |
ತೋರದಂದದಿ ಬೆರಳ್ಪೊಡೆತವಂ ಕೊಡು ಕಂಠದುಲಿ ಸಪ್ಪುಳಾಗದಂತೆ ||
ಮಾರನುರುಬೆಯ ತೀರ್ಚಿ ಮನೆಗೆ ಕಳುಪುವುದೆನಗೆ |
ವೋರಗಿತ್ತಿಯ ಸವತಿಯತ್ತಿಗೆಯರುಪಟಳಂ |
ತೋರಮೆನುತೊರೆದು ಬೇಗದಿ ನೆರೆದು ಜಾರಿದಳ್ ಚಾತುರ್ಯರಚನೆಯಿಂದ || ೪೧ ||



ಬೆಮರುತಿಹ ತನುಲತೆಯ ಬೆದರುತಿಹ ನೋಟಂಗ |
ಳಮರ್ದ ಕರಪಾದಗಳ ಗದ್ಗದಿಪ ಕಂಠಮಂ |
ವಿಮಲೇಂದುವದನಂ ನಿಶಾವ್ಯಾಪ್ತಿಯಾಂತಂತೆ ತೋರ್ಪ ಪೊಸ ಜಾರೆಯನ್ನು ||
ರಮಣ ನಿಟ್ಟಿಸಿ ಮುಗ್ಧೆ ಬಾರೆನುತ ಕುಸ್ತರಿಸಿ |
ರಮಣಮಂ ತೀರ್ಚಿ ಬೆಚ್ಚಂ ಪರಿದು ಸಂತೈಸಿ |
ರಮಣನಿರ್ದೆಡೆಗೆ ಕಳುಪಿದನುಮುವನಿನ್ನೇನು ಕೌಶಲಶಿಖಾರತ್ನನೊ || ೪೨ ||

ಕವಿದ ಕಳ್ತಲೆಯೊಳೀ ಪರಿಯ ನಾನಾವಿಧದ |
ಪವಣನೆಸಗುವ ಜನರ ಕಂಡಾಗ ಮಾರುತಿಯು |
ತವಕದಿಂ ಪತಿಕಾರ್ಯದವಸರಂ ಸಂಭವಿಸಿತೀಗಲಸನಾಗಿರ್ದಡೆ ||
ವಿವಿಧ ರಕ್ಕಸರು ಸಂಚರಣೆಗೈವರ್ಕಂಡ |
ರವಿರಳಕ್ರೋಧದಿಂ ಪಿಡಿದೆನ್ನ ಕಾರ್ಯಮಂ |
ನವಸಿದಲ್ಲದೆ ಮಾಣರೆಂತಿದಕುಪಾಯಮೇನೆಂದು ಯೋಚನೆಗೈದನು || ೪೩ ||

ಎಂದಿನಂದದ ರೂಪಿನಿಂದಮಾನಿರೆ ಕಾರ್ಯ |
ಸಂದಿಸದೆ ಹಾನಿ ಬಂದಪುದೆಂದು ಬುದ್ಧಿಯಂ |
ತಂದು ತನುಸಂಕೋಚಗೈದು ಮಾರ್ಜಾಲನಿಭನಾಗಿ ಜವದಿಂದ ಪೊರಟು ||
ಇಂದಿರಾವರ ರಾಮುಪುರದ ವಲ್ಲಭನ ಪದ |
ದ್ವಂದ್ವಮಂ ಧ್ಯಾನಿಸುತ ಲಂಕಾನಗರದೊತ್ತ |
ನಿಂದು ಕೋಂಟೆಯ ನೋಡಿ ಯೇರಿಳಿದನತಿವೇಗದಿಂದ ಭುವನಪ್ರಾಣಜಂ || ೪೪ ||

**ಎರಡನೆಯ ಸಂಧಿ ಸಮಾಪ್ತಂ.**

# ಮೂರನೆಯ ಸಂಧಿ

ಸೂಚನೆ ‖ ತರಿದು ಲಂಕಿಣಿಯ ಲಂಕಾನಗರದೊಳಗೆಲ್ಲ |
ಚರಿಸಿ ನಿಟ್ಟಿಸಿ ಧರಾಸುತೆಯ ಕಾಣದೆ ಬಳಲಿ |
ಮರುತಸುತನೈತಂದು ಕಂಡ ದಶಕಂಠನಿರ್ಪರಮನೆಯ ದುಮ್ಮಾನದಿ ‖

ನಿಶೆಯಕಾಲದಿ ಮಹಾ ರಕ್ಕಸಾಲಯದೊಳಿಹ |
ಪೊಸತೆನಿಸುವಚ್ಚರಿಯ ನಿಟ್ಟಿಪರೆ·ಮರುತಸುತ |
ಸಸಿನೆ [1]ಪೃಷದಂಶ ಸಮನೆನಿಸಿ ಪ್ರಾಕಾರಮನ್ನಡರಿಳಿದು ಪಟ್ಟಣದೊಳು ‖
ಬಿಸರುಹಾಕ್ಷಿಯ ನೋಡಲೆಂದು ಮೆಲ್ಲನೆ ರನ್ನ |
ಹಸರಮೆನಿಪಾಳ್ವೇರಿವಿಡಿದು ಕೆಲಬಲಗಳಂ |
ನಸುನೋಟದಿಂದ ನೋಡುತ್ತೆ ನಡೆದನೆಂತೆಂಬೆನಾ ಚಮತ್ಕೃತಿಯನಗಜೆ ‖ ೧ ‖

ಕತ್ತಲೆಯ ಮೊತ್ತ ಮುಂಬರಿದು ಬರುತಿರೆ ಬೆಳಗ |
ನೊತ್ತವಿಸಿ ಕವಿದು ಕೆಲಸಾರಿಸುತ್ತೈದಿ ಬರೆ |
ಮತ್ತೆ ಸೋಮಾದಿತ್ಯತಾರಾಗ್ರಹಂಗಳುಂ ರಾಗಮುಂ ಬೀರುತಿರಲು ‖
ಎತ್ತ ನೋಡಿದರೆ ಜ್ಯೋತಿರ್ಲೋಕವೆಂಬಂತೆ |
ಬಿತ್ತರ ವಿಲಾಸಮಂ ಕೊಡುತಮಿರೆ ಕಂಡು ಕಪಿ |
ಸತ್ತಮಂ·ಬೆರಗಾದ ರಘುವೀರದಾಶರಥಿ ಲಕ್ಷ್ಮಣಾಗ್ರಜಯೆನುತ್ತ ‖ ೨ ‖

ಸರಸಿಜಾಸನ ಮನೋನಿರ್ಮಿತವೊ ಪಾರ್ವತೀ |
ವರನಪಾಂಗೋದಿತಮೊ. ವೊಪ್ಪದಿಂ ನೋಡೆ ಶ್ರೀ |
ಹರಿಯ ಕರುಣಾರಸೋದ್ಭೂತದುರುಳಿಯೊ ಸುರಪನುರುವಿಲಾಸದ ಕಡಲಿದೊ ‖
ಧರಣೀತಳದೊಳೆಂದು ಕಂಡುಂ ಕೇಳಿದುದಿಲ್ಲ |
ಕರಚೋದ್ಯಕರನಗರಮಿದುವೆ ಮೂಲೋಕಕ್ಕ |
ಚ್ಚರಿಯ ಕರೆವುದೆನುತ್ತ ಮರುತಸುತ ಬೆರಗಾಗಿ·ನೋಡುತಿರ್ದಂ ಮುದದೊಳು ‖ ೩ ‖

ಅಲ್ಲಿಂದ ಮೆಲ್ಲನಾ ಪ್ರಾಕಾರ ಬೆಳಗಿನೊಳ |
ಗುಲ್ಲಾಸದಿಂದ ಮೆಡಬಲನನಾರೈದು ಬರು |
ತಲ್ಲಿ ನಗರದ್ವಾರದೊಳಗಿಳಿದು ಮಣಿಖಚಿತ ಭೂತಳದಿ ನಿಂದು ನೋಡೆ ‖
ಅಲ್ಲಿ ಮರೆದೊರಗಿರ್ದ ಘೋರರಕ್ಕಸಜಾಲ |
ವೆಲ್ಲಮಂ ಕಂಡು ಸುಳುಹಾಗದೊಲು ಮಾರುತಿಯು |
ಮೆಲ್ಲಮೆಲ್ಲನೆ ತೋರಮಾರ್ಗವಿಡಿದೈದುವರೆ ಮನದೊಳಾಳೋಚಿಸಿದನು ‖ ೪ ‖

ಕೆದರ್ದ ಕೆಂಗುರುಳುಗಳ ಕೆಂಡಮಂ ಮುಕ್ಕುಳಿಪ |
ಬೆದರುಗಂಗಳ ಕೋರದಾಡೆಗಳ ದೀರ್ಘೋದ |
ರದ ಕಾಳಮೇಘದಂತೆಸೆವ ನಿಡುಶಾರೀರದೂರ್ಧ್ವಕೇಶಂಗಳಿಂದ ‖
ಮದಮುಖಿಯು ಕಾಲನಂ ಪಡೆದಳಹುದೆಂಬಂತೆ |
ಪದವಿಯೊಳು ನಿಂದು ಘುಡುಘುಡಿಸಿ ಮರುತಾತ್ಮಜನ |
ಬೆದರಿಸಿದಳೇನೆಂಬೆ ಕಾರ್ಮುಗಿಲ ಬರಸಿಡಿಲ ಪೋಲ್ವ ಬಿರುನುಡಿಗಳಿಂದ ‖ ೫ ‖

1 ವೈಷದಂಶ.



ಮೂರು ಮೂರ್ತಿಗಳು ಮನದೊಳ್ನೆನೆಯಲಳ್ಕುವರು |
ದಾರನಗರಿಯ ಮಿಕ್ಕ ದಿಕ್ಪಾಲರಿರ್ಪರೆಂ |
ದಾರರಿಯರಕಟಕಟ ನಮುಚಿ ಮುಖ್ಯಾಸುರರರನೆಣಿಪರಿಲ್ಲೀ ನೆಲದೊಳು ‖
ವೀರದಶಮೌಳಿಯಾಳುವ ರಾಜಧಾನಿಯಂ |
ತೋರ ನಿಶೆಯೊಳು ಪೊಕ್ಕು ನಿರ್ಭಯದಿ ಚರಿಸೆ ನೀ |
ನಾರೆಲವೊ ಕಪಿಯೆ ಪೇಳೆಂದು ಗರ್ಜಿಸಿದಳಾ ದಾನವಿ ಮಹಾನಿಶಿಯೊಳು ‖ ೬ ‖

ಶಾಂತಿಕರ್ಮದಲಿ ಬೇತಾಳ ಮೂಡಿದ ತೆರದಿ |
ಮುಂತೆಸೆವ ರಕ್ಕಸಿಯ ಕಂಡು ಪವನಾತ್ಮಭವ |
ಚಿಂತಿಸಿದನೇನುಪಾಯಂಗೆಯ್ಯವೇಳ್ಕೆನುತ ಹಾದಿ ಮುಂಗಾಣದಾಗ ‖
ನಿಂತು ನಿಷ್ಠುರಗೈವರಿದು ಸಮಯಮಲ್ಲ ಮೇ |
ಣೆಂತಾದರುಪಚರಿಸಿ ಪೋಗಬೇಕಲ್ಲದಾಂ |
ನಿಂತೆನಾದರೆ ಕಾರ್ಯ ಕೆಟ್ಟಪುದೆನುತ್ತಮತಿಶಾಂತಿಯಿಂದಿಂತೆಂದನು ‖ ೭ ‖

ವನಭುವಿಯೊಳನುದಿನಂ ಪಣ್ಪಲಗಳಂ ತಿಂದು |
ತನುಪೋಷಣಂಗೈವ ಶಾಖಾಮೃಗಂಗಳಿಗೆ |
ದನುಜಮನುಜಾದಿಗಳ ಪಟ್ಟಣಮಿದೆಂತೆಂಬ ಭೇದಮೇಂ ತಿಳಿವುದೆಮಗೆ ‖
ಘನತರದ ಸೌಂದರ್ಯವೆತ್ತ ಪತ್ತನಮೆನುತ |
ವನನಿಧಿಯ ಮಧ್ಯದೊಳಗುಳ್ಳರೆಲ್ಲರು ಪೇಳ |
ಲನುದಿನಂ ಮನವೊಲಿದು ನಿಟ್ಟಿಸುವರೈತಂದೆ ಕಾರ್ಯಮೇನಿಲ್ಲ ಮುಂದೆ ‖ ೮ ‖

ಮಣಿಖಚಿತದುಪ್ಪರಿಗೆ ರಾಜಮಂದಿರಗಳೊಳ |
ಗೆಣಿಕೆಯಾಂತರ ಮನೆಗಳನು ನೋಡುತುಪವನದಿ |
ತಣಿವಂದದಿಂ ಪಣ್ಪಲಂಗಳಂ ಭುಂಜಿಸುತ ಪೋಪೆ ಸಂತಸದೊಳೆನುತ ‖
ಗಣನೆಯಿಲ್ಲದೊಲುಪೇಕ್ಷೆಯೊಳಾಡೆ ರಕ್ಕಸಿಯು |
ಕಣುಕಿಡಿಗಳುದುರಿಸುತ ಕನಲಿ ಕಡುಗೋಪದಿಂ |
ತೃಣಕೆ ಕಡೆಯೆಂದೆನಿಸೆ ಧಿಕ್ಕರಿಸಿ ಮೂದಲಿಸಲನುಗೈದಳತಿಕೋಪದಿ ‖ ೯ ‖

ಬಲುಹುಳ್ಳ ದಿಕ್ಪಾಲಸಿದ್ಧಗಾಂಧರ್ವರೀ |
ನೆಲನ ನೋಡಲಶಕ್ಯಮೆಂದು ಪೇಳುತ್ತಮಿರೆ |
ಹುಲುಕಪಿಯು ನೀಂ ಪೋಗಿ ನೋಡಿ ಬಹೆನೆಂದೆಂಬೆ ಮೂಢ ಪಿಂದಿರುಗಿ ಪೋಗಿ ‖
ಸಲಹಿಕೊ ಶರೀರಮಂ ನಿನಗೇತಕೀ ಮಹಾ |
ಬಲ ನೋಡಲೆಮ್ಮ ನಗರಾಧಿಪನ ಬಾಹುಬಲ |
ದುಲುಹ ಕೇಳ್ದರಿಯ ಪೋಗೆನುತ ಗರ್ಜನೆಗೈದ ರಕ್ಕಸಿಗೆ ಮಗುಳೆಂದನು ‖ ೧೦ ‖

ವೀರರಿಗೆ ಪುರನಗರಗ್ರಾಮಖರ್ವಡಂಗಳ |
ತೋರನುಡಿಗಳ ವಿಚಾರಂ ಬೇಕು ಕಪಿಗಳಿಗ |
ದಾರ ವಾರ್ತೆಯಲೇನು ನೀರುನೆಳಲಿರ್ದೆಡೆಯೊಳುಂಡೊರಗಿಕೊಂಡಿರ್ಪುದು ‖
ಭೂರಿಫಲಪುಷ್ಪಂಗಳಿರ್ಪ ಕಾನನದೇಶ |
ದಾರಿಯಂ ನೋಳ್ಪುದೊಂದಲ್ಲದನ್ಯದಲೇನು |
ಕಾರಣಂ ಸುಖಮಾಗಿ ತೋರ್ದರೀನೆಲಮಿಲ್ಲಿಗೈತಂದೆನಚ್ಚರಿಯೊಳು ‖ ೧೧ ‖

ಪಿಡಿಯೆನೀನಗರಿಯೊಳಗೊಂದು ತೃಣಮನ್ನಾರ |
ನುಡಿಸೆ ಪ್ರತಿಗೃಹಗಳಪ್ರತಿಯೆಂದು ಲೋಕಜನ |
ಶಡಿಗಡಿಗೆ ಪೇಳುತಿರೆ ಕೌತೂಹಲದಲಚ್ಚರಿಯ ನೋಡಿ ಬರ್ಪೆನೆನುತ ||
ತಡೆಯದಡಿಯಿಡೆ ಹಾದಿಗೊಡು ಪೋಪೆನೆನೆ ದೈತ್ಯೆ ||
ಘುಡುಘುಡಿಸಿ ಕೋಪದಿಂ ಧಿಕ್ಕರಿಸಿ ಮಾರ್ನುಡಿದ |
ಳೊಡನೆ ಪೇಳ್ದಂತೈದದಿರೆ ಪೊಡೆದು ಭೂತಳಕೆ ಬಲಿಯನಿತ್ತಪೆನೆಂದಳು || ೧೨ ||

ಪ್ರಳಯಶಕ್ತಿಗೆ ಯುಕ್ತಿ ಕೊಳುವುದೇ ಲಂಕಿಣಿಯ |
ಕಳೆಯಲಳವಪ್ಪುದೇ ನಿಶೆಯೊಳಗೆ ಲಂಕೆಯಂ |
ಮಿಳಿತಗೈದಣಲೊಳಗೆ ಕಾಯ್ದಿರ್ಪುದಂ ಕಳೆದು ಗಾಳಿ ಬಿಸಿಲುಂ ಸುಳಿದಡೆ ||
ತಿಳಿಯದೀ ಮೌರ್ಖ್ಯದಿಂ ತನುವ ಪೋಗಾಡಲೇಂ |
ಫಲ ನಿನಗೆ ಕಪಿಯೆ ಪೋಗೆಂದು ಧಿಕ್ಕೃತಿಗೈದ |
ಳಳುಕದೆ ಕಪೀಂದ್ರ ರಕ್ಕಸಿಯೊಡನೆ ಪೇಳಿದಂ ವಿನಯತರವಾಣಿಯಿಂದೆ || ೧೩ ||

ನಗರಾಧಿದೇವತೆಯೆನುತ್ತ ತಿಳಿಯದಲಾನು |
ಬಗೆಬಗೆಯ ನುಡಿಗಳನ್ನುಸಿರ್ದೆ ಭೂಮಿತಳದ |
ಲಗಣಿತದ ಜೀವನಾಧಾರಮೀ ಪುರಮಖಿಲಪಾಲನಾಶಕ್ತಿ ನಿನಗೆ ||
ಸೊಗಸಿರುವುದಾನೇಸರವ ಪೋಗಿ ಪಟ್ಟಣದೊ |
ಳೊಗುಮಿಗೆಯ ಚಿತ್ರಗಳ ನೋಡಿ ಸಂತಸಗೊಂಡು |
ಮಿಗೆ ನಿನ್ನ ನೇಮಮಂ ಕೊಂಡು ಪೋದಪೆನಪ್ಪಣೆಯನಿತ್ತು ಕಳುಹೆಂದನು || ೧೪ ||

ಕೇಳುತಾಕ್ಷಣದಿ [1]ಮುಂಗೋಪ ಸಂಭವಮಾಯ್ತು |
ಹೇಳನಂಗೈವನೀ ಕಪಿಯೆನುತ ಘುಡುಘುಡಿಸಿ |
ಕಾಳರಕ್ಕಸಿ ಪೊಡೆದಳದ್ರಿಯಂ ಬರಸಿಡಿಲ್ಪೊಡೆವಂತೆ ಪ್ಲವಗಪತಿಯ ||
ತಾಳಿಕೊಂಡಾ ಕೊಲೆಗೆ ಕಿನಿಸಾಳದಲೆ ದುಷ್ಟ |
ಮೂಳಿ ಪೊಗಲೀಯಳರಿವಡೆ ಸ್ತ್ರೀಸ್ವಭಾವ ಮಿದ |
ಪೇಳಲಾರೊಡನೆಂದು ಪತಿಕಾರ್ಯಮಂ ನೆನೆದು ಚಿಂತಿಸಿದ ಮರುತಭವನು || ೧೫ ||

ಎಳೆಗಾಳಿಯಿಂದಗ್ನಿಕಳೆ ಪೆರ್ಚಿ ಬರ್ಪಂತೆ |
ಖಳರಂಗನೆಗೆ ಕೋಪ ಪೆರ್ಚಿ ಬರೆ ಮಾರುತಿಯು |
ಬಲುತರದ ನುಡಿಗೇಳಿದಾಕ್ಷಣದಿ ಮೃತ್ಯುಸ್ವರೂಪೆ ಕೈನೆಗಪಿ ಪೊಡೆಯೆ ||
ಘಳಿಲನತ್ಯದ್ಭುತಕ್ರೋಧದಿಂ ವಾಮಕರ |
ತಳದೆರಡು ಬೆರಳಿಂದ ಡೊಕ್ಕರಿಸುತಸುರೆಯಂ |
ನೆಲಕೆ ಡೆಂಢಣಿಸೆ ಕೆಡೆದಳು ನಿಮಿಷಮಾತ್ರದಿಂದೇನೆಂಬೆನಚ್ಚರಿಯನು || ೧೬ ||

ಧರಣಿಯಂ ನುಂಗುವ ಮಹಾ ಮೃತ್ಯು ಮಾರುತಿಯ |
ಬೆರಳ ಲೀಲಾಮಾತ್ರದಿಂದ ಭೂತಳಕುರುಳಿ |
ಮರುಗುತಿರೆ ಕಂಡಾಗ ಪಾವಮಾನಿಯು ಮನೋವ್ಯಾಕುಳತೆಯಿಂದಾಗಲು ||
ದುರುಳ ರಕ್ಕಸಿ ಯೇತಕಡ್ಡಲಾದಳು ಕೋಪ |
ದುರುಬೆಯಿಂ ಪೆಂಗೊಲೆಯು ಸಂಗಡಿಸಿ ಸಾಹಸ |
ಕ್ಕರರೆ [2]ಭೂರಿ ಸಮಾಜದೊಳು [3]ಹೇಳನಾವಾಪ್ತಿ ದೊರಕಿದುದು ಶಿವಯೆಂದನು || ೧೭ ||

1 ಮುಕ್ಕೋಪ. 2 ಭೂರ. 3 ಪೇಳ.



ಪರಮಪುರುಷನ ಕರಸ್ಪರುಶಮಾತುರದಿಂದ |
ಪರಿದೋಡೆ ತಾಮಸೀವೃತ್ತಿ ರಕ್ಕಸಿ ಕಣ್ಣ |
ತೆರದಖಂಡಾನಂದ ವಿಗ್ರಹನ ನಿಟ್ಟಿಸುತ ನುತಿಗೈದು ಸಂತಸದೊಳು ||
ಸಿರಿಯವಲ್ಲಭನ ಕರುಣದ ಕಂದ ಬಾರೆಂದು |
ಕರೆದು ನಿಜವೃತ್ತಾಂತಗಳ ಪೇಳಲನುಗೈದ |
ಳರಿನಿಕೃಂತನ ಮಹಾಬಲತನಯ ಸಾನುನಯದಿಂದೆಂಬೆನಾಲಿಸೆನುತ || ೧೮ ||

ಬಿಸಜಸಂಭವನ ಪ್ರಾರ್ಥನೆಯಿಂದ ಮೆಚ್ಚಿಸಲು |
ಪೊಸತೆನಿಪ ಸಂಪದಬಲಂಗಳೀ ನಗರಮ |
ನ್ನಸುರಾಧಿನಾಥ ರಾವಣಗೆ ದಯದಿಂದಿತ್ತರನುಮೋದಗೊಂಡಸುರನು ||
ಅಸಮಾನ ವೈಭವವ ಕರುಣಿಸಿದೆ ಸುಖದಿಂದ |
ಶಶಿಮುಖಿಯರೊಡಗೂಡಿ ಬಾಳ್ವೆನೀ ಪಟ್ಟಣವ |
ನಿಶಿಯೊಳಗೆ ಕಾಯ್ದಿರ್ಪರೊರ್ವರಂ ನೇಮಿಸುವುದೆನಲಬ್ಜಯೋನಿ ಮುದದೆ || ೧೯ ||

ಕಮಲಸಂಭವನೆನ್ನ ಕರೆದು ಪೇಳಿದ ಪರಾ |
ಕ್ರಮಣವಾಗದ ತೆರದಿ ರಾತ್ರಿಯೊಳ್ಸದನ ಸಂ |
ಕ್ರಮವೆನಿಸಿ ನಗರಿಯಲಿ ಸಲಹುತಿರು ನೀನೆಂದು ನೇಮಿಸುತಮಿಂತೆಂದನು ||
ವಿಮಲಮತಿ ಕಪಿಯೊರ್ವನೈತಂದು ಜೈಸಿ ಮ |
ತ್ತಮರನಗರಿಗೆ ಕಳುಪಿದಂದು ದಾನವಪತಿಯ |
ಸಮುದಯಂ ಮಡಿದಪುದು ತತ್ಕಾಲಪರಿಯಂತಮಿಹುದೆನುತ ಬೀಳ್ಕೊಟ್ಟನು || ೨೦ ||

ಸರಸಿಜಾಸನನ ವರದಿಂದಮಾನೈತಂದು |
ಪರಿಪಾಲನಂ ಗೈದುಕೊಂಡಿರ್ದೆನಿನಿಸುದಿನ |
ದೊರೆಯದಿಂದಿನ ದಿನದೊಳಬ್ಜಯೋನಿಯ ನುಡಿಗೆ ಸಾಧುತರ ಕಪಿವಲ್ಲಭ |
ಸುರಲೋಕದೈಸಿರಿಯು ಕೃಪೆಯಿಂದಮೆನಗಾಯ್ತು |
ದುರುಳರಕ್ಕಸರಿರ್ಪಪುರಿ ಭವದ್ವಶಮಾಯ್ತು |
ಧರಣಿಸುತೆಯಂ ಕಂಡು ಸುಖದಲ್ಲೈದುವುದೆಂದು ಲಂಕಿಣಿಯು ಪೇಳ್ದಳೊಲಿದು || ೨೧ ||

ನಗರಾಧಿದೇವತೆಯು ಪೇಳ್ದರುಹೆ ಮಾರುತಿಯು |
ಮಿಗೆ ಹರ್ಷಗೊಳುತ ಪಂಥಾನವಿಡೆದೈದಿ ಮುಂ |
ದೊಗುಮಿಗೆಯ ಮಣಿವೀಥಿಯಂ ಪೊಕ್ಕು ಮನೆಮನೆಯ ಶೋಧಿಸುತ ಪೊರಮಟ್ಟನು ||
ನಗೆಯಾಡುವರ ಪೊರೆಯ ನರ್ತನೋತ್ಸವ ಪರಿಯ |
ಸೊಗಸುಗಾರರ ನೆರೆಯ ಚೋದ್ಯಜನರಿಹ ಸಿರಿಯ |
ಸುಗುಣದೃಶ್ಯಾದೃಶ್ಯರೂಪಿಂದವೀಕ್ಷಿಸಿದನತ್ಯುತ್ಸುಕಂಗೊಳುತಲಿ || ೨೨ ||

ಅಡಿಗಡಿಗೆ ನಿಂದು ಮಗುಳೆಡಬಲನನಾರೈವು |
ತೊಡನೆ ಪಜ್ಜೆಗಳಿಡುತ ವಹಿಲದಿಂ ಮುಂದೈದಿ |
ತುಡುಕಿ ಸಜ್ಜೆಗಳಡರಿ ಸೋರುಗಂಡಿಯೊಳಿಳಿದು ಮಲಗಿ ನಿದ್ರೆಯೊಳಿರ್ಪರ ||
ಸಡಗರಂಗಳ ನೋಡಿ ಸರ್ರನಲ್ಕೆಲಸಿಡಿದು |
ಹುಡುಕಿ ಹೊಂಚುತ್ತ ನಾಲ್ದೆಸೆಯಲಾಗಾರಗಳ |
ಬೆಡಗುಗಳ ನಿಟ್ಟಿಸುತ ವಾತಾಯನದ ಮಾರ್ಗವಿಡಿದು ಪೊರಮಟ್ಟನೊಲಿದು || ೨೩ ||

ನವರತ್ನವಿಕ್ರಯವ್ಯಾಪಾರದಲಿ ಕೆಲರು |
ವಿವಿಧಕಾರ್ತಸ್ವರ ವಿಚಾರದಲಿ ಕೆಲಕೆಲರು |
ಪವಣಿಂದ ಬಗೆಬಗೆಯ ಪೊನ್ನುಗಳಲಧಿಕನ್ಯೂನತೆಗಳನು ನೋಡುತ್ತಲಿ ||
ಭವನಭವನಂಗಳೊಳು ಮಣಿದೀಪಗಳು ಬೆಳಗ |
ಲವಿರಳದ ಸಂತಸದಲಿರ್ದರೇನೆಂಬೆ ವೈ |
ಶ್ರವಣ ವಿಶ್ವಾಕಾರವಾಂತು ತತ್ಪುರದೊಳಿಹನೆನಲಾ ವಣಿಕ್ಸಂತೆಯು || ೨೪ ||

ರನ್ನಮಯಹರ್ಮ್ಯಸೌವರ್ಣಪ್ರಾಕಾರಂಗ |
ಳುನ್ನತೋನ್ನತಮಾದ ಭವನಂಗಳೆಸೆಯಲಾ |
ಚೆನ್ನನೀಕ್ಷಿಸುತಮಚ್ಚರಿಗೊಂಡು ಮುಂದೈದಲಂಜನಾಸುತನು ಮುದದಿ ||
ಪನ್ನಗಾರಿಧ್ವಜನ ಪವನಶಿಖಿನಿರುತಿಗಳ |
ಬನ್ನಬಡಿಸಿದ ಬಿರುದನುಘ್ಘಡಿಸಿ ಬಾಲರಂ |
ಚೆನ್ನಾಗಿ ಶಿಕ್ಷಿಸುವ ಮಾಗಧರ ಕೇರಿಯಂ ಕಂಡು ವಿಸ್ಮಿತನಾದನು || ೨೫ ||

ಕನಕಮಣಿಮಯ ಮಂದಿರಂಗಳಾವಾವೆಡೆಯ |
ಲಿನತೇಜದಿಂ ತೋರಲವರೊಳುಂ ಸುಳಿಸುಳಿದು |
ಮನದ ನೆಯಲರಸಿ ಮುಂದೈದಲೊಂದೆಡೆಯಲ್ಲಿ ತ್ರಿಸ್ಥಾಯಿಗಳನು ಪಿಡಿದು ||
ಘನಸಂಚುಗಾತ್ರಮೋಡಿಯಲಿ ವಲ್ಲಕಿಗಳಂ |
ಬಿನದಮೆನೆ ಬಾಜಿಸುವ ವೈಣಿಕೋತ್ತಮರುಗಳ |
ಮನೆಗಳಂ ಸೌವರ್ಣರತುನಗಳ ಮನೆಗಳಂ ಕಾಣುತಚ್ಚರಿಗೊಂಡನು || ೨೬ ||

ಮೆಲ್ಲನಾ ಮಂದಿರಗಳೆಡೆಯ ಸಾರುತ ಸಪ್ಪು |
ಳಿಲ್ಲದಂತೊಳಪೊಕ್ಕು ಸೂಕ್ಷ್ಮರೂಪಿಂ ಮನೆಗ |
ಳೆಲ್ಲಮಂ ನೋಡಿ ಮಗುಳಾರರಿಯದಂದದಿಂ ಪಿಂದಿರುಗಿ ಬರುತಮಿರಲು ||
ಅಲ್ಲಿ ಕುಶಹಸ್ತರಧ್ಯಯನ ಶೀಲರ್ಮಂತ್ರ |
ಮೆಲ್ಲಮಂ ಬಲ್ಲ ವೈದಿಕರ ಕೇರಿಯ ಕಂಡು |
ಮೆಲ್ಲಮೆಲ್ಲನೆ ಸುಳುಹುದೋರದಂತೊಳಪೊಕ್ಕು ನೋಡಿದಂ ಪ್ರತಿಗೃಹದೊಳು || ೨೭ ||

ವಿತತಸಂಹಿತೆ ಪದಕ್ರಮ ಜಟೆಗಳಂ ಪೇಳ್ವ |
ರತಿಶಯದ ವರ್ಣಲಕ್ಷಣಮಶ್ವಮೇಧಗಳ |
ವಿತತಬ್ರಾಹ್ಮಣಗಳಾರಣಗಳಂ ಪಠಿಸುತಿಹ ಯಾತುಧಾನರ ಕಾಣುತ ||
ಸತತಗತಿಯಾತ್ಮಜಂ ವಿಸ್ಮಯದೊಳೈದೆ ಹಿತ |
ಸ್ಮೃತಿತತಿಗಳಂ ಕೇಳ್ವ ಪೇಳ್ವ ರಕ್ಕಸರುಗಳ |
ಜೊತೆಗಳಂ ಶೋಧಿಸುತಮಚ್ಚರಿಗೆ ತಲೆದೂಗುತ್ತೈದಿದಂ ಮಾರ್ಗವಿಡಿದು || ೨೮ ||

ಚತುರಂಗ ಪಂಚಾಂಗಯುತ [1]ಪುರಶ್ಚರಣೆಗಳ |
ವಿತತಪೂಜಾತರ್ಪಣಾದಿ ಹೋಮಂಗಳಂ |
ಸತತಮಾಡುತ ಹೃದಯಭಂಪಾದ್ಯನೇಕ ಚಿಹ್ನೆಗಳರಿದು ಮಂತ್ರಂಗಳ ||
ಮತಿಯುಪಾಂಶೂಚ್ಚತರಮಾಗಲುಚ್ಚರಿಸಿ ದಿ |
ಕ್ಕ್ರತಿಗಳರಿದಾಸನಗಳಿಂದ ಕುಳ್ಳಿರ್ದಿರ್ಪ |
ಯತಿಗಳಂ ಕಂಡನಾ ತತ್ಪಾಗ್ರಿತತಿಗಳಂ ಬೆರಗಿಂದ ಪವನಸುತನು || ೨೯ ||

1 ಪುನಶ್ಚರ.



ಪೊಂಬಿಸಿಲ್ಗಳನಾಂತ ಮನೆಗಳಂ ಮರಗಳಂ |
ತುಂಬಿದಾನಂದದೊಳು ಸುಖದೊಳಿಹ ಪ್ರಜೆಗಳಂ |
ಸಂಭ್ರಮದೊಳೀಕ್ಷಿಸುತ ಮಾರುತಿಯು ಮುಂದರುಗೆ ಕೂಟಮುದ್ಗರಚಕ್ರಮಂ ||
ದಂಭಯುತಶಕ್ತಿತೋಮರಪರಶು ಮುದ್ಗರಾ |
ಡಂಬರ ಶತಘ್ನಿಪಟ್ಟಿಸಮುಸಲಗಳ ದೈತ್ಯ |
ಡೊಂಬಿ ಕಣ್ಗೆಡಿಸದಾ ಯಮುನ ಕಿಂಕರರೆಂಬ ಸಂಭ್ರಮದಿ ಚಿತ್ತ ಜನಿಸೆ || ೩೦ ||

ಏಕಪಾದಂ ಚತುಷ್ಪಾದ ಬಹುಪಾದಗಳ |
ನೇಕಕರ್ಣಂ ಬಹುಳಕರ್ಣತಿರಿಯಙ್ ನಾಸ |
ನೇಕನೇತ್ರಮನೇಕ ನೇತ್ರಮತಿಕೃಶಮತುಲದೀರ್ಘದೇಹಂಗಳಾಂತು ||
ಪ್ರಾಕಟಸುವತಿ ಕೃಷ್ಣಮತಿರಕ್ತವರ್ಣಗಳ |
ವೈಕಾರಿ ಘೋರರಕ್ಕಸಸಂತೆ ತೋರಿದುದು |
ಭೀಕರಮನೆಂತು [1]ಪೇಳಲ್ಕಪ್ಪುದಾಪುರದ ರಾಜವೀಥಿಯ ಪೊರೆಯೊಳು || ೩೧ ||

ಪಾನಂಗಳಿಂದ ಮದವೇರಿ ತ್ರೈಮೂರ್ತಿಗಳ |
ನ್ಯೂನಾಧಿಕಂಗಳಾಡುತ ಕೆಲರು ಸಂತಸದ |
ಗಾನದಿಂ ಕೆಲಕೆಲರು ಕೋಪ ಬರೆ ರವಿಶಶಿಗಳಂ ಕಿಳ್ತು ತರುವೆನೆನುತ ||
ನಾನಾ ಪ್ರಕಾರದಿಂದಾರ್ಭಟಿಪ ಮದಮತ್ತ |
ದಾನವರ ತಿಂತಿಣಿಯ ಕಂಡಾ ಪ್ರಭಂಜನನ |
ಸೂನುವಚ್ಚರಿಗೊಂಡು ಮರೆಯೊಳೊಂದರೆನಿಮಿಷ ನಿಂದು ನಿಟ್ಟಿಸುತಿರ್ದನು || ೩೨ ||

ಸುರಪನರಮನೆಯಂತೆ ಮನೆಮನೆಗಳೊಪ್ಪುತಿರೆ |
ಪರಿಪರಿಯಲಾಗಾರದುಪವನಂಗಳು ದಿವ್ಯ |
ತರನಂದನಂಗಳಿಮ್ಮಡಿಸಿವೆಕೊ ವೀರಘನಬಲವಿಕ್ರಮಂಗಳನ್ನು ||
ಪರಿಕಿಸಲಸಾಧ್ಯಮಾಗಿದೆ ರಾಮಚಂದ್ರಹರಿ |
ಸಿರಿಯನಾವಾವ ವಿಧದಿಂದ ಸಂಪಾದಿಸಿದ |
ಮರುಳ ರಾವಣನೇನು ಸಾಹಸಿಗನಕಟಕಟ ತಪದ ನಿಯಮಂಗಳೆಂತೊ || ೩೩ ||

ಇದೆ ಮಧ್ಯಮದಗುಲ್ಮಮಾಗಿರಲ್ವೇಳ್ಕು ಮ |
ತ್ತಿದೆ ರಾಜಪುತ್ರರಿಹ ನೆಲೆಯಾಗಿರಲ್ವೇಳ್ಕು |
ಮದರಿಂದಮಿಾ ಬನಂ ಕಾಯ್ದಿದೆಕೊ ನಾನೆಂತು ವಂಚನಂಗೈವರಹುದೊ ||
ಇದಿರೊಳಗೆ ಚರಿಸಕೂಡದು ಮಹಾಸಂಕಟದ |
ಸದನಮಿದನೆಂತು ಕಳೆಯುವೆನೆಂದು ಚಿಂತಿಸಿದ |
ವಿದಿತಮಾಗದೆ ಮಹಾರಕ್ಕೋಗಣಂಗಳಂ ವಂಚಿಸಲುಪಾಯಮೆಣಿಸಿ || ೩೪ ||

ಕಲವಿಂಕದಂದದಿಂದೊಳಪೊಕ್ಕು ನೋಡಿದಂ |
ಸುಲಲಿತದ ಹರ್ಮ್ಯಪ್ರಾಸಾದಸೌಧಂಗಳಂ |
ಕಲರವಸ್ವನಗೊಡುವ ಶುಕಪಿಕಂ ಶಾರಿಕಾಕಲಿತದುಪವನಗಳಿಂದ ||
ಪಲಬಗೆಯ ಸಿಂಗರದ ನಾರಿಯರ ಸುಸ್ವರದ |
ಚೆಲುವಾಂತ ರಾಜಮಂದಿರಗಳೆಸೆದಿಹ ಕೇರಿ |
ಯಲಿ ಮೆಲ್ಲನೈತಂದು ನಿರ್ಭೀತಿಯಿಂ ಕಂಡನಾಗಳ್ ಪ್ರಹಸ್ತಗೃಹಮಂ || ೩೫ ||

1 ಪೇಳಲ್ಕಕ್ಕು.

ಪಳುಕಿನುಪ್ಪರಿಗೆಗಳನೇರಿ ಶೋಧಿಸುತ ಭೂ |
ತಳಕಿಳಿದು ಮತ್ತಾ ಪ್ರಹಸ್ತ ನಿದ್ರಿಪ ತಾಣ |
ಗಳ ನೋಡಿಯುಲುಹಾಗದಂದದಿಂ ಮಗುಳಾ ಸುಪಾರ್ಶ್ವಗೃಹಮಂ ಪೊಕ್ಕನು ||
ಘಳಿಲನಂತಃಪುರಾದಿಗಳೆಲ್ಲಮಂ ನೋಡಿ |
ತಿಳಿದು ಪೊರಮಟ್ಟು ಕುಂಭಶ್ರವಣನರಮನೆಯ |
ನಳುಕದೊಳಪೊಕ್ಕನೇಂ ಸಾಹಸಿಯೊ ಮಾರುತಿಯು ಮತ್ತಾ ನಿಶೀಥಿನಿಯೊಳು || ೩೬ ||

ನವರತುನಮಯವಿಚಿತ್ರೋಲ್ಲೇಖೆಗಾಸ್ಪದವ |
ನವನವಕಮೆನಲೀವುದೀ ಭವನಮಾವನದೊ ! |
ಶಿವಶಿವ ಮಹಾದೇವ ಸಗ್ಗದಾಣ್ಮನ ವಿಭವಕಿಮ್ಮಡಿಯನೀವುತಿದಲೆ ||
ನವರಸಾಸ್ಪದ ತಾಣಮೆನಿಸುತಿದೆಯೆಂದೈದು |
ತವಿರಳದ ಹರ್ಷದಿಂದೊಳಪೊಕ್ಕು ಶೋಧಿಸುತ |
ವಿವರಂಗಳೊಳಗಿಳಿದು ಹುಡುಕುತ್ತ ಕಂಡನಾ ಮಲಗಿರ್ಪ ಘಟಕರ್ಣನ || ೩೭ ||

ಧಾರುಣಿಯ ನೋಳ್ಪರಚ್ಚರಿಗೊಂಡು ಸಿಂಗರದಿ |
ಮೇರುಗಿರಿಯೈತಂದು ಮಂದಿರದಿ ದೈತ್ಯನಾ |
ಕಾರವಿಡಿದೊರಗಿದುದೊ ಎನುತ ವಿಸ್ಮಯದಿಂದ ನೋಡಿ ಸಂತಸಗೊಳುತಲಿ ||
ದೂರದೂರದಿ ನಿಂದು ಮೆಲ್ಲಮೆಲ್ಲನೆ ಹೊಂಚಿ |
ಸಾರಿ ನೋಡಲ್ಕೈದಿ ಘೋರತರನಾಸಿಕದ |
ಮಾರುತನ ಬಲುಮೆಯೊಳಪೊಗಲೀಯದಿರೆ ಮರುತ್ಸುತ ನೋಡಿ ಬೆರಗಾದನು || ೩೮ ||

ಮಲಗಿರುವನೆಡೆಗೆ ನಿಟ್ಟಿಸಪೋಗಲಸದಳಂ |
ನೆಲನೊಳಿವನಿದಿರಿನಲಿ ಸುಳಿದು ಬದುಕುವರುಂಟೆ |
ಬಲವೈರಿಮುಖ್ಯರೀತನ ಕಂಡು ತಳ್ಳಂಕಗೊಳದೆ ನೋಡುವುದದೆಂತೊ ||
ಕೆಲಬಲಗಳಾರೈದು ಪೋಪೆನೀ ಮತ್ತನಿಹ |
ನೆಲದೊಳೊಲಿದೈದೆ ಸಂಶಯಮೆನುತ ತಿಳಿದಾಗ |
ತೊಲಗಿ ಮಾರುತತನಯ ಮಂದಿರದೊಳಂ ಬೆದಕಿ ಪೊರಮಟ್ಟನಲ್ಲಿಯಿಂದ || ೩೯ ||

ಮುಂದಕಡಿಯಿಡೆ ಕೇಳ್ದುದೈಸೆ ಕೀರ್ತನೆಗಳಾ |
ನಂದಕರಗಾನಮುದನಾಲಿಸುತ ಹರ್ಷದಿಂ |
ಬಂದು ಮೆಲ್ಲನೆ ಪೊಕ್ಕು ನೋಡಿದಂ ನಾಲ್ದೆಸೆಯನಾ ವಿಭೀಷಣನ ಗೃಹದೆ ||
ಛಂದಛಂದಲಿ ಹರಿಕೀರ್ತನೆಗಳಂ ಮಾಳ್ಪ |
ಸುಂದರಗಳಂ ಕಂಡು ವಿಷದೊಳಮೃತವು ತೋರ್ಪು |
ದಿಂದಿದೇನತಿಶಯಮೆಸುತ್ತ ಕಪಿನಾಯಕಂ ಸಂತೋಷಭರಿತನಾದಂ || ೪೦ ||

ಪರಿಪರಿಯ ನಾಮಕೀರ್ತನೆಗಳಿಂ ವೈಕುಂಠ |
ಪುರದಂತೆ ಕಂಗೊಳಿಸೆ ಕಂಡು ಮಾರುತಿಯು ಶ್ರೀ |
ಹರಿಯ ಕಿಂಕರರಿರ್ಪ ತಾಣವಿದು ನಿಶೆಯೊಳಂ ಸಂಚರಿಸಬಾರದೆನುತ ||
ಹರುಷದಿಂದಾ ಗೃಹಕೆ ಕರಗಳಂ ನೆರೆ ಮುಗಿದು |
ತ್ವರಿತದಿಂ ಪೊರಮಟ್ಟು ಬಂದಾ ಮಹೋದರನ |
ಸುರುಚಿರಾಗಾರಮಂ ನೋಡುತ ವಿರೂಪಾಕ್ಷನರಮನೆಯ ಪೊಕ್ಕನೊಲಿದು || ೪೧ ||



ಅಲ್ಲಿಂದ ಪೊರಟು ವಿದ್ಯುಜ್ಜಿಹ್ವನಿಲಯಮಂ |
ಸಲ್ಲಲಿತದಿಂದ ವಿದ್ಯುನ್ಮಾಲಿಯಾಗಾರ |
ಮೆಲ್ಲಮಂ ಧೂಮ್ರಾಕ್ಷಸಂಪಾತಿಘನವಿಘನ ಶುಕಸಾರಣರ ಮನೆಗಳ ||
ಮೆಲ್ಲಮೆಲ್ಲನೆ ತೊಳಲಿ ಧೂಮ್ರವಿದ್ಯುದ್ರೂಪ |
ನುಲ್ಲಸಿತ ವಜ್ರದಂಷ್ಟ್ರಂ ರಶ್ಮಿಕೇತುಗಳ |
ನೆಲ್ಲರಂ ಕಳೆದು ಶುಕನಾಭಶಠವಿಕಟರಾಲಯಗಳಂ ಶೋಧಿಸಿದನು || ೪೨ ||

ಜಂಬುಮಾಲಿ ಸುಮಾಲಿ ಶಶಿಸೂರ್ಯಶತ್ರುಗಳಿ |
ಗಿಂಬಾದ ತಾಣಗಳ ನೋಡುತ್ತ ಶುಕನಾಭ |
ಡಂಭ ರೋಮಶ ವಜ್ರಹ್ರಸ್ವಕರ್ಣಾದಿಗಳ ಗೃಹಗಳಂ ಶೋಧಿಸುತಲಿ ||
ಬೆಂಬಿಡದೆ ಮತ್ತೆ ಯುದ್ಧೋನ್ಮತ್ತಹಸ್ತಿಮುಖ |
ಶುಂಭಧ್ವಜಗ್ರೀವ ಶೋಣಿತಾಕ್ಷ ಕರಾಳ |
ರೆಂಬರರಮನೆಗಳೊಳು ನೋಡಿ ವಿದ್ಯುಜ್ಜಿಹ್ವಮುಖ್ಯಭವನಗಳ ಪೊಕ್ಕು || ೪೩ ||

ನೋಡಿದ ಪಿಶಾಚ ಮೊದಲಾದ ರಕ್ಕಸರಿರ್ಪ |
ರೂಢಿಗತಿಶಯಗೃಹಂಗಳನೆಲ್ಲ ಕಳೆಕಳೆದು |
ಕೂಡೆ ಕಂಡನು ಭೋಗವತಿಯೆಂಬ ಮಾಳ್ಕೆಯೊಳು ತೋರ್ಪ ರಾವಣಿಯ ಗೃಹಮಂ ||
ಆಡಲಸದಳವಾ ಪರಾಕ್ರಮಿಯ ಮಂದಿರವ |
ನೋಡಲಾರ್ಗಳವಪ್ಪುದಾದರುಂ ಮಾರುತಿಯು |
ಮಾಡಿ ಧೃತಿಯಿಂದೊಳಗೆ ಪೊಕ್ಕು ನಾಲ್ದೆಸೆಗಳಂ ಚೆನ್ನಾಗಿ ಶೋಧಿಸಿದನು || ೪೪ ||

ಮಲಗಿ ನಿದ್ರಿಸುವಿಂದ್ರಶತ್ರುವಂ ನಿಟ್ಟಿಸುತ |
ತಲೆದೂಗುತಿಂತೆಂದ ಕಪಟವಂಚನೆಮಾಯ |
ಪಲವುವಿಧತಕ್ಕುಶಾಳಿಗಳ ಜನ್ಮಸ್ಥಾನಮುಹುದೇನು ತಿಳಿವು ತಿಳಿದು ||
ಕಲಿಗಳಗ್ರಜನಿವಂ ರಾವಣನ ಸುರಪದದ |
ಬಲವೀತನೆಂದರಿತು ಪಿಂತಿರುಗಿ ನೋಡಿದಂ |
ಸುಲಭದಿಂ ದಕ್ಷಾತಿಕಾಯಮುಖ್ಯಕುಮಾರವರ್ಗವಿರುವಾಲಯಗಳಂ || ೪೫ ||

ಶೂರರ ಕುಮಾರರಳಿಯಂದಿರಾಪ್ತಾಶ್ರಯರು |
ದಾರಮಂದಿರಗಳಂ ಶೋಧಿಸುತವೊಂದೆಡೆಯ |
ಧಾರುಣಿಯ ನಂದನೆಯ ಕಾಣದತಿಚಿಂತೆಯಿಂ ನಡೆಯುತಿರೆ ಮುಂಗಡೆಯೊಳು ||
ಚಾರುತರಕನಕಮಣಿಮಯ ದಿವ್ಯಗೋಪುರ |
ದ್ವಾರಮಾ ಶೈಲದೊಳು ರಕ್ಕಸೇಶ್ವರನಿರ್ಪ |
ಭೂರಿ ಕೌತೂಹಲಾನ್ವಿತ ನಿಲಯಮುಹುದೆನುತ ಮತಿಯೊಳಾಳೋಚಿಸಿದನು || ೪೬ ||

ದಂಭವೈರೋಚನಂ ನಮುಚಿಗಳ ಸಂಗರಾ |
ಡಂಬರಗಳಂ ಧನುಷ್ಟಂಕಾರಮಾತ್ರದಿಂ |
ಸ್ತಂಭೀಕರಣಗೈವ ಶೂರದಾನವಭಟರ್ ಲಕ್ಷೋಪಲಕ್ಷಮಾಗಿ ||
ಸಂಭ್ರಮಿಸುತಿರ್ದರಾವಾವೆಡೆಯ ಮಾರುತಂ |
ಗಿಂಬುಗೊಡದುರಗಂಗಳಂತೆ ಭೋರ್ಗರೆವುತ್ತ |
ಡೊಂಬಿಯಿಂ ಗುಡಿಗಟ್ಟಿ ಕಾಯ್ದಿರ್ದರೆಡಬಲದಿ ಕಾರ್ಮುಗಿಲ ಬಳಗದಂತೆ || ೪೭ ||

ಮರುತಲಂಘನ ಜಾಂಘಿಕೋತ್ಕರ್ಷಜವಸತ್ವ |
ವೆರೆದು ಸುರರಾಜವೈಶ್ರವಣನಶ್ವಂಗಳಂ |
ಕಿರುನಗೆಗಳಿಂದ ಧಿಕ್ಕರಿಪ ಘೋಟಕನಿಚಯವಮಿತ ಹಲ್ಲಣಿಸಿರ್ದುವು ||
ಸುರಿವ ನಿರ್ಝರದ ಮದಧಾರೆಯಿಂದಷ್ಟಕುಲ |
ಗಿರಿಗಳೇಂ ಚಲನೆಯಾಂತಿರ್ಪುವೋಯೆನೆ ಗಜಂ |
ಹರಿಯನೇಕಪಕುಲೋದ್ಭವಗಳಲ್ಲಿರೆ ಕಂಡನಾ ಚತುರ್ದಂತಿಗಳನು || ೪೮ ||

ಅಜನ ತಪದಿಂದ ಮೆಚ್ಚಿಸುತನೇಕತೆಯಾಂತು |
ರಜತಗಿರಿರಕ್ತಸಾನುಗಳೆರಡು ಮನಮೆಚ್ಚಿ |
ವಿಜಯವಿಕ್ರಮಪಂಕ್ತಿ ಶಿರವಿಲಾಸಕ್ಕೆಂದು ಬಂದು ಗಿರಿತಟದಿ ನಿಂದು ||
ಅಜಸುರಾದಿಗಳಿಗಚ್ಚರಿಯೊವ ಸೌಧಗಳ |
ಭಜಿಸಿರ್ಪವೋಯೆನಲ್ ಸಾಲಕರುಮಾಡಬಿದಿ |
ಸೃಜನೆಗಗ್ಗಳಮೆಂಬೊಲೇಂ ಮನಂಗೊಳಿಸುವುವೊ ದ್ವಾರದೇಶಂಗಳಲ್ಲಿ || ೪೯ ||

ಖೇಲನಾಶೈಲಗಳು ಲೀಲಾಸರಸ್ಸುಗಳು |
ಮೇಲೆನಿಪ ಚಿತ್ರಗೃಹಗಳು ಲತಾಮಂದಿರಗ |
ಳೋಲಾಯಮಧುರಾಜನಾಡುವಾಡುಂಬೊಲಗಳೆನಲೆಸೆವ ನಂದನಗಳು ||
ಭೂಲೋಕದೊಳಗಿಂದ್ರನಿಲಯ ಧನದಾಲಯ ವಿ |
ಶಾಲಗಾಂಧರ್ವಮಂದಿರದ ಸೊಬಗಂ. ತೋರೆ |
ಶೂಲಪಾಣಿಯೆ ಮಮತೆಯಿಂದಲೇಂ ಗೈದಿತ್ತನೋಯೆನಲ್ ತೋರ್ದುದಾಗ || ೫೦ ||

ಇಂದ್ರಲೋಕದ ಬೆಡಗುಪೇಂದ್ರನಿರವಿನ ಸೊಬಗು |
ಚಂದ್ರಸೂರ್ಯಾವಾಸಗಳ ಸೊಗಸ ತಿಳಿಯೆ ಯ |
ಕ್ಷೇಂದ್ರನುಳುಮೆಗೆ ಮಿಗಿಲದೆಂಬಂತೆ ತೋರಿದುದು ಥಾಳಥಳ್ಯಪ್ರಭೆಗಳು ||
ಸಾಂದ್ರತೇಜೋಲೋಕಮೆನಲೆಸಗುತಿದೆ ರಕ್ಕ |
ಸೇಂದ್ರನ ತಪೋಬಲಮದೆಷ್ಟೊ ಶಿವ ಶಿವ ನರಮೃ |
ಗೇಂದ್ರ ನೀನೇ ಬಲ್ಲೆಯೆನುತ ವಿಸ್ಮಯದಿಂದ ನೋಡಿದಂ ಪವನಸುತನು || ೫೧ ||

ಗಿರಿಗುಹಾದ್ವಾರಗಳ ಹರಿಗಳಾಶ್ರಯಿಸಿರ್ಪ |
ಪರಿಯ ರಕ್ಕಸನಿಚಯ ಕಾಯ್ದಿದೆ ನಿರೀಕ್ಷಿಪಡೆ |
ಪರಮದುರ್ಲಭಮಾಗಿ ತೋರುತಿಹುದಾನೆಂತು ಪಜ್ಜೆಗಳ ನಿಡಲಪ್ಪುದು ||
ಚರಿಸಲಮ್ಮನು ತಾತಪಾದ ರವಿಚಂದ್ರಮರ |
ಕಿರಣಗಳ್ಪೊಗಸಲ್ಲವೆಂತೆನುತವರೆ ನಿಮಿಷ |
ಮರುತಸುತ ಚಿಂತಿಸಿದನುಜ್ಜುಗಕುಪಾಯಮಂ ಸೂಚಿಸದೆ ಬೆರಗಿನಿಂದ || ೫೨ ||

ಎಂತಾದಡೊಮ್ಮೆ ಪೊಕ್ಕರಸಿದಲ್ಲದೆ ತೀರ |
ದಂತರಾತ್ಮಕ ರಾಮನಡಿದಾವರೆಯ ಬಲುಹ |
ನಾಂತಾನುಮೆಲ್ಲನೀಕ್ಷಿಸುವೆನೆನುತಂ ಧೈರ್ಯವಿಡಿದು ಕಪಿಕುಲವರ್ಯನು |
ಮುಂತಕಡಿಯಿಟ್ಟು ಪ್ರಾಕಾರದೊತ್ತಂ ಪಿಡಿದು |
ಕಂತುಹರನಪರಾವತಾರನರಮನೆಯೆಡೆಯ |
ನಿಂತಿರ್ದ ರಕ್ಕಸರ ವಂಚಿಸುತಮಾ ತಿರಸ್ಕರಿಣೀ ಪ್ರಭಾವದಿಂದೆ || ೫೩ ||



ನೋಡನೋಡಲು ಮನೋಹರದಿವ್ಯಚಿತ್ರಮದ |
ನಾಡಿ ನೋಡುವರೆ ಚಿತ್ರಗ್ರಾಹ್ಯಮೆಂತಹುದು |
ಬೀಡಾರಮಖಿಳಕಾಂತಿಗಳ ಚಾತುರ್ಯಂಗಳಿರವೆನಿಸುವರಮನೆಯನು ||
ಮೂಡಿ ಬರೆ ಸಂತೋಷವಖಿಲೇಂದ್ರಿಯಂಗಳೆಡೆ |
ಯಾಡದಾನಂದಮಯಮಾಗಿ ಸಂಚಲಿಸದಲೆ |
ಗಾಢತೇಜೋಲೀನಮಾಗಿ ಬ್ರಹ್ಮೈಕ್ಯದಂತಿರ್ದನಾ ಪವನಸುತನು || ೫೪ ||

ಆವುದೊಂದಂ ತೋರದಾನಂದದಿಂದಿರ್ದ |
ಪಾವಮಾನಿಯ ಕಂಗಳಿದಿರೊಳೆಸೆದುದು ಯಕ್ಷ |
ದೇವಪುಷ್ಪಕಮತುಳಸಾಂದ್ರತೇಜೋರೂಪದಿಂ ಬೆಳಗುತುತ್ಸವದೊಳು |
ಸಾವಧಾನದಲದರ ಪೊರೆಗೆ ನಡೆದೀಕ್ಷಿಸುತ |
ತೀವ್ರಕೌತೂಹಲಾನ್ವಿತಚಿತ್ತನಾಗುತ್ತ |
ಶ್ರೀವಧೂವರರಾಮಪುರದರಸನಂ ನೆನೆವುತಿರ್ದನಾ ತೇರನೊಲಿದು || ೫೫ ||

**ಮೂರನೆಯ ಸಂಧಿ ಸಮಾಪ್ತಂ.**

# ನಾಲ್ಕನೆಯ ಸಂಧಿ

ಸೂಚನೆ || ರಾವಣಾಂತಃಪುರವನೆಲ್ಲಮಂ ಶೋಧಿಸುತ |
ಕೋವಿದರ ತಾಣಂಗಳೆಲ್ಲಮಂ ನೋಡುತ್ತ |
ಪಾವಮಾನಿಯು ಧರಣಿಜೆಯ ಕಾಣದತಿಚಿಂತೆಯಿಂ ಪೊರಟನಾ ನಿಲಯವ ||

ಕನಕಮಣಿಮಯರುಚಿರವಾತಾಯನಂಗಳಿಂ |
ದಿನಮಣಿಯ ತಾಣಮೆಂದೆನಿಪ ಶಿಖರಂಗಳಿಂ |
ದನುದಿನಂ ತಾರೆಗಳ ಪಾಲಿಸುವ ನೆಲೆನೆಲೆಯ ಪದುಳದಿಂದಾ ಗೃಹಗಳಂ ||
ಸನುಮತದಿ ತನ್ನೊಳಿಂಬಿಟ್ಟುಕೊಂಡಾನಂದ |
ಮೆನಿಸಿ ತೋರುವ ವಿಮಾನವ ಕಂಡು ಮಾರುತಿಯು |
ದಿನಪಪಂಥಾನಲಕ್ಷ್ಮಿಯನಿಪೆಕೊಯೆಂದೆನುತ ವಿಸ್ಮಯಂಗೊಂಡನಗಜೆ || ೧ ||

ಸಕಲರತ್ನಾಶ್ರಯದೊಳಂಬುರಾಶಿಯತೆರದಿ |
ನಿಖಿಳಕಳೆಗಿರವಾಗಿ ಮತ್ತಂತರಿಕ್ಷದೊಲು |
ಶುಕಪಿಕಂಗಳ ನಿನದಮುರುಪ್ರವಾಳಾಧಾರದಿಂ ಬಸಂತನ ತೆರದೊಳು ||
ಸುಕುಮಾರ ಮೈಗಣ್ಣಿನಿಂದಮಿಂದ್ರನ ತೆರದಿ |
ಚಕಚಕಿಪ ಚಕ್ರದಲುಪೇಂದ್ರನೆಂಬಂದದಿಂ |
ದಕಲಂಕಪುಷ್ಪಕಂ ಚಿತ್ರತರಮಾಗೆಸೆದುದನಿಲಭವನಿದಿರಿನೊಳಗೆ || ೨ ||

ಕಮಲಜನ ಚಾತುರ್ಯಬೀಜಮೋ ಪಾರ್ವತೀ |
ರಮಣನ ಕೃಪಾರಸಂ ಖನಿಯಾಗಿ ನಿಂದಿಹುದೊ |
ಸುಮನಸೋತ್ತಮನ ಸಿರಿ ಪುಂಜೀಭವಿಸುತಿಲ್ಲಿ ಪೊಳೆದಪುದೊ ದಶಕಂಠನ ||
ವಿಮಲನಿಯಮೋತ್ಕರ್ಷೆಯೇಂ ಖನೀಭವಿಸಿದುದೊ |
ದ್ಯುಮಣಿಶಶಿಗಳು ನಿಸ್ತಮಸ್ಕರಾಗೊಪ್ಪಿರುವ |
ರಮನು ಮೇಣ್ವಿಶ್ವಕರ್ಮನ ಕುಶಲ ಸರ್ವಸ್ವಸಂಪ್ರದಾಯದೊಳೆಸೆವುದೊ || ೩ ||

ಇದು ಚೈತ್ರಿಕಾಲಯಮೊ ಇದು ಚೈತ್ರಮಂದಿರಮೊ |
ಇದು ರತ್ನಗಳ ಮನೆಯೊ ಇದು ಬೆಳಗಿನುರುಖನಿಯೊ |
ಇದು ಸ್ವರ್ಣಪರ್ವತಮೊ ಮೇಣು ರಜತಾಚಲಮೊ ಗಂಧಮಾದನಶೈಲಮೊ ||
ಇದು ಸಕಲವಿಸ್ಮಯಂಗಳ ತಾಣಮೋ ನೋಡ |
ಲಿದು ಮನೋಹರ ಸಕಲಸುಖಗಳಾಸ್ಪದಮೊ ಮೇ |
ಣಿದುವೆ ಪೌಲಸ್ತ್ಯನ ತಪೋಲಕ್ಷ್ಮಿಯೋ ಯೆನಲ್ ಪುಷ್ಪಕಂ ಕಣ್ಗೆಸೆದುದು || ೪ ||

ಅಚ್ಚರಿಯ ನಿಟ್ಟೆಸುವರಡಿಗಡಿಗೆ ಹರುಷರಸ |
ಪೆರ್ಚೆ ಬಹುದಿದರ ಮಹಿಮಾತಿಶಯಮಂ ತಿಳಿವ |
ಸಚ್ಚರಿತರಾರಕಟ ಬಹುಪುಣ್ಯಪರಿಪಾಕದಿಂ ಲಭ್ಯಮಹುದಲ್ಲದೆ ||
ನಿಚ್ಚಳದ ಸುರನರರಿಗಳವೆ ನೋಡುತ ಬರಲ್ |
ಪೊಚ್ಚ ಪೊಸತೆನಿಸಿ ತೋರುತ್ತಮಿದೆ ಸಂತಸದಿ |
ನಿಚ್ಚಯಮಿದೆಂತೆಂದು ಪೇಳಲಕ್ಕುಮೆ ಸಂಪ್ರದಾಯಮಂ ತಿಳಿವರುಂಟೆ || ೫ ||



ಎನುತ ಸಂತಸಗೊಳುತಮಾ ವಿಮಾನವನುಳಿದು |
ಹನುಮ ರಕ್ಕಸರಾಜನರಮನೆಯನೊಳಪೊಕ್ಕು |
ದಿನಪನೈಸಿರಿಯನೊಳಕೊಂಡು ಸಾಲಾಗೆಸೆವ ಕರುಮಾಡಗಳ ನೋಡುತ ||
ವನಜಪೀಠನ ವಚನಮಹಿಮೆಗಳ ಪೊಗಳುತ್ತ |
ಘನಬಲಿಗಳೊಡನಿರ್ಪ ತಾಣಗಳ ದಾಟುತ್ತ |
ಮನಿಮಿಷೋತ್ತಮನಿಲಯದೆಣೆಯೆನಿಪ ಮಂದಿರವ ಶೋಧಿಸಿದ ನಾಲ್ದೆಸೆಯೊಳು || ೬ ||

ಅಲ್ಲಿಗಲ್ಲಿಗೆ ನಿಂದು ಪದದುಲಿಗಳಂ ತೋರ |
ದಲ್ಲಲ್ಲಿ ಮಲಗಿರುವ ಬಲಿಗಳೊತ್ತಂ ಸಾರ |
ಲೆಲ್ಲೆಲ್ಲಿ ಪದಮೂರಿ ನಿಲ್ಲದಲೆ ಸೊಪ್ಪುಳಂ ತೋರದಣುರೂಪಿಂದಲೆ ||
ಮೆಲ್ಲಮೆಲ್ಲನೆ ಗವಾಕ್ಷಂಗಳಿಂದೊಳಪೊಕ್ಕು |
ಫುಲ್ಲಶರಸಮರದೊಳಗಲಸಿ ತನುಭಾವಂಗ |
ಳಿಲ್ಲದೊರಗಿದ ಸ್ತ್ರೈಣಮಂ ಕಂಡ ಮಾರುತಿಯು ದೈತ್ಯಶುದ್ಧಾಂತದೊಳಗೆ || ೭ ||

ಒರೆಯಿಂದ ಪೆರದೆಗೆದ ಸ್ಮರಶರಂಗಳ ತೆರದಿ |
ದುರದಾನಗಳಿತ ಮನ್ಮಥಗಜಂಗಳ ಭರದಿ |
ಸುರರಮೃತಮಂ ಕೊಳಲು ಬಳಲಿದ ಕಳಾನಿಧಿಯ ಬಳಗಂಗಳೆಂಬಂದದೆ ||
ಸ್ಮರಪಾರವಶ್ಯತೆಯನಾಂತು ನಿದ್ರೆಯೊಳಿರ್ಪ |
ತರುಣಿಯರ ಕಂಡು ಕಂಗಳ ಮುಗಿದು ರಾಘವನ |
ಚರಣಂಗಳಂ ಸ್ಮರಣೆಗೈದನೇಂ ಶುದ್ಧಾಂತರಂಗನೊ ಮರುತ್ಸಂಭವಂ || ೮ ||

ಲಲನಾಕುಚಾಲಿಂಗನೋತ್ಸುಕದಿ ಮನಸಿಜನ |
ಪಲವನಾರ್ಜಿಸಿ ಪಯೋಧರರ ತನ್ನೊಳಗಿಟ್ಟು |
ಲಲಿತಾಂಗನಾ ಹೃದಯಕಲಿತಮೆಂದೆನಿಸಲಾ ಖುರಶಿಖರ ಮೋದಗೊಳಿಪ ||
ನಲವಾಂತ ವಲ್ಲಕಿಯ ವಕ್ಷಸ್ಥಳದೊಳಿಟ್ಟು |
ಕೆಲರಂಗನೆಯರು ನಿದ್ರಾಸಕ್ತಿಯಿಂದಿರುವ |
ಕಲೆಯ ಕಂಡಾ ಮರುತ್ಸುತ ವಿಸ್ಮಯಂಗೊಳುತ ನಡೆದ ಮುಂದಡಿಗಳಿಡುತ || ೯ ||

ಒದರ್ದಪರು ಪಗಲಿರುಳಿಗೊಂದೊಂದು ಪರಿಯಾಗಿ |
ಸದಗಪ್ರಾಣಿಗಳು ಚೇತನಮಾಗಿ ಸರ್ವಜನ |
ಹೃದಯದಾನಂದಕರಮೆನಿಸಲಾರರು ಮಗುಳೆ ಕಾವ ಚೇತನಮಾದರು ||
ಸುದತಿಯರನಾಶ್ರಯಿಸಿ ಸಕಲ ಲೋಕಾನಂದ |
ದುದಯಗೈದಪವೋ ಮೃದಂಗಂಗಳೆಂಬಂತೆ ||
ಚದುರವಚ್ಚದಿ ಕಲಿತ [1]ಮುರಜಾನುಮೋದಕರ ತರುಣಿಯರ ಕಂಡನಾಗ || ೧೦ ||

ಎದೆಯೊಳಗೆ ಮೂಡಿ ಕ್ವಾಚಿತ್ಕಸುಖದೊಡಗೂಡಿ |
ತುದಿಗೆ ತಲೆಗುತ್ತಾಂತು ಪೋಪುವೀಸ್ತನಗಳಂ |
ಮದನಕುಂಭೀಂದ್ರ ಕುಂಭೋಪಮಿತಮೆಂದರಿಯದನುದಿನಂ ಪೊಗಳ್ವರೆನುತ ||
ಕದನಗೈವುತ್ತಿರ್ದರಶ್ಮಸ್ತನಂಗಳ |
ಭ್ಯುದಯಮುದನಾಭ್ಯುದಯ ಸಾರ್ವಕಾಲಿಕಮೆನಲ್ |
ಮುದವಿಾನತಾಳಗಳ ಕರತಳದಿ ಪಿಡಿದೊರಗಿದಬಲೆಯರ ಕಂಡನೊಲಿದು || ೧೧ ||

---

1 ಮುರಜ.

ತಾನಚೇತನವಾಗಿ ತಂತ್ರಿಗಳ ಕೂಡಿ ಪರ |
ಮಾನಂದ ಸುಸ್ವನದೊಳನವರತ ಬಿಡದಾ ಪ್ರ |
ಸೂನಾಯುಧನ ಕೃಪೆಯ ಗಳಿಸೀಪುವೆನುತ ಪ್ರಿಯದಿಂದಪ್ಪಿ ಲಾಲಿಸುತಲಿ ||
ಮಾನಿನೀಗಣವಮಿತ ಮಾಧುರ್ಯತರದ ಸು |
ಮ್ಮಾನದಿಂ ಪರವಶತೆಯಾಂತರೋಯೆನಲಂಬು |
ಜಾನನೆಯರತಿಶಯದ ತಂಬೂರಗಳ ಪಿಡಿದು ಮಲಗಿರ್ಪರಂ ಕಂಡನು || ೧೨ ||

ಕೆಳದಿಯರ ಮೇಳದಿಂ ತಾಳಮೇಳಕ್ರೀಡೆ |
ದಳೆದರ್ಧರಾತ್ರಿ ಪರಿಯಂತ ಖೇಲಸಗೈದು |
ಬಳಲಿ ಮನ್ಮಥಬಲಂ ಮದನಿದ್ರೆಯನುಸರಿಸಿ ಮಲಗಿರ್ಪುದೋಯೆಂಬೊಲು ||
ನಳಿತೋಳ ತಲೆಗಿಂಬ ಮಾಡಿ ಪದಗಳ ನೀಡಿ |
ಸುಳಿಗುರುಳ ಚದರಿ ಕೆದರಿದ ಲಲಾಮಂಗಳಿಂ |
ಲಲನೆಯರಿರಲು ಕಂಡು ಶಿವಯೆನುತ ಬೆರಗಾಗಿ ನೋಡುತ್ತೈದಿದನು ಮುಂದೆ || ೧೩ ||

ಕೆಲರು ವಿಭ್ರಷ್ಟಕುಂಡಲಗಳಿಂದಂ ತೋರೆ |
ಕೆಲರು ವಿಸ್ರಸ್ತನೀವೀಬಂಧನಗಳಿಂದ |
ಕೆಲರು ಪರಿಗಳಿತ ಪದಕಟಕ ಕಂಕಣಗಳಿಂ ಹಾರಭೂಷಣಗಳಿಂದೆ ||
ಕೆಲರು ವಿಗಳಿತಲಲಾಮಗಳಿಂದೆ ಕುಚಕಲಶ |
ಕಲಿತ ಪತ್ರಾಂಕುರಸ್ರಸನದಿಂದಲ್ಲಲ್ಲಿ |
ಮಲಗಿರ್ಪ ನಾರಿಯರ ಕಾಣುತಚ್ಚರಿಗೊಂಡನಾಗ ಪವಮಾನಸುತನು || ೧೪ ||

ರತಿಯಲಸಿಕೆಯ ನಿದ್ರೆಯಾಂತೊರಗಿದಂಗನೆಯ |
ಕತಿಪಯ ಸುಹಾರಂಗಳುಂ ಪರಿದು ಭೂತಳದೊ |
ಳತಿಶಯದಿ ಚೆಲ್ಲಿರಲು ತೋರ್ದುದಚ್ಚರಿಗಳಂ ಮುಖಚಂದ್ರನಂ ಪ್ರಾರ್ಥಿಸೆ ||
ಹಿತದಿಂದ ಬಂದ ತಾರಾಗಣಂಗಳೊ ಚಮ |
ತ್ಕೃತಿಗೆ ಮೆಚ್ಚುತಲುದಧಿ ಸೇಸೆಯಂ ಚೆಲ್ಲಿದನೊ |
ಸತಿಯರಿಂಗೆನಲು ಸುಪ್ಪಾಣಿಮುತ್ತುಗಳವರ ಪೊರೆಯೊಳೇಂ ಮೋಹಿಸುವುವೊ || ೧೫ ||

ಎಂತಾದರಿನಸರಸಿಯೆನ್ನಭ್ಯುದಯದೊಳಗೆ |
ಚಿಂತೆಗೈದನೆನುತ್ತ ಕಿನಿಸನಾಂತಿರಸಲ್ಲ |
ಕಾಂತಾಕಟಾಕ್ಷಂಗಳೆನ್ನವೃದ್ಧಿಗೆ ಕಳೆಯಕೊಟ್ಟು ರಕ್ಷಿಸವು ಮುನ್ನ ||
ಎಂತಾಗಲುಪಚರಿಸೆ ಸಸಿಯು ವಿಶ್ವಾಕೃತಿಯ |
ನಾಂತುದರದೊಳಗೆ ತಲೆಯಿಟ್ಟು ಪ್ರಾರ್ಥಿಸುವನೆನೆ |
ಕಾಂತಾಕರಂಗಳೊಳು ಮುಖಬಿಂಬಡೊಂಬಿಗಳದೇಂ ಬೆರಗ ಬೀರುತಿಹವೊ || ೧೬ ||

ಹಂಸಕಾರಂಡವಾಕೀರ್ಣಚಕ್ರಂಗಳು |
ತ್ತಂಸ ವೀಚೀಭುಜಂಗಳ ಬೆಡಗನಾಂತ ರೀ |
ರಂಸೆಯಿಲ್ಲದ ಮೀನನೇತ್ರಪುಳಿನೋನ್ನತವ ಜಘನಂಗಳಾಂತು ನಡೆವ ||
ಸ್ರಂಸದಳಕಾಳಿಗಳಲಾ ನದೀನಾರಿಯರು |
ಸಂಸೇವನಂಗೆಯ್ಯಲುದಧಿಯೆಡೆಗೈತಂದು |
ತಾಂ ಸೊಗಸಿನಿಂದಡ್ಡಗೆಡಹಿರ್ಪತೋಯೆನಲ್ ತೋರ್ದುದಾಸ್ತ್ರೈಣ ಮುದದಿ || ೧೭ ||



ತನುಲತೆಗಳನ್ಯೋನ್ಯಮಾಗಿ ತಗಲಿರೆ ಕುಚಗ |
ಳನುವಿನಿಂದೊಂದನೊಂದಾಲಿಂಗಿಸುತ್ತಮಿರೆ |
ವನಜವನಜಗಳೊಡನೆ ಹೆಣಗುವಂದದಿ ತೋಳ್ಗಳೊಡನೊಡನೆ ತೋರುತಮಿರೆ ||
ತನುಮಧ್ಯಮಧ್ಯದೊಡಗೂಡಲೂರುಗಳು ತ |
ಮ್ಮನುವಿಂದ ಮನ್ಯೋನ್ಯಮಾದುವೋಯೆಂಬಂತೆ |
ತನುಭಾವಮಳಿದು ನಿದ್ರಿಪ ಮಾನಿನೀಗಣವ ಕಂಡನಾ ವಾಯುಸುತನು || ೧೮ ||

ತಕ್ಕೆಗೊಂಡೊರ್ವರೊರ್ವರ ಮುಖದಿ ಬೆಮರ್ವನಿಗ |
ಳುಕ್ಕುತಿರೆ ಪದಪದಂಗಳ ತೊಡರಿ ನಿಟ್ಟುಸಿರ್ಗ |
ಳಿಕ್ಕುತ್ತೆ ಮನ್ಮಥನ ಸಾಣೆವಿಡಿದಲಗಿನಂತಲ್ಲಲ್ಲಿ ಮರೆದೊರಗಿದ ||
ಸೊಕ್ಕು ಜವ್ವನೆಯರೋ ಶೃಂಗಾರರಸಮೂರ್ತಿ |
ಇಕ್ಕೆಗೈದುದೊ ಭೂತಳದೊಳೆಂಬೊಲಿರೆ ಕಂಡು |
ನಕ್ಕು ಪವನಾತ್ಮಭವನೆಲ್ಲರ ಸುಲಕ್ಷಣಂಗಳ ನೋಡುತ್ತೈತಂದನು || ೧೯ ||

ಕುವಲಯಪ್ರಿಯಕಾಂತ ನಮ್ಮನೇಂ ಕಾರಣದಿ |
ನವೆಸುವೆ ಜಗನ್ಮೋಹನನೆ ಜಡೋತ್ಪನ್ನರೆ |
ಮ್ಮವಗುಣಂಗಳನೆಣಿಸದಾರಯ್ಯವೇಳ್ಕೆನುತ ಪ್ರಾರ್ಥನೆಯ ಗೈದು ಮುದದಿ ||
ತವಕದಿಂ ಪೂಜಿಪುವೊ ಕಮಲಂಗಳೆನೆ ಕರಗ |
ಳವಿರಳಕಪೋಲಂಗಳಲ್ಲಿಟ್ಟು ನಿದ್ರಿಸುವ |
ಕುವಲಯದಳಾಕ್ಷಿಯರ ಬೆಡಗದೇಂ ಮೋಹಿಪುವೊ ಮದನಮೋಹನಮೆಂಬೊಲು || ೨೦ ||

ಪೊಸತಾದ ಸನ್ಮನೋವೆಸರಾಂತ ಶೃಂಗಾರ |
ರಸಭರಿತಕನಕಕಲಶಂಗಳಂ ಪ್ರಿಯದಿಂದ |
ಮಸಮಶರನಿಂಗೆ ಕಾಣಿಕೆಯನೊಪ್ಪಗಿಸುವರೊ ಸ್ತ್ರೀಯರುಗಳೆಂದೆಂಬೊಲು ||
ಬಿಸಜಕರಗಳ ಕುಚಪ್ರಾದೇಶಗಳಲಿಟ್ಟು |
ಮಿಸುಕದಂತತಿನಿದ್ರೆಯೊಳಗಿರ್ಪ ಮಾನಿನೀ |
ಪ್ರಸರಮಂ ಕಂಡು ಬೆರಗಾಗುತನಿಲಾತ್ಮಜಂ ಶಿವಯೆನುತ ನಡೆದನೊಲಿದು || ೨೧ ||

ಹರಗರ್ಧಪೌರುಷವ ಹರಿಗೆ ಮುನಿಶಾಪಮಂ |
ಸರಸಿಜೋದ್ಭವಗೆ ವಾಕ್ಪರವಶತೆಯಂಗೈದು |
ಸುರಮುನಿರವಿಪ್ರಭೃತಿಯಾಜ್ಞೆಯಂ ಮೀರದಂತೆಸಗಿದ ಮಹಾಪುರುಷನ ||
ಸ್ಮರನೈಕತಾನದಿಂ ಭಜಿಸಿ ನಿಶ್ಚಂಚಲತೆ |
ವೆರೆದಾ ಸಮಾಧಿಯೊಳಗೆಸೆವರೋ ಸ್ತ್ರೀಯರೆನ |
ಲರೆಗಣ್ಣ ಮುಗಿದು ನಿದ್ರಿಪ ಸತಿಯರಂ ಕಂಡು ಬೆರಗಾದ ಪವನಸುತನು || ೨೨ ||

ದೇವಗಂಧರ್ವಋಷಿ ಯಕ್ಷನಾಗಾದ್ಯಖಿಲ |
ಕೋವಿದಾಂಗನೆಯರನು ಪ್ರಸಭದಿಂದೆಳೆತಂದು |
ಭಾವಭವನೆರಥನೆಯ ರೂಪನಂತನವರತ ಸಂಭೋಗಸುಖದೊಳಿರ್ಪ ||
ಶ್ರೀವಿಯಂ ಪೊಗಳಲಾರ್ಗಳವಪ್ಪುದೀಸಿರಿಯು |
ದೇವಪತಿಗುಂಟೆ ಶಿವಶಿವ ಅದೇಂ ತಪದಿಂದ |
ರಾವಣನು ಗಳಿಸಿದನೊಯೆನುತ ಬೆರಗಾದನಾ ಸ್ತ್ರೀರತ್ನಗಳ ನಿಟ್ಟಿಸಿ || ೨೩ ||

ಎಂದು ವಿಸ್ಮಯಚಿತ್ತನಾಗಿ ಮೆಲ್ಲನೆ ಮರುತ |
ನಂದನಂ ಮನೆಗಳೆಡೆವನೆಗಳಂ ಶೋಧಿಸುತ |
ಬಂದು ಜ್ಯೋತಿರ್ಲೋಕದಂತತಿವಿಲಾಸಕರ ಶಯ್ಯಾಗೃಹವ ಕಂಡನು ||
ಛಂದಛಂದದ ವಿಚಿತ್ರಗಳ ನೋಡುತ ಬರ |
ಲ್ಮುಂದೆಸೆದುದಾಗ ಶಯ್ಯಾಸನಮಹಾರತ್ನ |
ಪೊಂದಿಕೆಗಳಿಂ ಮುಕುಂದೋಪಯೋಗ್ಯಮದೆಂಬೊಲತುಲಚಿತ್ರಾಸ್ಪದದೊಳು || ೨೪ ||

ಸುರುಚಿರದ ಬಜ್ಜರದ ಕಂಬಗಳ್ನಾಲ್ದೆಸೆಯ |
ವರರತುನದೀಪಂಗಳಾಂತು ಬೆಳಗುತಮಿರಲು |
ಕರಿಯ ಸಿರಿಯ ನಿತಂಬದೊಳಗೆ ವಿದ್ಯುಲ್ಲೇಖೆಯೆಸೆವಂತೆ ಥಳಥಳಿಸಲು ||
ಧರೆಯ ನೋಳ್ಪರೆ ಕೃಷ್ಣ ಭುಜಗೇಂದ್ರನೈತಂದು |
ಪರಿಯಂಕಶಾಯಿಯೆಂದೆನಿಸಿದನೊಯೆನಲು ಭೋ |
ರ್ಮೊರೆದು ನಿದ್ರಿಪ ರಕ್ಕಸಾಧಿನಾಥನ ಕಂಡನುದ್ದಂಡರಣಚಂಡನ || ೨೫ ||

ಪುರುಹೂತನಾಯುಧದೊಳರಿದ ರೇಖೆಯ ಮಹಾ |
ಕರಿದಂತಕುಂತಕಿಣವಿಷ್ಣುಚಕ್ರಾಹತಿಯ |
ಧರಿಸಿ ರಜತಾಚಲವನೆತ್ತಿ ರಾರಾಜಿಸುವ ದೀರ್ಘತರಬಾಹುಗಳನು ||
ಸುರರ ಸತಿಯರ ಕೆಯ್ಯ ಪ್ರತಿಕರ್ಮಗಳನಾಂತು |
ವರರತುನದೂರ್ಮಿಕಾಭರಣಮೈದೈದೆನಿಪ |
ಶಿರಗಳಾಂತೆಸೆವ ಪನ್ನಗಗಳೆನೆ ರಾಜಿಸಿದುವತುಲವಿಂಶತಿಭುಜಗಳು || ೨೬ ||

ನವರತುನಮಯದಂಗದಂಗದಂತಾಸಗಳ |
ನವಿರಳಚ್ಛವಿಯ ಮಣಿಮಕುಟದಶಕಂಗಳಿಂ |
ಪ್ರವಿಮಲೋಜ್ವಲಕುಂಡಲಂಗಳಿಂ ಹಾರಕೇಯೂರಕಂಕಣಗಳಿಂದ ||
ನವನವಕಮೆನಲುದಿಪ ರವಿಯಂತೆ ರಕ್ತಿಮ |
ಚ್ಛವಿಯಂಬರಗಳಾಂತು ಮಾಷರಾಶಿಯೊಲು ದಾ |
ನವಶಿರೋಮಣಿಯುರಲು ಕಾಣುತಚ್ಚರಿವಟ್ಟು ತೊಲಗಿದಂ ಪಿಂದಡಿಗಳ || ೨೭ ||

ತಾರಕಾಸಮುದಯಂ ಬಳಸಿರಲ್ ತನ್ಮಧ್ಯ |
ತೋರುವ ಸುಧಾಕರನ ಮಾಳ್ಕೆಯೊಲು ಪ್ರತಿಭಿನ್ನ |
ಚಾರು ಸರ್ವಾಂಗದಂಗನೆಯರ ಸಮೂಹದೊಳು ಮದಗಂಧಹಸ್ತಿಯಂತೆ ||
ತೋರನಿದ್ರೆಯನಾಂತು ಮಲಗಿರ್ಪ ರಕ್ಕಸನು |
ದಾರಾಂಕದೊಳು ಪೊಳೆವ ಸೌದಾಮಿನೀಲತೆಯ |
ದೂರದಿಂ ನೋಡಿ ಕಪಿವರ ಮೆಲ್ಲನೈತಂದು ಸಾರಿದಂ ಪರಿಯಂಕಮಂ || ೨೮ ||

ದೇವತಾಂಗನೆಯರೊಳು ನರಯಕ್ಷನಾಗರೊಳ |
ಗಾವೆಡೆಯಲರಸಿದರು ಕಾಣಬಾರದ ಚೆಲುವು |
ಭಾವಮಾಂತಂಗನೆಯದೊರ್ವಳಾತನ ಪೊರೆಯಲತಿನಿದ್ರೆಯೊಳಗೊಪ್ಪಿರೆ ||
ಪಾವಮಾನಿಯ ಚಿತ್ತದೊಳು ಪೊಳೆದುದನುಮಾನ |
ವಾ ವಸುಧೆಯಣುಗಿಯಹುದೆನುತ ತನ್ನೊಳ್ತಾನೆ |
ಭಾವಿಸುತ ವಾಲಮಂ ಚುಂಬಿಸುತ ನೋಡಿದಂ ಕಪಿಯ ಚಾಪಲ್ಯತರದಿಂ || ೨೯ ||



ಅರಸುತೈತಂದುದಕ್ಕಾದುದು ಮನೋಭೀಷ್ಟ |
ಹರುಷಮೆಂದಾ ಕನಕಕಂಭದಗ್ರವನಡರಿ |
ಧರಣಿಗಂ ಧುಮ್ಮಿಕ್ಕಿ ವಾಲಧಿಗೆ ಮುದ್ದಿಟ್ಟು ಬೆದರಿ ನಾಲ್ದೆಸೆಯ ನೋಡಿ ||
ಸರಿಸಕೈತಂದು ಸರ್ವಾಂಗಲಕ್ಷಣಗಳಂ |
ಪರಿಕಿಸುತ ಪಾದಗತಕಾಕರೇಖೆಯ ನೋಡಿ |
ಧರಣಿಸುತೆಯಲ್ಲ ಮಂಡೋದರಿಯೆನುತ್ತರಿದು ನಿಶ್ಚಯಂಗೈದನಾಗ || ೩೦ ||

ಇನಿರಸವನುಂಬರನ್ಯೇಚ್ಛೆಗೈವರೆ ಜಗ |
ದ್ವಿನುತರಘುವರಭುಜಾಶ್ರಯಗೈದ ಜಾನಕಿಯು |
ದನುಜನಂ ನಿಟ್ಟಿಪಳೆ ಪಾನನಿದ್ರಾಸಕ್ತಿಯೊಂದುವಳೆ ಭೂತಳದೊಳು ||
ದನುಜೆಯಂ ವೈದೇಹಿಯೆಂದು ಭಾವಿಸಿ ದೋಷ |
ಕನುವಾದೆನಕಟಕಟ ಜ್ಞಾನಶೂನ್ಯತೆಯಿಂದ |
ಮೆನುತ ಚಿಂತಿಸುತ ಮಂಚವನಿಳಿದು ಮಾರುತಿಯು ತೊಳಲಿದಂ ಮಾನಸದೊಳು || ೩೧ ||

ಎಲ್ಲಿ ನೋಡಿದರು ದಿವ್ಯಾಂಗನಾಸಮುದಯಂ |
ಚೆಲ್ಲಿ ಮರೆದೊರಗಿರ್ಪರಾವೆಡೆಯಲೀಕ್ಷಿಸಿದ |
ರಲ್ಲಿಯುಂ ಸುರಕಿನ್ನರಾದಿನಾರಿಯರೆಸೆವರಮಿತಸಂಖ್ಯಾತದಿಂದ ||
ಎಲ್ಲಿ ನೋಡಿದರು ಜನಕಜೆಯ ಕುರುಹನು ಕಾಣೆ |
ನೆಲ್ಲಮಂ ಶೋಧಿಸಿದೆ ಪಾವು ಪಾವಂ ಪುಡುಕಿ |
ದಲ್ಲದನ್ಯರೊಳಹುದೆ ಸತಿಯರಂ ನಿಟ್ಟಿಪರೆ ಸತಿಯರಿಂದಹುದೆಂದನು || ೩೨ ||

ಎಂತಾದರುಂ ತೊಳಲಿ ನೋಡಿದಲ್ಲದೆ ತೀರ |
ದೆಂತೆನುತ ಮುಂದಕಡಿಯಿಟ್ಟು ನೋಡುತ ಕಂಡ |
ಮುಂತೆ ಸರ್ವಾಭೀಷ್ಟಮಾಂತೆಸೆವ ಸುರುಚಿರಾಕಾರಹರ್ಷದೊಳೊಪ್ಪುವ ||
ಕಾಂತಮೆನೆ ಪಾನಭೂಮಿಯ ಮಹಿಷಮೃಗಖಗವ |
ತಿಂತಿಣಿವರಾಹಶಲ್ಯಕಶಶಕಗೋಧಪಲ |
ವಾಂತೆಸೆವ ರೌಕ್ಮರತ್ನದ ಭಾಜನಗಳಲ್ಲಿ ತೋರ್ದುವಾವಾವೆಡೆಯಲಿ || ೩೩ ||

ಬಗೆಬಗೆಯ ಮೃಗಪಕ್ಷಿಗಳ ಮಾಂಸ ಪಕ್ವಂಗ |
ಳಗಣಿತದ ಭಾಜನದೊಳರ್ಧ ಭಕ್ಷಿತಮಾಗಿ |
ಸೊಗಸಿಂದಮೆಸೆದಿರಲ್ಪೇಯಲೇಹ್ಯಾದಿಗಳ್ಪರಿಪರಿಯಲೆಸೆದಿರ್ಪುವು ||
ನಗುವ ವಾರುಣಿವೃಷ್ಟಿಗೌಡಿಮಾಧ್ವೀಕರುಜು |
ಮೊಗುಮಿಗೆಯೊಳೆಸೆವ ಪುಷ್ಪಾಸವಫಲಾಸವಗ |
ಳಗಣಿತದ ಪೊಂಗೊಡಗಳೆಸೆದಿರ್ದುವಾ ಪಾನಭೂಮಿಯೊಳಗಚ್ಚರಿಯೆನೆ || ೩೪ ||

ರುಚಿತಕರವಿವಿಧದಾಸವದ ಪೊಂಗೊಡಗಳಭಿ |
ರುಚಿಪಾಕಸಿದ್ಧ ನಾನಾವಿಧದ ಮಾಂಸಂಗ |
ಳಚಲೋಪಮಿತಮಾಗಿ ತೋರ್ಪುವಾವಾವೆಡೆಯ ಸುರಭಿಳಿತ[1]ತಾರೆಂಬೊಲು ||
ರುಚಿಕರದ ಭಕ್ಷ್ಯಭೋಜ್ಯಂ ಚೋಷ್ಯಲೇಹ್ಯಗಳ್ |
ವಿಚಲನಾಗದೆ ಸ್ವರ್ಣಪಾತ್ರೆಗಳೊಳೆಸೆದಿರಲ್ |
ಸಚಕಿತಾಂತಃಕರಣದಿಂದ ಮಾರುತಿ ನೋಡಿ ವಿಸ್ಮಯಂಗೊಂಡನಾಗ || ೩೫ ||

1 ತಾರೆಂಬೆನಿಪೊಲು.

ಪರಿಪರಿಯ ಪಕ್ವಫಲಗಳ ರುಚಿರಭಾಜನಗ |
ಳುರುತರಾಸವಭರಿತಸ್ವರ್ಣಕುಂಭಂಗಳಿಂ |
ಸುರುಚಿರದ ಭಕ್ಷ್ಯಭೋಜ್ಯೋಪೇತ ಷಾಡವದ ಹರಿವಾಣಮಗಣಿತಮೆನೆ ||
ಹರಿಪತಿಗೆ ಸಂಭ್ರಮದಿ ಕಂಗೆಸೆಯೆ ನೋಡುತ |
ಚ್ಚರಿಗೊಂಡನೇಂ ಭಾಗ್ಯಶಾಲಿಯೋ ರಾವಣಾ |
ಸುರನೆನುತಮಾಪಾನ ಭೂಮಿಯೆಲ್ಲವ ತೊಳಲಿ ಶೋಧಿಸುತ ಬೆರಗಾದನು || ೩೬ ||

ಕೆಲವು ಭುಕ್ತಾವಶೇಷಂಗಳಿನಲೆಸೆದಿರಲು |
ಕೆಲವು ಪಾನಾವಶೇಷಿತಕೊಡಗಳೊಪ್ಪಿರಲು |
ಕೆಲಕೆಲವು ಮಗುಳೆ ಮಗುಳಾಸ್ವಾದನೆಯ ಮಾಡಲುಳಿದ ಶೇಷಂಗಳಿರಲು ||
ಕೆಲವು ಭೋಗೋಪಯೋಗ್ಯತೆಯಿಂದ ರಾಜಿಸಲು |
ನಲವಿಂದ ನೋಡುತಾಪಾನಭೂಮಿಯನುಳಿದು |
ಲಲನಾಸಮಾಜದೊಳ್ಧರಣಿಜೆಯ ಶೋಧಿಸುತ ಮೆಲ್ಲನಲ್ಲಿಂ ಪೊರಟನು || ೩೭ ||

ರಾವಣಾಂತಃಪುರವನೆಲ್ಲವಂ ತೊಳಲಿ ರಾ |
ಜೀವನೇತ್ರೆಯ ಸುಳುಹ ಕಾಣದತಿಚಿಂತೆಯಿಂ |
ಪಾವಮಾನಿಯು ಖಿನ್ನತೆಯನಾಂತು ಮುಂದರಿಯದೆಂದ ತನ್ನೊಳಗೆ ತಾನೆ ||
ಈ ವಸುಧೆಯೊಳು ಸಾಧುಸಂದೂಷ್ಯಕರಮಾದ |
ತೀವ ಪಾತಕಮಡಸಿತಕಟಕಟ ಪರಸತಿಯ |
ರಾವಲೋಕನದಿಂದಮೇಂಗತಿಯೆನುತ್ತಳಲಿ ಬಳಲಿ ಬಿಸುಸುಯ್ದನಾಗ || ೩೮ ||

ಪರನಾರಿಯರು ನಗ್ನಭಾವದೊಳಗಿರ್ಪುದಂ |
ಪರಿಕಿಸಿದೆ ನಾನಕಟ ನರಕಭಾಜನನಾದೆ |
ನರರೆ ಪರಸೇವನಾಪರರಿಗೆಲ್ಲಿಯದು ಗತಿ ನಿರಯದಿಂದಂ ನಿಷ್ಕೃತಿ ||
ಅರಿಯಲೀಸದೆ ದೈವ ವಂಚಿಸುತಮಿಾ ಠಾವ |
ದೊರೆಯಿಸಿತು ದುರ್ಯಶವನಾಂತ ಬಳಿಕೀ ಜೀವ |
ಮಿರಲೇನು ಫಲ ಪಾಪಿಗೆಣಿಕೆಯೆಲ್ಲಾ ವಿಫಲಮಹುದಲ್ತೆ ಭೂತಳದೊಳು || ೩೯ ||

ನೋಡಬೇಕಾಯ್ತಾಳ್ದ ಪೇಳ್ದತೆರದೊಳು ಗೃಹದಿ |
ನೋಡಿ ನಿಷ್ಫಲಮಾಗಿ ಕಿಲ್ಬಿಷಂ ಬಂದು ಕೈ |
ಗೂಡಿತಿನ್ನೇಂ ಗೈವೆನಾವ ವಿಧದಿಂದೆನಗೆ ಪಾಪನಿಷ್ಕೃತಿಯೆನ್ನುತ ||
ಪಾಡಿ ತನ್ನೊಳ್ತಾನೆ ಧೈರ್ಯರಸಮಂ ಚಿತ್ತ |
ಕೂಡಿಸುತ ಪತಿಕಾರ್ಯಮಲ್ಲದಾತ್ಮಾರ್ಥಕಾಂ |
ಮಾಡಿದವನಲ್ಲೊಡಲ ಪೊರೆಯಲೆಂದೆಳ್ಳನಿತು ಚಾಂಚಲ್ಯಮುದಿಸಲಿಲ್ಲ || ೪೦ ||

ಇನನೂಳಿಗಂಗೆಯ್ಯಲಿಂದಿನಿರುಳೊಳು ಪೆರರ |
ವನಿತೆಯರ ನಿಟ್ಟಿಸಲ್ವೇಳ್ಕಾದುದಾದರೆಯು |
ಮನಮಲ್ತೆ ಬಂಧಮುಕ್ತಿಗಳಹೈತುಕ ಬಹಿಃಕರಣಗಳಲೇನಪ್ಪುದು ||
ಇನಿತು ವೈಕಾರಗಳನೆಡೆವಿಡದ ನೋಡಿದುದ |
ಕಿನಿಸು ಚಂಚಲಮಿಲ್ಲ ಸರ್ವಚೇತನ ಸಾಕ್ಷಿ |
ಯೆನಿಪ ರಾಘವ ಬಲ್ಲನೆಂದು ಧೈರ್ಯವ ತಂದು ನಿಂದು ಮಗುಳಿಂತೆಂದನು || ೪೧ ||



ತನುಧನಮನಂಗಳಂ ಸ್ವಾಮಿಗೊಪ್ಪಿಸಿ ಪೇಳಿ |
ದನಿತೂಳಿಗವಮಾಡಿ ನಿರ್ಮಲಾಂತಃಕರಣ |
ರೆನಿಪರಿದು ಕಾರ್ಯದ ಶುಭಾಶುಭಫಲಂಗಳಿಂದಿನಿತು ಲೇಪಗಳಿಲ್ಲವು ||
ತೊನೆದಿಡುವ ಹಸ್ತಬಲದಿಂದಂಬು ನಡೆದು ಪೆರ |
ರನು ಕೊಂಬುದಲ್ತೆ ಸಂಕೋಚಮೇನಿಹುದೆನುತ |
ಮನವ ಸಂತಸಗೊಳಿಸಿ ಮುಂತಣಾಲೋಚನೆಯೊಳಿರ್ದ ಮರುತಾತ್ಮಭವನು || ೪೨ ||

ಮತ್ತೆಮತ್ತೀ ನಿಲಯಗಳನೆಲ್ಲ ಶೋಧಿಸುತ |
ಮುತ್ತಮೋತ್ತಮ ನಾರಿಯರೊಳೆಲ್ಲ ಭೇದಿಸುತ |
ಕೆತ್ತ ಬಲ್ಗತ್ತಲೆಯೊಳಾಗಾರಮೆಲ್ಲಮಂ ತಿರುತಿರುಗಿ ಮಗುಳೆ ತೊಳಲಿ ||
ಸುತ್ತಲುಂ ಸುತ್ತಿ ಧರಣಿಜೆಯ ಕಾಣದೆ ಪ್ಲವಗ |
ಸತ್ತ್ವಮಂ ಚಿತ್ತ ಕಳವಳಿಸೆ ಪೊರಮಟ್ಟು ನಡೆ |
ದತ್ತಿತ್ತ ನೋಡದಲೆ ಬೀಳ್ಕೊಂಡು ಬಂದೆಂದಿನಂತಾ ವಿಮಾನಮೇರ್ದಂ || ೪೩ ||

ಭೂಮಿಜಾತೆಯ ಕಾಣದಾ ನಗರಧಾವನೆಯು |
ತಾಮಸೀವೃತ್ತಿಯಂ ತಂದೀಯೆ ಮಾನಸಕೆ |
ಕಾಮಹರರೂಪ ಪುಷ್ಪಕದಗ್ರದೊಳ್ಕುಳಿತು ದೃಢದಿಂದ ಮೌನವಿಡಿದು ||
ರಾಮಪುರದರಸನಡಿದಾವರೆಗಳಂ ಬಿಡದೆ |
ನೇಮದಿಂ ಜಾನಿಸುತ ಮೂರ್ತಿದರ್ಶನಸುಖಾ |
ರಾಮನೆಂದೆನಿಸುತೇನೊಂದೆಣಿಸದತಿಹರ್ಷನಿಶ್ಚಲತೆಯಾಂತಿರ್ದನು || ೪೪ ||

**ನಾಲ್ಕನೆಯ ಸಂಧಿ ಸಮಾಪ್ತಂ.**

# ಐದನೆಯ ಸಂಧಿ

ಸೂಚನೆ || ಮಗುಳೆ ಮಗುಳಾಪುರದೊಳರಸಿ ಕಾಣದೆ ನೆಲನ |
ಮಗಳ ಕುರುಹಂ ಪಿಡಿದ ಚಿಂತೆಯಿಂ ಮರುತಭವ |
ಬಗೆಬಗೆಯಲಾಳೋಚನಂಗೈವುತಿರ್ದನಾ ಸೌಧಾಗ್ರದಲ್ಲಿ ಕುಳಿತು ||

ಒಂದು ಯೋಜನದ ಪರಿಮಿತದರ್ಧಯೋಜನದ |
ಬಂಧುರದ ವಿಸ್ತಾರದರಮನೆಯ ಶೋಧಿಸುತ |
ಬಂದೆನಲ್ಲದೆ ಜಾನಕಿಯ ಕಾಣದಾದೆ ಕೃತ ನಿಷ್ಫಲಾರಂಭಮಾಯ್ತು ||
ಇಂದಿನಿತಮೆಡೆವಿಡದೆ ತೊಳಲಿ ಶೋಧಿಸಿ ಬಳಲಿ |
ಬಂದು ಬರಿಕೈಯಾದುದೆನುತ ಚಿಂತಿಸಿ ಮರು |
ನ್ನಂದನಂ ಮುಂಗಾಣದಪರಿಮಿತದೆಣಿಕೆಗಳನೆಣಿಸುತಿರ್ದಂ ಗಿರಿಸುತೆ || ೧ ||

ರಾವಣಾಂತಃಪುರದೊಳಿರ್ದಂಗನಾಜನರ |
ಸಾವಧಾನದೊಳೊರ್ವರೊರ್ವರ ಪರೀಕ್ಷಿಸುತ |
ಮಾವಾವ ಪರಿಯಿಂದ ಬೆದಕಿ ನೋಡಿದರೆಮಗೆ ಗೋಚರಿಸಳವನಿಜಾತೆ ||
ಏವೆನೇಂಗೈವೆ ಬಲಿಯುಗ್ರಶಾಸನನು ಸು |
ಗ್ರೀವನಾತನ ಪೊರೆಗೆ ಪೋಪರೆಂತಹುದು ಮ |
ತ್ತಾವನೀಪತಿಗಳಂ ಕಾಣ್ಬುದೆಂತೆನುತಳಲಿ ಬಳಲಿದಂ ಚಿತ್ತದೊಳಗೆ || ೨ ||

ಎಲ್ಲೆಲ್ಲಿ ನೋಡಿದರು ಏನುಪಾಯಂ ಗೈದ |
ರೆಲ್ಲಿ ಪೊಕ್ಕರಸಿದರು ಧರಣಿಸುತೆ ಕಾಣ್ಪಡುವ |
ದಿಲ್ಲವೆನ್ನಯ ಕಷ್ಟ ವ್ಯರ್ಥಮಾದುದು ಮರಳಿ ಪೋಗಿ ಕಪಿಗಳ ಕಂಡರೆ ||
ಎಲ್ಲಿಂದ ಬಂದೆ ಯೆಲ್ಲಿರ್ಪಳೆಮ್ಮಯ ದೊರೆಯ |
ವಲ್ಲಭೆಯೆನುತ್ತ ಬೆಸಗೊಂಡರವರೊಳಗೇನ |
ನುಲ್ಲಸದಿ ಪೇಳ್ವೆನೇಂ ಕೃತಕಾರ್ಯನಲ್ಲದ ನಿರರ್ಥನಕಟಕಟೆಂದನು || ೩ ||

ಬರಿಕೈಯ್ಯೊಳಾನೈದಿ ಪೇಳ್ವುದಾರೊಡನೇನ |
ನುರುತರಶ್ರಮದಿಂದ ನಿಶೆಯೊಳೀ ನಗರಿಯೊಳ್ |
ತಿರುತಿರುಗಿ ಬೇಸರದೆ ನೋಡಿ ನಿಷ್ಫಲಮಾಯ್ತು ನಿಶೆ ವ್ಯರ್ಥಮೆನೆ ಪೋಯಿತು ||
ಧರಣೀತನೂಭವೆಯ ಕುರುಹ ಸೂಚಿಸದಾದು |
ದರರೆ ಮತ್ತಾವೆಡೆಯೊಳಿರುವಳೋ ಜೀವನದ |
ಲಿರಳೊ ದುಷ್ಕರವಾರ್ತೆಯೆನಗೆಂತು ಗೋಚರಿಪುದಕಟಕಟ ಶಿವಯೆಂದನು || ೪ ||

ಸಕಲಾರ್ಥದೊಳ್ಪ್ರವರ್ತಕಮನಿರ್ವೇದಮೋ |
ಸಕಲಸಿದ್ಧಿಪ್ರದಮನಿರ್ವೇದಮೈಶ್ವರ್ಯ |
ದಕಳಂಕಹೈತುಕಮನಿರ್ವೇದ ಕೃತಕೃತ್ಯನೆನಿಸುವುದನಿರ್ವೇದವು ||
ಯುಕುತಿಯಿಂದಿನ್ನೊಮ್ಮೆ ಲಂಕಾನಗರದೊಳಗೆ |
ಸಕಲ ಮಂದಿರಗಳಂ ಸಾಧಿಸಿಯೆ ನೋಳ್ಪೆನೆಂ |
ದಕುಟಿಲಾಂತಃಕರಣಚಿಂತಾಪರಂಪರೆಯನಾಂತು ಯೋಚಿಸುತಿರ್ದನು || ೫ ||



ನೋಡಿದೆ ಲತಾಗೃಹವ ಪುಷ್ಪಮಂದಿರಗಳಂ |
ನೋಡಿದೆಂ ಚಿತ್ರಗೃಹಕ್ರೀಡಾಗೃಹಂಗಳಂ |
ನೋಡಿದೆಂ ನಿಷ್ಕುಟಾಂತರಪುಂಜಕುಂಜಗಳ ಕರುಮಾಡದೇಶಂಗಳ ||
ಕೂಡದಾದುದು ಮನೋರಥಮಾದರಿನ್ನೊಮ್ಮೆ |
ನೋಡಿ ನಗರಿಯನೆಲ್ಲ ಧರಣಿಸುತೆಯಂ ಕಂಡು |
ನಾಡೊಡೆಯನೆಡೆಗೆ ಪೋದಪೆನೆಂದು ಪುಷ್ಪಕವ ನಿಳಿದು ಶೋಧಿಸೆ ಪೊಕ್ಕನು || ೬ ||

ಭೂಮಿಗೃಹಗಳ ಚೈತ್ಯನಿಲಯಗಳನಂತರದ |
ಭೂಮಿಗಳ ಶೋಧಿಸುತ ಸೋರುಗಂಡಿಗಳಿಳಿದು |
ಪ್ರೇಮದಿಂ ವಪ್ರಂಗಳಂ ನೆನೆದು ವೇಗದಿಂ ಕದಗಳಂ ತೆಗೆದು ತೆಗೆದು ||
ಸಾಮಭೇದಂಗಳಿಂದೊಳಪೊಕ್ಕು ನೋಡಿದಂ |
ಭೂಮಿಾತನೂಜೆಯಂ ತತ್ಪುರದೊಳೆಡೆವಿಡದೆ |
ಭೀಮಬಲ ನಾಲ್ವೆರಳ ನೆಲಗಳಂ ಮರೆಯದೆಲೆ ಶೋಧಿಸಿದ ಬೇಸರದಲೆ || ೭ ||

ಬಿಲಗಳಂ ಪುಷ್ಕರಗಳಂ ಶೈಲಗುಹೆಗಳಂ |
ಪಲವುವಿಧ ಗೋಪ್ಯತಾಣಗಳರಸಿ ನೋಡುತ್ತ |
ಬಲಿಗಳಗ್ರೇಸರಂ ಕಂಡು ವಿವಿಧಾಕಾರ ಘೋರರಕ್ಕಸಿಯರುಗಳ ||
ನಲವಿಂದ ದೇವಗಂಧರ್ವವಿದ್ಯಾಧರರ |
ಲಲನೆಯರನೇಕಮಂ ಕಂಡು ಜನಕಾತ್ಮಜೆಯ |
ಸುಳುಹ ಕಾಣದೆ ಬಳಲಿ ಚಿಂತೆಗೊಂಡಂ ಮಾರುತಾತ್ಮಭವ ಕಾರ್ಯಮೆಣಿಸಿ || ೮ ||

ಕಪಿರಾಜನುದ್ಯೋಗ ಶಾಖಾಮೃಗಂಗಳುಂ |
ವಿಪುಳ ಭೂಮಿಯ ಚರಿಸಿದುರುವೇಗ ಸಾಗರಮ |
ನೆಪಗೆಯ್ಯದಾಂ ದಾಂಟಬಂದು ನಗರಿಯ ಪೊಕ್ಕು ತೊಳಲ್ದ ಮುಖ್ಯಶ್ರಮಗಳು ||
ವಿಫಲವಾದುವು ಮಗುಳೆ ಮಗುಳರಸಿ ನೋಡಿದರೆ |
ವಿಪುಳಾತನೂಭವೆಯು ಸಿಲ್ಕಳೀ ನಗರದೊಳು |
ಗುಪಿತಮಿನ್ನಾವ ನೆಲಮಿಹುದೊ ಶಿವಶಿವ ಮಹಾದೇವೆನುತ ಬೆರಗಾದನು || ೯ ||

ಸಮಯದೊಳು ಪೇಳ್ದಾ ಜಟಾಯುವಿನ ನುಡಿಗಳುಂ |
ವಿಮಲಮತಿ ಗಾಂಧರ್ವನೊರೆದ ವಾಕ್ಯಂಗಳುಂ |
ಮಮತೆಯಿಂ ಯೋಗಿನಿಯು ಸಂಪಾತಿಯುಸಿರ್ದ ಪರಿಯೆಲ್ಲ ಪುಸಿಯಾದುದಕಟ ||
ಸಮದ ಗರ್ವಿತ ದೈತ್ಯನಾಗಸದಿ ತರುವೆಡೆಯ |
ಭ್ರಮಣೆಯಿಂ ಭೂತಳಕೊ ಸಾಗರಕೊ ಕೆಡೆದಳಾ |
ರಮಣಿಯಲ್ಲದೆ ಜೀವದೊಳಗಿರ್ದರೆನಗಿಲ್ಲಿ ಗೋಚರಿಸದಲೆ ಪೋಪಳೆ || ೧೦ ||

ಕ್ರೂರತರರಕ್ಕಸೀಗಣದ ಮಧ್ಯದಲೊರ್ವೆ |
ಧೀರತೆಯೊಳೊಪ್ಪಿಹಳು ಘೋರರೂಪುಗಳೆಣಿಸು |
ತಾರನುಂ ತನ್ನವರ ಕಾಣದತಿಭಯದಿಂದ ಜಾರಿಸಿದಳಸುಗಳನ್ನು ||
ಧಾರಿಣೀಪತಿ ರಾಮಲಕ್ಷ್ಮಣರ ಪಂಬಲಿಸಿ |
ತೋರ ದುಃಖದಿ ತನುವ ತೊರೆದಳಲ್ಲದಲಿರಲು |
ತೋರದಿರ್ದಪಳೆ ತಾಂ ನೋಡಿದಾಗಾರಗಳೊಳಕಟಕಟ ಶಿವಯೆಂದನು || ೧೧ ||

ವಿನಯದಿಂದುಪಚರಿಸಲಾ ಮಾತಿಗೊಡಬಡದೆ |
ಘನಮೌರ್ಖ್ಯತೆಯನಾಂತರೀಕ್ಷಿಸುತ ರಕ್ಕಸರ |
ಜನಪ ಭಕ್ಷಣೆಗೈದನೋ ಭೂಮಿಯೊಳಗಿರ್ದಡರಿಯದೆಂತಿರ್ಪಳಕಟ ||
ಜನಕಜೆಯ ಕಾಣದಾ ವನಚರಾಧಿಪನೆಡೆಗೆ |
ಮನವಿಡಿದು ಪೋಪೆನೆಂತೈದಿದಡೆ ಕಷ್ಟಂಗ |
ಳಿನಿತು ವ್ಯರ್ಥತೆಯಾಂತು ಪೋದಪುವು ಮಗುಳೇನಮಾಳ್ಪೆನೆನ್ನುತ ಮರುಗಿದಂ || ೧೨ ||

ಕಕ್ಕುಲಿತೆಯಿಂದಮೈದಲ್ಕೆ ರಘುವರ ಪ್ಲವಗ |
ರೆಕ್ಕತುಳಬಲನು ಸುಗ್ರೀವ ಲಕ್ಷ್ಮಣ ಮುಖ್ಯ |
ರಕ್ಕರಿಂದೆನ್ನ ಬೆಸಗೊಂಡರೇನರುಪುವೆಂ ಧರಣಿಜೆಯ ಕಾಣೆನೆನಲು ||
ಸೊಕ್ಕುತಸುಗಳ ತೊರೆವ ರಾಮು ಸೌಮಿತ್ರಿ ತಾಂ |
ಮಿಕ್ಕಿರಂ ಸುಗ್ರೀವನಳಿವನಿದನೀಕ್ಷಿಸುತ |
ಮಿಕ್ಕ ಕಪಿನಾಯಕರು ತೊರೆವರಸುಗಳ ದೊರೆವುದದು ತಾನನರ್ಥಕರವು || ೧೩ ||

ತಾರಾಂಗದಾದಿಗಳ್ ನಿಲದೈದುವರು ಕಪಿಗ |
ಳೂರಿದರೆ ದುಃಖದೊಳ್ ಪೋದಪರು ನಿಷ್ಠುರವಿ |
ಕಾರನುಡಿಗಳ ಕೇಳಿ ಕೌಸಲ್ಯೆಕೈಕಾಸುಮಿತ್ರೆಯರ್ತನುಗಳೆವರು ||
ವೀರ ಶತ್ರುಘ್ನ ಭರತಾದಿಗಳು ಪೋದಪರು |
ದಾರರವಿವಂಶ ಕಪಿವಂಶಂಗಳೆರಡನೀ |
ದಾರಿಗೈವದಕಿಂದಮಿಾ ನೆಲನ ಬಿಟ್ಟರುಗದಿಹುದೆ ಲೇಸೆಂದನಾಗ || ೧೪ ||

ಮಾರುತಿಯು ಪೋಗಿರ್ಪ ಬರ್ಪನೆನುತಲಿ ಜೀವ|
ಧಾರಣಂಗೈದಿರ್ಪರೆಲ್ಲರದರಿಂದ ಮಿಾ |
ತೀರದೊಳಗಾಂ ವಿರಕ್ತಿಯೊಳಿರ್ಪೆ ಚಾಂದ್ರಾಯಣಾದಿಗಳ ಚರಿಸಿ ಸುಖದಿ ||
ಓರುವಂ ತಾನಿರ್ದು ಫಲವೇನು ಹುತವಹಾ |
ಗಾರಮಂ ಪುಗುವೆನಲ್ಲದೊಡುದಧಿಯೊಳ್ಮುಣುಗ |
ಲೋರಂತೆ ಯಾದಸಗಳುಂಡು ಸುಖಿಸಲಿ ಯೆನುತ ತನ್ನೊಳಗೆ ಚಿಂತಿಸಿದನು || ೧೫ ||

ಪೋಗದಿರಲಾನೊರ್ವನುಭಯಕುಲಜೀವದಿಂ |
ದಾಗಾರದೊಳಗಿರ್ದು ಕಾಲಾಂತರವ ತಿಳಿದು |
ಮೇಗೆ ಸಾಧಿಸಿಕೊಂಬರಭಿಮತಂಗಳನೆನ್ನಗಮನಮತಿದೋಷಕರವು ||
ಭಾಗೀರಥೀಪ್ರಮುಖನದಿಗಳೆಡೆಯೊಳು ಪರರ |
ದಾಗುವಂದದೆ ತಪಂಗೈದಿರ್ಪೆ ಮೋಹಮಂ |
ನೀಗಿ ಮೈತ್ರಾದಿಗಳ ಸಂಪಾದನಂಗೈವೆನೆನುತಮಾಳೋಚಿಸಿದನು || ೧೬ ||

ಬಲಶಾಲಿಯೆಂದು ಕಳುಪಿದರೊಂದ ಸಾಧಿಸದ |
ಲಲಸತನದಿಂದನಾಗತನಾದನೆಂದೆನ್ನ |
ಕುಲವರಪಯಶಗಳನ್ನುಲಿಯದಿರರದರಿಂದ ನಿಲುವುದನ್ಯಾಯಮೆನುತ ||
ತೊಲಗೆ ಧರಣೀಸುತೆಯ ಕಾಣದೈದಲ್ಪಿಫಲ |
ಕಲಿತಮಾದಪುದು ಮತ್ತೀ ನಗರದಾಳ್ಪನಂ |
ಕೊಲದೆ ಬಂಧನಗೈದು ಕೊಂಡೊಯ್ದು ರಘುವರನ ಮುಂದಿಡಲು ಲೇಸೆಂದನು || ೧೭ ||



ಜಲಜಾಪ್ತನುದಿಪನ್ನಲೀ ಮಹಾಪಟ್ಟಣದೊ |
ಳೊಲಿದು ಶೋಧಿಸುತಿರ್ಪೆನನಿತರೊಳು ಸಿಲ್ಕದಿರೆ |
ಬಲುಮೆಯಿಂದೀ ನಗರ ಕಿತ್ತಿತ್ತಿಕೊಂಡ್ಯೊದು ರಾಮನೆಡೆಯೊಳಗಿಡುವೆನು ||
ಸುಲಭದಿಂದ್ಯೆದೆ ರಘುವರ ಲಕ್ಷ್ಮಣಾದಿಗಳ |
ನಲವಿಂದ ಸ್ಮರಿಸಿ ಚಿಂತೆಯನುಳಿದು ಮತ್ತೊಮ್ಮೆ|
ತೊಳಲಿ ನೋಡುವೆನೆನುತ ಪುಡುಕಲುಜ್ಜುಗಗೊಂಡನಾ ಮರುತ್ಸಂಭೂತನು || ೧೮ ||

ರಾಮಲಕ್ಷ್ಮಣಸೀತೆರುದ್ರೇಂದ್ರಹುತಭುಕ್ ಸ |
ದಾಮಯ ವಿನಾಶರವಿಶಶಿಮರುದ್ಗಣಪ್ಲವಗ |
ಸೋಮಸುಗ್ರೀವಮರುದಂಜನಾದೇವಿಯರಿಗೆರಗಿ ಸಂತೋಷಗೊಳುತ ||
ಭೂಮಿಜೆಯನರಸಿದನು ಲಂಕಾನಗರದೊಳಗೆ |
ಪ್ರೇಮದಿಂ ನಾಲ್ಕೈದು ಬಾರಿ ಶೋಧಿಸಿ ಬಳಲಿ |
ಭೀಮಬಲನಂದಮರಗಿರಿಯ ಪೋಲುವ ಚೆಲುವ ಕರುಮಾಡಮನ್ನೇರ್ದನು || || ೧೯ ||

ಕುಳ್ಳಿರ್ದು ನಾಲ್ದೆಸೆಗಳೆಲ್ಲಮಂ ನಿಟ್ಟಿಸುತ |
ತಳ್ಳಂಕಗೊಳುತ ಜಾನಕಿಯ ನೆನಹಿಂ ಶಿಥಿಲ |
ಮುಳ್ಳ ಮಾನಸದಿಂದ ತನ್ನೊಳಗೆ ತಾಂ ತಿಳಿದು ಪರಿತಾಪಗೊಳುತಿರ್ದನು ||
ಎಳ್ಳನಿತು ಕುರುಹು ಸಂಜನಿಸದಲೆ ರಕ್ಕಸರ |
ಕಳ್ಳನಿರ್ಪೀ ನೆಲದೊಳೇಂ ಗೈವೆನಿದಕೆ ಮಿಡು |
ಕುಳ್ಳರಾರೆನಗಿಲ್ಲಿ ದೊರಕುವರು ಹೃತ್ತಾಪಹಾರಿಗಳೆನುತ್ತಳಲಿದಂ || ೨೦ ||

ಸೊಲ್ಲು ಪುಸಿಯಹುದಕಟ ಭೂತಳದಿ ಸಾಧುಗಳ |
ವಲ್ಲಭೆಯ ಬಯಸಿದಗೆ ಗೋದ್ವಿಜರ ಕೊಲೆಗಳಂ |
ಸೊಲ್ಲಿಪಗೆ ನೆನೆದೆಣಿಕೆ ಬಯಲಹುದು ಕಿಲ್ಬಿಷಗೆ ನುಡಿದ ನುಡಿ ಪುಸಿಯಪ್ಪುದು ||
ಎಲ್ಲ ಶ್ರುತಿಮತ ಮೂರನುಳಿಸಾದರಂ ನೆನೆದು |
ದಿಲ್ಲಾನು ಬರಿದೆ ಕಾರ್ಯಂ ವಿಫಲಮಾಯ್ತು ಸಿರಿ |
ವಲ್ಲಭ ನಮಶ್ಶಿವಯೆನುತ್ತ ತನ್ನೊಳ್ತಾನೆ ಪರಿತಾಪಗೊಳುತಿರ್ದನು || ೨೧ ||

ಭೀತಿಗಳ ಮಂದಿರಂ ಪಲವು ದುಃಖದ ಸದನ |
ಪಾತಕದ ತೌರ್ವನೆಯು ಪರಿಪರಿಯ ಸಂಕ್ಲೇಶ |
[1]ಕಾತರದ ನಿಲಯ ಕಷ್ಟಂಗಳಾಲಯ ದೈನ್ಯದಿರವು ದುರ್ಭಿಕ್ಷದೆರವು ||
ಭೂತಳದಿ ಪರಸೇವೆಯೆಂಬುದದೆ ನಾರಕಂ |
ಜಾತುಚಿತು ಪರಸೇವೆಗೊಡಬಟ್ಟ ಪುರುಷರಿ |
ನ್ಯಾತಕಹ ಕುಲಛಲಬಲಂಗಳೆಲ್ಲಂ ಪೋಗಿ ತೃಣಕೆ ಕಡೆಯಪ್ಪನಕಟ || ೨೨ ||

ಪರಸೇವೆ ಕರ ಕಷ್ಟಮೆನುತರಿದು ಸಾಧುಗಳು |
ತೊರೆದೀಷಣತ್ರಯವ ಫಲಮೂಲದಾಹಾರ |
ವೆರೆದು ವನದೊಳು ಸುಖದೊಳಿರ್ಪರದ ತಿಳಿಯದಾವೀಪರಿಯ ವೈಶಿಕದೊಳು ||
ಬೆರೆದು ಪಾಮರರಾಗಿ ಬೆದರುಗೊಂಡೇಂ ಫಲಂ |
ದೊರಕಿದೀ ಪ್ರಾರಬ್ಧದನುಭವಂ ಗೈದಲ್ಲ |
ದರುಗದೆಂದರಿತು ಮಗುಳೊಂದ ಮನದೊಳ್ನೆನೆದು ಯೋಚನಂಗೈದನೊಲಿದು || ೨೩ ||

---

1 ಕಾತುರದ.

ಸುರಪನುದ್ಯಾನ[1]ದಿಂ ಮಿಗಿಲೆನಿಸಿ ಬನಮೊಂದು |
ಪೊರೆಯಲ್ಲಿ ತೋರುತಿದೆ ಕಾನನವ ನೋಡಿಲ್ಲ |
ಪರಿಕಿಸೆ ವಿಶೇಷಮೇನಾದರುಂ ತೋರುವುದೆನುತ್ತ ಚಿಂತಾತತಿಯನು ||
ಪರಿದಿಟ್ಟನೋ ಯೆನಲ್ ಕತ್ತಲೆಯು ನಾಲ್ದೆಸೆಗೆ |
ಜರುಗುತಿರೆ ಮೂಡಲೊಳು ಮುಂಬೆಳಗು ತೋರಿದುದು |
ಹರುಷದಿಂದೈಂದ್ರಿ ನಸುನಗೆಯ ಬೀರಿದಳದೆಂಬಂತೆ ಪ್ರಾಚೀಮುಖದೊಳು || ೨೪ ||

ಇನಿತು ಮಾತ್ರಕೆ ನಿನ್ನ ಮನದೊಳತಿ ಚಿಂತೆಯಂ |
ಘನತರದಿ ಬಳೆಸಿ ಬಳಲುವೆ ಕುವರನೀಂ ರಮ್ಯ |
ಬನವ ಪೊಕ್ಕರಸಿದರೆ ವನಧಿಮೇಖಲೆಯಣುಗಿ ಕಂಗೆಸೆವಳೆನುತ ಶುಭಮಂ ||
ವಿನಯದಿಂ ಸೂಚಿಸುವರ್ಕೈತಂದನೋಯೆನಲು |
ಘನಸಾರಮೃಗಮುದಪಟೀರಸೀತಳಮಾಂತು |
ಮಿನುಗಿದಂ ಮಂದಮಾರುತ ಮಾರುತಿಯ ತಾಪಮಂ ನೀಗಿ ಸುಖಗೊಳಿಸಲು || ೨೫ ||

ಮಂದಮಾರುತ ಸುಳಿಯಲಾದುದಾಪ್ಯಾಯನಂ |
ಬಂಧುರಪ್ರೇಮಕರಸುಲಲಿತಾಂತಃಕರಣ |
ದಿಂದಶೋಕಾವನವ ನಿಟ್ಟಿಸುತ ಸಂಭ್ರಮಂಗೊಂಡು ನಸುನಗುತೆಂದನು ||
ನಂದನವಿಹಾರದೊಳಗತಿಕೌಶಲತೆಯಾಂತ |
ಳಿಂದೀವರಾಕ್ಷಿಯಿಾ ತಾಣದೊಳಗಿರ್ಪ‍ರದು |
ಸಂದೇಹಮಿಲ್ಲೆನುತ ನಿಧಿ ನಿರೀಕ್ಷಣೆಗೈದನಂತೆ ಸಂತೋಷಿಸಿದನು || ೨೬ ||

ಪೋದುದು ಮನಸ್ತಾಪಮಾಕ್ಷಣದಿ ಸೌಖ್ಯಕರ |
ಮಾದುದಂತಃಕರಣಮುದ್ಯೋಗಕೌಶಲತೆ |
ಯಾದುದಡಿಗಡಿಗೆ ಪರಮೇಶನ ಕೃಪಾಕಲಿತಮಾಗಿ ಶುಭಸಂತತಿಗಳು ||
ಮೇದುರದೊಳೊಮ್ಮೆ ಕೈಸಾರುವುದೆನುತ್ತಮಾ |
ಮೋದಗೊಳುತಂ ಮರುತಸುತ ನಿಂದು ಮೂಡಿಬಹ |
ಹಾದಿಯನ್ನೀಕ್ಷಿಸುತ ಹರುಷರಸಪೂರದೊಳಗೋಲಾಡುತಿರ್ದನಾಗ || ೨೭ ||

ಮದಮತ್ಸರಗಳುಳಿದು ಮಾಂದ್ಯತೆಗಳನ್ನಳಿದು |
ಬಿದುರಿಸುತ ಹೃದ್ಗ್ರಂಥಿಗಳ ಸೌಖ್ಯರಸಗಳಂ |
ಮುದದಿಂದ ಕೊಂಬ ಕಿರುವೆಳಗುತೋರಿದ ಮಾತ್ರದಿಂ ಯೋಗಿವರ್ಯನಂತೆ ||
ಪುದಿದ ಕಳ್ತಲೆ ಪೋಗಿ ಸ್ವೈರಿಣೀಜನ ಘೂಕ |
ದುದಯಮಂ ಸುಳಿಸುತ್ತ ನಿರ್ಮಲಮನೋಹರದಿ |
ಚದುರ ಬೀರ್ದುದು ಲೋಕ ಮೂಡಲೊಳು ನಸುಬೆಳಗು ತೋರಿದಾ ಕ್ಷಣಮಾತ್ರದಿ|| ೨೮ ||

ಸ್ವಾಮಿಕಾರ್ಯವನೆಣಿಸಿ ಪವನಸುತ ಚಿಂತಿಸುವ |
ನೀ ಮಹಾತ್ಮನಿಗೆ ಸಾಹಾಯಗೈದಿತ್ತಪುದು |
ನೇಮವೆಂದಖಿಳಸುರರೆಲ್ಲ ಹರಿಯಂ ಕುರಿತು ಪ್ರಾರ್ಥನಂಗೆಯ್ದು ಮುದದಿ ||
ಸೋಮಸೂರ್ಯಾದಿಗಳ ಕಾಂತಿಯಂ ಜಳಿಪತುಲ |
ಧಾಮದ ಸಹಸ್ರಾರಮಂ ಪಡೆಯೆ ನಸುವೆಳಗು |
ಭೂಮಿಗೇಂ ತೋರಿದುದೊಯೆನೆ ಮೂಡಲೊಳು ತೋರ್ದುದಡಿಗಡಿಗೆ ಪೊಳಪು ಬೇಗ||೨೯||

1 ವನಕೆ.



ಆ ಸಮಯದೊಳಗೆ ಮಾರುತಿ ಮನೋಹರ್ಷದಿಂ |
ಭೇಸರಂಗಳ ಕಳೆದು ಧೈರ್ಯರಸದಿಂದಮಿತ |
ಭಾಸುರ ಶ್ರೀವಿವರ ಸಂಕಲಿತನಾಗುತಂ ಭೂಮಿಜೆಯನರಸಿ ತಿಳಿಯೆ ||
ವಾಸವಾರ್ಚಿತಚರಣರಾಮಪುರಿವಲ್ಲಭನ |
ಲೇಸೆನಲು ನೆನೆದು ಪೂರ್ವಾದ್ರಿಯೊಳು ಚಂದ್ರನ ವಿ |
ಲಾಸಮಂ ನಿಟ್ಟಿಸುತ ಸಂಭ್ರಮದೊಳಿರುತಿರ್ದನಾ ಸೌಧದಗ್ರದೊಳಗೆ || ೩೦ ||

**ಐದನೆಯ ಸಂಧಿ ಸಮಾಪ್ತಂ.**

# ಆರನೆಯ ಸಂಧಿ

ಸೂಚನೆ || ಪಾಕಶಾಸನನ ನಂದನಕದಿಕ ರಾವಣನ |
ಶೋಕವನವನು ನೋಡಲುಜ್ಜುಗಿಸಿ ಮಾರುತಿಯು |
ಪ್ರಾಕಾರಮಂ ದಾಂಟೆ ಪೊಕ್ಕನಾರಾಮಮಂ ಚಂದ್ರಸಾಂದ್ರೋದಯದೊಳು ||

ಜಕ್ಕಿವಕ್ಕಿಗಳು ಪಲುಬುತ್ತ ತೊಳಲುವ ಪರಿಯ |
ಸೊಕ್ಕುಜವ್ವನದ ಜಾರೆಯರು ತಲೆವಾಗಿಲ |
ನ್ನಿಕ್ಕಿ ನೋಡುವ ಚರಿಯಗಳ ಕಂಡು ಸಂಚಿನಿಂ ಜಾರರತಿಕೋಟಲೆಗಳ ||
ಮಿಕ್ಕು ಬರಲಲ್ಲಲ್ಲಿ ಹೊಂಚುತಿಹ ತಸ್ಕರರ |
ನಿಕ್ಕೆಲದಿ ಕಣ್ಗಳಂ ಮುಗಿದ ಕಮಲಂಗಳಂ |
ಗಕ್ಕನೀಕ್ಷಿಸಿ ಪೂರ್ವದಿಕ್ಸತಿಯು ನಕ್ಕಳೆನೆ ಶಶಿವೆಳಗು ತೋರ್ದುದಗಜೆ || ೧ ||

ತಮನ ಜವನಿಕೆಯ ಮೆಲ್ಲನೆ ಜಗುಳಿಸುತ್ತ-ಬರೆ |
ಕ್ರಮದಿಂದ ನಾಟ್ಯರಚನೆಗೆ ಬರ್ಪ ಶಶಿಮುಖಿಯ |
ವಿಮಲತನು ನಸು ತೋರುತರ್ಧ ಗೋಚರಮಾಗುತಡಿಗಡಿಗೆ ಪೂರ್ಣತೆಯಲಿ ||
ಸುಮನೋಹರದಿ ತೋರ್ಪ ಮಾಳ್ಕೆಯೊಳ್ ಕಳ್ತಲೆಯು |
ಶಮನಾಗಿ ಬರೆ ಮೊದಲು ಕಿರಿವೆಳಗು ನಸುರೇಖೆ |
ಸುಮನಸಾನಂದಕರ ಬಿಂಬ ಕಂಗೊಳಿಸಿದುದು ಮತ್ತಾ ಸುಧಾಸೂತಿಯ || ೨ ||

ಉದಧಿಯಂ ಪೆರ್ಚಿಸುವ ಸಿರಿಯು ಖನಿಯಾದುದೋ |
ಮುದದಿಂದ ಸುರರೂಟದಮೃತ ಘಟಿಕೆಯೊ ನಿಶಾ |
ಸುದತಿಯರ ಶ್ರವಣಭೂಷಣಮೊ ದ್ವಿಜಸಂತತಿಯ ಪೊರೆವ ಜೈವಾಕರಮಿದೊ ||
ಇದುವೆ ಕುವಲಯಭಾಗಧೇಯಮೋ ನೋಡೆ ಮ |
ತ್ತಿದುವೆ ಕುವಲಯದ ಸುವಿಲಾಸಕರಮೋಯೆನಲು |
ಚದುರ ಬೀರ್ದುದು ಮೂಡಲೊಳಗೆ ಸಂತೋಷಕರ ಪೀಯೂಷಕರಬಿಂಬವು || ೩ ||

ಅರಿನಿಕೃಂತನ ಕೋಪದಾಪಾಟಲಾಂಗತೆಯ |
ಬೆರೆದು ಕ್ರಮದಿಂದಂ ಪ್ರಸಾದಮಾಧುರ್ಯತ್ವ |
ಭರಣೆಯಿಂ ಕೋಪಪ್ರಸಾದಗುಣಗಳನಾಂತು ರಾಜಪದಯೋಗ್ಯನೆನಿಸಿ ||
ಗಿರಿಯಗ್ರಮನ್ನಡರಿ ತ್ರಿಭುವನೋಲ್ಲಾಸಕರ |
ಹರುಷ ಕುವಲಯಕೆಂಬ ಬಿರುದ ಮೆರೆವಡೆತೋರ್ದ |
ಪರಮರಮಣೀಯದಿಂದಾ ಚಂದ್ರನಾರಕ್ತನಾಗುತ್ತೈಂದ್ರೀದೆಸೆಯೊಳು || ೪ ||

ಮೊದಲರುಣರುಚಿಯಿಂದ ಬಿಂಬ ಕಂಗೊಳಿಸುತಿರೆ |
ಮುದದಿಂದ ಚುಂಬಿಸುವ ಸಂಭ್ರಮದ ಚಕ್ರತತಿ |
ಯೊದಗಿ ಬರುವನಿತರೊಳು ನಿರ್ಮಲತೆಯಾಂತೆಸೆಯೆ ಕಂಡಂಜಿ ಕೋಕಂಗಳು ||
ಚದರುತಿರೆ ಜೊನ್ನವಕ್ಕಿಗಳು ನಲವೇರುತಿರ |
ಲದ ನಿರೀಕ್ಷಿಸಿ ಕುವಲಯಂಗಳಂ ನಗುವವೆನೆ |
ಯದುಭುತದೊಳಲ್ಲಲ್ಲಿ ಕೈರವಗಳರಳಿದುವು ಚಂದ್ರೋದಯದ ಸಮಯದಿ || ೫ ||



ಖರಕರೋಷ್ಣಪ್ರಶಮಗುರು ಮಹಾಹಿತಕಾರಿ |
ಯುರುತರಾರ್ಕಜಕಾಂತಿ ವೃದ್ಧಿಕರ ವೃಷತುಂಗ |
ವರ ಪೃಥೂದಯ ಸಾನುಜಾತ ತಾರಾಧಿಪನ ಸಂಪದಪ್ರಾಪ್ತನಾಗಿ ||
ಸುರುಚಿರದ ಸತ್ಕೀರ್ತಿ ಚಂದ್ರಿಕಾಪ್ರಸರಣವ |
ವಿರಚಿಸುವ ಶಶಿ ರಾಮಚಂದ್ರನಂದದಿ ಪೂರ್ವ |
ಗಿರಿಶಿಖರಪಟ್ಟವಣೆಯೊಳು ತೋರ್ದ ಕುವಲಯಾನಂದಕರವೆಂಬಂದದೆ || ೬ ||

ತಾರಾಚಲಪ್ರೇಮಧರನಾಗಿ ಶಿವನಂತೆ |
ಚಾರುಬುಧಸೇವ್ಯದಿಂ ಸತ್ಕಾವ್ಯಮೆಂಬಂತು |
ದಾರಪುಷ್ಕರವಿಲಸಿತೋದ್ದಾಮತೆಯನಾಂತು ಸುರರಾಜಕರಿಯಂದದಿಂ ||
ತೋರದಾ ವಿಧುಪದವ್ಯತಿಕರೋಲ್ಲಸಿತದಿಂ |
ಭಾರಹೆಯ ಕುಂಡಲೀಂದ್ರನ ತೆರದಿ ಸಂಭ್ರಮದೆ |
ತೋರಿದುದು ವಿಧುಬಿಂಬ ಕಾಮವೃದ್ಧಿಯ ಗೈವ ಸುರಧೇನುವೆಂಬಂದದೆ || ೭ ||

ಚಂದ್ರನಾಮಕನಾಗಿ ದುರ್ವರ್ಣಭಾಸುರಂ |
ಸಾಂದ್ರವಿಧುವೆನಿಸಿ ಕಮಲೋಚ್ಛ್ರೀಯಹರನು ನಿ |
ಸ್ತಂದ್ರಸಾತ್ವಿಕ ಭಾವಕರನಾಗಿ ಜಡರೂಪನೈಶಭೂಷಾಧವಳಿಮಂ ||
ಐಂದ್ರೀಮುಖೋಲ್ಲಾಸಕರನಾಗಿ ಚತುರಾಸ್ಯ |
ವೃಂದಾಂಧಕಾರಾತಿರಿಪುವಾಗಿ ಶಿವಮೂರ್ತಿ |
ಚಂದ್ರನೇನುದಯಾದ್ರಿ ಶಿಖರಭೂಷಣನೆನಿಸಿ ತೋರ್ದನಾ ಸಮಯದಲ್ಲಿ || ೮ ||

ಜೊನ್ನದ ವಿಭೂತಿಯಂ ಪೂಸಿ ತನ್ನಂಕಮಂ |
ಸನ್ನುತಿಪ ಶಿಖಿಪಿಂಛೆಗೈದು ಪೂರ್ವಾದ್ರಿಯೊಳ |
ಗುನ್ನತಸ್ಥಾನದೊಳಗಿಂದ್ರೈಂದ್ರಜಾಲಮಂ ತೋರುತಿರಲಾಗ ಶಶಿಯು ||
ಅನ್ನೆಗಂ ಶರಧಿಯುಲ್ಬಣವ ಪಾಷಾಣಜಲ |
ವನ್ನಾಶಶಕಶೃಂಗ ದ್ವಿಜರ ಸಂತಸಗಳಂ |
ಭಿನ್ನಮೆನಿಸದಲೊಂದೆ ಕಾಲದೊಳು ತೋರಿದಂ ಚಾತುರ್ಯಕುಶಲಗಳನು || ೯ ||

ರಸಿಕನೆಂಬೊಲು ಸತ್ಕಲಾಕಲಾಪದೆ ಹರಿಯ |
ಪೊಸಚಕ್ರಮೆಂಬೊಲ್ ಸುದರ್ಶನಾಕೃತಿವೆತ್ತು |
ರಸೆಯೊಳಗೆ ನಿಷ್ಕಪಟಯಂದದಿಂ ನಿಜ ಕಳಂಕಖ್ಯಾಪನಂ ಗೈವುತ ||
ಹಸನಾದ ಧನ್ವಂತ್ರಿಯಂತಮೃತಕರನಾಗಿ |
ವಸುಮತಿ ಪ್ರಿಯನಂತೆ ಮಂಡಲೋಲ್ಲಾಸದಿಂ |
ಶಶಿಯು ಬೆಳಗಿದ ಪೂರ್ವಶೈಲದಗ್ರಿಮಹೀರಮುಕುರಮೆಂಬಂತೆ ಮುದದಿ || ೧೦ ||

ಗುರುದಾರಹರನಾಗಿ ಸದ್ವೃತ್ತಕಲಶಜಂ |
ಶರಧಿಯುಲ್ಲಾಸಕರ ಸಾರಸವಿರೋಧಿಯಾ |
ಗುರು ಸತ್ಪತೀಮಹಾಗ್ರಹನಾಗಿಯುಂ ಪ್ರಪಾದೈಕತತ್ಪರನೆನಿಸುತ ||
ಮೆರೆವಂಬರೈಕವಿಲಸಿತನಾಗಿ ಹಿತದಿಂದ |
ವರಚಂದ್ರರಾಶಿಯ ಮನೋಜ್ಞವಿಧುನಾಮಕದಿ |
ಮೆರೆವುತ್ತ ಚಕ್ರವೈರದಿ ಚಂದ್ರನೇಂ ಚಿತ್ರಕರದಿ ರಾರಾಜಿಸಿದನೊ || ೧೧ ||

ಅರಿವರ್ಗಜಯಶಾಲಿ ತಾಪಸರನಾಥಸುಖ |
ಕರನು ಸೂರ್ಯಾಲೋಕ ವೃದ್ಧಾತ್ಮನಾಗಿ ಬುಧ |
ಗುರುವೆನಿಸುತಾತ್ಮಪ್ರಪಾದಾತಿಶಯದಿಂದ ಧವಳಿಮಂಜಿಮಸೂತ್ರದೆ ||
ಸುರುಚಿರದ ವಿಮಲಾಂಬರದೊಳಿರ್ದು ದ್ವಿಜರಾಜ |
ನಿರುಗೆಯಂ ಪ್ರಕಟಿಪನೊ ಚಂದ್ರನೆನೆ ಪೂರ್ವಗಿರಿ |
ಶಿರದೊಳಗೆ ಬೆಳಗಿದ ನಿಶಾಭೂತಹರಮಾದ ಮೋಹನದ ಘಟಿಕೆಯೆನಲು || ೧೨ ||

ಗುರುದಾರಹರಣಮಾಪಾಂ[1]ಯಕ್ಷ್ಮ ಜಡಜನನ |
ವರಸುಹೃದ್ಗಣ ತಾಪಹರಣ ಚಕ್ರದ್ವೇಷಿ |
ಮುರುಸಾರಸದ್ರೋಹ ಹೃನ್ಮಲಿನ ಕಾಮಾನುವೃತ್ತಿ ಚೌರ್ಯಾನುಕರಣಂ ||
ದುರಿತಂಗಳಡಸೆ ಭಯದಿಂದ ಸದ್ಗುಣಸೇವ್ಯ |
ಕರ ವಿಷ್ಣುಪದವನಾಶ್ರೈಸಿ ನೈರ್ಮಲ್ಯಸಂ |
ಭರಿತವಡೆದನೊಯೆನಲ್ ಚಂದ್ರಮಂಡಲ ಮೂಡಗಿರಿಯ ಕರಮೆಸೆವುದಾಗ || ೧೩ ||

ಸಸಿಗಲ್ಲ ಕೈಪಿಡಿಯ ಶಚಿಕರದಿ ಪಿಡಿದಿಹಳೊ |
ಸಸಿನೆ ಸಗ್ಗದಸೌಧಮುಕ್ತಾಕಲಶಮಿದುವೊ |
ಪೊಸಮದದೊಳೈರಾವತನ ಹಸ್ತಸಂಕಲಿತ ಪುಂಡರೀಕದ ಬೆಡಗಿದೊ ||
ರಸೆಯ ಜಯಿಸುವ ಮದನರಣದ ಕಂಬವೊ ನಭ |
ಶ್ರಶಿಮುಖಿಯು ಭಾಳದೊಳಗಿಟ್ಟ ಚಂದನಬೊಟ್ಟೊ |
ರಸಿಕರಾಮೋದಗೊಳುವಮೃತಕಲಶಮೊಯೆನಲ್ಮೆರೆದುದೈಂದವಬಿಂಬವು || ೧೪ ||

ರಾಜನೈತಹನೆಂಬ ಸಂತಸದಿ ಧರ್ಮಗಳ |
ನೀ ಜಗತಿಯೊಳು ಮಾಡಿ ಜಸವಗಳಿಸಲು ದಿಶಾ |
ರಾಜಮುಖಿ ಶಶಿಕಾಂತಕಲಶದೊಳಗಮೃತಮಂ ತುಂಬಿ ಪಸಿದಳಲುತಿರುವ ||
ಆ ಜರದ್ದ್ವಿಜಕುಲಕ್ಕಾತಿಥ್ಯಗೈದಳೋ |
ವೋಜೆಯಿಂದೆಂಬಂತೆ ನಿರ್ಮಲಸುಧಾಕಿರಣ |
ರಾಜಿ ದಶದಿಶೆಯೊಳಾರಾಜಿಸಿದವಾನಂದ ಧರಣಿಯೊಳು ಪೆರ್ಚುವಂತೆ || ೧೫ ||

ತಮ ನಿಶಿವ್ಯಾಜದಿಂ ಲೋಕದಾಂಧ್ಯತೆಯೆಸಗೆ |
ಸುಮನಸರ ಕೃತ್ಯಂಗಳೆಲ್ಲ ನಿಲೆ ಶಶಿಯು [2]ಧೃತ |
ಮದನಕರದಿಂದರಿದು ಲೋಕಕಾನಂದಮಂ ಕೊಡೆ ನಿಜಸುವೃತ್ತಿಯಿಂದೆ ||
ಮಮತೆಯಿಂ ಪಾಲ್ಗಡಲು ಮೇಲ್ವರಿದು ಬಂದಂತೆ |
ವಿಮಲಚಂದ್ರಿಕೆ ಪರಪೆ ನಾಲ್ದೆಸೆಯ ಸುತನಿಗುಂ |
ಕ್ರಮದಿ ತೂಪಿರಿಯಲುದುರಿದ ಕಣಂಗಳ ತೆರದಿ ನಕ್ಷತ್ರಗಣಮೆಸೆದುವು || ೧೬ ||

ಹರಿಪದಾವಾಪ್ತ್ಯೈಕತಾನ ಶಿವಮಕುಟಮಣಿ |
ಸುರುಚಿರೋಷಧಿಯರಸ ಸದ್ಗುಣಶ್ರೇಣಿವಹ |
ವರ ಸುಧಾಮಯದೇಹನುಪಶಾಂತನೆನಿಪನೀ ರಾಜ ಬಪ್ಪೆಡೆಯೊಳಾವು ||
ಹುರುಮಂಜಿಮುತ್ತುಗಳ ತುರುಬಿಂಗೆ ಕೊರಳಿಂಗೆ |
ಮೆರೆವ ಹಾರಂಗೈದು ಬೆಳ್ವಟ್ಟೆಗಳನುಟ್ಟು |
ಹರುಷದಿ ದಿಗಂಗನೆಯರೆಸೆದರೋ ಯೆನೆ ದಿಶಾನಿರ್ಮಲತೆ ಕಣ್ಗೆಸೆದುದು || ೧೭ ||

1 ಡಕ್ಷ. 2 ಗೃತ.



ಸಾರಂಗಶರನಿಧಿಯ ಪಂಕ ಮೊಲವಾಲಮುಂ |
ಪಾರಾವತಂ ಧರಾಚ್ಛಾಯೆಯೆಂಬೊಲ್ತಮಗೆ |
ತೋರಿತೋರದ ತೆರದಿ ಪೇಳ್ದಪರು ಚಂದ್ರಮನೊಳಿರುವ ಚಿಹ್ನೆಯನು ನೋಡಿ ||
ಚಾರುತರಚಂದ್ರಿಕಾಕ್ಷೀರಸಾಗರಮಧ್ಯ |
ತೋರುವೀ ಬಿಂಬ ಶ್ವೇತದ್ವೀಪಮಧ್ಯದಿ ಮು |
ರಾರಿ ಸುಖದಿಂ ಪವಡಿಸಿರಲವನ ತನುಕಾಂತಿ ಲೇಶ ಕಾಣ್ಬುಡುಗು[1]ಮೆಸೆಯೆ || ೧೮ ||

ಗಗನಮಲ್ಲಿದು ಕ್ಷೀರಸಾಗರಂ ತಾರೆಗಳ |
ಬಗೆಯಲ್ಲ ಕ್ರೀಡಿಪತಿಮತ್ಸ್ಯಗಳ ಜಂಗುಳಿಯು |
ಬಗೆವಡಿದು ವಿಧುಬಿಂಬವಲ್ಲಂ ಸಿತಾಂಬುಜಂ ಮಕರಂದಪಾನಕೆನುತ ||
ಸೊಗಸಾಂತು ಬರ್ಪ ಬಂಭರದ ರಾಸಿಯಿದಲ್ಲ |
ದೊಗೆದ ಲಾಂಛನಮಲ್ಲಮೆಂಬಂತೆ ಶಶಿಬಿಂಬ |
ಸೊಗಯಿಸಿತು ಮನ್ಮಥನ ಜೀವನೌಷಧಿಯೆಂಬ ಮಾಳ್ಕೆಯೊಳಗಚ್ಚರಿಯೆನೆ || ೧೯ ||

ನಲಿನಲಿದು ಚಂಚುವಿಂ ಪಿಡಿದು ಕಿರಣಂಗಳ |
ನ್ನೊಲವಿಂದಲೀಂಟೆ ವಚ್ಚದೊಳಿಟ್ಟು ಗಳದೊಳಗೆ |
ಲಲಿತಹಾರಂಗೈದು ಶಿರದೊಳಗೆ ಸುಮಮಾಲಿಕಾಭಿರೂಪ್ಯವನೆಸಗುತ ||
ಚೆಲುವ ಸುಧೆ ಪದಕಹಾರಂ ಚಂದನಂ ಸುರಭಿ |
ಕಲಿತ ಕುಸುಮಂಗಳಂ ಮಾಡುತ್ತಮೇಂ ಪ್ರಿಯದಿ |
ನಲಿದುವೊ ಚಕೋರಿಗಳ್ ನಾಲ್ದೆಸೆಯೊಳುಂ ಪರಿವ ಚಂದ್ರನ ಸುಧಾಕರಗಳಂ || ೨೦ ||

ಮನಸಿಜನ ಕೀರ್ತಿಪಠನಂ ಶಂಬರಾಂತಕನ |
ಘನಶೌರ್ಯದುಘ್ಘಡಣೆ ಮನ್ಮಥಮಹಾರಾಜ |
ನನುಕರಿಪ ಪೂಜನಂ ಮಕರಕೇತನಭಜನೆ ಕಂದರ್ಪನಾರಾಧನೆ ||
ಮನೆಮನೆಗಳೊಳು ಪೆರ್ಚಿತಾಗ ಚಂದ್ರಮನ ನವ |
ತನಿವೆಳಗು ಪಸರಿಸಲು ಮಾನ್ಮಥೀಯೋಪನಿಷ |
ದನುವರಿತು ಪೇಳ್ವರೆಳಸಿದರಲ್ಲಿಗಲ್ಲಿಗಾಚಾರ್ಯರತಿಮೋದದಿಂದ || ೨೧ ||

ಆಗ ಚಂದ್ರಮನ ಚಂದ್ರಿಕೆ ಜಗದ್ರೂಪಮೆನ |
ಲಾಗ ಕಳ್ತಲೆ ಪೋಗಿ ತೊಳೆದ ಕನ್ನಡಿಯಂತ |
ದಾಗಲಾ ಪವನಭವ ನಿಟ್ಟಿಸಿದ ನಾಲ್ದೆಸೆಯ ಕರತಳಾಮಳಕಮೆನಲು ||
ಭೋಗೋತ್ಸವಂಗಳಿಗೆ ಪೇಟೆ ಪರಿಮಳವಾಟ |
ನಾಗರೀಕರಧಾಟ ನವರಸಾಸ್ಪದಮೇಟ |
ಯಾಗಾರಮೆನಿಪ ವೇಶ್ಯಾವಾಟ ಕಂಗೆಸೆದುದಾನಂದಕಂದಮೆನಲು || ೨೨ ||

ಕಲಿಧಾತುವೆಂಬಂತೆ ಕಾಮಿತಾರ್ಥಪ್ರದದಿ |
ಲಲಿತಸುಖಮೆನೆ ಮಹಾಸದ ವಿಲಾಸದೆ ತಪೋ |
ವಿಲಸಿತೋದ್ಯಾನದೊಲ್ ಕೃಪಣಸಂಗವಿವರ್ಜ್ಯಪೂರ್ಣಿಮಾಶರಧಿಯಂತೆ ||
ಲಲಿತವೇಲಾಪೇಕ್ಷಮಾಗಿ ತೊಳಲುವ ಹಂಸ |
ಕುಲದಂತೆ ಮಾನಿಸಪ್ರಸರಣವಿನೋದಕರ |
ಚೆಲುವ ಶರದಾಗಮನದೊಲ್ ಸಿತಾಭ್ರಚ್ಛಾಯದಿಂದೆಸೆದು ಸೂಳೆಗೇರಿ || ೨೩ ||

1 ಲೆಸೆಯೆ.

ಶುಕವಾಗ್ವಿಲಾಸಕರಮುಕ್ಷಕ್ರೀಡಾಯೋಗ್ಯ |
ವಿಕಸಿತಭುಜಂಗಯುತನಿರ್ಭಯವಿಹಾರಕರ |
ಸುಕುಮಾರ ಶೃಂಗಾರರಸಭರಿತಮಾಗಿರ್ದು ವೀರಾಯಿತಾಡಂಬರಂ ||
ಪ್ರಕಟಿತಾವಾರಣಮದಾಗಿ ವಾರಣದಾನ |
ವಿಕಸಿತಾಂಗಣಮಚಿರಮಣಿತೋಜ್ವಲಾನಂದ |
ರಕುತಿಯೆನಿಸುವ ಸದಾಮೋದಕರದಿಂ ತೋರ್ದುದಾಗ ವೇಶ್ಯಾವಾಟಿಯು || ೨೪ ||

ಶೃಂಗಾರರಸಪೀಠ ಸುವಿಲಾಸಗಳಿಗೆ ಮಠ |
ಸಂಗೀತಗಳ ನಿಲಯ ಸರಸಜನರಾಲಯ ಭು |
ಜಂಗರಿಂಗಗ್ರಹಾರಂ ನರ್ತನಕೆ ಗರುಡಿ ಕೃಪಣಹಲಹಲದ ಮರಡಿ ||
ತುಂಗತಾಪಸಮಾರ್ಗದುಃಶಕುನ ಸತ್ಸಂಗ |
ಭಂಗೀಕೃತಾಗಾರ ನಾನಾದಿಗಂತ 1ಸ್ವ |
ರ್ಣಂಗಳಾಕರ್ಷಣಂ ಗೈವ ವಿದ್ಯೆಯೊ ಯೆನಲ್ ಸೂಳೆಗೇರಿಯು ತೋರ್ದುದು || ೨೫ ||

ಅತಿಕಾಯಸಂತೋಷಮಿಂದ್ರಜಿದ್ಭೋಗ ಸಂ |
ತತವಿಭೀಷಣಮೋದ ಶುಕವಿನೋದಾಸ್ಪದೋ |
ದ್ಧತಪ್ರಹಸ್ತೋದ್ಭ್ರಮಣಮಕ್ಷಾನುಮೋದಕರಸುಮನೋರಥಾಟನದಲೆ ||
ಅತಿಶಯದ ಕಂಪನಶ್ರೀಯುತಂ ಮಾಲ್ಯವತ |
ಯುತಮೆನಿಪ ಪ್ರಮದಾವನೋತ್ಕರ್ಷಮಂ ನಗರ |
ದತುಲಸರ್ವಸ್ವಮೆಂಬಂತೆ ವೇಶ್ಯಾವಾಟ ಕಂಗೆಸೆದುದನಿಲಭವಗೆ || ೨೬ ||

ರವಿಬಿಂಬಮೆಂಬಂತೆ ವಾರುಣೀರಾಗದಿಂ |
ಪ್ರವಿಲಸತ್ಸಂಸಾರದಂತಕ್ಷ ಖೇಲನದೊ |
ಳವಿರಳದ ವೈರಾಗ್ಯದಂದದೆ ನಿರಾತಂಕ ವಿಲಸಿತಾನಂದದಿಂದೆ ||
ನವನಾಸ್ತಿಕಾಗಮು2ಮದಾನಾಸ್ತಿಕೋಚ್ಚರಣೆ |
ಪ್ರವಿಮಲೋದ್ಯಾನದೊಲ್ ವಿಟಪಾನುಮೋದಕರ |
ಕವಿಕಾವ್ಯಮೆಂಬೊಲರ್ಥಾನುಕೂಲಿತ ಶಬ್ದಕಲಿತಸ್ತ್ರೈಣಂ ತೋರ್ದುದು || ೨೭ ||

ಕಲಧೌತರಾಶಿಗಳ್ ವಿಮಲಕ್ಷ್ಮಾಮಾದಿಗಳ್ |
ಕಲಹಂಸಕನಿನಾದ ಕೃತಕಬಹುಳಾಮೋದ |
ಕಲಿತಮದುಪಾಯಿಕಲಕಲಕೈತರಲ್ಪ್ರಚುರಪರಭೃತಾಡಂಬರಗಳು ||
ಚೆಲುವ ಪರ್ಯಂಕಿತಾಸ್ಪದ ಮಣೀಮಯಶೋಭೆ |
ಲಲಿತರತಿರಮಣೀಯಚರಿತೆಯಿಂ ,ಗಾಣಿಕ್ಯ |
ಲಲನಾಜನಂ ತೋರ್ದುದಖಿಲಜನತಾಂಧಕಂ ಖನಿಯೆನಿಸಿ ಜೆಳಗುವಂತೆ || ೨೮ ||

ನಿರತಪ್ರಬಂಧಾನುಸಂಧಾನದಿಂದ ಸಂ |
ಭರಣಿತಪುಮರ್ಥಸಂಪಾದನಾಪರರೆನಿಸಿ |
ವಿರತಿಯಂ ಪ್ರಕಟಿಸುತ ಸುರತಾನುಕೂಲ ಪರವಶತೆಯನ್ನಾಂತು ಬಳಿಕ ||
ಪರಿವೃತಭಿಮಾನಮಂ ಸರ್ವಸಮವೃತ್ತಿಯಂ |
ಧರಿಸಿದ ಮಹಾಯೋಗಿಗಳ ತೆರದಿ ವೇಸಿಯರ |
ನೆರವಿ ಕಂಗೊಳಿಸಿದುದು ಮಾರನಂಬಿನ ಮೊನೆಯ ಮಗುಳೆ ಮೊನೆಗೈವಂದದೆ || ೨೯ ||

1 ಪೊನ್ನಂ. 2 ಲಶೀ.



ಅಸುರಭಾವದಲಿರ್ದು ಸುರತಾನುರಾಗಿಗಳ್ |
ಜಸಮಾಂತಪುಣ್ಯಜನ ಪುಣ್ಯಜನ ಸೇವಿತದೆ |
ಪೊಸಪಲ್ಲವಾಲಂಕೃತೆಯರಾದೊಡಂ ತಿಳಿದಪರಮೂಲ್ಯಹಾರಿಗಳೆನಿಪರು ||
ಉಸುರಲಪ್ರತಿಬಂಧಯುತೆಯರೆಂದೆನಿಸಿರ್ದು |
ರಸೆಯೊಳಂ ಪ್ರತಿಬಂಧ ಕೈಲಾಸದತಿಶಯದೊ |
ಳೆಸೆವ ವಾರಾಂಗನಾ ವಿಸರಮಂ ನಿಟ್ಟಿಸುತ ವಿಸ್ಮಯದಿ ನಡೆದನಾಗ || ೩೦ ||

ಶ್ವಶುರ ಬಡಬಾನಲಂ ಶ್ವಶ್ರುಬೋಧಿಪರು ಕರಿ |
ಕಸರು ಕರ್ಕಟಕಾ ನನಾಂದೃಭೀಕರ ರೂಪ |
ಮೆಸೆವ ದೇವರ ತಿಮಿಂಗಿಲ ಬಂಧು ಶೈವಾಲಮಪಕೀರ್ತಿ ಪಂಕಮಾಗಿ ||
ಪೊಸ ಶೀಲಮೆನಿಸುವ ಶಿಲೋಚ್ಚಯದ ಸಂಸಾರ |
ವೆಸರ ವಾರ್ಧಿಯ ತಳೆದು ಸುಖದಿ ಜೀವನ್ಮುಕ್ತ |
ದೆಸೆಯ ಸಂಪಾದಿಸಿದರಂತೆಸೆವ ಪ್ರತ್ಯಗ್ರಗಣಿಕಾಸಮೂಹಮೆಸೆಯೆ || ೩೧ ||

ಅತಿಮನೋಹರಮಾದ ಕೇರಿಯಂ ಕಂಡು ಮ |
ತ್ತತುಲಸಂತಸದಿಂದ ನೋಡಿ ಬಹೆನೆಂದೆನುತ |
ಮತಿಯುತಂ ಪ್ರಾಸಾದವಿಳಿದು ನಿರ್ಮಲಚಂದ್ರಿಕಾಮೋದಗೊಳುತ್ತೈದಲು ||
ಪ್ರಥಿತಮೃಗಮದಲಲಾಮುವನಿಟ್ಟು ಗಳದೊಳಗೆ |
ಜೊತೆಗೊಳಿಸಿ ಬಾವನ್ನಮಂ ಮುಖಾಬ್ಜದಿ ವೀಟ |
ಯತುಲಸೊಗಸಂ ಬೀರ್ವ ವಿಟನಂತೆ ಮುಂಬರಿದು ತಂಬೆಲರು ತೀಡಿತಾಗ || ೩೨ ||

ನಸುನಗೆಯ ಜೊನ್ನದಿಂದಿನಮುಖಾಬ್ಜವ ನಗಿಸಿ |
ಪೊಸಭೂಷಣದ ಬಿಸಿಲಿನಿಂದಕ್ಷಿಚಕ್ರಗಳ |
ಹಸನಾಗಿ ನಲಿಸಿ ನಾಸಾಚಂಪಕವ1ನೋಳ್ದ ವಿಟರು ಪಿಂದಿರುಗದಂತೆ ||
ಪೊಸಮುಸೆಯ ಕಣೆಗಳಂತಲ್ಲಲ್ಲಿ ಕಣ್ಗೆಸೆವ |
ಸಸಿವದನೆಯರ ತಂಡತಂಡದೊಳು ನೋಡುತ್ತ |
ಬಿಸಜಾಸ್ತ್ರ ಹರ ವಿಚಿತ್ರಗಳಿಗಚ್ಚರಿಗೊಳುತ ನೋಡುತ್ತ ನಡೆದನಾಗ || ೩೩ ||

ನೋಟಗಳೊ ಕುಸುಮಶರನಸ್ತ್ರದುದ್ಘಾಟಗಳೊ |
ಬೇಟಗಳೊ ಮುಂದರಿಯದಲರಂಬನಾಟಗಳೊ |
ಸೂಟಿಯರಿದಡಿಗಡಿಗೆ ಸೂಚಿಸುನ ಮಾತುಗಳೊ ಸುಧೆಯ ಜೈವಾತವಗಳೊ ||
ಕೂಟರತಿರಂಭೆಮೇನಕೆಕಳಾವತಿಯರಂ |
ಮೀಟೆನಿಪುದೆಂದು ವಿಟಜನರು ಮೆಚ್ಚುವೊಲಾ ವ |
ಧೂಟಿಯರು ನಿಜನಿಲಯಮುಂಗಡೆಗಳಲಿ ತೋರ್ದರಾ ಸ್ಮರನ ಗಜಗಳೆನಲು || ೩೪ ||

ತೋರುವುದು ಕಾರ್ಮುಗಿಲೊ ಸೋರ್ಮುಡಿಯೊ ನೇತ್ರಗಳೊ |
ಮಾರಶರಗಳೊ ಚಂದ್ರಬಿಂಬಮೋ ನಗೆಮೊಗಮೊ |
ಚಾರುತರಸೌವರ್ಣಕಲಶಗಳೊ ಪೇರುರೋಜಂಗಳೋ ಕೈರವಗಳೊ ||
ನಾರಿಯ ಕಟಾಕ್ಷಗಳೊ ಕುಂಭೀಂದ್ರಕುಂಭಗಳೊ |
ತೋರಜಘನಂಗಳೊ ರಸಾಲಪಲ್ಲವಗಳೋ |
ಚಾರುರದನಚ್ಛದಗಳೋ ಕಾಣಗೂಡದೆನಲೆಸೆದರಾ ಮೋಹಿನಿಯರು || ೩೫ ||

1 ನೋಡ್ದ.

ಮೊಗದೊಳಗೆ ನಸುನಗೆಯು ಗಳದಿ ಕೊಂಕುವ ಮಾತು |
ಸೊಗಸೀವ ಸೌರಭದ ತೌರೆನಿಪ ನಿಟ್ಟುಸಿರು |
ಬಗೆಬಗೆಯ ಮೋಹನಂಗಳ ಚೆಲ್ಲದಂತಪಾಂಗಪ್ರಭೆಯು ಥಳಥಳಿಸುತ ||
ನಗಿಸುತ ಕುವಾಲಗಳ ನೀರಜಗಳರಳಿಸುತ |
ಮಿಗೆ ಯೌವನಸ್ತ್ರೀ ಸಮೃದ್ಧಿಯಂತಂಗಜನ |
ಬಗೆಯೊಳುದ್ಭವಗೈಪ ಭಾಮಿನಿಯಳಾ ಕೇರಿಯೊಳು ತೋರ್ದಳಚ್ಚರಿಯೊಳು || ೩೬ ||

ನಗೆಮುಳಿಸು ನಸುನೋಟ ಗಮಕ ಮೆಚ್ಚಿಗೆ ನಲವು |
ಮಿಗೆ ಸಂಪು ಮುಗುಳಿಂಪು ಚಾತುರ್ಯಮೌದಾರ್ಯ |
ಸೊಗಸು ಮೂದಲೆ ರೀತಿಯುತ್ಸಾಹವೊಯ್ಯಾರಚಾಟು ಮೇಣ್ ಚಮತುಕೃತಿಯು ||
ಬಗೆಬಗೆಯ ಬೆಡಗು ಬಿನ್ನಣ ಬೆಸೆ ಚಮತ್ಕರ |
ದೊಗುಮಿಗೆಯ ತೋರಿ ನೋಡಿದರು ಪಿಂದಿರುಗದಂ |
ತಗಣಿತ ಮನೋರಮ್ಯಮಾದ ವಾರಾಂಗನಾತತಿಯ ನಿಟ್ಟೆಸಿದನಾಗ || ೩೭ ||

ಸೊಗಯಿಸುವ ವೀಥಿಯೊಳು ಶೃಂಗಾರರಸದಂತೆ |
ಬಗೆಬಗೆಯ ಭೂಷಣಗಳಿಟ್ಟು ಮೃಗಮದ ಬೊಟ್ಟ |
ಮೊಗದೊಳಗಲಂಕರಿಸಿ ಮುದದಿಂದ ಪೊಂಬಟ್ಟೆಯುಟ್ಟು ವೀಳೆಯವ ಪಿಡಿದು ||
ಸೊಗಸುಗಾರರ ಕೈಯಲೊತ್ತೆಯಂ ಪಿಡಿಯೆ ಬಂ |
ದೊಗುಮಿಗೆಯ ತಲೆವಾಗಿಲಲ್ಲಿ ನಿಂದೀಕ್ಷಿಸುವ |
ಮುಗುದೆಯಂ ನೋಡಿ ನಸುನಗುತ ಮುಂದರುಗಿದಂ ಮತ್ತೊಂದು ನಿಲಯದೆಡೆಗೆ || ೩೮ ||

ಬಳಲುಮುಡಿ ಬಟ್ಟಮೊಲೆಗಳ್ ಬೆದರುಗಂಗಳುಂ |
ಸುಳಿಗುರುಳು ತೆಳ್ವಸಿರು ಬಡನಡುವು ನಡುಗೆ ಕರ |
ನಳಿನಂಗಳಂ ಬೀಸಿ ತೊದಲ್ನುಡಿಗಳಿಂದಿಂಪಿನಿಂ ವಿಟರನಾಗ ಕರೆವ ||
ಕಳೆವೆತ್ತ ಕಾಮಿನಿಯ ಕಂಡೊರ್ವ ನಾಗರಿಕ |
ಬಳಲಿ ಮದನಾಸ್ತ್ರದಿಂದ್ಯೆತಂದು ದಾಡಿಮಾ |
ಫಲಗಳಂ ಕೈಗಿತ್ತ ತ್ವದ್ರದನಕೆಣೆಯಹವೆ ನೋಡೆಂದು ನಸುನಗುತಲೆ || ೩೯ ||

ನಿಡಿದಲರುಗಂಗಳುಂ ನೀಳ್ದರದ ಜಡೆಕರದಿ |
ಪಿಡಿದಂಬುಜಾತಮುಖಗಂಡಮಂಡಲಗಳಿಗೆ |
ತೊಡೆದಿರ್ಪ ಜವ್ವಾದಿ ಸುರಭಿಳಿತಕರ್ಪುರದ ವೀಳೆಯವ ಚಪ್ಪರಿಸುತ ||
ನುಡಿವ ಗಿಳಿ ಮುಂಗೆಯ್ಯಲಡಿಗಡಿಗೆ ಮೂದಲಿಕೆ |
ಗೊಡುತ ಮೃದುವಾಣಿಯಿಂ ಪೋಷ ವಿಟರಂ ಕರೆವು |
ತೊಡಬಡಿಸುತಿರುವ ಮೋಹನವನುಂ ನೋಡುತ್ತ ನಡೆದನೊಲಿದಾ ಕ್ಷಣದೊಳು || ೪೦ ||

ಸರಗೈದು ಪೇರುರದೊಳಿಟ್ಟು ತರುಣಾಂಗುಳಿಗ |
ಳುರುಚಲನೆಯಿಂದ ಲಲಿತಂ ಶಂಕರಾಭರಣ |
ಸರಸದೇಸೀಯ ಮೋಹನಗೌಳರಾಮಕಲಿಕಲ್ಯಾಣಿರಾಗಂಗಳ ||
ಸರದಾಗುಹೋಗು ಸಂಚಾರಿ ವಿಭ್ರಮಣೆಗಳ |
ಪರಿಪರಿಯ ಕಲ್ಪನೆಗಳಂಟೆ ತ್ರಿಸ್ಥಾನಂಗ |
ಳರಿತು ವಲ್ಲಕಿಯ ಬಾಜಿಸುವ ಮೋಹನಕಣಿಯಳೊರ್ವ ನೀಕ್ಷಿಸಿದನೊಲಿದು || ೪೧ ||



ತೊಳಪ ಬೆಳ್ದಿಂಗಳೊಳು ಮಣಿಮಯಾಂಗಣಮಧ್ಯ |
ದೊಳು ಚಂದ್ರಕಾಂತ ಕುಂದಣಿಕೆಗಳನಿಟ್ಟು ಥಳ |
ಥಳಿಪ ಬಜ್ಜರದೊನಕೆಗಳ ಪಿಡಿದು ನೆರೆದಾ ವಿದಗ್ಧೆಯರು ಸಂತಸದೊಳು ||
ನಳಿನಾಸ್ತ್ರನತಿಶಯಂ ಶಶಿಗೆ ಸಂತೋಷಕರ |
ಮೆಳೆಯ ತೆಂಬೆಲರಿಗೈಸಿರಿ ಬಸಂತಗೆ ಸೌಖ್ಯ |
ಬೆಳೆಯಲೆಂದಾಗ ಪ್ರಾರ್ಥನೆಗೈದು ಬೆಳ್ದಿಂಗಳಾಟಕೆಳಸಿದರಾಗಳೆ || ೪೨ ||

ನಸುನಗೆಯ ಕಿರುನೋಟ ಲಲ್ಲೆ ವಿಭ್ರಮದೋಜೆ |
ಪುಸಿ ಮುಳಿಸು ಮೂದಲಿಕೆ ಮುದ್ದು ಕೊಸರುವ ಮೋಡಿ |
ಪೊಸತೆನಿಪ ರಸಕಲಿತನುಡಿಗಳಿಂದಿನಿಯರಂ ಬಾಗರೆದು ಭೇದಮುಳಿದು ||
ಕುಸುಮಾಸ್ತ್ರಪೂಜೆಗಳ ಕುಶಲದಿಂ ಮಾಡುತಿಹ |
ಸಸಿಮೊಗದ ಸೂಳೆಯಂಗಣದೊಳಗ್ಸುರಧೇನು |
ಸಸಿನೆ ನೆಲಸಿಹುದೆನುತ ಪಾಡುತ್ತ ಬೆಳ್ದಿಂಗಳಂ ತಳಿಸುತಿರ್ದರಾಗ || ೪೩ ||

ಮದನಶಾಪದಿ ನೆರೆಯಲ್ಯೆತಂದ ವಿಟಚಿತ್ತ |
ದುದಯಮಂ ತಿಳಿದಿದಿರ್ವಂದು ಬರಸೆಳೆದಪ್ಪಿ |
ಚದುರಿಂದ ಗಲ್ಲಗಳ ಚುಂಬಿಸುತ. ಕರೆದೊಯ್ದು ಮಣಿಮಂಚದೆಡೆಯೊಳಿಟ್ಟು ||
ಹೃದಯತಂಪೆನಿಸುವಧರಾಮೃತವನಿತ್ತು ಸ್ಮರ |
ಕದನದೊಳ್ಸಂತಸಂಗೊಳಿಸುವ ವಿದಗ್ಧೆಯರ |
ಸದನ ಲಕ್ಷ್ಮೀಸದನಮಲ್ತೆ ಸುಮ್ಮೀಯೆನುತ ಪಾಡ್ದರಾನಂದದಿಂದ || ೪೪ ||

ಬೆಲ್ಲಿಸುತೆ ಸವಿನುಡಿಗಳಿಂದ ಮಾಯಗಳೆಸಗಿ |
ಮೆಲ್ಲಮೆಲ್ಲನೆ ಸಾರಿ ಬಾಗರೆದು ಬರಿಮಾತಿ |
ನಲ್ಲಿ ನೆರೆಯಲ್ಕೆಳಸಿ ಬಹ ಕಪಟವಿಟರುಗಳ ನಿಷ್ಪಣಮೆನುತ್ತಮರಿದು ||
ಲಲ್ಲೆಯಿಂ ಬಿಸಿಲಿಗರಿಸಿನ ತೊಲಗಿದಂತವರ |
ನೆಲ್ಲಿಯುಂ ಪೊದ್ದದ ವಿದಗ್ಧೆಯರ ಮಂದಿರಗ |
ಳಲ್ಲಿ ಸಿರಿಜವ್ವನಗಳೊಪ್ಪಿರವೆಯೆನುತಾಡಿ ಪಾಡುವರು ಕ್ರೀಡೆಗಳಲಿ || ೪೫ ||

ಬಲಶಾಲಿಯಲ್ಲದತಿ ಚತುರತೆಯ ತಿಳಿದಿಲ್ಲ |
ದೊಲಿಸಿದಂದದಿ ಬೇಡಿದುದನಿತ್ತು ಶಾರೀರ |
ಕಲಸಿಕೆಯನೀಯದತಿ ಮುಗ್ಧರೊಡನಾಟದಿಂ ಮನಬಂದ ತೆರದಿ ಪೊನ್ನಂ ||
ಸುಲಿದು ಸುಗ್ಗಿಯ ಕುರಿಯನೊಲಿಸಿಕೊಂಡಿಹಜಾಣೆ |
ನೆಲದಿ ಸೂಳೆಯರ ಮಾಣಿಕಮಲ್ತೆ ಪುಷ್ಪಶರ |
ನಲಗಿನಂತೆಸೆದಾವ ಕಾಲದೊಳ್ಸಂತಸದೊಳಿರಲು ಸುಮ್ಮೀಯೆಂದಳು || ೪೬ ||

ಇಂತು ಬೆಳ್ದಿಂಗಳಾಟದಿ ಸೂಳೆಗಾರಿಕೆಗ |
ಳಂತರಂಗಗಳ ಮುಗ್ಧೆಯರಿಗರುಪುತ ತಮ್ಮ |
ಸ್ವಾಂತದಾನಂದದಿಂ ಖೇಲನಂಗೈವ ನಾರಿಯರನಿಟ್ಟೆಸುತಾಗಳೆ ||
ಮುಂತಕಡಿಯಿಡಲೊಂದು ಮಣಿಮಯದ ಸಜ್ಜೆಯೊಳು |
ಕಂತುಸಮರದಿ ಬೆರೆತು ಕಡುಮೂರ್ಛೆಯಾಂತಿರುವ |
ಕಾಂತನಂ ಮುಂಜೆರಗಿನಿಂದ ಬೀಸುತಲೊರ್ವೆ ಸೈಪಿಡುವುದಂ ಕಂಡನು || ೪೭ ||

ಶಿಖರಿದಶನಗಳೊತ್ತಮೊತ್ತೆ ಚಂದನದಿಂದ |
ನಖರೇಖೆಗಳನ್ನೈಣಮದದಿಂ ವಷಟ್ಕಾರ |
ಸಖತೆಯಾಂತಿಹ ಬಾಸುಳಂಗಳಂ ಕಪ್ಪುರದೊಲೊರಸಿ ಸುಳಿಗಾಳಿಯಿಂದ ||
ಮುಖದಿ ಬೆಮರಿಡುಕನಾರಿಸುತ ತನ್ನಯ ಪ್ರಾಣ |
ಸಖಿಯ ಕರದಿಂದಮುಪಚರಣೆಗೈಸುತ ನಿಚ್ಚ |
ಸುಖಿಯಳಂ ಕಂಡು ಮುಂದರುಗಲೊಂದೆಡೆಯಲ್ಲಿ ನಡೆವ ಚೆಲುವಂ ನೋಡ್ಪನು || ೪೮ ||

ಮೂದಲಿಸೆ ಮಾರ್ನುಡಿಯೆ ಮುದ್ದಿಡಲ್ ಮುಖವ ಕೊಡೆ |
ಸಾದರದೊಳಪ್ಪಿದಡೆ ತನುವೀಯೆ ಸಂತವಾ |
ಮೋದದಿಂದೀಕ್ಷಿಸಲು ಮೊಗವೆತ್ತಿನೋಡೆ ಗೃಹಕೈದಗೊಡೆ ಬಾರದಿರಲು ||
ದಾದಿಯತನಟ್ಟೆ ಕರಸುವೆ ತಿಳಿದು ತಿಳಿಯದೀ |
ಹಾದಿಯಂ ಪಿಡಿಯೆ ಸೊಗಸೀವುದೇ ಸೂಳೆಯರಿ |
ಗೀ ಧರಾತಳದೊಳಾರೊಲಿವರೆನ್ನುತ ಸುತೆಯನೀಕ್ಷಿಸಿದಳಬ್ಬೆಯುಬ್ಬೆ || ೪೯ ||

ಇನಿನುಡಿಯ ಪಳಿಯದಿರು ವಿನಯಂಗಳಳಿಯದಿರು |
ಮುನಿಸ ನಸುದೋರುತಿರು ಮುದ್ದುಗೊಸರುತ್ತಮಿರು |
ಕನಕಮಣಿಪೊನ್ನುಗಳನೊತ್ತೆಯಿತ್ತಲ್ಲದೊಡೆ ನಗೆನುಡಿಗಳಾಡದಿರಲು ||
ಅನಿತರೊಳು ತನುತನುಗಳಂ ಸೋಂಕಲೀಯದಿರು |
ಮನವೊಲಿದು ನೆರೆಯದಿರು ಮಮತೆ ವೆಗ್ಗಳಿಸಿ ನಿಜ |
ತನುವ ನೋಯ್ಗೊಡದಿರೆನುತಾಗ ಮುದಿಕುಂಟಣಿಯು ಬೋಧಿಸಿದಳಾತ್ಮಭವೆಗೆ || ೫೦ ||

ಅಧರಮೋ ಮಾಣಿಕಮೊ ಮಧುರಿಮಾನಕಪೋಲ |
ದುದಯಮೋ ಕೈಪಿಡಿಯೊ ಮಾತುಗಳೊ ಗಿಳಿನುಡಿಯೊ |
ಚದುರಕಂಠಸ್ವನಮೊ ಕಲಕಂಠಗಾನಮೋ ನೋಟ ಮನ್ಮಥನಾಟಮೊ ||
ಸುದತಿಯೋ ಸುರವಧುವೊ ಕಂಡಾವನಾದೊಡಂ |
ಹೃದಯ ಕಂಪಿಸದೆಂತು ತೊಲಗುವುದೆನುತ್ತಮಾ |
ಮುದಿಸೂಳೆ ಸುತೆಯ ಪೊಗಳುತ್ತಿರ್ದಳೊಂದೆಡೆಯಲಚ್ಚರಿಯೊಳನುದಿನದೊಳು || ೫೧ ||

ಕಡೆಗಣ್ಣ ಪಾಶಮಂ ತೊಡರಿಸುತ ವಿಟಮೃಗಗ |
ಳೆಡೆಯಾಡಿದಾಕ್ಷಣದೊಳೆರಗುವಂದದಿ ಮಾಡು |
ತೊಡನೆ ನಿಲಯದೊಳಿರ್ದ ಸರ್ವಸ್ವನೊಪ್ಪಗಿಸಿ ಜಾತ್ಯಭಾವದಲಿ ದಿನವ ||
ಕಡೆಗೊಳಿಸುವಂತೆನ್ನ ತನುಜೆ ಸಿಂಗರದೋಜೆ |
ಬೆಡಗಿನಿಂದೆನುತೊರ್ವೆ ಸಖಿಯೊಡನೆ ಸಂತಸದಿ |
ನುಡಿವುತಿರ್ದಳದೊಂದು ತಾಣದೊಳ್ಪಲ್ಲವರ ಚಿತ್ತ ತಲ್ಲಣಗೊಂಬೊಲು || ೫೨ ||

ತುಡುಕಲೇ ಸ್ಮರನಂಬು ಕಡೆಯ ಕಂಗಳುರೋಜ |
ಕೊಡವೆ ಮಗುಳಮೃತ ಪೊಂಗೊಡಗಳಿಂಗಧಿಕತೆಯ |
ಗಿಡವೆ ಸವಿನುಡಿ ಗಿಳಿಯ ಪಡೆಗೆ ಸವಿಯೂಟಮಂ ಚಂಚಲಕ್ಕೆಡೆಯಾಟಮಂ ||
ತೊಡರಿಸದೆ ತನುಕಾಂತಿ ಬಿಡುವುದೇ ಮತ್ಸ್ಯತೆಯ |
ಬೆಡಗ ನಿಟ್ಟೆಸುತಾವ ವಿಟನಾದರುಂ ಪಜ್ಜೆ |
ಯಿಡುವನೇ ಮೋಹನದ ಕಣಿಯಳೆಂದೊಂದೆಡೆಯ ನುಡಿದಳ್ ಜರಜ್ಜರಠೆಯು || ೫೩ ||



ಪಿಡಿನಡುವು ತರುನಕ್ಕೈಪಿಡಿಗಂಡಮಂಡಲಗ |
ಳಡಿದಾವರೆಯು ಸ್ಮರನ ಪೊಂಗಹಳೆ ಜಂಘೆಗಳೊ |
ಪೊಡವಿ ಜಘನಂ ತಳೋದರ ಶ್ರೀಫಲೋಪಮಿತ ಕುಚಕಂಬುಕಂಠಂಗಳೊ ||
ಬೆಡಗ ನಿಟ್ಟೆಸದೆ ಮುಂದಡಿಯಿಟ್ಟರೊಂದರಿಯೆ |
ಕುಡಿನೋಟಮಾತ್ರ ಸೋಂಕಿದರೆ ಮುಂದ್ಯೆದುವನೆ |
ಪೊಡವಿಯೊಳಗೆನ್ನ ಸುತೆಯೊಡಗೂಡಿದವನಿಂದ್ರನೆನುತ ನುಡಿದಳದೊರ್ವೆಯು || ೫೪ ||

ಬಿಗಿದು ಬಾಹಾರಜ್ಜುಗಳಲಿ ಕೂರುಗುರ್ಗಳಿಂ |
ಸಿಗಿದು ಜಡೆಯಿಂ ಪೊಡೆದು ಗಳರವದ ಮಂತ್ರಗಳ |
ಬಗೆಬಗೆಯೊಳುಚ್ಚರಿಸುತಡಿಗಡಿಗೆ ನಸುನಗೆಯ ಬಸುಮಮಂ ತೂಪಿರುವುತೆ ||
ಮಿಗೆ ಹಸ್ತತಾಡನಗಳಿತ್ತು ಸ್ಮರಭೂತಮಂ |
ನಗಿಸಿ ನುಡಿಸುತಲಿ ಪೋಗಾಡಿಸಿದಳೊಂದೆಡೆಯ |
ಸುಗುಣೆ ನಿಜವಲ್ಲಭಗೆ ಸುಖರಸಾನಂದಾಬ್ಧಿ ಪೆರ್ಚೆ ಮುಂಬರಿವಂದದಿ || ೫೫ ||

ದ್ವಿಜರಾಜಮುಖಿಯಾನು ನೀಂ ಭುಜಂಗನೆನಲ್ಕೆ |
ತ್ಯಜಿಸಿದೆಂ ಭಯಗೊಂಡು ರಾಹುಚಂದ್ರಗೆ ಮೈತ್ರಿ |
ಸೃಜಿಸಿ ತೋರ್ದಪುದುಂಟೆ ತೊಲಗೆನಲ್ಮತ್ತಮಂ ನಗುತೆಂದ ಮಮತೆವೆತ್ತು ||
ರಜನಿಮುಖಚಂದ್ರಮಗೆ ಶತ್ರುವೇ ರಾಕೇಂದು |
ತ್ಯಜಿಸಿರ್ಪುದಜ್ಞಾನಿ ಮಿತ್ರಶತ್ರುವು ತಿಳಿಯೆ |
ಭುಜಗವೇಣಿ ಭುಜಂಗನಿಹೆ ಭೇದಮೇನುಂಟು ಕೈಗಂಟ ನೋಡೆಂದನು || ೫೬ ||

ಮಾರನೃಪತಿಯ ತೇಜಿ ಭೂರಿಮೋಹನರಾಜಿ |
ಹೀರಖಚಿತದ ಬೊಂಬೆ ಚಾರುಪೂವಿನ ತೊಂಬೆ |
ತೋರಮುಡಿಯ ವಧೂಟಿ ನಾರಿಯರೊಳುಂ ಮೇಟಿ ಮುಗುಳ್ನಗೆಯ ಮೋಹನಕಣಿ ||
ಮಾರರತಿಯುತ್ಪನ್ನೆ ಸ್ಮರಕಲಾಸಂಪನ್ನೆ |
ಧಾರಿಣಿಯೊಳರೆನಿಮಿಷ ನಿನ್ನೊಡನೆ ಬೆರೆದು ಸುರ |
ವಾರಾಂಗನಾಪುರವ ನೆನೆವೆಯೆಂದೆನುತೊರ್ವೆ ಪೊಗಳ್ದಳಾತ್ಮಜೆಯನಾಗ || ೫೭ ||

ಪೆರೆನೊಸಲ ಚೆಂದುಟಿಯ ನುಣ್ದನಿಯ ತೆಳ್ಗದಪಿ |
ನುರುಮೃಗಾಯತನಯನ ಬಲ್ಮೊಲೆಯ ಬಾವನ್ನ |
ಪರಿಮಳಾಂಗದ ಮುಗ್ಧೆಯರೆನಿಮಿಷ ನಿನ್ನೊಡನೆ ಸಲ್ಲಾಪಕೆಳಸಿದಾತ ||
ಸ್ಮರನ ಬೆಡಗಂ ಜಯಂತನ ಚತುರವೈಶ್ರವಣ |
ತರಳನ ವಿಲಾಸಮಂ ತಕ್ಕಿಪನೆಯೆನುತಮಿಾ |
ಪರಿಯ ವಿಟನೆಡೆಯ ಪೊಗಳಿದಳೊರ್ವೆಯಾತ್ಮಜೆಯನಧಿಕತರ ಮೋದದಿಂದ || ೫೮ ||

ಕರಯುಗಂ ನಯನಯುಗ ಕದಪು ದಂತವಾಸ |
ಗುರುಕುಚಂ ಸುಳಿನಾಭಿ ಮದನಮಂದಿರಗಳೆನೆ |
ಸ್ಪರುಶನಂ ತಾಡನಂ ಚುಂಬನಾದಿಗಳಿಂದ ಸ್ಮರನ ಕಳೆಯರಿತು ಬೆರೆತು ||
ಹರುಷಗೊಳಿಸದೆ ಸುಮಂಗಳ ಪುರಿದ ತೆರನಂತೆ |
ವರಿಸಲೇನುಂಟೆನುತಲೊರ್ವೆ ನೂತನ ವಿಟನ |
ಪರಿವಿಡಿಯನೀಕ್ಷಿಪ ವಿದಗ್ಧೆಯೊಪ್ಪಿದಳೊಂದು ಮಣಿಮಂಚದೆಡೆಯೊಳಾಗ || ೫೯ ||

ಪೊನ್ನ ರ್ಗಳವನೀವ ಪಲಬಗೆಯಲುಪಚರಿಪ |
ನೆನ್ನು ವಾಸೆಯೊಳಬ್ಬೆಯೊತ್ತಿವಿಡಿದಲ್ಲಿಗೈ |
ದೆನ್ನು ತೆನ್ನಂ ಜರಿವಳಾವಗಂ ಖುರಳಿಯೊಳು ಸಾಧಕಂಗೈದೊಡಲಿನ ||
ಉನ್ನತಾಯಸ ತನುಕನೆಡೆಗೈದಿ ಜೀವದಿಂ |
ದಿನ್ನು ಳಿವೆನೆಂತಬಲೆ ಪೇಳೆಂದು ಸಖಿಯೊಳಂ |
ತನ್ನ ವೃತ್ತಾಂತಮಂ ಬಿತ್ತರಿಸುತಿರ್ದಳೊಂದೆಡೆಯ ಕಿರಿಸೂಳೆ ಭಯದೆ || || ೬೦ ||

ಅಳಿಗಳುಂ ಪಾರುತಿವೆ ಪವಳ ಬೆಳ್ಪೇರುತಿವೆ |
ತಳೆದಿವೆಕೊ ಕಮಲಕುಡ್ಮಂಗಳು ಮರಾಳಗಳ |
ಕೆಳೆಯೊಳ್ ಕ್ಷತಂಗಳಂ ಮೈಮರೆದು ಮುಗುಳೊತ್ತಿಗೊಳುವೆ ಮುಗ್ಧತೆಯನಾಂತು ||
ಪಳಿದ ಸುಮರಸವದೇಂ ತುಳುಕುವುದೆಯೆನೆ ಚತುರ |
ನಿಳಯಂ ಮಿಳಿಂದಮೊಂದೆರಗಿರದೆ ಸರಸಮೇ |
ನುಳಿಯದೇ ನೀಂ ತಿಳಿಯದಾದೆಯೆಂದೆನುತೊರ್ವೆ ನಾಣ್ಚಿಸಿದಳಾಗ ವಿಟನ || || ೬೧ ||

ನಸುಮುಳಿಸಿನಿಂದ ನಿದ್ರೆಯನಾಂತೊಲಾನೆನಿ |
ತ್ತುಸಿರಿದರು ಗಣಿಸದಿರಲಾಂ ಮೆಲ್ಲನತಿಮೃದುಳ |
ಬಿಸಜಪಲ್ಲವಗಳಂ ಮಿಸುಕಲತಿಕೋಪದಿಂದೆದ್ದು ಜಡೆಯಿಂದ ಪೊಡೆದು ||
ಪೊಸನಖಕ್ಷತದಂತಹತಿಗಳಿಂದೀ ಪರಿಯ |
ಕುಸುಮಶರನಂಡಲೆಗೆ ಕ್ರೋಧಮುಖದಿಂ ಶಾಂತಿ |
ಎಸಗಿದಳೆನುತ್ತ ಗೆಳೆಯಳ ಪರಿಯ ನೇಹಿತನೊಳೊರೆದನೊಂದೆಡೆಯೊಳೊರ್ವಂ || ೬೨ ||

ತನುಗಳು ವಿಭಿನ್ನ ಕಾರುಣ್ಯಮಿರ್ವರಿಗೊಂದೆ |
ಮನಮನಗಳೆರಕ ಮೆಚ್ಚಿಗೆ ಮನೋಹರಬೇಟ |
ನೆನಹು ಚೆಲ್ಲಾಟ ಮೃದುನುಡಿ ನಗೆಯು ನೋಟಂಗಳೆರವಿಲ್ಲಮಿಂತಾದರುಂ ||
ಮನುಮಥನು ವಶನೆಮಗೆ ಮತ್ತಾವರಾದೊಡಂ |
ಮಿನುಗುವರೆ ಲೋಕದೊಳಗೆಂಬಂತದನ್ಯೋನ್ಯ |
ವನು ಪೊಗಳಿಕೊಳುತಿರ್ದಳೊರ್ವೆ ತಮ್ಮಯ ಚೆಲ್ವ ರೂಪುಗಳನಾಳಿಯೊಡನೆ || ೬೩ ||

ಒಲಿದುದೇಂ ಕುಂದೆ ಬಂದಾಳಿಯೊಳು ಮಾರ್ನುಡಿಯ |
ನುಲಿಯದೇನೊಂದನುಂ ಗಜರುತಂ ಕೋಪಿಸುವ |
ಕಲಿತನಮಿದೊಳ್ಳಿತಾಯ್ತೆನುತ ಕಂಬನಿಯಿಡುತ ಕನಲಿ ಕಂಪಿಸಿ ತರುಣಿಯ ||
ಒಲಿದು ಬಿಗಿಬಿಗಿದಪ್ಪಿ ಚುಂಬಿಸುತ ಮುಂಜೆರಗಿ |
ನೊಳಗೆ ಕಣ್ಣೀರ್ತೊಡೆದು ಕಂಪನವ ಪರಿದು ಸ್ಮರ |
ಕಳೆಯುರುರಸಮೆಯೆನಲ್ ತಣ್ಪುಗೊಳಿಸಿದನದೇಂ ಪ್ರೌಢನೋ ವಿಟಜನರೊಳು || ೬೪ ||

ನಗೆಯ ತಿಳಿದೈದಿ ಮೊಗರಸವರಿತು ಪೊರ್ದುತ್ತ |
ಸೊಗಸಾಂತ ಪುಳಕಮಂ ಕಂಡಪ್ಪಿ ಮಾನಸದ |
ಬಗೆಯರಿದು ಮುದ್ದಿಟ್ಟು ಭಾವಬಂಧಗಳಿಂದ ಕೊಟ್ಟು ಕರತಾಡನಗಳ ||
ಸೊಗಸ ತೋರಿದಡಲ್ಲದೊಲ್ಲನೆನ್ನಿನ್ನು ಳಿದ |
ಮುಗುದೆಯರ ಮೊಗವ ನಿಟ್ಟಿಪನೆಂತು ಮದನನೀ |
ಜಗತಿಗುಪದೇಶಿಪೊಲು ಬಂದನೆನುತೊರ್ವೆಯೊಳು ಮತ್ತೊರ್ವೆ ಪೇಳ್ದಳೊಲಿದು || ೬೫ ||



ಸರಸ ಮೂದಲೆ ಲಲ್ಲೆ ಸಂಚುಗಾರಿಕೆ ಮನೋ |
ಹರನುಡಿ ಸುಖಾಮೋದ ಸಿರಿಯ ಸಂಬಾಧಂಗ |
ಳೆರಕವಾಂತೀ ಸೂಳೆಗೇರಿಯಳಕಾವತಿಯ ಸಗ್ಗ ಗಾಂಧರ್ವರಿರವ ||
ಪರಿಕಿಪೊಡೆ ಗಸಣಿಗೊಳುವೊಡೆ ಸಕಲದೇವತೆಗ |
ಳಿರುವ ತಾರಾಗಾರಮಾದ ಬಳಿಕೀ ನೆಲನ |
ಕರಚೆಲುವ ಪೊಗಳಲೆಂತಳವಪ್ಪುದೆಂದಾಗ ಮರುಳಾದ ಮರುತಸುತನು || ೬೬ ||

ಇದು ಕಳಾಯುತಕೇರಿಯೆನುತೀಕ್ಷಿಸಿದರಿಲ್ಲಿ |
ಯುದಿತಮಾಗದು ದಾರಿ ತಿರುತಿರುಗಿ ಬೇಸಾರಿ |
ಕದಬದಂಗೊಳಲೇನು ಸಾಂದ್ರಚಂದ್ರೋದಯದ ಬೆಳಗಿನೊಳು ಥಳಥಳಿಸುತ ||
ಮುದವ ಬೀರುವ ನಂದನವ ನೋಳ್ಪೆನೆಂದೈದಿ |
ಚದುರಿಂದ ಪರಿಸರದೊಳೆಡೆಯಾಡುತೊಂದೆಡೆಯ |
ಪದವಿಟ್ಟು ಪ್ರಾಕಾರವಿಡಿದು ಮೆಲ್ಲನೆ ಪೊಕ್ಕನಸುರನು[1] ದ್ಯಾನವನವ || ೬೭ ||

ನೋಡಿ ವಿಸ್ಮಿತನಾಗಿ ಮೂಗಿನಲಿ ಬೆರಳಿಟ್ಟು |
ಮೂಡುವಾನಂದದಿಂ ಮುಂದರಿಯದಾಮೋದ |
ಗಾಡಿಯೊಳು ಚಿತ್ರ[2]ಪುತ್ತಳಿಯಂತೆ ಮರುತಭವನರೆನಿಮಿಷ ನೋಡುತಿರ್ದು ||
ರೂಢಿಯೊಳು ಭಾಗ್ಯಸಂಪದ ಸೌಖ್ಯದೇಳಿಗೆಯು |
ಈಡೆನಿಸದೀ ನಂದನಕ್ಕೇಸು ತಪದಿ ಕೈ |
ಗೂಡಿತೋ ದಶಗಳಗೆ ಶ್ರೀರಾಮಪುರದರಸನೊಲುಮೆಯೆಂದೆನುತಮಾಗ || ೬೮ ||

**ಆರನೆಯ ಸಂಧಿ ಸಮಾಪ್ತಂ.**

---

1 ವನವನು. 2 ಪುತ್ಥಳಿ.

# ಏಳನೆಯ ಸಂಧಿ

ಸೂಚನೆ || ಶಿಂಶುಪಾಪಾದಪಕ್ರೋಡದಲಿ ಮಲಿನತರ |
ದಂಶುಕವಿ ತೋರ್ಪ ಮಣಿಯಂತೆ ಗೋಚರವಾಗ |
ಲಂಶುಮಾಲಿಯ ಕುಲೋತ್ತಂಸನರಸಿಯ ಕಂಡು ಪವನಸುತ ನಲಿದನಾಗ ||

ಇಂಬಿನಿಂ ಪಾಡುತಿಹ ಸವಿಮಾತಿನರಗಿಳಿಯ |
ಡೊಂಬಿಗಳ್ ಕ್ರೀಡಿಪಾಲಯವೊ ಪರಪುಟ್ಟಗಳು |
ಸಂಭ್ರಮದಿ ಖೇಲನಂಗೈವ ಮಂದಿರವೊ ಮಾಯೂರ ನಾಟ್ಯದ ಗರುಡಿಯೊ ||
ಶಂಬರಾರಿಯ ಮನೋಹರಸೌಧ ನೋಡೆ ಕಾ |
ದಂಬತತಿಗನುಮೋದ ಭೋಜನದ ಶಾಲೆಯಹು |
ದೆಂಬಂತಶೋಕವನದೆಡೆಯ ಕೃತ್ರಿಮದ ನಗ ಗೋಚರಿಸಿತಾಗಳಗಜೆ || ೧ ||

ನಿರತಂ ಬಸಂತನಾವಾಸವಾಗಿಹನೆಂದು |
ಪರಿಪರಿಯ ಫಲಪುಷ್ಪಪಲ್ಲವಂಗಳ ಭರವ |
ಧರಿಸಿ ಶಾಖಿಗಳೆಲ್ಲ ಶುಕದ ಸವಿನುಡಿ ಪಿಕದ ಗಾನ ಶಿಖಿಗಳ ನೃತ್ಯದೆ || .
ಸರಸಸಲ್ಲಾಪಕೆಳಸಿದರೆಂಬ ಮಾಳ್ಕೆಯೊಳು |
ನೆರೆದಿಪ್ಪ ಷಟ್ಪದಂಗಳ ಝೇಂಕೃತಸ್ವನಂ |
ಮರುತಾತ್ಮಭವಗೆ ಸುರಲೋಕಪಾಸಟನೆಲನಿದಾದುದೆಂಬಂತಾಗಳೆ || ೨ ||

ಸುಮನಸವಿಲಾಸಕರ ಕನಕರಾಜತತರುಗ |
ಳಮಿತ ಫಲಪುಷ್ಪಭಾರಾವನತಮದಮತ್ತ |
ಭ್ರಮರಝೇಂಕಾರಕಮನೀಯತರಕಾಕಲೀಸಂಪ್ರದಾಯಂ ಮೆರೆಯಲು ||
.................... ತತುಲತೋಷಕರ |
ದಮೃತೋಪಮಿತ ಫಲಂಗಳನಾಂತು ತೋರುತಿರೆ |
ಶ್ರಮನಿವಾರಣಮಾದುದೀಕ್ಷಿಸಿದಮಾತುರದೊಳಾ ಮರುತ್ಸಂಭೂತಗೆ || ೩ ||

ಎಲ್ಲಿ ನೋಡಿದರು ಕುಸುಮಂಗಳನು ಪದದಲ್ಲಿ |
ಚೆಲ್ಲುವ ಮರಂದ ತುಂತುರುವನಿಗಳಾವೆಡೆಗ |
ಳಲ್ಲಿ ಸೌ....................ಯ ತೋರ್ಪ ತರುಷಂಡಂಗಳು ||
ಉಲ್ಲಸಿತ ಮತ್ತಮಾಯೂರನರ್ತನ ಕೋಕಿ |
ಲೋಲ್ಲಾಸಕರಸರಂ ಮಲಯಮಾರುತ ನಲಿವ |
ಚೆಲ್ಲಾಟ ತೋರ್ದುದಾವಾವೆಡೆಯ ನಂದನವು ಮನ್ಮಥನ ಬೀಡಿನಂತೆ || ೪ ||

ರತುನಮಯ ವೇದಿಕೆಗಳಲ್ಲಲ್ಲಿ ಸೌವರ್ಣ |
ವಿತತ....................ಪಂಥಾನ |
ಮತಿಶಯದ ಹೀರಪರಿಯಂಕಗಳ್ಭೂರುಹಗಳೆಡೆಗಳೊಳಗಳವಟ್ಟಿರೆ ||
ಮತಿಯುತಂ ನೋಡುತಚ್ಚರಿಗೊಂಡ ಭೋಗಗಳ |
ತತಿಗಳೊಂದೇ ಬಾರಿ ತಪದಿಂದ ಬಂಧುಜನ |
ಹಿತಕರದಿ ನೆರದಿಹವೊ ಶಿವಶಿವಯೆನುತ್ತಲ್ಲಿಗಲ್ಲಿ ನಿಟ್ಟಿಸುತ್ತಿದಿದಂ || ೫ ||



ಸತತಗತಿಯಾತ್ಮಜಂ ಸಂತಸಂಗೊಂಡು ತರು |
ತತಿಗಳಂ ನೋಡುತ್ತ ಬರುತಿರೆ ಪಚೇಳಿಮದ |
ವಿತತ ಸುಮಸಂದಣಿಯ ರಜವು ಮರುತನ ಹತಿಯೊಳುದಿರ್ದರತಿಮೋದಗೊಳುತ ||
ಹಿತಮೆನಿಪ ಚೈತ್ರನೈತರೆ ಪುಷ್ಪವೃಷ್ಟಿಗಳ |
ನತಿಶಯದಿ ಮಾಳ್ಪಂತೆ ಪುಷ್ಪಮಯದಿಂ ಮರು
ತ್ಸುತನೆಸೆದನೆರ.... ತಂದಲೆಂಬಂದದಿಂದಾವನೋದ್ದೇಶದೊಳಗೆ || ೬ ||

ಪಿಡಿದು ಕಂಪನಗೆಯ್ಯೆ ಪತ್ರಫಲಪುಷ್ಪಂಗ |
ಳುಡಿದ ವಿಟಪಿಗಳೆಲ್ಲ ಸ್ಕಂಧಾವಶೇಷಿತದೊ |
ಳೊಡನೆ ಕಂಗೊಳಿಸಿದುವು ಧೂರ್ತನೊಳ್ಪೆರೆದ ಪ್ರಮದಾವಿಕಾರಂಗಳಾಂತು ||
ನುಡಿವ ಪಕ್ಕಿಗಳುಲುಹು ಸಾರಂಗಸಂಭ್ರಮಗ |
ಳಡಿಗಡಿಗೆಯಾಂತ ಕೋಲಾಹಲದೆ ಲಜ್ಜೆಯಂ|
ಪಿಡಿದ ಮಾನಿನಿಯರಂತಾ ವಿಟಪಿ ಸಂತತಿಗಳೆಸೆದುವಾವಾಡೆಯೊಳು || ೭ ||

ಪಲಬಗೆಯ ವಾರಿಸಂಭರಿತ ವಾಪೀನಿಚಯ |
ಲಲಿತಮಣಿಹೈಮಮಯ ಸೋಪಾನಪವಳಂಗ |
ಳೊಲಿವ ಸೈಕತದಿ ಸುಪ್ಪಾಣಿಶರ್ಕರ ಸ್ಫಾಟಿಕಾಂತರದ ಕುಟ್ಟಿಮಗಳ ||
ಚೆಲುವರಸ ಸಿದ್ಧರಸಕಾರಿತದಿ ಬೇಡಿದುದ |
ನೊಲಿದೀವ ಸುರತರುಗಳೆಂಬಂತೆ ಸ್ವರ್ಣಮಯ |
ನೆಲದೊಳಾರಾಜಿಸಿದುವಮಿತ ವಿಕಸಿತಪದ್ಮಕೈರವಾಮೋದಕರದೆ || ೮ ||

ಹಂಸಕಾರಂಡಕೋಕಾಂಗನೋಲ್ಲಾಸಗಳು |
ಹಂಸೀಗಣದ ನಾಟ್ಯ ಭೃಂಗೀರಸೋತ್ಕಲಿತ |
ಸಂಸಾರದಿಂ ಮನೋಹರನಿಲಯಮೆಂಬಂತೆ ಪುಷ್ಪವಾಟಿಕೆಗಳೆಸೆಯೆ ||
ಪುಂಸಮಾಗಮಕೆಳಸಿ ಪುದಿದ ಹರುಷದೊಳೂರಿ |
ರಂಸೆಗೈತಹ ಚಕ್ರಮಿಥುನಂಗಳಾ ವನೋ |
ತ್ತಂಸಮೆಂಬಂದದಿಂದಾ ತಾಣ ಕಂಗೊಳಿಸಿತಾಗ ಮಾರುತಿಯ ಕಣ್ಗೆ || ೯ ||

ಮುಂದಕಡಿಯಿಡುತಮಚ್ಚರಿಗೊಳುತ. ವಿದ್ರುಮಗ·|
ಳಂದಮಂ ನೋಡುತ್ತಲಮಿತಮಂ.................... |
............ತ ಬಹ ಗುಲ್ಮದುರುಚಿತ್ರ ವೀರುಧಾಲಯಗಳೆಡೆಯ ||
ಕಂಧರಗಳೆಂಬಂತೆ ಚಿತ್ರಕೂಟಗಳಿಂದ |
ಮಂದವಡೆದುರುತರದ ಮಣಿನಿಲಯಗಳನಾಂತು |
ಚಂದ್ರಿಕಾ ಹಾಸದಿಂದೆಸೆದುವಾನಂದಕರಮೆನಿಪ ಕ್ರೀಡಾಶೈಲಗಳ್ || ೧೦ ||

ಲೀಲಾಗಿರಿ....................ತಾ |
ಜಾಲಮಣಿ ಸೌವರ್ಣಮಯದಿಂದ ಜಲಕಣನಿ |
ರಾಲಸ್ಯದಿಂದುರ್ವ ಮುಕ್ತಾಫಲಂಗಳಂ ಸರ್ವರುತುನಾದಂಗಳಿಂ ||
ಕೈಲಾಸಶಿಖರದಂದದಲಿ ಧಾವಳ್ಯಮೆನೆ |
ಮೇಲೆನಿಸಿ ರಾಜಿಸಲ್ಕಂಡು ಕೌತುಕಗೊಂಡು |
ಭೂಲಲನೆಯಾತ್ಮಜೆಯನರಸಲುಜ್ಜುಗಗೊಂಡನಾ ಮರುತ್ಸಂಭೂತನು || ೧೧ ||

ಕಾಸಾರಮೆನಿತೊ ಕ್ರೀಡಾಶೈಲಮೆನಿತುಟೋ |
ಲೇಸೆನಿಪ ಸೌಧಂಗಳೆನಿಸೊ ಮನ್ಮಥರತೀ |
ವಾಸಕರಮೆನಿಪ ಸುಮನಸಮಂದಿರಗಳೆನಿತೊ ನಲಿವ ಶುಕಪಿಕ ಸೋಗೆಯ ||
ಭಾಸುರಾಮೋದಕರ ಮೆನಿತೆನಿತೊ ನೋಡುವರೆ |
ವಾಸವನ ಲೋಕ ತಾನಲ್ಲದಡೆ ದಶಮೌಳಿ |
ಯೇಸು ತಪಮೆಸಗಿ ನಂದನಚೈತ್ರರಥ ಕನಕಬನವ ಸಂಪಾದಿಸಿದನೊ || ೧೨ ||

ಎನುತ ವಿಸ್ಮಯಗೊಳುತ ಮುಂದಕಡಿಯಿಡೆ ತೋರ್ದು |
ದಿನಸಹಸ್ರ ಪ್ರಭೆಯ ತೌರೆನಿಪ ತಾಣ ಮುಂ |
ದನುನಯದೊಳಲ್ಲಿ ಗೈತರೆ ಸ್ವರ್ಣಮಯಬನಂ ಕಂಗೊಳಿಸಲನಿಲಸುತನು ||
ಮಿನುಗುವ ತಟಿಲ್ಲತೆ ಬೃಹದ್ಭಾನು ಸಂತತಿಗ
ಳನುವಿಂದ ವಿಶ್ವರೂಪಾಂತು ಬಂದೀನೆಲದೊ |
ಳನುದಿನಂ ಪೊಳೆದಪುವೊಯೆನುತ ಬೆರಗಾದನಾ ಮರುತಸುತ ಬನವ ನೋಡಿ || ೧೩ ||

ಮೇರುಗಿರಿ ಭಾಸ್ಕರ ಪ್ರಭೆಯಿಂದ ಪೊಳೆವಂತೆ |
ಮಾರುತಿಯು ರಶ್ಮಿಮಾರ್ಪೊಳೆವಿನೆಗಮಾ ಮೂರ್ತಿ |
ತೋರಿ ಕಾಂಚನರೂಪನಾದನೆಂದೇ ತಿಳಿದನಾಗ ತನ್ಮಯಚಿತ್ತದೆ ||
ಚಾರುತರಕಿಂಕಿಣೀಗಣ ಮರುತಮಂದ ಸಂ |
ಚಾರದಿಂ ಕಾಕಲೀಕಲರವದ ಮಧುರತೆಯ |
ತೋರುವದ್ಭುತವ ಕಂಡರೆನಿಮಿಷ ಮರುತಸುತ ನಿಟ್ಟಿಸಿದನಲ್ತಿಯಿಂದ || ೧೪ ||

ಕಾಂಚನ ಪ್ರಭೆಯಿಂದ ಕಂಗೊಳಿಪ....... |
........ಮಹೀರುಹಗಳೊಂದೆಡೆಯ ಪರಿಮಳಿಸೆ |
ಚಾಂಚರೀಕೋಲ್ಲಾಸ ನುಡಿವ ಪಂಡಿತವಕ್ಕಿಗಳಿಗತಿವಿಲಾಸವೀವ ||
ಪಾಂಚಾಲಿಕೋಪಶೋಭಿತ ಬಕುಳ ಮಾಕಂದ |
ಸಂಚಾಲನಂ ಮನೋಭವನ ಚಾಲನೆಗಂ ರ |
ಸಾಂಚಿತವ ಕೊಡುವ ಶೃಂಗಾರ ವರ್ಣನಗೈವುದೆಂತಪ್ಪುದಖಿಲರಿಂಗೆ || ೧೫ ||

ವಿವಿಧವರ್ಣೋಪಶೋಭಿತಹರೀಚಂದನದ |
ನವಲತೆಗಳಮಿತಗಂಧಾಢ್ಯತೆಯೊಳುಂ ತೋರ್ಪ |
ನವರಸಾಲಂಕಾರ ಭರಿತವಾಪಿಗಳಂ ಮನೋಹರದ ಸ್ಥಾನಂಗಳಂ||
ನವನವಕಮಾದ ರವನರ್ತನವಿಲಾಸದಿಂ |
ದವಿರಲಂಕೃತಿಗೈವ ಮೃಗಪಕ್ಷಿಸಂತತಿಗೆ |
ತವಕದಿಂ ಹಿತಕರವನೀವ ಕಾಂಚನವೇದಿಕಾಂತರಗಳೆಸೆದುವಲ್ಲಿ || ೧೬ ||

ಅತಿವಿಚಿತ್ರತೆಯಾದ ಪೃಥಿವಿಯಂ ನೋಡಿ ಮಾ |
ರುತಿ ಮುಂದಕಡಿಯಿಡಲಹಸ್ಕರೋಪಮನೀಲ |
ಕತಿಚಿದಂಗಾರ ಸದೃಶತೆಯಿಂದಶೋಕತರುನಿಚಯಸಾಸಿರವೊಪ್ಪಿರೆ ||
ರತಿಪತಿಯ ಸರಳನಿರ್ಮಿತಗೈಯುವಾಪಣವೊ |
ಪ್ರತಿತಪ್ರದ್ಯುಮ್ನಕ್ರೀಡಾಭಾರಮೋಯೆನುತ |
ಸತತಮಾನಂದಕರದಾನಂದನದೊಳಿರ್ದು ನೋಡಿದಂ ನಾಲ್ದೆಸೆಯನು || ೧೭ ||



ಇದು ಚೈತ್ರರಥವೊ ನಂದನವೊ ನೋಡಲು ಕುಸುಮ |
ಮುದಿತ ಪಂಚಮ ಶರಧಿಯೋ ಗಂಧಮಾದನವೊ |
ಇದುವೆ ಶೃಂಗಾರಕರ್ಮಸ್ಥಾನಮೋಯೆನುತ ವಿಸ್ಮಯಂಗೊಳುತಮಾಗ ||
ಅದುಭುತೋತ್ಸುಕದಿಂದಮಮರಾದಿಗಳ ಗೆಲಿದು |
ಮುದದಿಂದ ಕ್ರೀಡಿಸುವರೀ ಬನವ ದಶಗಳಗೆ |
ಪದುಮಭವಕೃಪೆಯಿಂದಮಿತ್ತುದಲ್ಲದೆ ಬೇರೆ ಬದಲಲ್ಲಮೆನುತೆಂದನು || ೧೮ ||

ವನವಿಲಾಸವ ನೋಳ್ಪ ಕೌತುಕದೊಳಾವಗಂ |
ಜನಕಸುತೆಯತಿನಿಪುಣೆಯತಿಮನೋಹರಮಾದ |
ದಿನಿಸುಗಳ ಸಂತಸವ ಪೆರ್ಚಿಸುವ ನಂದನಕೆ ಬರ್ಪಳಾವೆಡೆಯೊಳಿರಲು ||
ಅನುಮಾನಮಿನಿತಿಲ್ಲಮಾ ಧರಾಸುತೆಯ ಪದ |
ವನಜಂಗಳಂ ಕಾಣ್ಬೆನಿಂದೆನ್ನ ಮಾನಸ |
ಕ್ಕನುತಾಪ ಪರಿವುದೆಂದೆನುತ ಸಂತೋಷಿಸಿದ ಪವನಸಂಭೂತನಾಗ || ೧೯ ||

ಎಂದತಿವಿಲಾಸದಿಂ ನಾಲ್ದೆಸೆಯ ನೋಡುತಿರೆ |
ವೃಂದಾರಕಾಲಯಮೊ ರಜತಶಿಖರಿಯೊ ಜಗ |
ದ್ವಂದ್ಯಹರಿಯಾಡುವಾಡುಂಬೊಲವೊ ಮನ್ಮಥನ ಗರುಡಿಯೋ ಕಾಣೆನೆನಲು ||
ಛಂದ ಛಂದದ [1]ರತ್ನಮಯಕಾಂತಿ ಪರಕಲಿಸ |
ಲಂದವಡೆದಿಹ ಕಂಭಸಾಸಿರಗಳಿಂದೆಸೆದು |
ದಿಂದುಮಂಡಲವ ಚುಂಬಿಸ ಸೌಧ ತೋರಲದ ನೋಡಿ ವಿಸ್ಮಿತನಾದನು || ೨೦ ||

ಕುರುವಿಂದದಳಖಚಿತ ಸೋಪಾನ ಬಜ್ಜರಗ |
ಳರಳೆಲೆಯು ಮರಕತದ ತಳ್ಕು ಗೋಮೇಧಿಕದ |
ಪರಿಪರಿಯ ಲತೆಗಳುರುನೀಲಮಯ ಕುಟ್ಟಿಮಗಳಮಿತವಾತಾಯನಗಳ ||
ಎರಕಮಾಗಿಹ ಲತಾಗೃಹ ಚಿತ್ರಗೃಹಪಾನ |
ಭರಿತಮಂದಿರಮಿರ್ದೊಡಲ್ಲಿ ಸೌದಾಮಿನಿಯ |
ನೆರವಿ ಪ್ರತಿರೂಪಾಂತು ನಿಂದಿರ್ಪವೋಯೆನಲ್ಕೇನೆಂಬೆನಚ್ಚರಿಯನು || ೨೧ ||

ಕೆಲಬಲದಿ ಕಾಂಚನದ ಶಿಂಶುಪಾಭೂಮಿರುಹ |
ಪಲಬಗೆಯ ಚಿತ್ರತೆಯನಾಂತು ನಾನಾರತುನ |
ಬೆಳಗಿನೊಬ್ಬುಳಿಯೆಂಬ ಮಾಳ್ಕೆಯೊಳು ನಿಟ್ಟಿಸುವರಳವಲ್ಲದೆಸೆವುತಿರಲು ||
ಕಲಿಮರುನ್ನಂದನಂ ಕಂಡು ಸಂತೋಷದಿಂ |
ದುಲುಹ ತೋರದೆ ಮೆಲ್ಲನರುಗಿ ಮತ್ತೊಂದು ತರು |
ನೆಳಲೊಳಗೆ ನಿಂದು ಬೆರಗಾಗುತೀಕ್ಷಿಸುತಿರಲು ಮನಕೆ ಹರ್ಷಂ ತೋರ್ದುದು || ೨೨ ||

ಮಲಿನತರ ಕಾಳಮೇಘಗಳ ಬಳಗದ ಮಧ್ಯ |
ದೊಳಗೆ ದೃಶ್ಯಾದೃಶ್ಯಮಾಗಿ ತೋರುವ ಚಂದ್ರ |
ಕಳೆಯಂತೆ ರಕ್ಕಸೀಗಣದ ಪರಿವೇಷ್ಟಿತದ ಭೀಕರದ ತಾಣದೊಳಗೆ ||
ಮಲಿನವಸ್ತ್ರದಿ ಬಂಧಿಸಿದ ಮಾಣಿಕದ ತೆರದಿ |
ಕಳೆದೋರುತಡಗುತ್ತಮಾನಂದ ತನುವೆಳಗು |
ನಲವಿಂದ ತೋರಲಾನಂದಾಬ್ಧಿ ಮುಂಬರಿಯೆ ನೋಡಿದಂ ಮರುತಸುತಸು || ೨೩ ||

[1] ಮಣಿ.

ಪೊಗೆಯಾವಹಿಸಿ ತೋರ್ಪ ಶಿಖಿಯ ಸೆಕೆಯೋ ನಿಶೆಯೊ |
ಳೊಗೆವ ಶಶಿಲೇಖೆಯೋ ಹಿಮದಿಂದ ಸಂಕೋಚ |
ಮೊಗೆದ ಪದ್ಮಿನಿಯೊ ಭೂಮಿಜನಿಂದ ಪೀಡಿತದ ರೋಹಿಣಿಯೊ ಯೆಂಬಂದದೆ ||
ಸೊಗಯಿಸುವ ಕಚ್ಚರಾಂಬರದಿಂದ ಪಂಕದೊಳು |
ಸೊಗಯಿಸುವ ಮಹಿಯಂತೆ ರಕ್ಕಸೀಗಣದೊಡನೆ |
ಸೊಗಯಿಸುವ ಜನಕಜೆಯ ಸುಪ್ರಭೆಯ ಕಾಣುತ್ತ ಹಿಗ್ಗಿದಂ ಮರುತಸುತನು || ೨೪ ||

ಪನಿಯಿಲ್ಲದೊಣಗಿರ್ಪ ಸಸ್ಯಾಳಿಗಂ ಮೇಘ |
ವನಿಯ ಕಂಡಂದದಿಂ ನಿಸ್ಸಂಗೆ ನವರತುನ |
ಖನಿಯು ಕೈ ಸಾರಿದಂತೆಣೆವಕ್ಕಿಯತಿಶಯದ ಪಗಲ ಕಂಡಂದದಂತೆ ||
ಇನನ ನಿಟ್ಟಿಸಿದಂಬುಜಾಕ್ಷಿಯಂದದೊಳಾಗ |
ಹನುಮನಾನಂದದಿಂ ನಲಿದು ಹಿಗ್ಗಿದ ಧರಾ |
ತನಯಳಂಗದ ಕಾಂತಿ ಕಂಗೆಸೆದಮಾತುರದೊಳೀನೆಂಬೆನಚ್ಚರಿಯನು || ೨೫ ||

ಮೊಗವ ನೋಡಲು ಸುಧಾಕರನ ತೌರೆನಿಸುತಿದೆ |
ಸೊಗಯಿಸುವ ನೇತ್ರಗಳು ಲಕ್ಷ್ಮೀನಿವಾಸಮಂ |
ನಗಿಸುತಿವೆ ಕರಸುಪ್ರವಾಳ ಪೊಂಗೇದಗೆಯೊಳೆಸೆವ ನಖರಂಗಳಿದೆಕೋ ||
ನಿಗಿನಿಗಿಪ ತನುಕಾಂತಿ ಪುಟವಿಡಿದ ಪೊಂಬಣ್ಣ |
ಮಿಗಿಲೆನಿಸುತಿದೆಯಧರ ಸುಧೆಯ ಪೆತ್ತಂತಿದೆಕೊ |
ಜಗತೀತನುಜೆಯಪ್ಪಳಲ್ಲದುಳಿದರಿಗಿನಿತು ಸೌಕುಮಾರ್ಯಂ ದೊರೆವುದೆ || ೨೬ ||

ಸಲ್ಲಲಿತ ಸರ್ವಾಂಗ ಸೌಂದರ್ಯ ಮಾಂತಿರ್ಪ |
ಪಲ್ಲವಾಧರೆಯ ಲಕ್ಷಣಗಳಂ ನೋಡಿದರೆ |
ಚೆಲ್ಲೆಗಣ್ಣಬಲೆ ಜಾನಕಿಯಪ್ಪಳಿದು ತಪ್ಪದೆನುತ ನಿಶ್ಚಯಗೈವುತ ||
ಉಲ್ಲಾಸದಿಂದಂಜನಾತನಯ ನಾಲ್ದೆಸೆಗ |
ಳಲ್ಲಿ ನೋಡಿದ ಮನೋವ್ಯಥೆಗಳಂ ಕಳೆಕಳೆದು |
ಭುಲ್ಲವಿಸಿ ತನ್ನೊಳಗೆ ತಾನೆ ಸಂತೋಷದಿಂದಿಂತೆಂದನೊಲವಿನಿಂದ || ೨೭ ||

ಮೂರು ಲೋಕದೊಳುಳ್ಳ ಜನರು ಸಂತಸಗೈವ |
ಘೋರತರ ತಪದಿಂದಮುಳವಡದ ಪರವಸ್ತು |
ತೋರಿತಾನೆಂತು ಧನ್ಯನೊ ರಘೂತ್ತಮ ಚಿತ್ತದನುರಾಗದೊಲವದೆಂತೊ ||
ವಾರಿಧಿಯ ಲಂಘಿಸಿದ ವಹಿಲದಿಂ ಪತ್ತಸ ವಿ |
ಚಾರಣಂಗೈದ ಸಂಚಾರ ಕರ ಕಷ್ಟಕೆ ನಿ |
ವಾರತರದಮೃತಫಲ ಕೈಸಾರ್ದುದೆಂದೆನುತ ಹಿಗ್ಗಿ ಹೊಂಪುಳಿಯೋದನು || ೨೮ ||

ದೇವತಾ ಜೀವನೌಷಧಿಯೊ ಸೌಭಾಗ್ಯಕ್ಕೆ |
ಪಾವನೀಕರದ ಸಂಜೀವನವೊ ಸಿರಿಗಳ |
ನ್ನೀವ ಪರುಷದಕಣಿಯೊ ಸಕಲಲೋಕಾನಂದಮೀವ ಚಿಂತಾಮಣಿಯಿದೊ ||
ದೇವ ಶ್ರೀರಾಮಪುರದರಸನಿಗೆ ಸಂತಸದ|
ಜೀವನಾಡಿಯೊ ಕಂಡೆನೇನೆಂಬೆ ಸಂತೋಷ |
ಭಾವವನೆನುತ್ತಮಾನಂದಮಯನಾಗುತಂ ಪಾವಮಾನಿಯು ಹಿಗ್ಗಿದಂ || ೨೯ ||

**ಏಳನೆಯ ಸಂಧಿ ಸಮಾಪ್ತಂ.**

---

# ಎಂಟನೆಯ ಸಂಧಿ

ಸೂಚನೆ || ಮುಂತಪ್ಪಕಜ್ಜಗಳ ಕನಸಿನೊಳು ರಕ್ಕಸರ |
ಕಾಂತನರಿದೈತಂದು ಧರಣಿಜಾತೆಯ ಪೊರೆಯ |
ತಾಂ ತಡೆಯದನುರಾಗವಾಕ್ಯದಿಂದುಪಚರಣೆಗೆಯ್ಯಲನುಗೈದನಾಗ ||

ಪ್ರತಿಹತಾಶೆಯೊ ಭಕ್ತಿರಹಿತಮನಮೋ ಕುಟಿಲ |
ವಿತತಬುದ್ಧಿಯೊ ಕಲುಷಮಾಂತ ಸಿದ್ಧಿಯೊ ವೃಥಾ |
ಸತತಾಪವಾದ ಗತಕೀರ್ತಿಯೋ ಪಾಷಂಡಕಲಿತದುಪನಿಷದರ್ಥಮೊ ||
ಅತಿಶಯದ ನಿದ್ರೆಯೊಳು ಸಿಲ್ಕಿರುವ ಚಿದ್ವಸ್ತು |
ಗತಿಯೊ ಯೆನಲವನಿಸುತೆ ಮಲಿನಾಂಬರದ ಮಧ್ಯ |
ಸುತನುವಂ ಮರೆಗೈದು ಶಿಂಶುಪದ ಮರೆಯೊಳಗೆ ತೋರಿದಳ್ಕೇಳ್ಭವಾನಿ || ೧ ||

ಪಳವಾತನನುಸರಿಸದಿಹ ವಿದ್ಯೆಯಂದದಿಂ |
ತೊಳಪ ಸಂಸ್ಕಾರ ವಿರಹಿತ ವಾಣಿಯಂದದಿಂ |
ಜಳದಪ್ರಾಚುರ್ಯದೊಳ್ಸಿಲ್ಕಿ ತೋರುತ ತೋರದಿರುವ ಶಶಿಲೇಖೆಯಂತೆ ||
ಮಲಿನ ವಸ್ತ್ರಾಚ್ಛಾದಗೊಳಿಸಿ ಸರ್ವಾಂಗಮಂ |
ಪಳುಕು ಕಲ್ಮಷಮಾಂತೊಲೆಸೆವ ಸೀತಾಚರಣ |
ನಳಿನಂಗಳಂ ಕಂಡು ನಲವಿಂದ ಮಾರುತಿಯು ಮನದೊಳೆರಗುತಮೆಂದನು || ೨ ||

ಸಲ್ಲಕ್ಷಣಂಗಳೊಂದೊಂದಾಗಿ ಶ್ರೀರಾಮ |
ನಲ್ಲಿ ಕೀರ್ತನೆಗೈದ ಮಾಳ್ಕೆಯೊಳು ತೋರುತಿವೆ |
ಮೆಲ್ಲಡಿಗಳೊಳು ಲೋಕ ಸರ್ವಾಂಗ ಸೌಂದರ್ಯಮಾಂತು ರಾರಾಜಿಸುವುದು ||
ಚೆಲ್ಲಗಣ್ಣಬಲೆ ಜಾನಕಿಯಹುದು ಸಂದೇಹ |
ಮಿಲ್ಲ ಮನಕೆನುತ ನಿಶ್ಚೈಸಿ ವಿಟಪಾಂತರದ |
ಲಲ್ಲೊಂದುತಾಣದೊಳ್ಕುಳ್ಳಿರ್ದು ನಿಟ್ಟಿಸುತ ಮರುಗಿದಂ ಪವನಸುತನು || ೩ ||

ಜಗದೇಕವೀರ ರಘುವೀರನರಸಂ ಜನರ |
ಬಗೆಗೊಳದ ಸೌಮಿತ್ರಿ ಸೇವಕಂ ಸಂವಾಸ |
ಖಗಕುಲೋದ್ಭವ ಪಂಕ್ತಿರಥನ ಮಂದಿರ ಸುಖದ ಸುಗ್ಗಿಯೊಳು ಮುಂದರಿಯದೆ ||
ಸೊಗಸಿಂದಮಾನಂದಗೊಳುವ ಸುಕುಮಾರಾಂಗಿ |
ಮಿಗೆ ರಕ್ಕಸೀಗಣದಿ ತಗುಲಿ ಸಂಕಟಗೊಂಬ |
ಬಗೆಯ ನೋಡಲು ವಿಧಿಯ ಬಲಮೆಂತೊ ಪ್ರಾಚೀನಮುಳಿಯದಕಟಕಟೆಂದನು || ೪ ||

ನವರಸಾನ್ನವ[1]ನುಳಿದು ನಿರಶನವ್ರತದಿಂದ |
ಪ್ರವಿಮಲಾಂಬರಮುಳಿದು ಮಲಿನಾಂಶುಕಂಗಳಿಂ |
ದವಿರಳ ವಿಚಿತ್ರಸೌಧದಿ ಹಂಸತೂಲಿಕಾತಲ್ಪದಲ್ಲಿಹುದನುಳಿದು ||
ಬುವಿಯೊಳಗೆ ತರುನೆಳಲಲೀಪರಿಯ ತೊಳಲುವನು |
ಭವಬಿಡದೆ ಪೋಯ್ತುತಕಟ 'ವಿಧಿಕೃತಂ ಬಲ' ಮೆನುತ |
ಪವನಸುತ ತಾನೆ ಚಿಂತಿಸುತಿರ್ದನವನಿಸಂಭವೆಯನುಂ ನೋಡಿನೋಡಿ || ೫ ||

---

1 ನಿರತ.

ವದನೇಂದುಕಾಂತಿಯು ತಮೋಲೀಢಮಾಗಿ ಹಿಮ |
ದುದಯದೊಳ್ಮುಗಿದ ತಾಮರಸಂಗಳೆನಲಕ್ಷ್ಮಿ |
ಮೃದಿಮ ಪದಪಲ್ಲವಂ ಚಿಂತಾತಪೋಮ್ಲಾನತೆಯೊಳೊಂದ ನಿಟ್ಟಿಸದಲೆ ||
ಚದರಿದಂತಃಕರಣದಿಂದ ತಲ್ಲಣಗೊಳುತ |
ಮಧುರಹಿತ ಕೋಕಿಲಾಂಗನೆಯಂತೆ ಭೂಮಿಸುತೆ |
ಹೃದಯದನುತಾಪದಿಂದಿರಲಾಯ್ತೆ ಶಿವ ಮಹಾದೇವ ಮಗುಳೇಂಗೈವೆನು || ೬ ||

ಜನಕಜಾತೆಯೆನುತ್ತ ಚಿತ್ತಮೊಡಬಡುತ ಮಿಹು |
ದನುಮಾನಮಿಲ್ಲ ಮುಂದರುಗಿ ನೋಡಲು ಸಲ್ಲ |
ಮಿನನುದಿಸೆ ಕಂಡಪುದು ರಕ್ಕಸೀಗಣಮಲ್ಲ ಸುಮ್ಮನಿರೆ ಕಾರ್ಯಮಿಲ್ಲ ||
ಎನುತ ಚಿಂತಿಸುವನಿತರೊಳು ಚಂದ್ರನಂಬರದೆ |
ಹನುಮಂಗೆ ಸಾಚಿವ್ಯಮೆಸಗೆ ಬೆಳ್ದಿಂಗಳೊ |
ಳ್ಮನವಣಿಯೆ ಮಂಗಳಸುಮೂರ್ತಿಯಂ ನೋಡುತ್ತ ಹರುಷಮಯನಾಗಿರ್ದನು || ೭ ||

ಶೈವಾಳಮರವಿಂದಕತುಲ ಕಾಂತಿಯ ರಸಮ |
ನೀವಂತೆ ವಿಧುಚಿಹ್ನೆಯತಿಶಯಮನೋಹರದ |
ತಾವೆನಿಸಿ ರಾಜಿಪಂದದಲಿ ಮಲಿನಾಂಬರದೆ ಜೀವರತ್ನದ ತೆರದೊಳು ||
ದೇವಿ ಕಂಗೊಳಿಸಲೀಕ್ಷಿಸಿ ಬೆರಗುಗೊಂಡು ರಾ |
ಜೀವಮುಖಿ ಮಂಡನಗಳಿಲ್ಲದಲೆ ಸೌಂದರ್ಯ |
ಜೀವನಸ್ಥಾನಮೆಂದೆನಿಸಿರ್ಪಳುಲ್ಲೇಖೆಗೈವುದೆಂತಕಟೆಂದನು || ೮ ||

ಶೃಂಗಾರರಸದ ಸರ್ವಸ್ವಮೋ ಮೂಲೋಕ |
ದಂಗನಾಸೌಂದರ್ಯಮಖಿಲ ಪುಟ್ಟುವನೆಲೆಯೊ |
ಮಂಗಳಪ್ರದದೇವತಾಸಂಪ್ರದಾಯಮೋ ಮಾರನಾರಾಧ್ಯಸಿರಿಯೊ ||
ಭೃಂಗಾರ ಪುತ್ತಳಿಯೊ ಚತುರಾಸ್ಯ ನಿರ್ಮಾಣ |
ಸಂಗತಿಯ ಪ್ರಾಥಮಿಕ ಸದನಮೋ ಯೆನಲತಿ ಬೆ |
ಡಂಗಾಂತ ಭೂಜಾತೆಯಂ ಕಂಡು ಪವನಸುತ ವಿಸ್ಮಿತದಿ ಕ್ಕೈಮುಗಿದನು || ೯ ||

ಈಮಾನಿನೀಮಣಿಯ ಕರೆದೊಯ್ದೆನಾದಡಾ |
ರಾಮವೇ ಪತ್ತನಮೆನುತ್ತ ರಘುನಾಯಕಂ |
ಪ್ರೇಮದಿಂ ಸಾಮ್ರಾಜ್ಯ ಕೈಸಾರಿತೆಂದೆನುತ ಮನ್ನಿಸುವನೆನ್ನ ಮುದದೆ ||
ರಾಮಣೀಯಕಮೂರ್ತಿ ದೊರೆದಬಳಿಕಾರಾಗೆ |
ವೈಮಾನಿಕರ ಲೋಕದತಿಶಯವದೇಂ ಸಿರಿಯ |
ಸೀಮೆಯೆಂದಾನಂದಗೊಳುತ ಕುರುಹುಗಳೆಣಿಸಿ ನೋಡಿದಂ ಪವನಸುತನು || ೧೦ ||

ಬಾಲಚಂದ್ರನ ಬಳಸಿಕೊಂಡಿರುವ ಕಾರ್ಮುಗಿಲ |
ಜಾಲಮೆನಲೆಡಬಲದೆ ಪರಿವೇಷ್ಟನಂಗೈದು |
ಜ್ವಾಲಾಮುಖಿಗಳೂರ್ಧ್ವಮುಖಿಗಳತಿಭೀಕರದ ಮುಖದತಿರ‍್ಯಙ್ಮುಖಿಗಳು ||
ಮೇಲಕಡರಿದಮೂಗು ಮಗುಳಡ್ಡತರಮೂಗು |
ವಾಲಾಯತುಂಡದಂತೆಸೆವ ನಾಸಿಕಗಳ ಕ |
ರಾಳವದನೆಯರೆಸೆದರಮಿತಶಮಕಿಂಕರರ ತನುಜೆಯರ ಮಿಗಿಲಂದದೆ || ೧೧ ||



ಒಂದೆರಡು ಮೂರು ನಾಲ್ಕಾರು ಪಾದಂಗಳಿಂ |
ದೊಂದೆರಡು ಪದಿನಾಲ್ಕು ತೆರದಾರುಕಂಗಳಿಂ |
ಪಂದಿ ಪುಲಿ ಕರಡಿ ಕೋಡಗಮಜಂ ಮಾಹಿಷಂ ಸರ್ಪ ಘೋರಾಸ್ಯಂಗಳಿಂ ||
ಕಂಧರದ್ವಿತ್ರಿತಯ ನಾಲ್ಕಾರು ನೆರೆದು ಮಗು |
ಳೊಂದೊಂದ ನೋಡದ ವಿಕಾರ ಘೋರಾಕಾರ |
ದಿಂದೆಸೆವ ರಕ್ಕಸಿಯರಗಣಿತಮೆನಲ್ತೋರ್ದರವನಿಜೆಯ ಪರಿಸರದೊಳು || ೧೨ ||

ಕೆಲರತುಲದೀರ್ಘದೇಹಿಗಳಲ್ಪದೇಹಿಗಳು |
ಕೆಲರು ವಾಮನ ಕುಬ್ಜ ಛಾಯಾಶರೀರಿಗಳು |
ಕೆಲರು ವೃಕಮಂಡೂಕ ವಂಚಕಂ ಕೀಟಾದಿ ಶಾರೀರ ಮಾಂತೆಸೆವರು ||
ಕೆಲರು ಕಾಕೋಲೂಕ ಗೃಧ್ರ ಕಂಕದ ತನುಗ |
ಳಲಿ ತೋರ್ದ ಕೆದರ್ದಲೆಯ ಕೆಂಡಗಂಗಳ ಮಹಾ |
ಕುಲಿಶದಂಷ್ಟ್ರಂಗಳಿಂದೆಸೆವ ಘೋರಾಕಾರ ಧೂರ್ತೆಯರ್ತೋರ್ದರಲ್ಲಿ || ೧೩ ||

ಸತತ ಪಾನಾಸಕ್ತಿ ಮಾಂಸಭೋಜನರಕ್ತಿ |
ವಿತತದಾಹಾರ ನರಭಕ್ಷಣ ಮೃಗಾದನವೆ |
ಹಿತಮಹಿತಮೆಂದೆಂಬ ಯೋಚನೆಗಳಿನಿತಿಲ್ಲದಾಬ್ರಹ್ಮಕೀಟವಿಡಿದು ||
ಹತಗೊಳಿಪ ಕರ್ಕಶಕ್ರೂರ ಕಾಠಿಣ್ಯತರ |
ಮತಿಯುಳ್ಳ ದುಷ್ಕೃತಿಗಳೆಡಬಲದೊಳಿರಲು ಮಾ |
ರುತಿ ಕಂಡು ಬೆರಗಾಗಿ ವಿಧಿಕೃತವ ಬೆಳಗುತ್ತ ಮಗುಳೆ ಮಗುಳಿಂತೆಂದನು || ೧೪ ||

ನೀಲಜೀಮೂತದೊಡ್ಡಿನೊಳಿರ್ಪ ಶಶಿರೇಖೆ |
ಮೇಲೆ ಕ್ರಮದಿಂ ದಷ್ಟಮಾದರತಿಕೃಪಣತೆಯ |
ನೋಲಾಯ ತೋರ್ಪಂತೆ ಶ್ವಗಣಪರಿವೇಷ್ಟನೆಯೊಳಿರುವಾ ಕುರಂಗಿಯಂತೆ ||
ಬಾಲೆ ಬಂಧುಗಳ ಮಾರ್ನುಡಿವರೊರ್ವರ ಕಾಣ |
ದಾಲಸಿಯರೊಳಗೆಂತು ಜೀವಧಾರಣೆಗೈದ |
ಲೀಲೆಯಿದು ನೋಡಲೀಶ್ವರಯತ್ನಮಲ್ಲದನ್ಯತ್ರ ಸಾಧನಗಳಿಲ್ಲ || ೧೫ ||

ದೊರೆತನಂ ಪೋಗಿ ರಾಜ್ಯವನೀಗಿ ಕಾನನದೊ |
ಳಿರುವ ರಘುವೀರನೈಶ್ವರ್ಯ ಜೀವನರೂಪ |
ಪರಿಕಿಸಲು ಮಗುಳೆ ಬಂದೊದಗುವ ಶುಭೋದಯಕೆ ಧರಣಿಸುತೆಯುಳಿದಿರ್ಪುದೆ ||
ಪರನಿದರ್ಶನ ದೈತ್ಯರೆರೆಯಂಗೆ ದೌರ್ಭಾಗ್ಯ |
ದೊರೆದಪುದು ನನ್ನಿಯೆಂದಾನಂದಮಯನಾಗಿ |
ಮರುದಾತ್ಮಭವ ರಾಮಲಕ್ಷ್ಮಣಾದ್ಯರ ಪದಕೆ ನಮಿಸಿದಂ ಭಕ್ತಿಯಿಂದೆ || ೧೬ ||

ಮಂಗಳಪ್ರದೆಯ ನೋಡುತ್ತ ಮರುತಾತ್ಮಜಂ |
ಮುಂಗೆಲಸದಾಲೋಚನೆಯಲಿರಲ್ಕನಿತರೊಳು |
ಸಂಗಡಿತಮಾದ ರಾತ್ರಿಯು ಕೆಲವು ನಿಲಲಾಗಲಪರರಾತ್ರಿಯೊಳು ಬೇಗ ||
ಅಂಗಣಾಂಗಣಗಳೊಳಗಲ್ಲಲ್ಲಿ ತುರಗ ಮೇ |
ಧಂಗಳಂ ಪರಿಸಿ ಪಾಡುವ ಬ್ರಹ್ಮಘೋಷಂ ಷ |
ಡಂಗವಿಧದಾರಂವಗಳು ಕೇಳ್ದುವಾಕ್ಷಣದೊಳಾ ಪವನಜಾತನಿಂಗೆ || ೧೭ ||

ಅನಿತರೊಳು ದಶಮೌಳಿಗಾದುದತುಲಿತ ಸ್ವಪ್ನ |
ವನಚರಂ ಬಂದೊರ್ವ ಮನೆಮನೆಗಳಂ ತಿರುಗಿ |
ಬನವನೊಳಪೊಕ್ಕು ಧರಣೀಜಾತೆಯಂ ಕಂಡು ಸಂತೈಸಿ ಪಿಂದಿರುಗುತ ||
ವನವ ಸಂಹರಿಸಿ ರಕ್ಕಸನಿಚಯಮಂ ಕೊಂದು |
ಕೊನೆಗಗ್ನಿಯಿಂ ನಗರನೀರಾಜನಂಗೈವು |
ದನು ಕಂಡು ದೈತ್ಯಗುರು ಸಂತಸದಿ ತನ್ನೊಳಗೆ ತಾ ನಗುತ್ತಿಂತೆಂದನು || ೧೮ ||

ಕದನ ಮುಖದೊಳು ತನುವ ಪೋಗಾಡಿ ಮೋಕ್ಷಸಂ |
ಪದವ ಸಂಪಾದಿಸಲು ರಾಮನರಸಿಯ ತಂದೆ |
ನದರಿಂದ ರಘುವೀರನಟ್ಟಿದಂ ಕಪಿವರನ ಮನದಿಷ್ಟಮಾದುದೆನಗೆ ||
ಒದಗುವುದು ಸಮರ ಪರಬೊಮ್ಮನೊಡನಾಂ ಸೆಣಸಿ |
ಪುದಿದ ರಕ್ಕಸಭಾವಮಂ ಪಳಿದು ಸಂತೋಷ |
ದುದಯ ಸಮ್ಮೋದಗೊಂಡಪೆನೆಂದು ಹಿಗ್ಗಿದಂ ಕನಸಿನೊಳು ದೈತ್ಯೇಶನು || ೧೯ ||

ಆದರೊಳ್ಳಿತು ಬಂದ ಪಟುಭಟನ ಮುಂಗಡೆಯ |
ಲಾ ಧರಾಸುತೆಯ ಬೆದರಿಸುವೆನಿದ ಕೊಂಡೊಯ್ದು |
ಮೇದಿನೀಶಗೆ ದೂರಲತಿವೇಗ ರೌದ್ರದಿಂದೈತರುವನಾಂ ಬಯಸಿದ ||
ಹಾದಿ ಕೈಸಾರುವುದೆನುತ್ತ ಹರುಷಿಸುತಿರ |
ಲ್ಕಾದುದೆಚ್ಚರು ದೈತ್ಯಗನಿತರೊಳು ಸ್ಮರವೀರ |
ಬಾಧೆಯಿಂ ಧರಣಿಜೆಯ ನೆನೆನೆನೆದು ಪಂಬಲಿಸುತಿರ್ದ ಮಣಿಮಂಚದೆಡೆಯ || ೨೦ ||

ಮನದ ಬಯಕೆಯೊಳೆದ್ದು ಮುಂದೈದುತಿರೆ ಜಗುಳ್ದ |
ಕನಕಹಾರಂಗಳಂ ಕಾಣದೆಡಹುವದರಿಯ |
ದನಿತವಸರದಿ ಪೋಪ ದೈತ್ಯೇಂದ್ರನಂ ಕಂಡು ಕಾಂತಾಸಮೂಹಮೆಲ್ಲಂ ||
ತನತನಗೆ ನಿದ್ರೆಯಿಂದೆದ್ದು ಪಿಂದೈದುತ್ತ |
ಲನುನುತಿಸಿ ಛತ್ರ ಚಾಮರ ತಾಳ ವೃಂತಂಗ |
ಳನು ಪಿಡಿದು ಸ್ಮರನ ಪಿಂದೈದುವ ಚಮೂನಿವಹದಂತೆ ನಡೆಗೊಂಡರೊಲಿದು || ೨೧ ||

ಮುಂದೆ ಕರದೀಪಿಕಾಶತಸಾಸಿರಂಗಳಂ |
ಸೌಂದರ್ಯವದನೆಯರ್ಪಿಡಿದು ನಡೆಯಲ್ ಶರದ |
ಗೊಂದಣಗಳಂ ಕೆಲರು ಪಿಡಿದು ಬರೆ ಕೆಲಬಲದಿ ಮಣಿಖಚಿತ ಕಲಶಗಳಲಿ ||
ಛಂದ ಛಂದದ ರಸಗಳಂ ತುಂಬಿ ಪಿಡಿದು ಬರ |
ಲಂದದಿಂ ನವರತುನ ಚಷಕಮಂ ಪಿಡಿದು ಬರೆ |
ವೃಂದಾರಕೇಂದ್ರನೊಲು ಲಲನಾಸಮೂಹದಿಂ ಪೊರಮಟ್ಟನರಮನೆಯನು || ೨೨ ||

ಅತಿಶಯದ ಮದಮತ್ತ ಮಾನಿನೀ ಗಣದೊಡನೆ |
ರತಿಪತಿಯು ಯೆಂಬಂತಶೋಕನಂದನದೊಳಗೆ |
ಕತಿಚಿತ್ರದಂಗಳಿಡುತ್ತೈತಂದು ನಿಟ್ಟಿಸಿದ ಪರಿಪರಿಯ ವಿಹಗಗಳನು ||
ಸತತಗತಿಗತಿಶಯದ ಸೋಗೆಗಳ ನರ್ತನವ |
ಹಿತವ ನುಡಿವರಗಿಳಿಯ ಜೊತೆಗೆ ನಾದಿಸುವಳಿಗ |
ಳತುಲಿತ ವಿನೋದವಮಂ ನೋಡುತ್ತ ದಶಮೌಳಿಯಿಂತೆಂದ ನಂದನದೊಳು || ೨೩ ||



ಸರಸ ಕಾಸಾರಗಳ ಪರಿವೇಷ್ಟಿತಾರಗಳ |
ಚರಿಪ ನೃಪಕೀರಗಳ ಮೊರೆವ ಭ್ರಮರಾಳಿಗಳ |
ಪರಿಪರಿಯ ಪಕ್ವಫಲಭರನಮ್ರಕಮ್ರಾಪ್ತಮೆನಿಪ ತರುಷಂಡಂಗಳ ||
ಪರಿಯ ನಿಟ್ಟಿಸಿ ಬಳಸಿ ಬರುವ ಕರಿಗಮನೆಯರ |
ಕರಲಾಗಿನಿಂದ ನಿದ್ರಾಮದಾಕ್ಷಿಗಳಿಂದ |
ಬರುವ ದೈತ್ಯೇಂದ್ರನಿಂದ್ರನಸಿರಿಯ ಧಿಕ್ಕರಿಪನೆಂಬವೋಲ್ತೋರ್ದುದಾಗ || ೨೪ ||

ಮದಘೂರ್ಣ ನಿದ್ರಾಕಷಾಯಿತಾಕ್ಷಿಯರುಗಳು |
ಬೆದರಿ ಬರುವವಸರದಿ ಜಾರೆ ಕೆಲಸಾರ್ದಮೇ |
ಲುದುವ ಸೈಪಿಡದೆ ಕೆದರಿದ ಚಿಕುರನಿಕರಗಳನೋಜೆಗೈಯದೆ ಪದದೊಳು ||
ಕದಕದಿಪ ಹಂಸಕವ ಕರಕಿಟ್ಟ ಕಂಕಣವ |
ಮುದದಿ ಕಾಲ್ಗಿಟ್ಟು ಮುತ್ತಿನ ಬೊಟ್ಟ ಕಿವಿಗಿಟ್ಟು |
ಪದುಳದಿಂ ಕುಂಡಲಗಳನು ಬೈತಲೆಯೊಳಿಟ್ಟು ಬರುತಿರ್ದರವಸರದೊಳು || ೨೫ ||

ತಾರಕಾಮಧ್ಯದೊಳು ಚಂದ್ರಬಿಂಬಂ ಪೊಳೆದು |
ತೋರುವಂದದಿ ಸತೀಜನಮಧ್ಯದೇಶದೊಳು |
ಮಾರನೆನೆ ರಕ್ಕಸೇಶ್ವರ ಬರಲ್ಕೆಲಬಲದಿ ಕರಕ ಕರದೀಪಿಕೆಗಳು ||
ಚಾರು ಸೌಗಂಧಮಾರುತಗಳಾಭರಣಂಗ |
ಳಾರವಂಗಳು ಬರಾಬರಿಯ ಬಿಡಿಸುತ ಮುಂದೆ |
ಘೋರಣೆಯೊಳೈತರುತಮಿರ್ದುದತಿಚಿತ್ರಮೆನಲೇನೆಂಬೆನತಿಶಯಗಳ || ೨೬ ||

ಮೆರೆವ ಕಾಂಚೀನಿನದ ಕಿಂಕಿಣೀಗಣನಾದ |
ಪರಿಮಳ ಸ್ತ್ರೈಣಮಧ್ಯದಿ ಚಂದ್ರಬಿಂಬದೊಲು |
ಬರುವ ರಾವಣನ ಬಲಪೌರುಷಂ ವೈಭವದ ಸಿರಿಯ ಖರ್ವತೆಯ ಕಂಡು ||
ಬೆರಗಾಗಿ ಮರುತಸುತ ನಿಟ್ಟಿಸುತಮಚ್ಚರಿಯೊ |
ಳಿರೆ ಗಂಧತೈಲಾವಸಿಕ್ತ ದೀವಟಿಕೆಗಳ |
ತರತರದಿ ಪಿಡಿದುಬಹ ಸರ್ವಾಂಗ[1] ಸುಂದರನ ದಶಶಿರನ ಕಂಡನಾಗ || ೨೭ ||

ಉದಧಿಯೊಳು ಜನಿಸಿದಪ್ಸರಿಯರೇಂ ದಶಶಿರಗೆ |
ಮುದದಿಂದಮೈತಂದರೋಯೆನಲ್ಕೆಲಬಲದ |
ಸುದತಿಯರ ಸುಕುಮಾರಸೌಂದರ್ಯನೀರಧಿಯ ಮಧ್ಯದೊಳು ಥಳಥಳಿಸುವ ||
ಪದುಮಲೋಚನನಂತೆ ರಕ್ಕಸಂ ಬರುವ ಸಂ |
ಪದವ ಕಾಣುತ ಪವನಜಾತಂ ವಿಟಪಮೇದು |
ರದುದಗ್ರದಲ್ಲೊಂದುತಾಣದೊಳು ಮರೆಗೊಂಡು ನಿಂದು ನಿಟ್ಟಿಸುತಿರ್ದನು || ೨೮ ||

ಆಸುರನದೇಸು[2]ದಿನ ತಪಗಳಾಚರಿಸಿದನೊ |
ಯೀಸು ವೈಭವ ವಾಸವಾದ್ಯರಿಂಗುಂಟೆ ಮ |
ತ್ತೀಸುಬಲಿಯೋ ದಶಗ್ರೀವಮುಖ ವೀರರಮೆಗತಿಶಯದ ತೌರೆನಿಸದೆ ||
ಭಾಸುರೀಗಣಮಣಿಯೆನುತ್ತ ಕುರುಹಂ ತೋರ |
ದೈಸಿರಿಯ ಪರಿಯ ಗರ್ವಾಂಧರಿಗೆ ಕಾರ್ಯದಿಂ |
ದೋಸರಿಸಿ ಮರೆಗೊಂಡು ಬೆರಗಿಂದ ನಿಟ್ಟಿಸಿದನಾಗ ಮರುತಾತ್ಮಭವನು || ೨೯ ||

1 ಸುಂದರಿಯ. 2 ವಿಧ

ಲಲನೆಯರ ಕಲಕಲಾರಾವಗಳ ಭೂಷಣಗ |
ಳುಲಿಗಳಂ ಕೈವಾರಿಸುವ ಪ್ರಮದೆಯರ ಬೆಡಗ |
ನಲಘುಬಲರಕ್ಕಸನ ತೇಜಃ ಪ್ರಭಾವಮಂ ಕಾಣುತಚ್ಚರಿಗೊಳ್ಳುತ ||
ಕುಲಿಶಾಂಗವೊಂದೆಡೆಯ ಗುಪ್ತಮಾಗಿರಲು ಭೂ |
ಲಲನೆಯಾತ್ಮಜೆ ಕಂಡಳಾಗ ದಶಕಂಧರನ |
ಕಲಿತಸ್ವಭರ್ಾನುದರ್ಶನದಿಂದ ವಿಧುಬಿಂಬ ನಡುಗುವೋಲ್ ಭೀತಿಗೊಳುತೆ || ೩೦ ||

ಬಿರುಗಾಳಿಯಿಂ ಕದಳಿ ಬಳುಕುವಂದದಿ ಮಲಿನ |
ತರವಸ್ತ್ರದೊಳಗೆ ಸರ್ವಾಂಗಮಂ ಬೈಚಿಟ್ಟು |
ಮರುಗುತಂ ಜಂಬಾಲಕಲಿತ ಬಿಸಕಾಂಡದೊಲು ತೋರಿ ತೋರದ ತೆರದೊಳು ||
ಧರಣೀತನೂಜಾತೆಯಿರವ ಕಂಡಾ ದೈತ್ಯ |
ರೆರೆಯನನುರಾಗದಿಂದವಿವೇಕ ವೆಗ್ಗಳದಿ |
ಪರಕಲಿಸಿ ಕರಣ ವಿಕಳತೆಗೊಳುತಮುಪಚರಿಪೆನೆಂದಿಚ್ಛೈಗೈದನೊಲಿದು || ೩೧ ||

ಮನಸಿಜನ ಬಲುಹೆಂತೊ ಮಾನಹಾನಿಯ ಲೇಶ |
ವನು ಗಣನೆಗೊಳ್ಳದುನ್ಮತ್ತತೆಯ ದುರ್ಮತಿಯ |
ಘನತೆಯಿಂ ದಶಮೌಳಿ ಪರಿಪರಿಯ ಭೂಷಣಾಂಬರಗಳಂ ತರಿಸಿ ಮುದದಿ ||
ಸನಿಹದೊಳಗಿಟ್ಟು ಸಮ್ಮತಗೊಳಿಪೆನೆಂಬ ಮನ |
ದನುವಿಂದ ಮಾಧೂರ್ಯ ಧುರ್ಯ ವಚನಗಳಿಂದ |
ಮನ ಬಂದ ತೆರದಿ ಮೂದಲಿಸಲಿಚ್ಛೈಸಿದಂ ಮೃತ್ಯುವಂ ಬಾಗರೆವೊಲು || ೩೨ ||

ಪ್ರೇಮವಿಹ್ವಲನಾಗಿ ಮದಮುಖದಿ ರಾವಣಂ |
ರಾಮಪುರದರಸನಂಗನೆಯ ಮೋಹನಗೊಳಿಪ |
ತಾಮಸೀಬುದ್ಧಿಯಿಂ ತಳ್ಕಂಕಗೊಳುತಾಗ ತವಕದಿಂ ನಾಮವಿಡಿದು ||
ಭ್ರಾಮಕತ್ವದಿ ಕರೆದು ಭ್ರಮರಾಳಿ ತಾಳಿಗೇಂ |
ಪ್ರೇಮಮುಸುರೆನುತ ಚಿತ್ತಪ್ರಸಾದನಗೈವ |
ಕಾಮುಕಾಸ್ಪದ ನುಡಿಯಲನುಗೈದನೇಂ ಪರವಶನೊ ಖಳಂ ದುರ್ಮೇಧೆಯ || ೩೩ ||

**ಎಂಟನೆಯ ಸಂಧಿ ಸಮಾಪ್ತಂ.**

# ಒಂಬತ್ತನೆಯ ಸಂಧಿ

ಸೂಚನೆ || ಪಿಡಿದೊಂದು ತೃಣವ ಪೊಡವೀತನುಜೆ ಧಿಕ್ಕರಿಸೆ |
ಕಡುಗೋಪದಿಂದ ರಾವಣ ದುಷ್ಟ ರಕ್ಕಸಿಯ |
ರೊಡನೆನಿಷ್ಠುರಗೈಯ್ಯೆ ನೇಮಿಸುತ ತಿರುಗಿದಂ ಖಿನ್ನತೆಯೊಳಂ ನಿಲಯಕೆ ||

ಮನವ ಪತಿಯೊಳಗಿಟ್ಟು ಮಮತಾದಿಗಳ ಸುಟ್ಟು |
ನೆನಹು ಮಾತ್ರವ ಪಿಡಿದು ನಿರಶನವ್ರತವಿಡಿದು |
ತನುದಂಡನಂಗೈದು ತ್ವತ್ಪದ ಸರೋರುಹದೊಳಿಟ್ಟು ಸಾರಸ್ವವೈದು ||
ದಿನಗಳಂ ಕಳೆಯುವ ಸುಚರಿತಾ ಶಿಖಾಮಣಿಯ |
ವಿನಯದಿಂ ದೌರ್ಭಾಗ್ಯ ಕಲಿತ ದಾನವರೆರೆಯ |
ಸನುಮತದೆ ಮೂದಲಿಸಲತಿ ಹರುಷವೆತ್ತು ಮಾತಾಡಿಸಿದನದ್ರಿಜಾತೆ || ೧ ||

ಶಶಿರೇಖೆ ಮಾಲತಿ ಶಿರೀಷಕೋಶಗಳ ಮೃದು |
ಪುಸಿಯೆನಿಪ ಸುಕುಮಾರ ಭವದಂಗ ಕನಕಲತೆ |
ವೆಸನದಿಂ ಕಂದಿ ಕಾರ್ಶ್ಯವನಾಂತು ಸಂತತಂ ಸುಖಲೇಶಮಂ ತಿಳಿಯದೆ ||
ಪಸಿವು ನೀರಡಿಕೆಯಿಂದರೆಯಾಗಿ ತಗ್ಗಿರುವ |
ರಸುಮಂತರೀಕ್ಷಿಸುತ ಜೀವಮಂ ಧರಸಿರಲು |
ರಸೆಯೊಳೆಂತಹುದಬ್ಜನೇತ್ರೆ ನಿಷ್ಕಾರಣಂ ಚಿಂತೆಯಂ ತ್ಯಜಿಸು ಬೇಗ || ೨ ||

ಸಕಲಾಂಗ ಸೌಂದರ್ಯವೆತ್ತ ವಿಧುರೇಖೆ ತಾಂ |
ಸಕಲ ಚಿತ್ತಾನಂದಕರ ಮನೋಹರದೇಳ್ಗೆ |
ಯಕಳಂಕ ಚಂದ್ರಮುಖಿ ರಮ್ಯವಸ್ತುಗಳಿಂಗೆ ವಿಕೃತಿಯಾದುರು ಮಂಡನಂ ||
ನಿಕಟಹಿತಮಾರ ಮಹಿತಂಗಳೆಂಬುದದೇನು |
ಸುಕುಮಾರ ಸೌಂದರ್ಯಕರ ವಸ್ತುವಿಂಗುಂಟೆ |
ಶುಕವಾಣಿ ಕೇಳ್ವುದೆನ್ನಯ ನುಡಿಯನಾತ್ಮಸುಖಕರಮೆಂದು ಪ್ರೀತಿಗೊಂಡು || ೩ ||

ಸೊಕ್ಕು ಜವ್ವನ ಸೊಬಗು ಸುಕುಮಾರದವಯವಗ |
ಳಿಕ್ಕತುಲ ಚಾತುರ್ಯ ಮಾಧುರ್ಯ ಸುರಸತೀ |
ಧಿಕ್ಕೃತದ ಲಾವಣ್ಯಮಾವಸತಿಯರಿಗುಂಟು ಸರ್ವಜನ ಹಿತದನಂಟು ||
ಅಕ್ಕರಿಂದಳವಟ್ಟ ಬಳಿಕಲವರಾವೆಡೆಯ |
ನಿಕ್ಕಿನೋಡಲು ಸಗ್ಗಸುಖದಾದಿಯಂದದಿಂ |
ಗಕ್ಕನನುಸರಿಪುದಲೆ ಸ್ತ್ರೀರತ್ನ ಸರ್ವಜನಮಾನ್ಯಮಾವಾವೆಡೆಯೊಳು || ೪ ||

ಆನಂದಸಂದಾಯಿಯೆನಿಪ ಯೌವ್ವನಲಕ್ಷ್ಮಿ |
ತಾನಂಗಗಳನಪ್ಪಿ ಪ್ರಾರ್ಥನಂಗೈವುತಿರೆ |
ನೀನಥಃಕರಿಸಿ ನಿಟ್ಟಸದಿಹುದು ಮತಿಯುತರ ಮತವಲ್ಲ ಪೋದಬಳಿಕ ||
ಏನಾದರುಂ ಬರ್ಪುದಲ್ಲವೀ ಜವ್ವನಂ |
ತಾನುಮಗುಳ್ಕೆತಹುದೆ ಸಕಲಸಂತೋಷಗಳ |
ನಾನಂದದಿಂದಮನುಭವಿಸವೇಳ್ಕುಂ ಧರಾಜಾತೆ ಸ್ಮರಶಾಸ್ತ್ರಗೀತೆ || ೫ ||

ಈ ಮನೋಹರ ನೇತ್ರಕಮಲಮಿಾ ಚಂದ್ರಮುಖ |
ಮಿಾ ಮಹೀನಿಭ ಮಧುರಮಿಾ ಕಪೋಲಿತ ಮುಕುರ |
ಮಿಾ ಮಹಾಶಂಖಗಳ ಬಿಸಕಾಂಡನಳಿತೋಳಕರ ನಿರಾಸಪ್ರವಾಳ ||
ಈ ಮುದ್ದು ಚಕ್ರಕುಚಮಿಾ ಚಂಚರೀಕ ಕಚ |
ವೀ ಮಧುರತರಸುಗತಿ ವಿಚಿರ ಕಾದಂಬತತಿ |
ಗೀ ಮಹಿಯೊಳೆಣೆಯುಂಟೆ ಕರಕಷ್ಟರೊಳು ನಂಟದ್ಯಾತಕುಳಿ ಶುಭವನೆಣಿಸು || ೬ ||

ದೇದೀಪ್ಯ ಭೂಷಣಗಳೀ ನವೀನಾಂಬರಗ |
ಳೀ ದಿವ್ಯಪಾನಂಗಳೀ ಲಲಿತಯಾನಂಗ |
ಳೀ ಬೇಡಿದುದನೀವ ಸುರಧೇನು ಕಲ್ಪತರು ನಿಚಯ ಚಿಂತಾಮಣಿಗಳು ||
ನವರಸಾಲಂಕಾರ ಭರಿತ ದೇವಾಂಗನಾ |
ನಿವಹಂ ಭವದ್ದಾಸ್ಯಮೆಸಗುವಂದದೆ ಚಿತ್ತ |
ಲವಲವಿಕೆಯಿಂದೊಪ್ಪುಗೊಂಡು ಸಂತಸಗೊಂಡು ಸುಖವನನುಭವಿಸು ನೀರೆ || ೭ ||

ತ್ರಿದಶಾದಿಮುಖ್ಯರೀ ನೆಲದಿ ಚರರಾಗಿಹ |
ರ್ಚದುರ ಗಾಂಧರ್ವ ತುಂಬುರರಾದಿಗಳ್ನಿತ್ಯ |
ಸದನದೆಡೆಯೊಳ್ಪಾಡಿ ಪೊಗುಳುತಾನಂದ ಪರವಶಗೈವರನುಪದದೊಳು ||
ಸುದತಿ ತನುವಿರ್ದಾಗ ಸಕಲಭೋಗಗಳಿಂದೆ |
ಮುದವಾಂತು ಭೋಗಿಸುವುದತಿಲೇಸು ಸರ್ವಸಂ |
ಪದವ ನೀಂ ಕೈಕೊಂಡು ಸಕಲಭಾಗ್ಯಾಧಿಪತಿಯಾಗು ನವನೀಲವೇಣಿ || ೮ ||

ವನರಾಶಿಯೆಡೆಯೆಡೆಯ ಲಲಿತ ನಂದನಗಳಲಿ |
ಧನದಪುಷ್ಪಕದೊಳಗೆ ಕುಳ್ಳಿರ್ದು ದೇವತಾ |
ವನಿತಾದಿಗಳುಮಾಳ್ಪ ಪಲವುವಿಧದುಪಚಾರಗಳನು ಕೈಕೊಂಡು ಬಳಿಕ ||
ತನುಸೌಖ್ಯಮಂ ಪಡೆದು ಪಡೆದು ಪೋಷಣಗೈದ |
ರನು ಮುದಂಗೊಳಿಸಿ ಪೊಂದಿದ ಮನಗಳಿಷ್ಟಂಗ |
ಳನು ಕೊಡುತಮಾಮರಣಪರಿಯಂತಮಿಹುದುಚಿತ ಸಚಕಿತ ಮೃಗಾಯತಾಕ್ಷಿ || ೯ ||

ಮನಮೊಲಿದು ಮದ್ವಚನಮೊಪ್ಪುಗೊಂಡರೆ ನಿನ್ನ |
ಜನಕಂಗೆ ಬೇಕಾದ ರಾಜ್ಯಮಂ ಮಣಿಧೇನು |
ಕನಕಾಂಬರಂಗಳಂ ಕೇಳ್ದನಿತ ಕೈಗೈವೆನೊರ್ವಳಿಂದಖಿಳಬಂಧು ||
ಜನರೆಲ್ಲ ಸುಖದಿಂದಮಿರಲಿ ಸತಿಯರ ಮಧ್ಯ |
ಮಿನುಗು ಮಾಣಿಕ್ಯದೊಲು ನಿರ್ನಿಮಿತ್ತದಸೌಖ್ಯ |
ವನು ಪಿಡಿದುಕಾಯದಂಡನೆಗೈವುದನುಚಿತಂ ರಾಜೀವ ಪತ್ರನೇತ್ರೆ || ೧೦ ||

ಈಜಗ್ಗುಯಿಾನಿಗ್ಗು ಯಿಾಸೊಂಪು ಮೇಲ್ತಂಪು |
ಯಿಾಜಾಣ್ಮೆ ಯಿಾನಲ್ಮೆ ಯಿಾಗಾಡಿ ಯಿಾಮೋಡಿ |
ಯಿಾಜಂಪು ಯಿಾಯಿಂಪು ಮಿಾಹದುರುಚದುರುಗಳು ರತಿರಂಭೆಮೇನಕೆಯರ ||
ಈಜಾಗ್ರಪ್ರತ್ಯಗ್ರಮಿಾತಳ್ಕುಕಳೆಬೆಳ್ಕು |
ಯಿಾಜಲ್ಪಮೃತಕಲ್ಪಮಾರಿಗಳವಡದು ಕೇ |
ಳೀಜಗತ್ರಯದೊಳೀಚೆಲುವ ವ್ಯರ್ಥಂಗೈಯದಿರು ಚಂಚರೀಕಾಳಕಿ || ೧೧ ||



ಧರೆಯೊಳಗೆ ದೇಹಮಿಹುದತಿಶಯಂ ಯೌವನಂ |
ಪರಮದುರ್ಲಭ ರೂಪಸಂಪತ್ತಿ ಚಾತುರ್ಯ |
ದೊರೆದಪುದಪೂರ್ವಕೃತ ಸುಕೃತದಿಂದೆಲ್ಲಮುಂ ಸಂಘಟನೆಯಾದ ಬಳಿಕ ||
ಸಿರಿಯು ಸಮನಿಸಲರಿದು ಸಿಲುಕಿತಾದರೆ ದಿವ್ಯ |
ತರ ಭೋಗದನುಭವದಿ ಪಗಲಿರುಳ ಭೇದಮಂ |
ಮರೆದಿರುವುದುಚಿತಮಲ್ಲದೆ ಕ್ಲೇಶಗೊಳ್ವುದೇಂ ಮೇಧೆ ಬರಿಬಾಧೆಯಬಲೆ || ೧೨ ||

ಸುರರಾಜ ಮೊದಲಾದ ದಿಕ್ಪಾಲ ಪಾತಾಳ |
ದಿರವೆನಿಪ ಬಲಿ ಮಯಾಸುರ ಮುಖ್ಯದಾನವರು |
ಧುರದೊಳೆನ್ನಯ ಪೆಸರ್ಗೊಂಡರಳ್ಕುವರು ಪೇಣ್ನರರು ವಾನರರದೆಂತು ||
ಶರಧಿಮಧ್ಯದ ಶೈಲಶತಸಹಸ್ರಾಧಿಕದ |
ದುರುಳದೈತ್ಯರಗುಪ್ತ ಸುರಪಜಿತು ತನಯನಿದ |
ಪರಿಕಿಸು ಮಹಾಭಾಗ್ಯಮಾರಿಗಳವಟ್ಟಪುದು ಮೂಲೋಕದೊಳು ಸುಂದರಿ || ೧೩ ||

ನೆನೆವರುಂಟೇ ಲಂಕೆಯನು ಕನಸಿನೊಳಗಾಗೆ |
ನೆನೆದೆಡೆಗೆ ಪೋಗಿ ಕ್ರೀಡಿಸೆ ಧನದಪುಷ್ಪಕಂ |
ಮಿನುಗುತಿದೆ ನಿಟ್ಟಿಸು ಮನೋವೇಗ ಪಾಸಟಿಯ ಕಾಣದೈಸಿರಿಯ ನೀನು ||
ಘನತೆಯಿಂ ವಶಗೈದು ಎನಗುಳ್ಳದೇವತಾ |
ವನಿತೆಯರಿಗೊಡತಿ ನೀನೆನಿಸಿ ಸೌಖ್ಯದೊಳಿರ್ದು |
ಮನಸಿಜನ ಪ್ರೀಣನಂಗೊಳಿಸಿ ತದ್ದೇವತೆಯನನುಸರಿಪುದುಚಿತಮಬಲೆ || ೧೪ ||

ಸಕಲಸೌಭಾಗ್ಯಗಳನಿತ್ತ ವಿಧಿ ನಿನಗೊಂದು |
ಯುಕುತಿಯಂ ತೆರದಾದನೂಣಯಂ ಚಂದ್ರಮನ |
ಸಕಳಂಕಿಯೆನಿಸಿದಂ ಕೃಪಣ ಜೀವಿಯಮನುಜ ನಿರ್ಧನಿಕನಬಲ ಬಂಧು ||
ನಿಕರಮಂ ತೊರೆದಟವಿಯೊಳು ಚರಿಪ ಮೂರ್ಖನಾ |
ಸಕತಿಯಿಂದೇಂ ನೆನೆದು ತನುದಂಡನಂಗೈದು |
ರಕುತಿಯುಂಟೇನಬಲೆ ಶಕ್ತರಾರುಂಟೆನ್ನ ನಗರಿಯಂ ನಿಟ್ಟಿಸುವರೆ || ೧೫ ||

ಆರಿಂದ ತೀರದೀ ದುರ್ಘಟದ ಪದವಿ ಮ |
ತ್ತಾರಣ್ಯಕಂ ರಾಮನಬಲನವನನುಜನಿಂ |
ದೋರಂತೆ ಸಾಧಿಸಲು ಶಕ್ಯಮೇ ಪಸಿವು ತೃಷೆಯಿಂದ ಸಂಕಟಗೊಳ್ಳುತ ||
ಘೋರರಕ್ಕಸರ ಬಾಧೆಯೊಳಿರ್ಪುದೇನು ದಿಟ |
ದೂರನೋಡೀ ನುಡಿಯ ಹಿತಮೆಂದು ಹೃದಯದೊಳು |
ಧಾರಣಂಗೈದು ಸುಖಮಂ ಬಯಸು ನಿಲ್ಕದದ ನೆನೆದು ಸಂಕಟಗೊಳುವರೆ || ೧೬ ||

ರಾಮ ನಿನ್ನಂ ಕಾಣ್ಬುದದು ದೂರತೋಪಾಸ್ತ |
ಭೀಮಾದ್ಯರೀಕ್ಷಿಸುವರಳವಲ್ಲಮಿಾನಗರ |
ಸಾಮಾನ್ಯಮನುಜರಿಂದಹುದೆ ನೀಂ ಮುಗ್ಧತೆಯ ಕಳೆದಿಟ್ಟು ಹರುಷವಟ್ಟು ||
ಈ ಮಹಾಸಾಮ್ರಾಜ್ಯದೊಡೆತನವನನುಭವಿಸಿ |
ಪ್ರೇಮದಿಂದೆನ್ನಾಳ್ದಳೆನಿಪ ಕೀರ್ತಿಯ ಗಳಿಸಿ |
ಕೋಮಲಾಂಗವನಲಂಕರಿಸಿ ಸಂತಸದಿಂದಮಿಹುದುಚಿತ ತಾಮ್ರಾಧರೆ || ೧೭ ||

ಕುಸುಮಸುಕುಮಾರತನು ಕುಂದಿಹುದ ನಿಟ್ಟಿಸುತ |
ರಸೆಯೊಳಾರಿರ್ಪರಂಗನೆ ಪೂರ್ವಸುಕೃತದಿಂ |
ಪೊಸತಾದ ರೂಪು ಸಮನಿಸಿತು ಭವದೀಕ್ಷಣಂಗೈದಂದಿನಿಂದಮೆನ್ನ ||
ಕುಸುಮಶರನಲೆವ ಶತಸಾಸಿರಸ್ವರೂಪಾಂತ |
ಶಶಿವದನೆಯರನೊಲ್ಲದಿದೆ ಮನಂ ಪ್ರಿಯದಿಂದ |
ಬಿಸಜಾಕ್ಷಿ ದಯಗೈದು ನುಡಿಯನಂಗೀಕರಿಸಿ ಸುಖವ ಸಂಪಾದಿಸುವುದು || ೧೮ ||

ದಿನಕರಾನ್ವಯನ ನೀ ನೆನೆನೆನೆದು ಬಯಸುವುದು |
ಮನಸಿನ ಮನೋರಥಂ ಕನ್ನಡಿಯ ಗಂಟಲ್ಲ |
ದನುವಾಗದೆಂದಿಗುಂ ನೋಡಿ ಬದುಕಿದರಿಲ್ಲದಿದ ನುಂಗಿ ಬಾಳ್ವರುಂಟೆ ||
ವನಿತಾಶಿರೋಮಣಿಯೆ ವಚನಗಳ ಪತಿಕರಿಸಿ |
ಮನುಮಥೋತ್ಸವದಿಂದಮಾನಂದಮುಯಳೆನಿಸಿ |
ತನುಸುಖದೊಳಿರ್ಪನ್ನ ತವಕವಿಲ್ಲದ ಸಿರಿಯನನುಭವಿಪುದುಚಿತಮಬಲೆ || ೧೯ ||

ಮಂದಮತಿಯಿಂದ ರಕ್ಕಸರಾಜ ಬಾಯ್ಗೆ ಬಂ |
ದಂದದಿಂ ಪಲುಬಿದುದಮಾಲಿಸುತ ಕಾಲಾಗ್ನಿ |
ಯಂದದಿಂ ಕಂಗಳೊಳು ಕಿಡಿಗರೆದು ಬಿಸುಸುಯ್ದು ತೃಣವ ಕರತಳದಿ ಪಿಡಿದು ||
ಬೃಂದಾರಕಾರಾಧ್ಯೆ ಧರಣಿಸುತೆ ಕಡುಗೋಪ |
ದಿಂದಂ ತಿರಸ್ಕರಿಸಿ ಮತ್ತಾಗತಾಯುಷನೊ |
ಳೆಂದಳೇನೆಂಬೆನೆಂತುಟೊ ಪತಿವ್ರತೆಯರಿಗೆ ಧೃತಿ ಮತಿಯು ನಿರ್ಭೀತಿಯು || ೨೦ ||

ಸುರಪ ಮೊದಲಾದ ದಿಕ್ಪಾಲಾಂಶಗಳನು ಸ್ವೀ |
ಕರಿಸಿ ಮೂರ್ತಿಯಗೈದು ಸಕಲಧರ್ಮಸ್ಥಿತಿಗ |
ಳರುಪಿ ನಿಜಕಳೆಯನಾರಹಿಸಿ ನೃಪತಿಯೆನಿಪ್ಪನಾ ಪರಮಪುರುಷ ದಯದೆ ||
ಧರಣಿಯಲಿ ಧರ್ಮ ಪರಿಪಾಲನಂಗೈದಘವ |
ಪರಿಹರಿಸಿ ಸಾಧುಸಜ್ಜನ ರಕ್ಷಣಂಗೈದು |
ನಿರುತ ಸತ್ಕೀರ್ತಿಯಿಂ ಪರವ ಸಂಪಾದಿಸುವುದರಸುಗಳ ನೀತಿ ನೆಲದೆ || ೨೧ ||

ತನ್ನಾರಸಾತ್ಮಜರ ತೆರದಿನಖಿಲ ಪ್ರಜೆಗ |
ಳನ್ನು ಮನ್ನಣೆಗೈದು ಧರ್ಮ ಪೆರ್ಚುವ ತೆರದೆ |
ಚೆನ್ನಾಗಿ ಸೂಕ್ಷ್ಮಮತಿಯಿಂ ತಿಳಿದು ಕಾರುಣಿಕತನದಿಂದ ಜನರ ಪೊರೆದು ||
ಭಿನ್ನ ಚಾರಿತ್ರನೆನಿಸದ ಮಹಾರಾಜನ |
ತ್ಯುನ್ನತದ ಕೀರ್ತಿಯಂ ಗಳಿಪನಾ ನೆಲದೆ ಸಂ |
ಪನ್ನ ಧನಧಾನ್ಯವೆರೆದಾಲೋಕ ಸಂಭ್ರಮದಲಿಹುದು ಭಾವಿಸಿ ತಿಳಿವಡೆ || ೨೨ ||

ವ್ಯಸನಸಪ್ತಕದಿಂದ ಕುಜನರೊಳು ಲೋಲುಪ್ತಿ |
ಯೆಸಗುತಿರೆ ಮತಿ ವಿಕಲಮಾಗಿ ಪಿರಿಯರು ಕೋಪ |
ದೆಸಕದಿಂದಾ ನೆಲನನುಳಿಯೆ ಧರ್ಮಂ ಪೋಗಿ ಪಾಪ ಸಂಬಂಧಮಾಗಿ ||
ನಸಿದಾಯುಷಂ ಜಸಂ ಬಲ ಸಂಪದಗಳೆಲ್ಲ |
ಕುಸಿದು ಪೋಗದೆ ಮಾಣದನುಪದ ವಿಪದ್ಭಾವ |
ಪೊಸಗದಿಹುದೆ ವರಾಕ ತಿಳಿಯದೆ ದುರಾಧ್ಯತೆಯಿನಾಳೆ ಕೇಳ್ ಲೇಸೊದಗುಮೆ || ೨೩ ||



ಏಸುತಪದಿಂದಮಾರ್ಜಿಸಿದೆ ನೀನೀಸಿರಿಯ |
ನೇಸುವಾಸವಪ್ರಮುಖ ಮಾನ್ಯತೆಯ ಪುಟಭೇದ |
ಭಾಸುರಾಯುಃಕೀರ್ತಿಬಲಗಳಂ ಬಹುತರದ ಕರ್ಮದಿಂ ಗಳಿಸಿ ಬರಿಯ ||
ಭಾಷೆಯಿಂ ಪೋಗಾಡಿಕೊಳಲು ಪರನಾರಿಯರ |
ವಾಸಿಯಂ ಕಲಿತೆ ಯಿಾಮತಿಯಿಂ ಭವದ್ವಂಶ |
ನಾಶಮಾಗದೆ ಪೋಗುವುದೆ ಮೂಢ ನೀಂ ಕಲಿತ ಕಲೆಗಳೇನಾದುವಕಟ || ೨೪ ||

ಜಗತಿಯೊಳು ಪೆರರ ನಾರಿಯರ ಬಯಸಿದರಿಂಗೆ |
ಸೊಗಯಿಪುದು ದುಷ್ಕೀರ್ತಿ ತೇಜೋಬಲಗಳಡಗಿ |
ಮಿಗೆ ವಂಶನಾಶಮಾದಪುದು ಕೆಲರೀಪರಿಯ ದುರ್ಬುದ್ಧಿಯಿಂದಮಳಿದ ||
ಬಗೆಯ ಕೇಳ್ದರಿಯ ನೀನೊರ್ವನೆಸಗಿದ ಪಾಪ |
ವೊಗುಮಿಗೆಯ ನಗರ ಕುಲಗೋತ್ರ ನಿರ್ನಾಮದಿಂ |
ಜಗುಳುವುದು ನಿರಯನಿಲಯಕೆ ದುಷ್ಟದುರ್ಮೇಧೆಗೆಳಸುವರೆ ಧೀಮಂತರು || ೨೫ ||

ಬಲಪೌರುಷಂಗಳಂ ಬಗುಳುತಿಹೆ ಕಾನನದಿ |
ಕಲಿತ ಸನ್ಯಾಸಿವೇಷದಿ ಭಿಕ್ಷಯಾಚನೆಯ |
ನೊಲಿದಾಂತು ರಘುವೀರಲಕ್ಷ್ಮಣಾದಿಗಳಿಲ್ಲದವಸರದಿ ಚೌರ್ಯಗೈದು ||
ಉಲುಹುದೋರದೆ ನಭೋಗತಿವಿಡಿದು ನೀರ್ವೊಕ್ಕ |
ಬಲಪರಾಕ್ರಮನೆ ಪೊಗಳುವೆ ಲಜ್ಜೆಯಿಲ್ಲದಲೆ |
ಕುಲಗೆಡುಕ ವಿಷವಮೃತವೆಂದು ಭಾವನೆಗೈದು ಮತಿವಂತನೆಂದುಸಿರುವೆ || ೨೬ ||

ಕೇಳೆಲವೊ ನರಿಯು ಕೇಸರಿಗೆ ಸಮನೆನಿಸುವುದೆ |
ಕೀಳು ಕಾರ್ಬಕ್ಕಿ ಸಾಳ್ವಂಗೆ ಪಾಸಟಿಯಹುದೆ |
ಜಾಳು ಶುನಗಳತಂಡ ಶರಭಗೇನೆಣೆಯಹುದೆ ಪಾನಮದದಿಂದ ಸೊಕ್ಕಿ ||
ಕೀಳುಮೇಲರಿಯದೀಪರಿಯಲೊದರುವೆ ನೀಚ |
ಸಾಳಕರಮೌಳಿಗಳು ಭೂರೇಣುವಂ ಕಚ್ಚಿ |
ಕಾಳಾಗದುಳಿದಪುವೆ ಕೈಗೆ ನಿಲ್ಕದ ಬಯಕೆಯಂ ಬಯಸಿ ಕೆಡುವೆಯಕಟ || ೨೭ ||

ತರಣಿವಂಶೋದ್ಭವನ ಶರವೇಗದಿಂದಖಿಲ |
ದುರುಳರಕ್ಕಸರೆಲ್ಲ ಪರಿದ ಶಿರಕಾಲ್ಗಳಿಂ |
ದುರುಳಿರಲು ಧರಣಿಯೊಳು ಕಂಡವರ ಸತಿಯರುಂ ತಲೆಗೆದರಿ ತಲೆಯ ಸೊಣದು ||
ತರತರದೊಳಳುತಳುತ ಮನೆಯೊಳಗೆ ಗೋಳಿಡುವ |
ಪರಿಯ ನಾಂ ಕಾಣ್ಬೆ ಮುಳ್ಮುತ್ತುಗವು ಪೂತಂತೆ |
ತರಿದ ಗಾಯಗಳಿಂದ ಸುರಿವ ರಕುತದಿ ನಿನ್ನ ನೋಳ್ಪೆನತಿವೇಗದಿಂದೆ || ೨೮ ||

ಜೀವರಂತರ್ಯಾಮಿ ಸಕಲಜಗದಾಧಾರ |
ದೇವರಿಗೆ ದೇವ ರಘುರಾಜೇಂದ್ರಚಂದ್ರಮನ |
ನೀವಸುಧೆಯೊಳಗೆ ನೆನೆದರಿಗೆ ಪಾವನತರವ ಚಿರಕಾಲಸಂಪದಗಳ ||
ಈವ ಕರುಣಾಕರನ ಮುದಮತ್ತನಾಗಿ ನೀ |
ನಾವ ಪರಿಯೊಳ್ಜರೆವೆ ಯಕಟಕಟ ಲೋಕದೊಳು |
ದೇವತಾನಿಂದೆ ಕುಲನಾಶಕರಮೆಂದೆಣಿಸದಾದೆಯಲ ಕುಣಪಾಶನ || ೨೯ ||

ಎನಿತುಸಿರಿ ಯೆನಿತು ಧನಮೆನಿತುಸಂಪದ ಪುತ್ರ |
ರೆನಿತು ಸ್ತ್ರೀಯರಸಂಖ್ಯಮಾದ ಸಂಪತ್ತಿಯಿಂ |
ವನಜಾಸನ ಪ್ರೇಮದಿಂದಮಾರ್ಜಿಸಿ ತುದಿಗೆ ರಘುವರನ ವೈರವಿಡಿದು ||
ವನಧಿಯೊಳ್ಕಲಸಲೆಳಸಿದೆ ಮೂಢ ಸಂಪದವ |
ನನಿಮಿತ್ತದಿಂದ ನೀ ಪೋಗಾಡಲನುಚಿತಂ |
ಶುನಿಗೆ ದುಃಖವದುಂಟೆ ನಾರಿಕೇರಮೆನುತ್ತ ಲೋಕಜನಪೇಳ್ವರಲ್ತೆ || ೩೦ ||

ತನಗೆ ಕಂತು ಪತಂಗನಾಮಮೆಂದುಬ್ಬುತ್ತ |
ಕಿನಿಸಿನಿಂದ ಪತಂಗನೆಡೆಗೈದೆ ಮಿಂಚುಬುಳು |
ತನು ಕ್ಷೇಮಕರಮಹುದೆ ಪಾಕಾರಿಮೊದಲಾದರಿತ್ತ ಬಲಪೌರುಷಗಳ ||
ನೆನೆದಖಿಳದೇವತಾಮೌಳಿಯೊಳು ಸೆಣಸಿ ನೀ |
ನನುವಿಂದ ಬದುಕಲೆಳಸುವೆಮೂರ್ಖ ಪೈಶೂನ್ಯ |
ದನುವನಂಗೀಕರಿಸಿ ಬಾಳ್ದರುಂಟೇ ಜಗದಿ ತಿಳಿಯದಲೆ ಕುಲಪಾಂಸನ || ೩೧ ||

ಆಂಧಸಾಂಬರ ಮಾತ್ರಮನುವಾಗೆ ಖಲನಾ ಸು |
ದಾಂಧ ಸುರಪತಿಯೆಂದು ತಿಳಿವನಕ್ಕರದೊಡೆಯ |
ನಂಧಕಾಂತಕ ಛಾತ್ರನೆಂದೊರೆವನೆಲ್ಲರೊಳು ಮೂಢರೆಡಬಲದಿ ಕುಳಿತು ||
ಬಂಧುರಸ್ತುತಿಗೆಯ್ಯೆಭುಲ್ಲವಿಸಿ ನಲಿಯುತ ಶ |
ತಾಂಧರೊಮ್ಮನದೊಳೊಂದೇಗರ್ತದೊಳು ಕೆಡೆದು |
ಛಿಂಧಿಯಾಗುವ ತೆರದೊಳಾಯ್ತು ರಕ್ಕಸ ಭವದ್ಬುದ್ಧಿ ವೈನಾಶವೃದ್ಧಿ || ೩೨ ||

ಕೆಡದಿರೆಲೆ ದುರ್ಮತೆವಿಡಿದು ಕಷ್ಟಾರ್ಜಿತದಿ |
ಪಡೆದ ಸಿರಿಯನಿಮಿತ್ತ ಪೋಗಾಡಿಕೊಳದಿರೆಲೊ |
ಮೃಡಮುಖ್ಯದೇವತಾಮಕುಟಮಣಿ ರಘುವೀರನೊಡನೆ ವೈರವನು ಪಿಡಿದು ||
ಕಡುಗಲಿಗಳಾರುಂಟು ಕೆಡುವ ದಶ ಭುವನದೊಳು |
ಕಡೆಸಾರ್ದರೆಂಬುದಾರಾದರುಂ ಪೇಳ್ದಪರೆ |
ಪೊಡವಿಯೊಳಗಿರಲಿಚ್ಛೆಯುಳ್ಳಡೆಸಗೋಪಾಯಮೆಸಗುಜಾಗ್ರತೆಯ ಬಿಡದೆ || ೩೩ ||

ಅರಿಯದಾನೆಸಗಿದಪರಾಧಮಂ ಮಾನಸದ |
ಲಿರಿಸದೆನ್ನನು ಸಲಹವೇಳ್ಕೆಂದು ಪದಕೆರಗಿ |
ಮರೆಯದೆನ್ನೊಪ್ಪಗಿಸಿ ಬೇಡಿಕೊಳೆ ಮರೆಯೊಕ್ಕನೆಂದು ಸಂತೋಷಗೊಂಡು ||
ಕರುಣಾಳುಗಳದೇವ ಕಾಯ್ದು ಮನ್ನಿಸೆ ನಿನಗೆ |
ಸರಿಯದಾಯುಷ್ಯಮಂ ದಯಗೈವುದಲ್ಲದಾ |
ರ್ಮರೆಗೊಂಡರುಂ ಬಾಳಲರಿಯೆ ಸದ್ಯುಕುತಿಯಂ ತಿಳಿದು ಸಂಗ್ರಹಿಸು ಖೂಳ || ೩೪ ||

ಮೇಲೆನಿಪುಪಾಯಮಿದನುಳಿದನ್ಯಮೆಲ್ಲಂ ದು |
ರಾಲಾಪಮಲ್ಲದಾವುದರಿಂದ ಕಾರ್ಯಕೃತಿ |
ಸಾಲದೆನುತರಿತು ಭಕ್ತಿಯೊಳ್ಪೈದಿ ದೀನಜನಬಂಧುವಂ ಮರೆಯೊಗುವುದು ||
ಆಲಸ್ಯಮಾದರಾ ರಘುವೀರ ಮಾರ್ಗವ ನಿ |
ರಾಲಸ್ಯದಿಂದ್ಯೆದಿ ಬರಲವರ ನಿಸ್ವನಂ |
ಕೀಲಿಸುವುದಂಗ [1]ಪ್ರತ್ಯಂಗಂಗಳಂ ಬಿಡದೆ ನಿಷ್ಪೇಷಣಂಗೈವುದು || ೩೫ ||

1 ಪ್ರತ್ಯೂಷ್ಯಂ.



ಸಾಮಾನ್ಯಧರ್ಮವೊರೆದಪುವು ಪರರಂಗನಾ |
ಪ್ರೇಮಾಸ್ಪದಂ ಚಿತ್ತಮಾದರಾತನ ಕುಲಂ |
ಸೋಮಾರ್ಕಮುಳ್ಳನ್ನ ರೌರವದಿ ಪೊರಳುತ ಪುನರ್ಭವಿಗಳಾಗರೆನುತ ||
ಕಾಮಾನುವೃತ್ತಿಯಿಂ ಕಾಂಕ್ಷಿಸಲು ಪರಮಮುನಿ |
ಸೋಮಾನುಗತ ಸಿದ್ಧಿ ಪಾಪಜಂತುಗಳಿಂಗೆ |
ಸಾಮಾನ್ಯಮೇ ದೊರೆವುದೆಲೊ ಖೂಳ ಬಿಡು ನಿಷ್ಫಲಾರಂಭಮಂ ನೆನೆಯದೆ || ೩೬ ||

ಹರಗೆ ಪಾರ್ವತಿ ಸರಸಿಜೋದ್ಭವಗೆ ಸರಸತಿಯು |
ಹರಿಗೆ ಲಕುಮಿಯು ಸುರಪನಿಂಗೆ ಶಚಿ ಭಾಸ್ಕರಗೆ |
ವರಸಂಜ್ಞೆ ಸಸಿಗೆ ರೋಹಿಣಿಯು ಮೈತ್ರಾವರುಣಿಯೆಡೆಯೊಳಗರುಂಧತಿಯೊಲು ||
ಸರಸಿಜಾಂಬಕ ರಾಮಚಂದ್ರಗನಪಾಯಿನಿಯು |
ಧರಣಿಜೆ ಯೆನುತ್ತರಿಯದಲೆ ದುಷ್ಟಮತಿಯಿಂದ |
ಸಿರಿಸಹಿತಧರೆಗುರುಳ್ವ ಪರಿಯ ಚಿಂತನೆಗೈದು ಕೆಡುವರೆ ದುರಾತ್ಮ ನೀಚ || ೩೭ ||

ಸಾರಿದೆನು ತಿಳಿ ಬರಿದೆ ದುಷ್ಕಾರ್ಯದಿಂದೆ ಮನ |
ಸಾರದಿರು ಮಂತ್ರಪಾವನ ಪುರೋಡಾಶಮೇಂ |
ಧಾರಿಣಿಯೊಳೇಂ ನಾಯ್ಗೆ ದೊರೆದಪುದೆ ಪಶುಪುತ್ರಮಿತ್ರರಂ ಸಲಹಿಕೊಳಲು ||
ವೀರ ರಾಘವಗೆ ಶರಣೆಂದು ಬದುಕುವುದೆಂದು |
ದಾರವಚನಗಳಿಂದ ಧಿಕ್ಕರಿಸಿ ಮೌನದಿಂ |
ಧಾರಿಣೀಸುತೆಯಿರ್ದರಸುರಪತಿಗತಿಕೋಪ ವೆಗ್ಗಳಿಸಿತಾಕ್ಷಣದೊಳು || ೩೮ ||

ಕೋಪಕಲುಷಿತನಾಗಿ ಕೊಡಹಿ ಮಕುಟಂಗಳಂ |
ತಾಪವಿಹ್ವಲತೆಯಿಂದಿಂತೆಂದ ಲೋಕದೊಳು |
ಕಾಪುರುಷರಗ್ರಭವನಾಮನೋಭವನೆನ್ನ ಮನವ ಮೃದುಲತೆಯಗೈದು ||
ಈಪರಿಯ ನಿನ್ನನು ಸುರೂಪವಿಗ್ರಹವೆಂದು |
ಗೋಪಿತದಿ ತಿಳಿಪುತಿಹನದರಿಂದ ಸಲಹುತ್ತ |
ಗೋಪನಂಗೈಯ್ಯವೇಳ್ಕಾಯ್ತು ದುರ್ಗುಣಗಳಂ ಲಘುತರದ ವಿಗ್ರಹವನು || ೩೯ ||

ಎನಿತೆನಿತು ನಿಷ್ಠುರಗಳನು ಪೇಳ್ದೆ ಭವದೀಯ |
ತನು ಖಂಡನಂಗೆಯ್ಯವೇಳ್ಕುಮಾದರು ಚಿತ್ತ |
ಮನುಮಥಾವಿಷ್ಕ್ರಾಂತಮಾಗಿ ಮುಂದರಿಯದಿದೆ ಮತ್ಪ್ರೀತಿಗಳನು ತಿಳಿದು||
ಮನಗೊಂಬುದು ಚಿತಮಲ್ಲದಡಾಸೆಯಿಂ ನಿನ್ನ |
ವಿನಯದಿಂ ಮುಂದೆರಡುಮಾಸ ಸಂರಕ್ಷಿಸುವೆ |
ಕೊನೆಗೆ ಮನಮೊಲಿಯದಿರಲುದಯದಶನಂಗೈವೆನೆಂದು ಭಯಗೊಳಿಸಿ ಪೇಳ್ದಂ || ೪೦ ||

ಎಂದಾದುರಾತ್ಮ ಭೀಷಣದಿ ಧಿಕ್ಕರಿಸುತಿರ |
ಲಂದತೀವಕ್ರೋಧದಿಂದ ಜಾನಕಿ ಜರೆದು |
ಬೃಂದಾರಕಾಪಕಾರಿಗೆ ನುಡಿದಳೆಲೊ ಕ್ರೂರ ದುಷ್ಟತರನುಡಿಗಳಿಂದ ||
ಇಂದೀವರಾಕ್ಷನರಸಿಯನು ಮೋಹನಗೊಳಿಸ |
ಲೆಂದುಸಿರ್ದ ನಾಲಗೆಗಳೊಡೆಯದೀ ಕರನಯನ |
ಬೃಂದಂಗಳುಂ ಪೋಗದುಳಿದಪುವೆ ನೀಂ ಧರಾವಲಯದೊಳ್ ಜೀವಿಸುವೆಯ ||೪೧ ||

ಎನ್ನಯ ತಪೋಗ್ನಿಯಿಂದುರುಪುವೆಂ ನಗರಿಯಂ |
ನಿನ್ನ ಕುಲಗೋತ್ರಗಳ ನಿಮಿಷದೊಳು ರಘುವಂಶ |
ರನ್ನ ನಪ್ಪಣೆಯಿಲ್ಲದ ಸ್ವತಂತ್ರತೆಯಿಂದ ಸಹಿಸಿ ನೆಲನಂ ನೋಳ್ಪೆನು ||
ಕುನ್ನಿಗಪ್ಪುದೆ ಸುಧೆಯ ಭೋಜನಂ ನೀಚ ನೀ |
ನೆನ್ನೆಡೆಯ ಮಾರ್ನುಡಿಯಲೆನಿಸರವ ಪೋಗೆಂದು |
ಭಿನ್ನ ಚಾರಿತ್ರನಂ ಬೈದು ಧಿಕ್ಕೃತಿಗೈದಳೇನೆಂಬೆನದ್ಭುತವನು || ೪೨ ||

ಅತಿಕ್ರೂರತೆಯ ನಿಷ್ಠುರಂಗಳಂ ಸೂಚಿಸಿದ |
ಕ್ಷಿತಿತನುಜೆಯಂ ಕಂಡು ಮೊರೆವುತುರಗೇಶನಂ |
ತತುಲಕೋಪಾವೇಶದಿಂ ಖಡುಗವಂ ಝಡಿದು ಬಡಿದು ಭೂತಳವ ಜವದಿ ||
ಖತಿಗೊಂಡು ದೈತ್ಯೇಂದ್ರ ಕಡಿದಿಡುವಡಾ ಪತಿ |
ವ್ರತೆಯೆಡೆಗೆ ನಡೆಯುತಿರೆ ಕಂಡು ಮಂಡೋದರಿಯು |
ಪತಿಯ ಪದಗಳ ಪಿಡಿದು ಯಾಚಿಸಿದಳನುನಯದಿ ವಿಪುಲತರ ದೈನ್ಯವಿಡಿದು || ೪೩ ||

ಮೂರುಲೋಕದ ಮಹಾಭಟ ವಿಜಿತಸಾಹಸಿಕ |
ವೀರರಗ್ರೇಸರಗೆ ವಿಮಲಸತ್ಕೀರ್ತಿಗೀ |
ನಾರಿಯರ ವಧೆಗೈವುದಪಯಶಸ್ಕರಮುದಂ ತ್ಯಜಿಸು ನೀನಜ್ಞಾನಿಯೆ ||
ಈರೂಪುಸಂಪದಗಳಾಂತ ಸುರಪನ್ನಗರ |
ಚಾರು ಸರ್ವಾಂಗಿಯರನೇಕ ನಿನ್ನಯ ಕೃಪಾ |
ಧಾರರೆಂದೆನಿಸಿರ್ಪರಸುರಪತಿ ಮಾನವಿಯ ಬಯಸಿ ಬೇಸರಗೊಂಬರೆ || ೪೪ ||

ಆವ ಜಾತಿಗಳೊಳಗದಾವ ಜಂತುಗಳಿಂಗೆ |
ಭಾವಜವಿಲಾಸ ಸಂಭವಿಪುದಲ್ಲದೆ ಶುಕಿಗೆ |
ಭಾವನೆಯ ಪಿಕದೊಡನೆ ದೊರೆದಪುದೆ ಕೃಪಣೆಯೊಳು ಮಾನುಷಿಯ ದುಃಖಿತೆಯೊಳು ||
ಈವಿಧ ಪ್ರಿಯಗೈದು ಫಲವೇನದನುರೂಪ |
ನಾವಿಲಾಸಿನಿಯೊಡನೆ ರಮಿಸೆ ಸುಖಸಂಪ್ರೀತಿ |
ಜೀವನಕ್ಕಹುದಲ್ಲದನ್ಯರೊಡನೇನುಂಟು ಕೋವಿದಕುಲಾಗ್ರಗಣ್ಯ || ೪೫ ||

ಮನಬಂದತೆರದೊಳೆನ್ನೊಡನೆ ಕ್ರೀಡಿಸಿ ಸ್ಮರನಿ |
ಗನುದಿನಂ ಸಂಪ್ರೀತಿಯೆಸಗು ಮಾನವಿಯೊಡನೆ |
ಕನಲೆ ನಿಷ್ಫಲಮೆನುತ ಧಾನ್ಯಮಾಲಿನಿ ಪೇಳ್ದ ನುಡಿಗೆ ನಸುನಗುತಸುರನು ||
ತನಗೆ ಹಿತಮಾಚರಿಪ ರಕ್ಕಸ ಸ್ತ್ರೀಯರುಗ |
ಳನು ಕರೆದು ನೇಮಿಸಿದ ಸಾಮದಾನಗಳಿಂದ |
ಜನಕಜೆಯ ವಶಗೈವುದೆಂದಸುರ ಪಿಂದಿರುಗಿ ನಡೆಯಲನುಗೈದನಾಗ || ೪೬ ||

ದೇವಗಂಧರ್ವ ದಿವ್ಯಾಂಗನಾ ಸಮುದಯದೊ |
ಳೋವಿ ಸಂತಸಗೊಳುತ ಚಂದ್ರಮನ ಮಾಳ್ಕೆಯೊಳ |
ಗಾವಸುಧೆಯನ್ನುಳಿದು ನಿಜನಿಲಯಕೈತಂದ ದೈತ್ಯೇಂದ್ರನಳ್ತಿಯಿಂದ ||
ಭೂವಧೂಸುತೆಯಿತ್ತ ಚಿತ್ತನಿಲಯದೊಳು ರಾ|
ಜೀವನೇತ್ರನ ರಾಮುಪುರದರಸನಂ ನೆನೆದು |
ಪಾವನ ಸುಮೂರ್ತಿಯಂ ಪರಿಭಾವನಂಗೈದು ಪದುಳದಿಂದಿರ್ದಳಾಗ || ೪೭ ||

**ಒಂಬತ್ತನೆಯ ಸಂಧಿ ಸಮಾಪ್ತಂ.**

## ಹತ್ತನೆಯ ಸಂಧಿ

ಸೂಚನೆ || ಚಿತ್ತದನುತಾಪ ಪರಿದೋಡುವಂದದೆ ತ್ರಿಜಟೆ |
ಯುತ್ತಮಸ್ವಪ್ನಮಂ ಸೂಚಿಸಲುಪಷ್ಟಂಭ |
ವೆತ್ತಂಗಹಾರ ಶುಭಕರ ನಿಮಿತ್ತಗಳರಿತು ನಲಿದಳಾ ವೈದೇಹಿಯು ||

ಪಲುಬಿ ರಾವಣ ತನ್ನ ನಿಲಯಕ್ಕೈದಿದನಿತ್ತ |
ಪಲವು ದುರ್ಮಾರ್ಗ ರಕ್ಕಸಿಯರುಂ ಗುಮಿಗೂಡಿ |
ಪಲಿತಕೇಶಗಳ ಕೆಂಗುರುಳ್ಗಳ ಕೆದರ್ದಲೆಯ ಶತವಿಕಾರಗಳ ತೋರಿ ||
ನೆಲದಣುಗಿ ಭಯಮೋಹಗೊಳುವಂತೆ ಪರಿಪರಿಯ |
ಲಲಿತ ಕಾಠಿಣ್ಯತರ ಕಲುಷಿತದ ದುರ್ಭಾಷೆ |
ಯಲಗುಗಳ ನಾಲ್ದೆಸೆಯ ಕಕ್ಕುಲಿತೆಗೊಳಿಸಿದರ್ಕೇಳದ್ರಿನಾಥಜಾತೆ || ೧ ||

ಸಿರಿಯನೆಣಿಸಲು ಸಲ್ಲ ಸಮರದೊಳಗಿದಿರಿಲ್ಲ |
ಪರಿಪರಿಯ ಕಲೆಗಳಂ ಬಲ್ಲ ಲೋಕದ ನಲ್ಲ |
ಸರಸಿಜೋದ್ಭವ ಕುಲೋದ್ಭವ ವಿಶ್ರವಸುಮುನಿಪನಿಂದ ಸಾಕ್ಷಾತ್ಸಂಭವ ||
ಹರನಸಖನಗ್ರಭವ ಸುರಪಗಭಯವನೀವ |
ಶರಣಾಗತರ ಕಾವ ರಕ್ಕಸರದೇವನಂ |
ಧರಣಿಸುತೆ ತಿಳಿಯದಲೆ ಮರುಳು ಮತಿಯಂ ತಾಳ್ದಿ ದುಷ್ಕೃತಿಯೊಳೆಂದರಾಗ || ೨ ||

ಬೆದರಿ ಸಮರದೊಳೊಮ್ಮೆ ತ್ರಿದಶಾದಿ ದಿಕ್ಪಾಲ |
ರೆದೆಗೆಟ್ಟು ಸೇವನಾವೃತ್ತಿಯಂ ಬಳಸಿರುವ |
ರುದಯಿಸುವ ಭಾಸ್ಕರಂ ಶಶಿಮರುತ್ತುಗಳೆಲ್ಲ ಸೇವಿಸುವರನವರತವು ||
ಸದನದೊಳು ಲಕುಮಿ ದಾಸತ್ವಮಾಂತೆಸೆವ ಬಲ |
ಸದನ ರಕ್ಕಸಪತಿಯ ಮನ್ನಿಸದೆ ದುರ್ಮೇಧೆ |
ಕದನಕೆಳಸಿದೆಯೆನುತ ಹರಿಜಟೆಯೆನಿಪ್ಪೊರ್ವ ರಕ್ಕಸಿಯು ಕೋಪಿಸಿದಳು || ೩ ||

ಶುದ್ಧಾಂತದೊಳಗಿರುವ ಶತಲಕ್ಷನಾರಿಯರ |
ಬುದ್ಧಿಯೊಳು ಗಣಿಸದೆ ಭವನ್ಮೋಹ ಪಾಶಾನು |
ವಿದ್ಧಮೆನಿಸುತ ತ್ರಿಜಗದಧಿನಾಥನೈತಂದು ಯಾಚನಂಗೈದಾಕ್ಷಣಂ ||
ಪೊದ್ದಿ ಸಾಮ್ರಾಜ್ಯಮಂ ಭೋಗಿಪುದನುಳಿದು ದು|
ರ್ಬುದ್ಧಿಯಿಂದೊದಗೆಯೆಂದೆನುತ ಪ್ರಘಸೆಯು ಕೋಪ |
ವೃದ್ಧಿಯಿಂದ ಬಿಡಾಲನೇತ್ರಂಗಳಂ ಕೆದರಿ ಬೆದರಿಸಿದಳವನಿಸುತೆಯ || ೪ ||

ವಸುಮರುದ್ಗಾಂಧರ್ವರಸಕೃತ್ಸಮರಭಗ್ನ |
ರುಸಿರಬಿಡಲಮ್ಮರೆಂದಿಗು ಸರ್ವತೋಮುಖದೊ |
ಳೆಸೆವ ಜಸಮಾಳ್ದದಶಮೌಳಿವಲ್ಲಭೆಯೆನಿಸಿ ಸಕಲ ಸಾಮ್ರಾಜ್ಯವೆರಸಿ ||
ಬಿಸಜಮುಖಿ ಸುಖದೊಳಿರ್ಪುದನುಳಿದು ಕಾರ್ಪಣ್ಯ |
ರಸೆಯೊಳಗೆ ಪೊರಳುವುದಿದಾವ ಮತಿಯೆನುತ ಕ |
ರ್ಕಶದಿಂದ ಧಿಕ್ಕರಿಸಿ ಬೈದು ಬೆದರಿಸಿದಳಾ ವಿಕಟೆಯೆನ್ನುವ ರಕ್ಕಸಿ || ೫ ||

ಕೆಂಗೋಡಗದ ತೆರದಿ ಕೆದರಿ ಮುಖದೇಶದೊಳ |
ಗಿಂಗಳಗಳಂತೆಸೆವ ನೇತ್ರದಿಂ ದುರ್ಮುಖಿಯು |
ಭಂಗುರಕ್ರೋಧದಿಂ ಜರೆದಳೆಲೆ ಧರಣಿಸುತೆ ತ್ರೈಲೋಕ್ಯಪತಿಯ ಸಿರಿಯ ||
ಸಂಗಮಂ ತ್ಯಜಿಸಿ ದುರ್ಮತಿಯಿಂದ ಕಷ್ಟವೆಸ |
ನಂಗಳನ್ನನುಭವಿಪೆ ಬಿಡಿಸಿಕೊಳೆ ದಿವಿಷದರ |
ಪುಂಗವಾದ್ಯರಿಗಳವೆ ವಿಧಿಯಷ್ಟವಾಂಶಮಂ ಫಾಲದೊಳು ಬರೆದಿರ್ದನೆ || ೬ ||

ತರುಗಳುಂ ಕರೆದಪುವು ಪುಷ್ಪವೃಷ್ಟಿಗಳ ಬಂ |
ಧುರದ ಜಲಮಂ ತೋರ್ಪುವೈಸೆ ಪರ್ವತಗಳುಂ |
ರಸಸಿಜೋದ್ಭವ ವೇದಪಾರಾಯಂಣಗೈವ ಗೀಷ್ಪತಿಯುವನ ಸಿದ್ಧಿಯ ||
ಒರೆವ ತುಂಬುರುನಾರದಾದಿ ವೈಣಿಕರೆಲ್ಲ |
ರರಮನೆಯ ಸಮಯಗಳನಾರೈವರೀಶ್ವರಂ |
ಹರಸುತಿಹ ರಕ್ಕಸರದೊರೆಯ ನೀಂ ತಿಳಿಯೆನುತ ಗರ್ಜಿಸಿದಳಾ ದುರ್ಮುಖಿ || ೭ ||

ಚಾರು ಭೂಷಣವಸ್ತ್ರ ಚೆಲುವ ಶಕುನಿಯ ಮಂಚ |
ಭೂರಿ ಕನ್ಯಾನಿಚಯ ಬಾಯ್ಗೆ ಬೇಕಾದನ್ನ |
ಭಾರಣೆಯ ಪಾನಾದಿ ಸಕಲಸುಖದನುಭವವ ನಿಶ್ಚೈಸಿ ಶಚಿಯಂದದಿ ||
ಶ್ರೀರಾವಣೇಶ್ವರನ ಪೊರೆಯಲಿಹಲಿಚ್ಛೈಸ |
ದೋರಂತೆ ಕೃಪಣಮಾನಸನ ಬಯಸುವೆ ಮೂಢೆ |
ದೂರಮಾಗಿರ್ಪ ಕನಸಿನಲದಂ ತೊರೆ ಯೆನುತ ಮುಸುಕಿದಳ್ಪೂಕರಮುಖಿ || ೮ ||

ಅನಿತರೊಳು ವಿನತೆಯದ್ಭುತರೂಪೆ ನಿಷ್ಠುರವ |
ನನುಕರಿಸಿ ಪೇಳ್ದದನು ಕೊಟ್ಟು ಸಂಪದಮಾವ |
ದನುಜಪತಿಯಂ ಜರೆದು ದೀನ ಮನುಜನ ನೆನೆದು ಸಂಬಾಧೆಗೊಳುವುದೇನು ||
ಇನಿತುದಿನಮಾರೈದು ನೋಡಿದೆವು ಭವದೀಯ |
ಮನಮೊಡಂಬಡದಿರಲು ರಕ್ಕಸಿಯರೊಡಗೂಡಿ |
ತಿನದೆ ಮಾಣೆವೆನುತ್ತ ಕೋಪದಿಂ ಗರ್ಜಿಸಿದಳತಿಕೃಶೋದರಿ ಮುಳಿಸಿನಿಂ || ೯ ||

ಲಂಬಮಾನಪಯೋಧರಂಗಳೊಲೆದಾಡೆ ಕಾ |
ದಂಬಿನಿಯ ಮರುಳೆಂಬ ರೀತಿಯೊಳು ವಿಕಟೆಯೆಂ |
ದೆಂಬ ರಕ್ಕಸಿ ಮುಷ್ಟಿವಿಡಿದ ಕರಗಳನೆತ್ತಿ ಕೋಪದಿಂದಿಂತೆಂದಳು ||
ಅಂಬುಧಿಯ ಮಧ್ಯದೊಳು ಸಿಲ್ಕಿ ನಾನಾವಿಧ ವಿ |
ಜೃಂಭಣದ ನಿಷ್ಠುರವನಾಡದಿರು ರಾವಣನ |
ಶುಂಭತರುಣಿಯಳಪ್ಪೆಯೆನುತಮುಳುಹಿದುಡಾಯ್ತು ಕರುಣದಿಂದಿನಿಸುದಿನವು || ೧೦ ||

ಅಮರಪತಿ ಬಂದು ನಿಟ್ಟಿಪನೆ ರಾಘವನೆನುತ |
ಭ್ರಮೆಗೊಂಡರೇನಹುದು ಸತಿಯೆನಿಸಿ ದಶಶಿರಗೆ |
ಸುಮನಸಾಂಗನೆಯರನ್ನಾಳ್ದು ಸುಖತೌರೆನಿಸಿ ಬಾಳ್ವುದತಿಲೇಸಲ್ಲದೆ ||
ಮಮತೆಯನ್ನುಳಿದು ಪೆಡಸಿಂದಿರಲು ರಾಕ್ಷಸ |
ರ್ಗಮಕದಿಂ ತಿನದುಳಿಯರೆಂದು ಕೋಪಿಸಿ ಜರೆಯ |
ಲಮಿತಸಿಡಿಲಾಟೋಪದಿಂದ ಚಂಡೋದರಿಯೆನಿಪ್ಪೊರ್ವೆಯಿಂತೆಂದಳು || ೧೧ ||



ಎನಿತು ಮಾತಾಡಿಸಿದರೇನುಂಟು ಮಾನವಿಯ |
ಘನತರಾಂತ್ರಂ ಲೋಹಿತಂ ಪಿಶಿತಗಳನೊಮ್ಮೆ |
ತಿನುವೆನೀಶೂಲದಿಂದಿರಿದೀಗಳೆಂದು ಬೊಬ್ಬಿಡೆ ಪ್ರಘಸೆ ತಾಂ ನುಡಿದಳು ||
ಅನುಮಾನಮೇನಿವಳ ಗಳದ ರಕ್ತವ ಪೀರ್ವೆ |
ಮನುಜೆ ಪೋದಳೆನುತ್ತ ಮಗುಳೆ ದಶಕಂಠನೊಳ |
ಗನುವಿಂದ ಪೇಳ್ವುದೆನಲನಿತರೊಳು ಕೋಪಿಸುತಜಾಮುಖಿಯು ಭೋರ್ಮೊರೆದಳು|| ೧೨ ||

ಕೊಂದಿವಳ ಸರ್ವಾಂಗಸಂಧಿಯಂ ಪಾಲ್ಗೈದು |
ಛಂದದಿಂ ಪೇಯದೊಡನಾಸ್ವಾದನಂಗೈದು |
ಮಿಂದು ಸಂತೋಷಿಸುವುದೆನಗೆ ಸಮ್ಮತಮೆನುತಮೆನೆ ಶೂರ್ಪನಖಿ ನುಡಿದಳು ||
ಕುಂದೇನು ಸೀಧುವಂ ತಂದು ನರಮಾಂಸಗಳ |
ನಂದದಿಂ ಸವಿದಾನಿಕುಂಭಿನಿಯ ದೇವತಾ |
ನಂದನಂ ಗೊಳಿಸುವೆನೆನುತ್ತ ಧಿಕ್ಕೃತಿಗೊಳಿಸಲನುಮತಂ ಗೊಂಡಳಾಗ || ೧೩ ||

ಎಂದು ನಾನಾವಿಧದ ನಿಷ್ಠುರದ ದುರ್ಭಾಷೆ |
ಯಿಂದ ರಕ್ಕಸಿಯರಲೆವುದ ನೋಡಿ ವೈದೇಹಿ |
ಯಂದತಿಕ್ರೋಧದಿಂ ಘರ್ಜಿಸುತ ಗದ್ಗದಸ್ವರದಿಂದಮಿಂತೆಂದಳು ||
ಮಂದಮತಿಯಿಂ ಬೊಗಳ್ದರೇನು ಮಾನುಷಿಯಸುರ |
ಮಂದೆಯೊಳು ರಮಿಸುವಳೆ ನಿಮ್ಮ ದುರ್ವಚನಗಳ |
ನೊಂದನಂಗೀಕರಿಸೆ ಮನಮೊಲಿದ ತೆರದೊಳೀಕ್ಷಣ ಗೈವುದೆನ್ನ ಬಿಡದೆ || ೧೪ ||

ಕೇಶಿನಿಯು ಸಗರನಂ ನೈಷಧನ ಭೈಮಿನಿಯು |
ಲೇಸೆನಿಪ ಸತ್ಯವಂತನನು ಸಾವಿತ್ರಿಯುಂ |
ಭಾಸುರ ಶ್ರೀಕಪಿಲನೊತ್ತನಂ ಶ್ರೀಮತಿಯಗಸ್ತ್ಯ ಲೋಪಾಮುದ್ರೆಯಂ ||
ಆ ಸಸಿಯ ರೋಹಿಣಿಯು ಸೌಧಾಸ ಮದಯಂತಿ |
ಯಾಶಸನ್ನಿಭ ಮುನಿವಸಿಷ್ಠನನರುಂಧತಿಯು |
ಲೇಶ ಭಿನ್ನತೆಯಿಲ್ಲದಿರ್ಪೊಲಾಂ ರಾಘವನ ಛಾಯಾನುವರ್ತಿಯೆನಿಪೆಂ || ೧೫ ||

ಪಲವು ನುಡಿಗಳಲೇನು ಪ್ರಾಣವಿಪ್ಪನ್ನ ವೀ |
ಪೊಲೆಯರೊಡನಾಂ ನುಡಿಯೆನೆಂದು ಶೋಕಾತುರದಿ |
ಪಲವುವಿಧಗಳನೆಣಿಸಿ ದೇಹಮಂ ಸಂತ್ಯಜಿಸಲೆಳಸಿ ಕ್ರೌರ್ಯದಲಿ ನಿಂದು ||
ನಿಲುಕಿ ಮತ್ತೊಂದಶೋಕದ ಕೊನೆಯ ವೇಣಿಯಂ |
ಚಲನೆಗೈದುದ ನೋಡಿ ರಕ್ಕಸಿಯರತಿಭೀತಿ |
ಗೊಳುತ ರಾವಣನೆಡೆಗೆ ದೂರಲೆಂದೈದಿದರು ಧರಣಿಜೆಯ ವಾರ್ತೆಗಳನು || ೧೬ ||

ಕುರುಹರಿಯರೆನ್ನ ಕಂಡಿರ್ಪತಾಣದ ಹಾದಿ |
ಗಿರಲಿನಿತನರಿತರೆ ರಘೂದ್ವಹಂ ಸೌಮಿತ್ರಿ |
ಶರಗಳಿಂ ಸನ್ನಿಹವೆ ಬಂದು ಲಂಕಾಪುರವ ಭಸ್ಮಮಂಮಾಡಿ ಮಗುಳೆ ||
ದುರುಳ ರಕ್ಕಸ ಕುಲವನೊರಸೆ ಮನೆ ಮನೆಯೆಡೆಯ |
ಲೊರಲುವ ಕುರೂಪಿಗಳ ಕಾಣ್ಬೆನಚಿರೇಣಮೆ |
ನ್ನು ರುತರತಪಃಕಲಿತ ನುಡಿ ವ್ಯರ್ಥಮಾಗದರಿದಿಹುದೆಂದಳವನಿಜಾತೆ || ೧೭ ||

ದೇವದೇವೋತ್ತಮನ ತ್ರೈಲೋಕ್ಯದೊಳಗುಳ್ಳ |
ಜೀವನಾಧಾರ ರಘುವೀರನಂಗನೆಯನ್ನ |
ಪಾವಿನಂತೀ ದುರುಳದೈತ್ಯ ಮುಂಗಾಣದಲೆ ಬಾಧಿಸುವನಿವನ ಕುಲವು ||
ಈ ವನಧಿಯೆಡೆಯಲೇಂ ತೀರ್ವುದತಿವೇಗದಿಂ |
ಭೂವಧುವಿಗಾನಂದಮಾಗಿ ಕ್ರೋಧದಿ ಬೆಂದು |
ಸಾವದುಳಿಯದೆನುತ್ತ ಸಕಲ ಸುರಸಾಕ್ಷಿಯೊಳು ಶಪಿಸಿದಳ್ ಧರಣಿಜಾತೆ || ೧೮ ||

ಘೋರತರ ಶೋಕ ಸಂತಾಪ ರಕ್ಕಸಜನರ |
ಕ್ರೂರ ನುಡಿಗಳ ಕೇಳುತೆಚ್ಚತ್ತು ತ್ರಿಜಟೆ ಮ |
ತ್ತಾರೈದು ದುರ್ಮೇಧೆಯರನೆಲ್ಲ ಕರೆಕರೆದು ಕನಸ ಬಿತ್ತರಗೈದಳು ||
ದಾರುಣ ಸುರೌದ್ರತರಮಂ ಕಂಡೆ ತಿಳಿಯದಲೆ |
ಧಾರುಣೀಸುತೆಯನಲೆಯಲ್ಬೇಡ ರಕ್ಕಸರು |
ತಾರುಥಟ್ಟೊರಗುವುದು ರಾಮುಗತಿಶಯಮುಹುದು ವಿಸ್ತರಿಪೆ ಭೂಮಿಜಾತೆ || ೧೯ ||

ಎನೆ ದುಷ್ಟರಕ್ಕಸಿಯರೆಲ್ಲ ಭಯದಿಂ ನಡುಗಿ |
ವಿನಯದಿಂ ಬೆಸಗೊಂಡರವ್ವೆ ನಿನ್ನಯ ಕನಸಿ |
ನನುವ ವಿಸ್ತರಗೆಯ್ಯವೇಳ್ಕೆನುತ ಬೆಸಗೊಳಲ್ ತ್ರಿಜಟೆ ಪೇಳಿದಳಾಗಲೆ ||
ಮನದೊಲವಿನಿಂದ ಸಾಸಿರ ಮರಾಳಂ ಕಲಿತ |
ವೆನಿಪ ಕರಿದಂತಶಿಬಿಕಾಮಧ್ಯದೊಳು ಕುಳಿತು |
ವನಜಾಕ್ಷ ರಾಮು ಶುಕ್ಲಾಂಬರದೊಳೆಸೆವುದಂ ಕಂಡೆನಿರುಳಿನ ಕನಸಿನೊಳ್ || ೨೦ ||

ಸಾಗರದ ಮಧ್ಯದೊಳು ಶ್ವೇತಪರ್ವತಮುದರ |
ಮೇಗೆ ಸುರಗಜಮದರ ಮಸ್ತಕದಿ ರಘುವೀರ |
ನಾಗ ಬರುತಿರಲು ಸೌಮಿತ್ರಿ ಶ್ವೇತಚ್ಛತ್ರಮಂ ಪಿಡಿದು ಸೇವಿಸುತಿರೆ ||
ಆಗರುವನಂಕದೊಳ್ ಬಾಲಶಶಿಯಂದದಿಂ |
ಮೇಗಯನದಿಂ ದೇವಿ ಸೀತೆಯೊಪ್ಪಿರೆ ಕಂಡೆ |
ನಾಗ ಬಿಡುಗಣ್ಣವರು ಸುರಿಯೆ ಪೂವಿನ ಮಳೆಯ ಶುಭವಾದ್ಯಗಳ ನೋಡಿದೆ || ೨೧ ||

ಐರಾವತದ ಮೇಲೆ ಕಾಕುಸ್ಥಸಂಕದೊಳು |
ಸೂರಪ್ರಭೆಯಿಂದೆಸವ ಜಾನಕಿಯು ನಗುತೆದ್ದು |
ಸಾರಸಕರಂಗಳಿಂ ಶಶಿರವಿಗಳಂ ಪಿಡಿದು ಸೈಪಿಟ್ಟು ಕುಸ್ತರಿಸುತ ||
ಚಾರುತರ ಮಂಡನದಲಾಕಾಶ ಗಮನದಿಂ |
ಸಾರಿರುವ ಋಷಿನಿವಹ ವಾಚಿಸುವ ಸ್ವಸ್ತಿಗಳ |
ನೋರಂತೆ ನಿಟ್ಟಿಸುತ ನಡೆವುದಂ ನಾಕಂಡೆನೀ ನಿಶೆಯೊಳಂ ಕನಸಿನಿಂ || ೨೨ ||

ಶ್ವೇತಪುಂಗವಮಶ್ವಸಂಯುಕ್ತ ರಥದಿಂದ |
ಸೀತಾನಿತಂಬಿನಿಯು ಸೌಮಿತ್ರಿಸಹಿತ ರಘು |
ಜಾತ ಬೆಳ್ಗೊಡೆಯ ನೆಳಲಿನೊಳ್ಪೈದುತಿರಲುಭಯ ಪಾರ್ಶ್ವದೊಳು ಚಾಮರಗಳಂ ||
ಖ್ಯಾತಿಯಿಂ ಸ್ಪರ್ಧಿಸಿಯ ರೀತಿಯೊಳಗಿರೆ ಧರಾ |
ಜಾತೆ ನಿಜತೇಜದಿಂ ತ್ರಿಭುವನಾಂಡಗಳನ್ನು |
ಜಾತುಚಿತು ತನ್ನೊಳಿಟ್ಟಿರೆ ಕಂಡೆ ಮೂಲೋಕ ಕಾರಣಮೆನುತ್ತ ನಿಶೆಯೊಳ್ || ೨೩ ||



ಕ್ಷೀರಸಾಗರ ಮಧ್ಯದೊಳು ಶ್ವೇತಪರ್ವತದ |
ಚಾರು ಮಸ್ತಕದೊಳಂ ಚತುರ್ದಂತ ಮಾತಂಗ |
ಸೂರಿಯನ ತೆರದಲಂಕೃತಿಯೊಳಿರೆ ರಾಮು ಸೀತಾದೇವಿ ಸಹಿತಮಾಗ ||
ವೀರಾಸನದಿ ಮಂಡಿಸಿರಲು ನೆರೆದಿರ್ಪಸುರ |
ಸಾರಸಾಸನ ಮುಖ್ಯ ಸಿದ್ಧಗಣವೈತಂದು |
ಭೂರಿ ಸಂಸ್ತವಗೈದು ಶ್ವೇತಮಾಲ್ಯಂಗಳನಲಂಕರಿಸುತಿರೆ ಕಂಡೆನು || ೨೪ ||

ನೆರೆದ ಭೂಸುರದೇವಋಷಿಸಿದ್ಧಚಾರಣ |
ರ್ವೆರೆದು ಕಮಲಜನು ಪಟ್ಟಾಭಿಷೇಕಂಗೈದು |
ಕರಗಳಂ ಮುಗಿದು ತುತಿಸಿದ ವಿಷ್ಣು ತ್ರೈಲೋಕ್ಯನಾಥ ಬ್ರಂಹ್ಮಾಂಡನೆನುತ ||
ಪರಬೊಮ್ಮ ಪರತತ್ವ ಪರಕೆ ಪರವರಿ ಶಂಖ |
ಧರ ಮಹಾಪುರುಷ ಶ್ರೀವತ್ಸಾಂಕ ಕರುಣದಿಂ |
ಧರೆಯ ಪಾಲಿಪುದೆನುತ ಬೇಡಿಕೊಳಲಜನ ಮನ್ನಿಸುವ ರಾಮನ ಕಂಡೆನು || ೨೫ ||

ಅನಿತರೊಳು ಸುರಸಿದ್ಧದಿಕ್ಪಾಲರೈದಿ ಪದ |
ವನಜಗಳ ಸೇವಿಸುತ ನೃತ್ಯಗೀತಾದಿಗಳ |
ಬಿನದದಿಂ ಪ್ರಾರ್ಥಿಸಲು ಬೇಗಲಮರರ ನುಡಿಯನಾಲಿಸುತ ಸಂತೋಷದಿ ||
ಮನದಭೀಷ್ಟಗಳಿತ್ತು ಮನ್ನಿಸುತಮಿರ್ಪುದಂ |
ಸನಕಾದಿ ಮುನಿಗಳುಂ ಸೀತೆಯಂ ಸನ್ನುತಿಪು |
ದನು ಕಂಡು ರಾಘವ ಪರಬ್ರಹ್ಮನೆಂದರಿದೆ ಮುಂದೊರೆವೆನಾದ ಪರಿಯ || ೨೬ ||

ಪೊಳೆವ ಪುಷ್ಪಕವೇರಿಯುತ್ತರದ ಮುಖವಾಗಿ |
ನಳಿನಾಕ್ಷಿ ಸೀತೆಯೊಳು ನಸುನಗುತ ಲೋಕಮಂ |
ಕಳೆಯಿಂದ ಬೆಳಗುತ್ತಮಿರ್ಪ್ಪ ರಾಮನ ಕಂಡೆ ನರನಲ್ಲ ಪರಬೊಮ್ಮನು ||
ಕೊಳುಗುಳದೊಳಿದಿರಾಗಿ ನಿಲುವರಾರಿನ್ನುಂಟು |
ಜ್ವಳನಾರ್ಕತೇಜನಾಸ್ತಿಕ್ಯಂಗಳಂ ಮಾಳ್ಪ |
ನಳಿನಪೀಠನ ಜನಕನೆನುತ ನಿಶ್ಚೈಸಿರ್ಪೆ ಕೇಳಿ ರಕ್ಕಸಿಯರೆಲ್ಲ || ೨೭ ||

ತೈಲನೀರಧಿಯೊಳಗೆ ಮುಳುಗಿ ಪಾನಂಗೈದು |
ಲೀಲೆಯಿಂ ರಕ್ತಾಂಬರಗಳುಟ್ಟು ಕರವೀರ |
ಜಾಲಂಗಳಂ ಮುಡಿದು ಪುಷ್ಪಕಚ್ಯುತನೆನಿಸಿ ಭೂತಳದೊಳಂ ಪೊರಳುತಂ ||
ವಾಲಾಯಶೋಕ ಸಂತಪ್ತ ದಶಮೌಳಿಯಂ |
ಕಾಲಾಯಸಾಭರಣ ಕೃಷ್ಣಾಂಬರವನುಟ್ಟು |
ಬಾಲೆಯರು ಸೆಳೆವುತಿರೆ ಬನ್ನಬಡುವುದ ಕಂಡೆನಿರುಳು ಕನಸಿನೊಳು ಜವದಿ || ೨೮ ||

ಖರಕಲಿತ ರಥದಿಂದ ರಕ್ತಚಂದನಲೇಪ |
ದುರುತೈಲಪಾನದಿಂ ಕುಣಿದು ಕೂಗುತ ಪೊರಳಿ |
ಧರೆಯೊಳಗೆ ತೀಕುಳಿದುರಾಸಭಾರೋಹಣಂಗೈದು ತೆಂಕಣ ದಿಕ್ಕಿಗೆ ||
ದುರುಳ ರಾವಣ ಪೋಗುತಡಿಗಡಿಗೆ ಕೆಡೆದು ಮ |
ತ್ತುರುತರ ಭಯಾತ್ತವಿಹ್ವಲನಾಗಿ ಮತ್ತೊಂದು |
ನರಕೋಪಮಿತಪಂಕದೊಳು ಮುಳುಗಿ ಮರೆಯಾದ ರಾವಣನ ಕಂಡೆ ನಾನು || ೨೯ ||

ಮೇದುರದ ಕೃಷ್ಣಾಂಬರವನುಟ್ಟು ಕ್ರೂರತರ |
ನಾದದಿಂ ರಕ್ತಚಂದನಲೇಪನಂಗೈದು |
ಕ್ರೋಧದಿಂ ರಜ್ಜುಗಳಲಾ ರಾವಣನ ಕಟ್ಟಿ ಕಡುಗೋಪದಿಂದ ಸೆಳೆದು ||
ಬಾಧಿಸುವ ಕಾಳಿ ಕಂಕಾಳಿ ಕರ್ದಮಲಿಪ್ತ |
ಮಾದಂಗನೆಯರ ಕಂಡಂಜಿ ಶೋಕಿಪ ದೈತ್ಯ |
ಭೂಧವನ ಕಂಡೆ ಮುಂದಾದ ಪರಿಯಂ ನಿಮಗೆ ವಿಸ್ತರಿಪೆನವಧರಿಪುದು || ೩೦ ||

ದಶಶಿರನಸುತ ಸಹೋದರ ಮಿತ್ರಬಾಂಧವರು |
ಪೆಸರುಳ್ಳ ಕಲಿಗಳೈತಂದು ತೈಲದ ವಾಪಿ |
ಯಸಮಾನಪಾನದಿಂ ಸ್ನಾನಾಹ್ನಿಕಗಳೆಸಗಿ ದಕ್ಷಿಣವ ನೋಡಿ ನಲಿದು ||
ಅಸುರೇಶ ಉಷ್ಟ್ರಮಪೋತ್ರಿನ್ನವನನುಜ |
ನಸಮಾನ ಶಿಂಶುಮಾರವನಿಂದ್ರಜಿತುವಡರಿ |
ರಸೆಯನುಳಿದೈದುತಿರೆ ಕಂಡು ಬೆರಗಾದೆ ನಾಂ ಕನಸಿನೊಳಗಚ್ಚರಿಯೆನೆ || ೩೧ ||

ವೀರಭಟಕಲಿತ ಲಂಕಾದ್ವೀಪ ಸಾಗರದ |
ನೀರೊಳಗೆ ಮುಳುಗುವುದ ಕಪಿಯೊಂದರಿಂ ನಗರಿ |
ಸೇರುವುದು ಹುತಭುಜನ ಪುರುಷಶೂನ್ಯತೆಯಾದ ನಗರ ನಿಲಯಂಗಳಿಂದ ||
ನಾರಿಯರು ಪೊರಮಟ್ಟು ನಾಲ್ದೆಸೆಯ ನಿಟ್ಟಿಸುತ |
ತೋರ ಶೋಕದೊಳಳಲುವುದ ಕಂಡೆನಸುರನಾ |
ಗಾರನಿಲದೈದುವುದು ಸಿದ್ಧಮೆಂದೆನ್ನ ಮನವರಿತಿಹುದು ಚಲನೆಯುಳಿದು || ೩೨ ||

ಅಳಿದ ರಕ್ಕಸನಿಚಯದೊಳು ವಿಭೀಷಣನೊರ್ವ |
ಕಳೆವೆತ್ತ ಶುಕ್ಲಮಾಲ್ಯಾಂಬರ ವಿಭೂಷಣದಿ |
ಸುಳಿದಭ್ರಮಾತಂಗಮಸ್ತಕೋಪರಿ ಸುಖದಿ ಕುಳ್ಳಿರ್ದು ಮಂತ್ರಿಸಹಿತ ||
ಪೊಳೆವಾತಪತ್ರಚಾಮರಗಳಿಂ ಸಂತೋಷ |
ದಳೆದು ನವಮೌಕ್ತಿಕಾಭರಣದಿಂ ರಾಜಿಸುವ |
ನಿಳೆಯಮರಸಮುದಯದೊಳೀ ವೈಭವವ ಕಂಡೆನಿಂದಿನ ಮಹಾನಿಶೆಯೊಳು || ೩೩ ||

ಪೋದಪರು ಕುಂಭಕರ್ಣಪ್ರಮುಖರಕ್ಕಸರು |
ಬೂದಿಯಪ್ಪುದು ಲಂಕೆ ರಕ್ಕಸರಕುಲ ಯಮನ |
ಹಾದಿಯಂ ಪಿಡಿವುದಿನ್ನಿದಕೆ ಸಂದೆಗಮಿಲ್ಲ ರಘುಪತಿಯ ಚರಣವಿಡಿದು ||
ಮೋದದಿಂದಿರುವಂ ವಿಭೀಷಣಂ ಮುಂದರಿಯ |
ದಾದಿಯಂ ಪುಟ್ಟಿಸುತ ಸೀತಾಪ್ರಸಾದಮಂ |
ಸಾಧಿಸದೆ ಕೆಡದಿರೆನುತಾ ರಕ್ಕಸೀಗಣದೊಳುಸಿರಿದಳ್ ತ್ರಿಜಟೆ ಬಿಡದೆ || ೩೪ ||

ಕೇಳಿ ವಿಸ್ಮಿತರಾಗಿ ದಾನವಿಯರೆಲ್ಲ ತ |
ಮ್ಮಾಳಿದೊಡೆಯನ ಪೊರೆಗೆ ನಡೆಯೆ ಚಿತ್ತದ ದುಗುಡ |
ಮಾಳಿದರ್ಕೆಲರು ಕಂಪನದಿಂದ ಕೆಲಕೆಲರು ಕೆಲಸಾರಲವರೊಳುಳಿದ ||
ಖೂಳೆಯರು ಕೆಲರು ತರ್ಜನಭರ್ಜನಂಗಳಿಂ |
ಪೇಳುತಂ ದುರ್ನುಡಿಗಳಿಂದ ನಾನಾವಿಧದ |
ಬಾಳ ಕ್ಲೇಶಂಗೊಳಿಸಲವರೊಡನೆ ಕಡುಗೋಪದಿಂದ ಜಾನಕಿ ನುಡಿದಳು || ೩೫ ||



ಬರಿದೆ ಬಗುಳಿದರೇನು ಬಾಯ್ಗೆ ಬಂದಂತೆ ನಿ |
ಮ್ಮರಸಿನಾಯುಷ್ಯಮೈಶ್ವರ್ಯ ನೀರಧಿಯೊಳಗೆ |
ಬೆರತುಪೋದುದು ಪ್ಲವಂಗಮದಿಂದ ಕಾಳಾಗಿ ನೀವೆಲ್ಲರುಂ ಪೋಪುದ ||
ಅರಿಯದೀಪರಿಯ ಪಾನೋನ್ಮತ್ತ ಮಾರ್ನುಡಿಗ |
ಳುರುತರದಿ ನುಡಿದೇನು ಫಲಮೆನುತ ಧಿಕ್ಕರಿಸಿ |
ಧರಣಿಸುತೆ ತನ್ನೊಳಗೆ ತಾನೆ ಮರುಗುತ ತೊಳಲಿ ಭ್ರಮಿಸಿದಳ್ಮರುಳೆಯಂತೆ || ೩೬ ||

ಆದವೇನಮರಮುನಿಗಳ ವಚನ ಸತ್ಯತೆಯು |
ಪೋದುದೆಲ್ಲಿಗೆ ಪ್ರಾಣಿಗಳಿಗಕಾಲದ ಮರಣ |
ಹಾದಿ ಸಮನಿಸದೆಂದು ಪೇಳ್ವ ಧರ್ಮಗಳವೇನಾದುವೋ ಭೂತಳದೊಳು ||
ಈ ದುರಾವಾಸದೊಳನಾಥರಂದದಿ ಸಿಲ್ಕಿ |
ಬಾಧೆಗೊಳುತನುಪದದಿ ಶೋಕಸಾಗರ ಮಗ್ನ |
ಳಾದೆನ್ನ ನಿಟ್ಟಿಸುವರಿಲ್ಲದಾದುದು ಶಿವಮಹೇಶ ವಿಧಿಬಲಮದೆಂತೊ || ೩೭ ||

ಪಲವುವಿಧ ದುಃಖ ರಕ್ಕಸಿಯರೆಸಗುವ ಮಹಾ |
ಬಲದ ಧಿಕ್ಕಾರ ಪತಿಯಂ ಕಾಣದನುದಿನಂ |
ಬಲುಚಿಂತೆ ಬಾಂಧವರಕಾಣದತಿಭೀತಿಯಿಂ ನಿದ್ರಾನುಕೂಲಮಿಲ್ಲ ||
ಅಲಗು ಸಂಬಾಧಮೆನಿತಾದರುಂ ಭೇದಿಸದು |
ಕುಲಿಶನಿಭ ಮದ್ವಚನಮೆನಿತು ಖನಿಯಾಗುತೀ |
ನೆಲದಿ ಬಾಳ್ವುದು ಬಿದಿಯ ಬಲದಿಂದ ಸುಡಲೆನ್ನ ಜೀವ ದುರ್ಜೀವಿತವನು || ೩೮ ||

ಸಾವು ಸಮನಿಸಲರಿದು ಶಸ್ತ್ರದಿಂದಂ ಬೇಗ |
ಜೀವವಂ ಕಳೆವರನುವಿಲ್ಲ ಹಾಲಾಹಲವ |
ನೀವರಾರುಂಟೆನಗೆ ರಕ್ಕಸೀಗಣವೆನ್ನ ಕಾವರೆಡೆಬಿಡದೆ ನಿಮಿಷಂ ||
ಭಾವಿಸುವರೀ ವೇಣಿಯತಿ ದೀರ್ಘಮಾಗಿಹುದು |
ಸಾವಿಗೆಂದಜನೆನಗೆ ಸೃಜಿಸಿರ್ದ ಸಮಯಕಿದು |
ತಾವಾದುದೆಂದು ಮರಣವನು ನಿಶ್ಚಯಗೈದಳಾಗ ಧರಣೀಜಾತೆಯು || ೩೯ ||

ಪಸಿವು ನೀರಡಿಕೆ ನಿದ್ರೆಗಳುಳಿದು ಪಾದಸಾ |
ರಸ ಜಾನದಿಂದಮನುದಿನ ಮಾಳ್ಪ ತಪದಿಂದ |
ರಸೆಯೊಳನ್ಯರ ನೋಡದಿರುವ ಪಾತಿವ್ರತ್ಯಮಹಿಮೆಗಳನುಸಿರ್ವ ನಿಗಮಂ ||
ಪುಸಿಯಾದುದೇ ದೀನರಕ್ಷಣೆಯ ಬಿರುದನೇಂ |
ಬಿಸುಟನೇ ರಘುವೀರ ಸೌಮಿತ್ರಿ ಮೂಲೋಕ |
ದಸಮ ಪೌರುಷವ ತ್ಯಜಿಸಿದನೆ ಹಾ ವಿಧಿಯೆಂದು ಬಿಸುಸುಯ್ದಳಂಬುಜಾಕ್ಷಿ || ೪೦ ||

ಸಕಲ ಧರ್ಮಸ್ವರೂಪಿಯು ಸಕಲ ದೇವತಾ |
ನಿಕರಕುಪಕಾರಮನ್ನೆಸಗಿದವನಾವ ಸ್ತ್ರೀ |
ಪ್ರಕರದೊಳು ಮಕುಟಮಣಿ ಕೌಸಲೆ ಸುಮಿತ್ರೆಯರು ಭರತ ಮುಂತಾದ ಬಲರು ||
ಅಕಲಂಕ ಪೌರುಷದ ಮೈದುನರು ತ್ರೈಲೋಕ |
ಸಕಲ ಶೂರೋತ್ತಮಂ ರಘುನಾಥ ಪತಿಯೆನಿಸಿ |
ಸುಕುಮಾರ ಸುಖಕರದ ತನು ರಕ್ಕಸೀಗಣದೊಳಿಹುದಾಯ್ತು ವಿಧಿಯ ಬಲದೆ || ೪೧ ||

ಎನುತ ನಾನಾಪರಿಯ ಚಿಂತೆಯಿಂದಲಿ ನೊಂದು |
ತನುವ ಬಿಡುವಕ್ಕರಿಂ ನಿಡುಜಡೆಯ ಪಾದಪದ |
ಕೊನೆಗೆ ಸಂಗಡಿಸಲಿಚ್ಛೈಸಿ ನಾಲ್ದೆಸೆಯನುಂ ನೋಡುತಿರಲವನಿಸುತೆಗೆ ||
ವನಜಾಕ್ಷ ರಾಘವಂ ಮುಂಗಡೆಯೆ ತೋರುವಂ |
ತನುನಯದಿ ಕರಿಕರೋಪಮದೂರು ಕಂಪನಂ |
ವನಜನೇತ್ರಸ್ಪಂದ ವಾಮಭಾಗದಿ ತೋರ್ದುದಾ ಮನೋಹರೆಗಾಗಳೆ || ೪೨ ||

ಸುಮಮಾಲಿಕಾಭಿರೂಪ್ಯದ ಭುಜಸ್ಫಾಲನಂ |
ವಿಮಲ ಕಮಲಾಮೋದ ನೇತ್ರಚಾಲನಮೋಷ್ಠ |
ಭ್ರಮಣಮೋಚಾಗರ್ವಮೋಚಮೆನಿಸುವ ವಾಮೆಯೂರು ಚಾಂಚಲ್ಯಮಾಗಿ ||
ಪ್ರಮುದಿತಾಂತಃಕರಣಮಾಗಲಾ ಸಿರಿಮೊಗಂ |
ವಿಮಲಚಂದ್ರೋಪಮಿತಮಾಯ್ತು ಮಾಲಕುಮಿ ಸಂ |
ಕ್ರಮಿತಮನುಜನ ವದನದಂತದೇನತಿಶಯವನೆನಿತೆನುತ ಬಣ್ಣಿಸುವೆನು || ೪೩ ||

ಲೀಲೆಯಿಂ ಶುಭನಿಮಿತ್ತಗಳಾಗಿ ಹರುಷಮಂ |
ಪಾಲಿಸುತ ಬರುತಮಿರೆ ನೋಡಿ ಕುತುಕದಿ ನೆಲನ |
ಬಾಲಕಿಯಿದೇನೆನುತ ತನ್ನೊಳಾಳೋಚಿಸಿದಳೀ ನಿರಯದೇಶದೊಳಗೆ ||
ಮೇಲೆಮೇಲಡಿಸಿ ಬಹ ಶುಭಸೂಚನೆಗಳೇನು |
ಕಾಲವಶಮೆಂದೆನುತಮಾಲೋಚನಂಗೈವು |
ತಾಲೋಕನಂಗೈದಳೆಡಬಲನನಾರೈದು ಸಂತೋಷದೊಳಗೆ ಬೆರೆದು || ೪೪ ||

ವಾಮೆಯರಿಗೆಲ್ಲ ವಾಮಾಂಗ ಸೂಚನೆ ಶುಭದ |
ಧಾಮಮೆಂದೆನುತ ಧೀಮಂತರುಸಿರುವ ಧರ್ಮ |
ನೇಮಮೆಂದಿಗು ತಪ್ಪದೆನುತಮವನೀಜಾತೆಯತುಲಸಂತಸವ ತಳೆದು ||
ರಾಮಪುರದರಸನಂಘ್ರಿಯ ಕಂಡು ಸಂಭ್ರಮದ |
ಲಾ ಮಹೋತ್ಸವದಾನುಭವದಿಂದ ಸಂತತಂ |
ಪ್ರೇಮಗೊಳ್ಳುವೆನೆನುತ ಚಿಂತೆಯಂ ನೆಗ್ಗೊತ್ತಿ ನಲಿದಳವನೀಜಾತೆಯು || ೪೫ ||

**ಹತ್ತನೆಯ ಸಂಧಿ ಸಮಾಪ್ತಂ.**

## ಹನ್ನೊಂದನೆಯ ಸಂಧಿ

ಸೂಚನೆ || ಕ್ಷೋಣೀಂದ್ರ ಶ್ರೀರಾಮಚಂದ್ರಮನ ಮುದ್ರಿಕೆಯ |
ಜಾಣತನದಿಂದ ಜಾನಕಿಗಿತ್ತು ಪ್ರಾಣಸಂ |
ತ್ರಾಣನಂಗೈದಾ ಜಗತ್ಪ್ರಾಣತನಯ ಗೀರ್ವಾಣ ಸಂತತಿ ನಲಿವೊಲು ||

ತರತರದಿ ಗುಮಿಗೂಡಿ ದಾನವಿಯರೆಲ್ಲ ಬಂ |
ಧುರದ ನಿಷ್ಠುರಗೈವರವರ ಮಧ್ಯದಲೊರ್ವೆ |
ಯೊರೆದ ಕನಸಿನ ಪರಿಯ ಧರಣೀತನೂಭವೆಯು ಜೀವವಂ ಕಳೆವ ಪರಿಯ ||
ಮರದ ಕೊನೆಯೊಳಗೆ ವಿಟಪಾಂತರದಿ ಕುಳ್ಳಿರ್ದ |
ಮರುತಜಗೆ ತೋರ್ಪಡಲ್ಕಷ್ಟ ಸಂದೋಹಗಳ |
ಪರಿದಿಡುವೆನೀಕ್ಷಣದೊಳೆಂದು ಮನದಂದ ಕೇಳದ್ರೀಂದ್ರತನುಸಂಭವೆ || ೧ ||

ರವಿತನಯನೊಳು ನೇಹ ಪ್ಲವಗರ ಸಹಾಯ ಬಲು |
ತವಕದಿಂ ಸಕಲ ದೇಶಗಳ ಚಾರಣೆ ತೆಂಕ |
ಯುವರಾಜನಾಗಮನವಂಬುಧಿಯ ಲಂಘನಂ ನಗರ ಶೋಧನೆಗಳೆಲ್ಲ ||
ಕುವಲಯದಳಾಕ್ಷಿಗೋಸುಗಮಲ್ತೆ ರಕ್ಕಸರ |
ಯುವತಿಯರ ಬಾಧೆಯಿಂದಳ್ಕಿ ತನುಭಾವಮಂ |
ನವೆಸಲೆಂದಿಚ್ಛೈಸಿಕೊಂಡಿರ್ಪಳಾಸನ್ನಮಾದುದೇಂಗೈವೆನಕಟ || ೨ ||

ನುಡಿಯದಿರೆ ತನುವನೀಗುವಳೀಕೆ ಮೇಣೊಂದ |
ನುಡಿಯೆ ವಿಶ್ವಾಸ ಜನಿಸುವುದೆಂತೊ ರಕ್ಕಸರ |
ಪಡೆಯೊಳಗೆ ವಿವಿಧಮಾಯಾವಿಗಳು ತಿಳಿದರೆನಗೇಂಗೈವರೆಂತಪ್ಪುದೊ ||
ನುಡಿಯಬಾರದು ನಿಲಲ್ಬಾರದೀ ಧರ್ಮಸಂ |
ಗಡಮೆನಗೆ ಸಮನಿಸಿತು ಮತ್ತಾರೊಳೊರೆವೆನೆಂ |
ದೆಡೆಗೆಡೆಗೆ ಮರುತಸುತ ತನ್ನೊಳಾಲೋಚಿಸುತಮಿರ್ದನಾ ಶಾಖಾಗ್ರದೆ || ೩ ||

ಜನಕಜೆಯನುಪಚರಿಸಿ ಕೊಟ್ಟುಂಗುರದ ಕುರುಹ |
ನನುಕರಿಸಿ ಬಿತ್ತರಿಸಿ ಪಿಂದಿರುಗಲಾದುದೆ |
ನ್ನಿನನ ಮನದಿಷ್ಟ ಮಗುಳಾವ ರಕ್ಕಸ ಬಂದು ಮಾಳ್ಪುದೇನಪ್ಪುದೇನು ||
ಎನಗಾದರಿಂ ಭಯವು ಜನಿಸದೆನ್ನುತ ಭುವನ |
ಜನಜನಿತ ಪತಿಕಾರ್ಯ ಸಾಮದಿಂ ಕೈಸಾರ |
ಲೆನಿತಪ್ಪುದೆನುತ ದೋಲಾಯಮಾನದ ಮನದೊಳಾಲೋಚಿಸಿದ ತನ್ನೊಳು || ೪ ||

ಕುರುಹರಿಯಳೆನ್ನ ಮತ್ತೊಂದು ಭಾಷಾಂತರದ |
ಪರಿಚಯಂ ಮುನ್ನಿಲ್ಲ ಮುಂಗಡೆಯೊಳಾರಾಗೆ |
ಚರಿಸೆ ತಲ್ಲಣಗೊಳುವಳಡಿಗಡಿಗೆ ದಾನವೀಜನದ ಭೀತಿಯೊಳು ನಡುಗಿ ||
ಕಡೆಗೆ ಭಯದಿಂ ತನುವ ಬಿಡಲು ರಾಮನ ಕಾರ್ಯ |
ಕೆಡುಗು ಮಗುಳೇನುಪಾಯದಿ ಕಾಣ್ಬೆನೆಂದೆನುತ |
ಕಡುಗಲಿ ಮರುತ್ಸುತಂ ಕಾರ್ಯ ನಿಶ್ಚಯಮಾಗದರೆನಿಮಿಷ ಚಿಂತಿಸಿದನು || ೫ ||

ಏನಾದರೊಂದುಪಾಯವನೆಸಗಿ ತಲ್ಲಣಿಪ |
ಮಾನಿನೀಮಣಿಯ ಸಂತಸಗೊಳಿಸಿ ಕುರುಪಿಡಿದು |
ಭಾನುವಂಶಜನೆಡೆಗೆ ಪೋಗಬೇಕಲ್ಲದುಳಿದಾಳೋಚನೆಗಳದೇನು ||
ಸೂನಾಸ್ತ್ರನಯ್ಯ ವಂಶಾನುಕೀರ್ತನೆಯ ಸು |
ಮ್ಮಾನದಿಂದಿನಿತಿನಿತ ಶ್ರವಣವಿವರಕೆ ಕಳುಪ |
ಲೂನಮಾದಪುದಸುರಭೀತಿ ಸರಸಿಜನೇತ್ರೆಗದನರಿತು ಪೇಳ್ವೆನೆನುತ || ೬ ||

ಮನದಿ ನಿಶ್ಚಯಗೈದು ರಘುಕುಲಾನ್ವಯನ ಕೀ |
ರ್ತನೆಗೈವರಿಚ್ಛೈಸಿ ಮಾನವರ ಮಾತುಗಳ |
ನನುಕರಿಸಿ ಶಾಖಾಗ್ರದಿಂದ ಭೂಮಿಾತಳವ ನೋಡುತಿಂತೆಂದನೊಲಿದು ||
ಜನನಾಥ ಮಕುಟಮಣಿ ದಶರಥಮಹಾರಾಜ |
ಗನುವಿಂದ ನಾಲ್ವರ್ತನುಜರಾದರವರೊಳಗೆ |
ಚಿನುಮಯ ಪರಬ್ರಹ್ಮ ಶ್ರೀರಾಮಚಂದ್ರಮಂ ಬೆಳಗಿದಂ ಸಕಲ ಗುಣದೆ || ೭ ||

ಗಾಧೇಯಮುನ್ಯರಕ್ಷಣೆಗೆಂದು ದಶರಥಗೆ |
ಬೋಧನಂಗೈದು ಸೌಮಿತ್ರಿ ಸಹ ಯಾಚನಂ |
ಗೈದು ಕರೆದೊಯ್ವುರಟವಿಯೊಳ್ಳು ತಾಟಕಿಯಸುನ ಕಳೆದು ದಾನವರೆಲ್ಲರ ||
ಆ ದಯಾಂಬುಧಿಯಕ್ಷಪಾದನರಸಿಯ ಸಲಹಿ |
ಸಾದರದೊಳೈದಿ ಮಿಥಿಲೆಯೊಳು ಹರಚಾಪಮಂ |
ಭೇದನಂಗೈದು ಜನಕಜೆಯ ಕರವಿಡಿದು ಭಾರ್ಗವನ ಮಿಗೆ ಧಿಕ್ಕರಿಸಿಯೆ || ೮ ||

ಸುರನಗರಕಧಿಕಯೋಧ್ಯಾಪುರವ ಪೊಕ್ಕ ಶ್ರೀ |
ಹರಿಯಂತೆ ಸಕಲರಂಜನೆಗೈವುತಿರೆ ಕಂಡು |
ದೊರೆಯತಿಪ್ರೇಮದಿಂ ಯುವರಾಜಪಟ್ಟಮಂ ಕಟ್ಟಲನುಗೆಯ್ಯಲಾಗ ||
ವರಗಳೆರಡಂ ಬೇಡೆ ಕೈಕೆ ಧರ್ಮದಮಾರ್ಗ |
ದಿರವ ಸಮ್ಮತಿಸಿ ಸೌಮಿತ್ರಿ ಜಾನಕಿಯರೊಡ |
ವೆರದು ಗಂಗಾಕೂಲದಲಿ ಗುಹನ ಮನ್ನಸಿ ಸುಮಂತ್ರನಂ ಬೀಳ್ಕೊಟ್ಟನು || ೯ ||

ಅಲ್ಲಿಂ ಭರದ್ವಾಜನಾಶ್ರಮಕ್ಕೈತಂದು |
ಮೆಲ್ಲನಾ ಚಿತ್ರಕೂಟಾದ್ರಿಯೊಳು ಕೆಲವುದಿನ |
ಮುಲ್ಲಾಸದಿಂದಿರ್ದಗಸ್ತ್ಯನಾಶ್ರಮದೆಡೆಗೆ ಬಂದು ಶರಚಾಪವಿಡಿದು ||
ಸಲ್ಲಲಿತ ಬನದೊಳಗೆ ಚರಿಸುತತ್ರಿಯ ಕಂಡು |
ಭುಲ್ಲವಿಸಿ ಶರಭಂಗ ಮುಖ್ಯ ಮುನಿನಾಯಕರ |
ನುಲ್ಲಾಸಗೊಳಿಸಿ ಗೋದಾವರಿಯ ತೀರದೊಳ್ಪಂಚವಟಿಯಂ ಸಾರ್ದನು || ೧೦ ||

ವರಿಸಲೈತಂದ ರಾವಣನನುಜೆಯಂ ಕರ್ಣ |
ವರಿಯೆ ಖರದೂಷಣತ್ರಿಶಿರಸಾದಿಗಳೈದಿ |
ಬರೆ ಧುರದೊಳೊರಸಿದರಕಂಪನನ ದೆಸೆಯಿಂದ ತಿಳಿದು ದಶಮೌಳಿ ಮುಳಿದು ||
ಕರೆದು ಮಾರೀಚನಂ ಕಳುಪೆ ಹೊಂಮೃಗಗೈದು |
ಧರಣಿಜೆಯ ಪ್ರೀತಿಗಂ ತರಲೈದಲಿತ್ತ ದಶ |
ಶಿರ ಭಿಕ್ಷುವೇಷಧಿಂ ಕದ್ದೊಯ್ದು ಮಾರ್ಗದೊಳು ಕಲಿಜಟಾಯುವನು ಬಡಿದು || ೧೧ ||



ಮಾರೀಚನಂ ತರಿದು ಮರಳಿ ಬರುತಲೆ ಕಂಡು |
ದೂರದೊಳೆ ಲಕ್ಷ್ಮಣನ ಬೆಸಗೊಂಡು ನಿಲಯಮಂ |
ಸಾರಿ ನಾಲ್ದೆಸೆಯ ನಿಟ್ಟಿಸಿ ಕಾಣದಳಲುತ್ತ ಬರುತಾ ಜಟಾಯುವಿಂಗೆ ||
ತೋರ ಸುಖಮಂ ಕೊಟ್ಟು ಕಲಿ ಕಬಂಧನ ನುಡಿಗ |
ಳಾರೈದು ಶಬರಿಯಿರ್ದೆಡೆಗೈದಿ ಪಂಪಾಸು |
ತೀರದೊಳ್ಮರುತಜನ ಮತವಿಡಿದು ತರಣಿಸುತನೊಡನೆ ನೇಹಂಗೈದನು || ೧೨ ||

ಪುರುಹೂತಸುತನ ತರಿದಿಟ್ಟು ಕಪಿರಾಜ್ಯಮಂ |
ತರಣಿತನಯಂಗೀಯೆ ಸುಗ್ರೀವ ಹರ್ಷದಿಂ |
ಧರಣಿಜಾತೆಯನರಸಲೆಂದು ಶತಕೋಟಿಸಾಸಿರ ಪ್ಲವಗರಂ ಕಳುಪಲು ||
ಮರುತ ಖಗಪತಿ ಮನೋಗತಿಯನತಿಗಳೆವ ವಾ |
ನರರೆಲ್ಲ ಭೂತಳವನರಸುತಿರಲಾನೊರ್ವ |
ಶರನಿಧಿಯ ದಾಂಟ ಪುರದೊಳು ನೋಡಿ ಪೊಕ್ಕೆನಾನೀ ಮಹಾನಂದನವನು || ೧೩ ||

ಧೀರ ರಘುವೀರ ನೇಮಿಸಿದಂತೆ ಲಕ್ಷಣಗ |
ಳೋರಂತೆ ತಾಳ್ದಿಸವ ಚಿದ್ವಸ್ತುವಂ ಕಂಡು |
ಭೂರಿ ಹರ್ಷವನಾಳ್ದೆನೀಶಾನನೂಳಿಗಂ ಸಾರ್ಥಮಾಯ್ತಿಂದಿಗೆನುತ ||
ಚಾರು ಸದ್ಗುಣಗಣಗಳಂ ನುತಿಸಿ ಹರ್ಷಗೊಳು |
ತಾ ರಾಮುಮಧ್ಯದೊಳ್ ಮೌನದಿಂದಿರೆ ಕೇಳ್ದು |
ಧಾರಿಣೀಸುತೆಯು ಮನ ಸಂತೋಷನೀರಧಿಯ ಮಧ್ಯದೊಳು ಮುಳುಗಿತಾಗ || ೧೪

ಬೆದರುತಲೆ ಬೆಚ್ಚುತ್ತೆ ಬೇಗದಿಂ ನಾಲ್ದೆಸೆಯ |
ಚದುರಿಂದವಿಾಕ್ಷಿಸುತ ವಿಸ್ಮಯಾಕ್ರಾಂತಮನ |
ಮುದಯಿಸದೆ ಬೆರಗಾಗಿ ಮಗುಳೆಚ್ಚರಂಗೊಳುತ ಭೃಂಗಾಳಕಾಳಿಗಳನು ||
ಪದುಳಗೈದಾ ವಿಟಪಿಯಗ್ರಮಂ ನಿಟ್ಟಿಸಿದ |
ರಧಿಕ ವಿದ್ಯುತ್ಪಿಂಗಳಾಭ ಶ್ವೇತಾಂಬರದ |
ಚದುರಕಪಿ ತರುಣಾರ್ಕಭಾಸದಿಂ ಕಂಗೆಸೆಯೆ ಕಾಣುತಚ್ಚರಿಗೊಂಡಳು || ೧೫ ||

ಹಿತದ ನುಡಿಗಳ ನುಡಿದುಹಿಗ್ಗಿ ಸಂತಸಗೊಳುತ |
ಮತಿಶಯಾಶೋಕೆ ಶೋಭೆಯೊಳು ಸೌವರ್ಣಾಪ |
ಚಿತಿಗೈವ ವಿಮಲಾಂಬಕಂಗಳಿಂ ಕಂಗೊಳಿಪ ವಿಗ್ರಹವ ನೋಡಿ ಭಯದಿ ||
ಅತಿ ಭೀಮರೂಪ ವಾನರಗಿದೆಲ್ಲಿಯದೆನುತ |
ವಿತತ ವಿಸ್ಮಯಚಿತ್ತಳಾಗಿ ಮರುಗುತ ಕನಸಿ |
ನತಿಶಯಮಿದೆಂದು ನಿಶ್ಚಯಗೈದು ಭೂತಳವ ನೋಡುತಾಳೋಚಿಸಿದಳು || ೧೬ ||

ಏನು ಕಾರಣವೆನಗೆ ಘಟಿಸಿದುದು ದುಸ್ವಪ್ನ |
ವಾನರಂ ಕನಸಿನೊಳು ಸುಳಿವುದಮಿತನಿಷಿದ್ಧ |
ಭಾನುಕುಲದರಸ ಜನಕಾದಿಗಳ ಸುಕ್ಷೇಮಮೆಂತಾನು ಕೇಳ್ವೆನೆನುತ ||
ಹಾನಿವೃದ್ಧಿಗಳೆಣಿಸಿ ಹಗರಣದ ಸ್ವಪ್ನವನು |
ಮಾನದಿಂ ಬೇಸರಗಳಳಲುತ್ತಮನಿತರೊಳು |
ಜಾನಕಿಯು ತನ್ನೊಳಗೆ ತಾನೆ ಚಿಂತೆಯನಾಳ್ದು ತೊಳಲಿ ಬಳಲುತಮಿರ್ದಳು || ೧೭ ||

ಇನಿತಾದರುಂ ಸುಖವ ತೋರಿದರೆ ನಿದ್ರೆಯುಂ |
ಜನಿಪುದಲ್ಲದೆ ರಕ್ಕಸೀಗಣದ ಭೀತಿಯಿಂ |
ದನುದಿನಂ ಶ್ರೀರಾಮನಂಘ್ರಿಯಂ ನೆನೆನೆನೆದು ತಾಮಸದ ವೃತ್ತಿಯುಳಿದು ||
ಜನರ ಸಂಗವನುಳಿದು ತಪದಿಂದೆ ಬೆಂಡಾದ |
ತನುವಿಗೆಲ್ಲಿಯ ಸುಪ್ತಿ ದೊರಕುವುದು ಮಗುಳೆನಗೆ |
ಮನದ ಭಾವನೆಯ ಭ್ರಮೆ ಮುಂಗಡೆಯೆ ತೋರಿದುದೊ ಕಲ್ಪಿತಭ್ರಾಂತಿಯವೊಲು|| ೧೮ ||

ಮರವು ತೆರವಿಲಿ ದುಷ್ಟಸ್ವಪ್ನವೇ ತೋರಿದುದೊ |
ಪರಿಕಿಸಿದಡತಿ ನೀಚ ಫಲಕಮಾಗಿದೆ ನಮೋ |
ಸುರಪ ವಾಚಸ್ಪತಿ ಬೃಹದ್ಭಾನು ಖಗರಾಜನಂಘ್ರಿಗಾನತಳಪ್ಪೆನು ||
ಪರಿದು ಕನಸಿನ ಕ್ರೂರಫಲವ ರಘುನಂದನಗೆ |
ಕರುಣನಿಧಿ ಜಾನಕಿಗೆ ಸೌಮಿತ್ರಿ ಮುಖ್ಯರಿಗೆ |
ಹರುಷಮಂ ಪಾಲಿಪುದೆನುತ್ತ ಪ್ರಾರ್ಥನೆಗೈದಳವನೀತನೂಜಾತೆಯು || ೧೯ ||

ಪಗಲಿರುಳು ರಘುವರಾಂತರ್ಗತಸ್ವಾಂತದಿಂ |
ಮಿಗೆ ತೊಳಲುತಿರಲರ್ಥ ಮುಂಗಡೆಯ ಗೋಚರಿಸಿ |
ತೊಗುಮಿಗೆಯ ದಾನವರ ಮಧ್ಯದೊಳು ಸತ್ಕಥಾಶ್ರವಣ ತಾನೆಂತಪ್ಪುದು ||
ಬಗೆಗೆ ಕರುಣಂ ಪುಟ್ಟೆ ಬನ್ನಮಂ ತಿಳಿದು ಬರೆ |
ಜಗದೀಶ ವಾನರನ ಕಳುಪಿರ್ಪನೋ ಯೆನುತ |
ಬಗೆಬಗೆಯ ಚಿಂತೆಯಿಂ ನಿಂದಿರ್ಪ ಜಾನಕಿಯ ನೋಡಿದಂ ಹನುಮಂತನು || ೨೦ ||

ರಾಮಕಥೆಯೊಳು ಚಿತ್ತ ಸಿಲ್ಕಿಹುದು ಬೇಗಲಾ |
ರಾಮಣೀಯಕಮೂರ್ತಿಯಮಿತಸದ್ಗುಣಗಳಂ |
ನೇಮದಿಂ ಬಿನ್ನವಿಸಿ ಶೋಕಮಂ ತೊಲಗಿಸುವೆನೆಂದು ಪವಮಾನಸುತನು ||
ಪ್ರೇಮದಿಂ ಮರದ ಕೊನೆಯಿಂದಿಳಿದು ವಂದಿಸುತ |
ಮಾ ಮಹೀಸುತೆಯ ಮುಂಗಡೆಯ ಕಲವಿಂಕದೊಲು |
ಕಾಮರೂಪಿಯು ನಿಂದು ಮಗುಳೆ ಮಗುಳೆರಗುತ್ತ ಕರಗಳಂ ಮುಗಿದನಾಗ || ೨೧ ||

ಚೀರಕೌಶೇಯವಸನಗಳಿಂದ ಶೃಂಗಾರ |
ಸಾರಸೋಪಮಿತನೇತ್ರಂಗಳಿಂ ಪೆರ್ಮರದ |
ತೋರ ಶಾಖೆಯ ಪಿಡಿದು ಪಲವುವಿಧಚಿಂತೆಗಳ ನೆನೆನೆನೆದು ಮರುಗಿ ಮರುಗೆ ||
ಕಾರಣಮದೇನವ್ವೆ ನೀನಾರು ದೇವತಾ |
ನಾರಿಯೋ ನಾಗಕನ್ನಿಕೆಯೊ ಸಿರಿ ಲಕುಮಿಯೋ |
ಧಾರಿಣೀಸುತೆಯೊ ತಿಳಿವಂತುಸಿರವೇಳ್ಕೆನ್ನೊಳೆನುತಾಗ ಮಗುಳೆರಗಿದಂ || ೨೨ ||

ಜನನಿ ಜನಕರದಾರು ಪತಿಪುತ್ರರೆಲ್ಲಿಹರು |
ವನಜಮಂದಿರೆಯಲ್ಲದುಳಿದ ಮನುಜರಿಗೆಂತು |
ಸನುಮತಮದಹುದೆ ಸೌಂದರ್ಯ ಸಲ್ಲಕ್ಷಣದಲತಿಮಾನುಷದ ಚೆಲುವಿಕೆ ||
ಮುನಿವೇಷದಿಂ ಜನಸ್ಥಾನದೆಡೆಯಿಂ ಚೋರ |
ದನುಜನೊಯ್ದಾ ದಿವ್ಯಮೂರ್ತಿ ಧರಣೀ ತನುಜೆ |
ಯೆನುತೆನ್ನ ಮಾನಸಕೆ ತೋರುತಿದೆ ನೀಂ ರಾಮಮಹಿಷಿ ಸಂದೆಗಮಿಲ್ಲದೆ || ೨೩ ||



ಪಿಂತೆ ಸನಕಾದಿಗಳ ವಚನದಿಂ ದುರ್ದೇಹ |
ಮಾಂತ ಕಿಂಕರರಿಗಭಯವನಿತ್ತು ಮನುಜತೆಯ |
ಸಂತಸದಿ ಧರಿಸಿರ್ಪ ಮಾಲಕುಮಿ ನೀನಲ್ಲದೀ ಧರೆಯ ಮನುಜೆಯಲ್ಲ ||
ಅಂತರಾತ್ಮಕರಾಮನಂಗನೆ ಯೆನುತ್ತಾನು |
ಸ್ವಾಂತರಂಗದಿ ತಿಳಿದು ಭಕ್ತಿಯಿಂ ಭಜಿಸುತಿಹೆ |
ಚಿಂತೆಯಂ ಪರಿದೊಡನೆ ನುಡಿಯನಾಲಿಸುತಭಯಮೀವುದಬ್ಜಾಯತಾಕ್ಷಿ || ೨೪ ||

ಎಂದು ರಘುವರನ ಪೆಸರಿಂದ ಬಹುದಾಹರ್ಷ |
ಬಂಧುರ ಪ್ರಿಯಗೈದ ಮಾರುತಿಯ ಭಾರತಿಗ |
ಳಿಂದ ಜಗತೀತನುಜೆ ಸಂಭ್ರಮದೊಳಿಂತೆಂದು ಪೇಳಿದಳ್ನಿಜ ವೃತ್ತಮಂ ||
ಸಿಂಧುಸಮ ಗಾಂಭೀರಪಂಕ್ತಿರಥ ನೃಪನ ಸೊಸೆ |
ಯೆಂದೆಂಬರೆನ್ನ ಜನಕನ ತನುಜೆ ಧರಣಿಸುತೆ |
ಯೆಂದೆನಗೆ ನಾಮ ಶ್ರೀರಾಮಸೀತೆಯೊಳಾನಯೋಧ್ಯೆಯೊಳಗಿರ್ದೆ ಮುದದಿ || ೨೫ ||

ಪನ್ನೆರಡು ವರುಷ ಸುಖಸಂತಸದಿ ಬಾಳುತಿರ |
ಲನ್ನೆಗಂ ನೃಪತಿ ರಘುಪತಿಗೆ ಪಟ್ಟವ ರಚಿಪೆ |
ನೆನ್ನಲೆಮ್ಮತ್ತೆ ಕೇಕಯರಾಜಸುತೆ ಬೇಗ ಪತಿಯೆಡೆಗೆ ಬಂದು ನಿಂದು ||
ತನ್ನ ಮಗ ಭರತಂಗೆ ದೊರೆತನವನೀಯದಿರೆ |
ಭಿನ್ನಗೈದಪೆ ತನುವನುಣೆನೊರಗೆನೆನುತ ದು |
ಷ್ಟೋನ್ನತದ ನುಡಿಗಳಿಂ ಯಾಚಿಸಲು ಧರ್ಮಸ್ವರೂಪಿ ದಶರಥರಾಜನು || ೨೬ ||

ಮುನ್ನಿತ್ತ ವರದಾನಗಳ ನೆನೆದು ಶೋಕಸಂ |
ಪನ್ನತೆಯೊಳಿರೆ ಜನಕನಿತ್ತಭಾಷೆಯ ಸಲಿಪೆ |
ನೆನ್ನುತಾ ರಘುವೀರ ಬನಕೆ ತೆರಳುತಮಿರಲು ಕಂಡು ಸೌಮಿತ್ರಿ ಬರಲು ||
ಭಿನ್ನ ಚಾರಿತ್ರಮಹುದೆನುತಾನು ಗಮನಮಂ |
ಸನ್ಮತಿಸಿ ಬರಲು ಗೋದಾವರೀ ಪಂಚವಟಿ |
ಯನ್ನು ಸಾರ್ದೆಲೆವನೆಯೊಳಿರ್ದೆ ಪತಿಸೇವೆಯೇ ಗತಿಯೆನಗೆ ಮುಖ್ಯಮೆನುತ || ೨೭ ||

ಅಲ್ಲಿಗೈತಂದೀ ದುರಾತ್ಮರಾವಣ ಕಳವಿ
ನಲ್ಲಿ ತಂದೀಬನದೊಳಿಟ್ಟು ವಾಕ್ಪರಗಳಿಂ |
ಕೊಲ್ಲಲೆಳಸಿಹನೆರಡು ತಿಂಗಳೀಕ್ಷಿಪೆನೆಂದು ಶಪಥಮಂ ಮಾಡಿರ್ಪನು ||
ವಲ್ಲಭನ ಶ್ರೀಪದಂಗಳ ಕಾಣದತಿಶೋಕ |
ದಲ್ಲಿ ಜೀವವನುಳಿವುದಾದುದೆನ್ನುವ ಚಿಂತೆ |
ಯಲ್ಲಿ ತೊಳಲುವೆ ತನಯ ಯೆನುತೊರೆದ ವಾಣಿಗಾ ಹನುಮನುತ್ತರವಿತ್ತನು || ೨೮ ||

ಸುರನರೋರಗಯಕ್ಷರನುದಿನಂ ಪೂಜಿಸುವ |
ಪರಮಮಂಗಳಮೂರ್ತಿ ಬ್ರಹ್ಮಾಸ್ತ್ರವೇತ್ತ ಶ್ರೀ |
ಹರಿಯ ವಿಕ್ರಮ ರಾಮದೂತನಾಂ ದಾಶರಥಿ ಸುಕ್ಷೇಮಿ ತಾಯೆ ನಿಮ್ಮ ||
ಹರುಷಮಂ ತಿಳಿದು ಬರಲೆನ್ನ ಕಳುಪಿದರಾನು |
ಬರುವ ಸಮಯದೆ ವೀರಲಕ್ಷ್ಮಣಂ ಭವದೀಯ |
ಚರಣಕಭಿವಾದನಂಗೈದು ಕುಶಲವನರುಪವೇಳ್ಕೆಂದು ಬಿನ್ನವಿಸಿದಂ || ೨೯ ||

ದೊರೆಯಣುಗರಿರ್ವರತಿ ಸಂತೋಷದಿಂದಿರ್ಪ |
ರೆರೆಯರು ಭವತ್ತಾಪದಿಂದ ಚಿಂತಿಸುತೆನ್ನ |
ಕರೆದು ಕಳುಪಿದರಾನು ಬಂದು ಪದಪದ್ಮಗಳ ಕಂಡು ಕೃತಿಯಾದೆನೆನುತ ||
ಮರುತಸುತನರುಪಲವನೀಜಾತೆ ಮಗುಳೆಂದ |
“ ಳಿರಲು ಜೀವಗಳು ಶತವರ್ಷದೊಳಗೊಮ್ಮೊಮ್ಮೆ |
ಹರುಷಮಂ ಕಾಣದಿರುವರೆ ಪ್ರಾಣಿಗಳು ಜಗದೆ ” ಸಾಧುಗಳ ಗಾದೆಯಲ್ತೆ || ೩೦ ||

ಏನಾದರೊಳ್ಳಿತೆನಗೊಮ್ಮೆ ಶ್ರೀರಘುವರನ |
ಜಾನ ದೊರಕಿತು ಶುಭೋದಯಮೆಂದು ಮಾನಸದಿ |
ಮಾನಿನೀಮಣಿ ಮೌನದಿಂದಿರೆ ಮರುತ್ಸುತಂ ವಂದಿಸುತವೊತ್ತಿಗೈದೆ ||
ದಾನವನ ಭೀತಿಯಿಂ ಪಿಂದಕಡಿಯಿಡುತಿರಲು |
ತಾನುಲ್ಲಸದಿ ನುತಿಸುತ್ತೈತಪ್ಪ ವಾನರನ |
ಕಾಣುತಾಶ್ಚರ್ಯಭಯದಿಂ ನಡುಗುತಿಂತೆಂದಳವನಿಸುತೆಯುಂ ಕಱಣದೆ || ೩೧ ||

ಹಿತವನುಸಿರುವೆ ಪಾಪಿ ಭಿಕ್ಷುರೂಪದೆ ವನ |
ಕ್ಷಿತಿಯಿಂದ ಕಳ್ದುತಂದಿನಿಸುದಿನ ನಿಷ್ಠುರದಿ |
ಖತಿಗೊಳಿಸಿ ಮಗುಳೊಂದು ವೇಷದಿಂ ಮೃದುನುಡಿಗಳಿಂದ ಖೇದಂಗೊಳಿಸುವೆ ||
ಕ್ಷಿತಿಪತಿಗಳೊಡನೆ ಭೀಕರಘೋರನಖರ ಸಂ |
ಯುತದ ಹರಿಯಕ್ಷರೊಳು ಪರಿವಜಲದೊಳು ಮುಳಿದು |
ಸತಿಯರೊಳು ಸಲ್ಲಾಪಸಂತಸವ ನೀವುದೆಲೆ ಮೂರ್ಖ ಪಿಂದಿರುಗೆಂದಳು || ೩೨ ||

ಎನುತುತ್ತರವನಿತ್ತು ಭ್ರಮೆಗೊಂಡಳಂದದಿಂ |
ಕನಸೊ ಮರುತನ ವಿಕಾರಮೊ ಪಿತ್ತದುರುಬೆಯೋ |
ಮನದ ಚಿಂತೆಯದೇನು ಮೂರ್ತಿಯಂ ತಾಳ್ದಿಲ್ಲಿ ಮುಂಗಡೆಯ ಬೆಳಗುತಿಹುದೊ ||
ಎನುತ ಬಹುವಿಧ ಚಿಂತೆಯಿಂದ ಪಿಡಿದಿರ್ದ ತರು |
ಗೊನೆಯನುಳಿದವನಿಸುತೆ ಭೂತಳದಿ ಕುಳ್ಳಿರ್ದು |
ಮನಬಂದ ತೆರದಿ ಪಲುಬಿದಳೊಂದುನಿಮಿಷ ರಘುಪತಿಯ ನೆನೆನೆನೆದಾಗಳು || ೩೩ ||

ಪೊಸತಾಯ್ತು ಕಪಿಯು ಶರಧಿಯ ದಾಂಟಿ ಬರ್ಪುದಿದು |
ಪುಸಿಬಾಸೆ ರಕ್ಕಸರ ಮಧ್ಯದೊಳು ಮಾನಸರ |
ಪೆಸರು ಜನಿಸುವುದುಂಟೆ ಕೃತ್ರಿಮದಿ ದಶಮೌಳಿ ಬಂದನೆಂದುಸಿರ್ವಿಡುತಲೆ ||
ಬಸವಳಿದು ಚಿಂತಿಸುತಮವನಿಸುತೆ ಹನುಮನಿಹ |
ದೆಸೆಯ ನೋಡುತ ಕೇಳ್ದಳಯ್ಯ ಕಪಿರಾಯ ನೀಂ |
ವಸುಧೇಶ ರಾಘವನ ಚರನಾದರಾ ಗುಣೋತ್ಕರ್ಷಗಳ ನೊರೆಯೆಂದಳು || ೩೪ ||

ಪೊಡವಿಜಾತೆಯ ನುಡಿಗೆ ಸಂತಸದಿ ಮಾರುತಿಯು |
ಪೊಡಮಟ್ಟು ಬಿನ್ನವಿಪೆನಾಲಿಸಾದರೆ ದೇವಿ |
ಕಡಲ ಧೈರ್ಯಂ ಸೂರ್ಯತೇಜ ಶಶಿಯೊಲ್ ಕಾಂತಿ ಹರಿವಿಕ್ರಮಂ ಸತ್ಯದ ||
ಬೆಡಗಾಂತ ವಾಣಿ ಕೋಪದೊಳಗ್ನಿಗಧಿಕ ಸುರ |
ರೊಡೆಯ ರಘುನಾಥನಾ ಶುಭಗುಣಂಗಳ ಸಾಟ |
ಯಿಡಲೆಣಿಸಲೆನ್ನಿಂದಮಪ್ಪುದೇಂ ತಿಳಿದನಿತನೊರೆವೆನಾಲಿಪುದಂಬಿಕೆ || ೩೫ ||



ಮನಸಿಜನವೋಲು ಸುಂದರಮೂರ್ತಿ ಸಾಧು ಸ |
ಜ್ಜನಪೋಷ ಶ್ರೀರಾಮ ವಿಷ್ಣುನಿಭ ಪಿತೃವಚನ |
ವನುಸರಿಸಿ ದಂಡಕಾ ವಿಪಿನದೆಡೆಯೊಳಗಿರಲು ಮಾರೀಚ ಮೃಗರೂಪದಿ ||
ಜನನಾಥನಂ ಕರೆದುಕೊಂಡೊಯ್ಯೆ ರಾವಣಂ |
ಮುನಿವೇಷದಿಂ ನಿಮ್ಮನೊಯ್ದು ಮಗುಳ್ಕೈತಂದು |
ಹನುಮ ಪೋಗೆಂದೆನ್ನ ಕಳುಪಲಾನ್ಬೈತಂದೆ ದಾಶರಥಿಯಾಜ್ಞೆವಿಡಿದು || ೩೬ ||

ತರಣಿಸುತ ಸುಗ್ರೀವನೊಳು ಸಖ್ಯ ರಾಘವಗೆ |
ದೊರಕಲರ್ಬುದ ಕೋಟಿಯಪರಿಮಿತ ವಾನರರು |
ಚರರೆನಿಸಲತಿ ಸಂತಸದೊಳೆನ್ನ ಕರೆದು ಬಹುವಿಧದಿಂದ ಕುರುಪನರುಪಿ ||
ಮರುತಸುತ ಸುಗ್ರೀವ ಸಚಿವ ವೇಗದಿ ಪೋಗಿ |
ಧರಣಿಜೆಯ ಸಂತೈಸಿ ಬಹುದೆಂದು ನೇಮಿಸಲು |
ಚರಣದರ್ಶನ ಕುತೂಹಲದಿಂದಲುಂ ಬಂದ ದೂತನೆಂದರಿವುದನಘೆ || ೩೭ ||

ರಾಮದೂತಂ ರಘೂದ್ವಹನ ಕಿಂಕರ ತಾಯೆ |
ಪ್ರೇಮದಿಂ ನುಡಿಯ ಮನ್ನಿಸವೇಳ್ಕು ರಕ್ಕಸ |
ಸ್ವಾಮಿಯೆಂದನುಮಾನಗೊಳಸಲ್ಲ ಭವದೀಯ ಚರಣ ಸೇವಕನೆನ್ನುತ ||
ಶ್ರೀಮನೋಹರೆಯೆನುತ ಕುರುಹ ಸೂಚಿಸೆ ಕೇಳಿ |
ರಾಮಕೀರ್ತನೆಗಳಿಂ ಭುಲ್ಲವಿಸಿ ಕಪಿವಂಶ |
ಸೋಮನೊಳು ಮೃದುಮಧುರ ನುಡಿಗಳಿಂ ಮೂದಲಿಸಲನುಗೈದಳವನಿಜಾತೆ || ೩೮ ||

ತನಯ ರವಿತನಯನೊಳು ಮಿತ್ರತೆಯು ರಘುವರನಿ |
ಗನುಕೂಲಮಾಯ್ತೆಂದು ನೀಂ ದೂತನಾದರುಂ |
ವನಜಾಕ್ಷ ರಾಘವನ ಲಕ್ಷಣಂ ಸಂಸ್ಥಾನ ವರ್ತನೆಯ ಸೌಮಿತ್ರಿಯ ||
ದಿನಿಸ ವಿಸ್ತರಗೈವುದೆನುತ ಬೆಸಗೊಂಡರಾ |
ಜನಕಜೆಯ ನುಡಿಗೆ ಸಂತಸಗೊಳುತ ಕಪಿವೀರ |
ಮನಮೊಡಂಬಡುವಂತೆ ರಾಮಲಕ್ಷ್ಮಣರುಗಳ ಲಕ್ಷಣವ ಸೂಚಿಸಿದನು || ೩೯ ||

ಹಿಮಶೈಲ ಧೈರ್ಯ ಬುದ್ಧ್ಯಾ ಬೃಹಸ್ಪತಿಯ ನಿಭ |
ನಮಲ ಭಾಸ್ಕರತೇಜ ಶಶಿಯೋಲ್ಮನೋಹರಂ |
ಸುಮನೋವಿಲಾಸಕರ ಸ್ವಜನ ಪರಜನ ಲೋಕಪ್ರಾಣ ಸಂರಕ್ಷಕರನು ||
ಪ್ರಮದಾವಿಮುಖ ಬಲಿಗಳೊಳಗೆ ಬಲಿ ಸಾಧುಗಳ |
ನಮಿತ ಹರ್ಷದಿ ಪೊರೆವ ದುರ್ಜನರ ಜಾತಿಯಂ |
ಮಮತೆಯಿಂ ಶಿಕ್ಷಿಸುವ ಸರ್ವಜ್ಞ ರಾಜವಿದ್ಯಾವಿಶಾರದನಂಬಿಕೆ || ೪೦ ||

ಸಕಲಾಗಮಜ್ಞ ಮೃದುವಾಂತ ಶಾಂತಂ ಬುಧ |
ಪ್ರಕರ ಸೇವಿತ ವೇದವೇದಾಂಗ ಪಾರಗಂ |
ಸುಕುಮಾರತರ ಮೂರ್ತಿಯುಂ ಧನುರ್ವೇದಿಗಳ ಬಲ್ಲಹ ಯಜುಃ ಪೂಜ್ಯನು ||
ಅಕಲಂಕ ವಿಪುಲಾಂಸ ದೀರ್ಘಬಾಹಾಲತಿಕ |
ನಕುಟಿಲಂ ತಾಮ್ರಾಕ್ಷ ಗೂಢ ಜತ್ರುಕ ಪಾಣಿ |
ನಿಕರ ಪಾಲಕ ದುಂದುಭಿಧ್ವಾನದಿಂದೆಸೆವ ಸ್ವನಯುತಂ ರಘುನಾಯಕಂ || ೪೧ ||

ವಾರಿಜದಳಾಕ್ಷಿ ಕೇಳ್ ಶ್ಯಾಮವರ್ಣಂ ಮೂರು |
ತೋರ ಮೂರುಂಲಂಬ ಮೂರು ಸಮ ಮೂರು ಸ್ಥಿರ |
ಮೂರುನ್ನತಂ ಮೂರು ನಿಬಿರೀಸ ರಕ್ತವರ್ಣಂ ಮೂರುಮುವನತಗಳು ||
ಮೂರು ಮೂರಾಗುತ ಸಮುಸ್ಸಮು ವಿಭಕ್ತಾಂಗ |
ಮೂರು ಶಿರಯುತ ಚತುರ್ವ್ಯಂಗ್ಯ ಶ್ರೀರಘುವೀರ |
ಚಾರು ಸರ್ವಾಂಗ ಸುಂದರ ಸುರೋತ್ತಮ ಮಾನುಷೋತ್ತಮ ಧರಾನಂದನೆ || ೪೨ ||

ಚತುರ ಕಳೆಯುಳ್ಳಾತ ಚತುರ ರೇಖನೊ ಸಾಧು |
ಚತುರ 1ಕಿಷ್ಕುಚತುಸ್ಸಮುಂ ಚತುರ್ದಂಷ್ಟ್ರ ಚತು |
ರ್ಗತಿ ಚತುರ್ದಶ ಸಮುಂ ಯುಗ್ಮಹನುಮಾಗಿ ಮಧುರಾಧಿಕ್ಯತರ ಕಲಿತನು ||
ಅತಿಶಯದೊಳ್ಳೈದು ಸ್ನಿಗ್ಧಂ ಮೂರು ವ್ಯಾಪ್ಯಂಗ |
ಳತಿ ಬೃಹತ್ರಿತಯ ದಶ ಪದ್ಮ ಮೂರುಂ ವ್ಯಾಪ್ತ |
ಮತಿಶಯ ಷಡುನ್ನತಂತ್ರ್ಯವನತವಿಶುಕ್ಲವಾನ್ ರಘುನಾಥ ತಿಳಿಯಂಬಿಕೆ || ೪೩ ||

ಶೀಲಯುತ ಸತ್ಯಯುತ ರೂಪು ದಾಕ್ಷಿಣ್ಯಗಳ |
ಜಾಲಕಾಲಯ ಸರ್ವಜನ ಮನೋಹರ ನುಡಿಯ |
ಲೀಲೆಯಿಂ ಸ್ಥಿತಿಲಯಂಗಳ ಮಾಳ್ಪ ಪರಬೊಮ್ಮ ರಾಮಲಕ್ಷ್ಮಣರ್ಗಳಾಂತು ||
ಬಾಲ ಸೌಮಿತ್ರಿ ಕಂಗೊಳಿಪನಿರ್ವರು ಚೆಲುವ |
ಸಾಲ ಬನಗಳ ಕಳೆದು ನಿಮ್ಮನರಸುತ ಬಂದ |
ರೋಲಾಯ ಪಂಪಾಸರೋವರದ ತಟಕ್ಕೈದಿ ನಿಂದರತಿ ಸಂಕ್ಲೇಶದಿ || ೪೪ ||

ಸುರಪಸುತನೊಳು ವೈರವೆರದು ಸುಗ್ರೀವನಿಗೆ |
ಕರೆದು ರಾಜ್ಯವನಿತ್ತು ತನ್ಮತದಿ ನಿಮ್ಮಡಿಯ |
ನರಸಲೆಂದಾ ಪ್ಲವಂಗಾಧಿಪತಿ ಜಾಂಬವ ಪ್ರಮುಖಾದಿಗಳನುಮಾಗ ||
ಬರುತ ನೀರಧಿಯ ಕಂಡೆಲ್ಲ ಕ್ಲೇಶಿಸಲಾನು |
ಶರನಿಧಿಯನುತ್ತರಿಸಿ ನಿಶೆಯೊಳಗೆ ಪಟ್ಟಣವ |
ತಿರುಗಿ ದಶಮುಖನ ಕಂಡೀ ಕಾನನಾಂತರದಿ ಚರಣಗಳನೀಕ್ಷಿಸಿದೆನು || ೪೫ ||

ಪುಸಿಯನಾಡೆನು ರಾಮ ವಸುಧೇಶ ಕಿಂಕರನು |
ಶಶಿವದನೆ ಕೇಳ್ಕಪಟೆಯಲ್ಲ ಸುಗ್ರೀವನಂ |
ಬೆಸಗೊಂಡು ಬಂದಿರ್ಪ ಸಕಲ ವಾನರತತಿಯ ಜಲನಿಧಿಯ ತಡಿಯೊಳಿಟ್ಟು ||
ಪೆಸರಂಜನಾತನಯ ಕೇಸರಿಯ ನಂದನಂ |
ಬಿಸಜಗಂಧಿನಿ ಭವತ್ಸೇವೆ ಸುಕೃತದ ಫಲದೆ |
ವೊಸಗಿತೆನಗೆನುತ ನುತಿಗೈದು ಹರ್ಷಾನಂದಗೊಳಿಸಿದಂ ಜಾನಕಿಯನು || ೪೬ ||

ನಳಿನಾಕ್ಷಿ ರಾಮಕಿಂಕರ ದೂತನೆಂದೆನ್ನ |
ತಿಳಿದು ವಿಶ್ವಾಸಿಪುದು ಚಿತ್ತಸಂತೋಷಗಳು |
ಬೆಳೆದು ಸಂಕ್ಲೇಶಸಂಕುಲ ಜರುಗಿ ರಘುವರನ ಸನ್ನಿಧಿಯು ಬೇಗಲೊದಗಿ ||
ನಳನಳಿಪ ಪೂರ್ಣೇಂದುವನು ಪಳಿವ ಮುಖಶಶಿಯು |
ಕಳೆಪೆರ್ಚಿ ಬಹುದೆನುತ ಸಂತವಿಸುತಾಗ ತ |
ನ್ನೊಳಗಿರ್ಪ ದಿವ್ಯನಾಮಾಂಕಿತದ ಮುದ್ರೆಯಂ ತೆಗೆದನಾ ಮರುತಸುತನು || ೪೭ ||

1 ಕಿಷ್ಕಿ



ಭೂವಲಯ ಸುಕ್ಷೇಮಕರ ಸರ್ವಮುನಿಜನರ |
ಜೀವನಂ ದನುಜಕುಲದಾವಾಗ್ನಿ ದೀನಜನ |
ಭಾವ ಸಂತೋಷಕರವೆನಿಪ ಸಿರಿನಾಮಾಂಕಿತದ ಮುದ್ರೆಯುಂಗುರವನು ||
ದೇವಿ ನಿಟ್ಟಿಪುದೆನುತ ಹಸ್ತಕಮಲದೊಳಿಟ್ಟು |
ಪಾವಮಾನಿಯು ಚರಣಕಭಿನಮಿಸಿ ಕೈಮುಗಿದು |
ದೇವ ರಾಘವನ ನುತಿಸುತ ಪರಮಭಕ್ತಿಯೊಳ್ ನಿಂದಿರ್ದನೊತ್ತಿನೊಳಗೆ || ೪೮ ||

ಕಂದಿರ್ಪ ಸಸ್ಯಾದಿಗಮೃತದಾಸಾರಗಳು |
ಬಂದೊದಗಲಾನಂದಗೊಳುವಂತೆ ಕೋಗಿಲೆಯ |
ಬೃಂದಮುಂ ನಿಟ್ಟಿಸುತಮತಿ ಹರುಷಮಾಂತೆಸೆವ ಶೃಂಗಾರನಂದನದೊಲು ||
ಬಂದೊದಗೆ ಜೀವನಂ ಸಂತೋಷಿಸುವ ಮೂರ್ತಿ |
ಯಂದದಿಂದಂಗುಲೀಯಕವ ನೋಡುತ ಪ್ರೇಮ |
ದಿಂದ ಕಂಗಳಿಗೊತ್ತಿ ಸೀಮಂತದೊತ್ತಿನೊಳಗಿಟ್ಟಳವನೀಜಾತೆಯು || ೪೯ ||

ಪರಮಪುರುಷನ ಕಳಾಮಾತ್ರದೊತ್ತಿಲಿ ಪ್ರಕೃತಿ |
ಹರುಷದಿಂ ಭುಲ್ಲವಿಸುವಂತೆ ಧರಣೀತನುಜೆ |
ಮರುತಾತ್ಮಜಂ ಕೊಟ್ಟ ಮುದ್ರೆಯಿಂದಾನಂದಮಯಳೆನಿಸಿ ಹೃನ್ನಿಲಯದಿ ||
ಸಿರಿರಾಮಪುರದರಸನಂಘ್ರಿಸಾರಸಗಳಂ |
ಪರಿರಂಭಣಂಗೈದು ಬೇರಾಗುತಾನಂದ |
ಪರವಶತೆಯಿಂದೊಂದನರಿಯದ ಸುಖಾಕಾರದಂತೆಸೆದಳಾಗಲಗಜೆ || ೫೦ ||

**ಹನ್ನೊಂದನೆಯ ಸಂಧಿ ಸಮಾಪ್ತಂ.**

# ಹನ್ನೆರಡನೆಯ ಸಂಧಿ

ಸೂಚನೆ || ಅಪರಿಮಿತ ಸಂತಸದಲರುಹಿ ಕುರುಹುಗಳನಾ |
ನೃಪತಿಗಳ ನುತಿಗೈದು ಪವಮಾನ ನಂದನಗೆ |
ಕೃಪೆಯಿಂ ಶಿರೋರತ್ನವಿತ್ತು ಬೀಳ್ಕೊಟ್ಟಳಾ ಜನಕಸುತೆ ಮಮತೆಯಿಂದ ||

ರಾಮನಾಮಾಂಕಿತದ ಮುದ್ರೆಯುಂಗುರವನ್ನು |
ಭಾಮಿನೀಮಣಿ ನೋಡುತಾಗ ರಾಘವನ ಪದ |
ತಾಮರಸಗಳ ಕಂಡ ತೆರದೆ ಸಂಭ್ರಮಗೊಂಡು ಜನಕಸುತೆ ಹಿಗ್ಗಿನಲಿದು ||
ಪ್ರೇಮದಿ ಮರುತ್ಸುತನ ನೋಡಿ ಮೃದುನುಡಿಯಿಂದ |
ಭೀಮ ವಿಕ್ರಮ ವಿಜಯ ವಾನರೋತ್ತಮ ಭವ |
ನ್ನೇಮಂಗಳಂ ಪೊಗಳಲೆನ್ನಳವೆಯೆನ್ನುತಂ ನುತಿಗೈದಳದ್ರಿತನಯೆ || ೧ ||

ನೂರುಯೋಜನದಗಲ ವಾರಿಧಿಯ ಗೋಷ್ಪದೀ |
ಕಾರಗೈದಮಿತ ಬಲಶಾಲಿ ರಕ್ಕಸಯೋಧ |
ರಾರುಭಟೆಗಳ ಮಹಾಮಾಯಾ ಸಮೂಹಗಳ ಮನದೊಳಿನಿತಂ ನೆನೆಯದೆ ||
ತೂರಿ ನಿಶೆಯೊಳು ನಗರಮೆಲ್ಲಮಂ ತೊಳಲಿ ಬಂ |
ದೋರಂತೆ ಮತ್ಪ್ರಾಣರಕ್ಷಣಂಗೈದ ಕಪಿ |
ವೀರ ನೀಂ ಪ್ರಾಕೃತನೆ ಸುರರಾಜ ಪೂಜಿತನೆನುತ್ತ ನುತಿಗೈದಳೊಲಿದು || ೨ ||

ದಶಶಿರನ ಭೀತಿಯೆಳ್ಳನಿತುಂಟೆ ಶತ್ರುಗಳ |
ವಿಷಯಮೆಂದಳ್ಕುಂಟೆ ಗತಿಗೆ ಪಾಸಟಿಯುಂಟೆ |
ಮಶಕೀಕೃತಂ ಗೈದು ದಾನವರ ನಿಶೆಯೊಳಗೆ ಲಂಕಾನಗರಮೆಲ್ಲಮಂ ||
ಕುಶಲದಲಿ ನೋಡಿ ಕುಂದಿಲ್ಲದೆನ್ನಂ ಕಂಡು |
ಶಶಿಕಾಂತ ರಘುವೀರನಂಗುಲೀಯಕವನಿ |
ತ್ತಸುವನುಂ ಪಾಲಿಸಿದೆ ಮೂಲ್ಲೋಕದೊಳು ನಿನಗೆ ಸಮನುಂಟೆ ಕಪಿವರೇಣ್ಯ || ೩ ||

ಶೂರ ವಿಕ್ರಮ ಸುರೇಂದ್ರಾದಿಗಳಿಗತಿಶಯದ |
ಭಾರಣೆಯ ಬಲಮುಳ್ಳ ಕುಶಲನೆನ್ನುತ ತಿಳಿವು |
ತೀ ರಾಜಧಾನಿಗಟ್ಟಿದ ನಿನ್ನ ಸರ್ವಜ್ಞ ಸಕಲ ಗುಣನಿಧಿ ರಾಘವಂ ||
ಧಾರಿಣಿಯೊಳುಳ್ಳಖಿಳ ಭೂತಂಗಳಿಂದ ಸಂ |
ಚಾರಮಪ್ಪುದೆ ಕಪೀಶ್ವರ ಭವನ್ಮಹಿಮೆಗಳ |
ನಾರು ತಿಳಿವರಪಾರ ಮಾರುತಕುಮಾರ ರಿಪುಹಾರ ಜಗದೇಕವೀರ || ೪ ||

ಎನುತಮುಪಚರಿಸಿ ಜಾನಕಿದೇವಿ ಶ್ರೀರಾಮ |
ನನುಜ ಲಕ್ಷ್ಮಣ ತರಣಿಸುತ ಮುಖ್ಯವಾನರ |
ರ್ಮನುವಿಂದ ಸುಕ್ಷೇಮಮಾಂತಿಹರೆ ರಾಘವಂಗೆನ್ನೊಳಗೆ ಪ್ರೇಮಮಿಹುದೆ ||
ದಿನಕರಾನ್ವಯ ತಿಲಕರರಿನಿಗ್ರಹಂಗೈವ |
ಘನಯೋಚನೆಯೊಳಿಹರೆ ಸೃಷ್ಟ್ಯಂತಗಳ ಮಾಳ್ಪ |
ಚಿನುಮಯ ಕೃಪಾವಂತರಾದರೇಂ ದುರ್ದಶದ ಬಲಮೆನಗೆ ಪ್ರಬಲಮಣುಗ || ೫ ||

ತರತರದ ಶೋಕಸಾಗರದಿಂದಮೆನ್ನನುಂ |
ಪೆರತೆನಿಸಿ ಚಿತ್ತದೊಳು ಪ್ರಿಯಮುಂಟೆ ಸಾಗರದ |
ತರಣದಾಲೋಚನೆಯೊಳಿಹರೆ ಮತ್ಕಷ್ಟಗಳ ನೆನೆವುದುಂಟೇ ಮನದೊಳು ||
ಅರಿಗಳಂ ಜೈಸುವರುಪಾಯ ಸಮುದಯಗಳೇಂ |
ದೊರಕಿಹವೆ ಚಿತ್ತಾನುವರ್ತಿ ಮಿತ್ರರು ಚರರು |
ದೊರೆಯಾಜ್ಞೆಯೊಳಗಿಹರೆ ಮುಂದಪ್ಪ ಕಜ್ಜಗಳನುಚಿತದಿಂ ತಿಳುಪೆಂದಳು || ೬ ||

ಪುರುಷಕಾರ್ಯಂಗಳಂ ಮರೆಯದೆಸಗುತಮಿಹರೆ |
ಭರತನಶುಭೋದಯಂ ಕೌಸಲ್ಯೆಸೌಮಿತ್ರಿ |
ಯರ ಕ್ಷೇಮವಾರ್ತೆಗಳ್ಬರುತಿಹವೆ ಶತ್ರುಹರ ಮಿತ್ರರೇಂ ಸಮನಿಸಿಹರೆ ||
ದುರುಳ ದಶಕಂಧರನ ತರಿಯಲೋಸುಗ ದೇವ |
ನೆರವಿಯಂ ಪ್ರಾರ್ಥಿಪರೆ ಮದ್ವಿಯೋಗದಿ ದುಃಖ |
ತರದೊಳಿರ್ಪರೆ ಧೈರ್ಯವಾಂತಿಹರೆ ತಿಳಿವಂತೆ ಪೇಳು ಕಪಿಕುಲಲಲಾಮ || ೭ ||

ಈ ದುಃಖರಾಶಿಯಿಂದೆನ್ನ ತೆಗೆವಡೆ ಸಾಧ್ಯ |
ಹಾದಿಯಂ ನೆನೆದಿಹರೆ ಕೈಕಾತನೂಜಾತ |
ನಾದರಿಸಿ ಚತುರಂಗಿಣಿಯ ಸಹಾಯಕೆ ಕಳುಹಿ ಕೊಟ್ಟಿಹನೆ ಸುಗ್ರೀವನು ||
ಭೇದ ಮೊದಲಾದುಪಾಯಗಳಿಂದ ದಾನವರ |
ಭೇದಿಸುವರೆಳಸಿಹನೆ ಸೌಮಿತ್ರಿಯುತ್ಸಾಹ |
ದಾಧಿಕ್ಯದಿಂದೆನ್ನ ತೆಗೆಯಲಿಚ್ಛೈಸಿಹನೆ ಪೇಳ್ಬಲೀಮುಖನಾಯಕ || ೮ ||

ನಸುನಗೆಯ ಸವಿನುಡಿಯ ನಯನೇಂದ್ರಿಯಂಗಳಂ |
ಪೊಸಬಿಂಬದಂತೆಸೆವ ವದನಾಬ್ಜಮಂ ಕಂಡು |
ಪೆಸರಿಂದಮಾಂಕರೆದು ರಾಘವನ ತನುಲತೆಯನಪ್ಪಿ ಪರಿತಾಪವನ್ನು ||
ನಸಿದುಪೋಪಂತೆಂದಿಗನುಗೈವೆ ಪಿತಮಾತೆ |
ಯಸು ಸುಖಂಗಳ ತೊರೆದು ಶ್ರೀಚರಣ ಭಕ್ತಿಯಿಂ |
ವಸುಮತೀಶನೊಳಾನು ವನವಾಸಕೈತಂದೆ ಸೌಖ್ಯವೊಂದುಂ ಮುದದೊಳು || ೯ ||

ಸಿರಿಯನುಜ ತನುಜ ಪಿತೃಮಾತೃ ಸುಖಸಂಪದವ |
ಸ್ಮರಿಸದೆನ್ನಿಂದನ್ಯ ಪ್ರೀತಿಕರವಿಗ್ರಹಂ |
ದೊರೆಯದೆಂದನುದಿನಂ ಕಾನನ ಕ್ಲೇಶಕರಕಷ್ಟಗಳನೊಂದರಿಯದೆ ||
ನಿರತ ಸಂತಸಗೊಂಬ ರಾಮಗೆನ್ನ ವಿಯೋಗ |
ದೊರೆಯಲೆಂತಿಹನೆಂದು ಧರಣಿಸುತೆ ಬೆಸಗೊಳಲು |
ಕರಗಳಂ ಮುಗಿದು ಮಾರುತಿ ಬೆಸಸಲನುಗೈದ ಚಿತ್ತಾನುತಾಪಹರದೆ || ೧೦ ||

ದೇವಿ ಲಾಲಿಸು ಸದಾ ನಿಮ್ಮ ಚಿಂತನೆಯಿಂದ |
ದೇವ ರಾಘವ ವಿಹಾರಗಳುಳಿದು ಚಿಂತಿಸುತ |
ಠಾವರಿಯದನುದಿನಂ ತಳ್ಳಂಕಗೊಳುತಿರುವನಾಂ ಪೋಗಿ ನೆಲೆಯನುಸುರೆ ||
ಈ ವಸುಧೆಗೈತಂದು ತೀಕ್ಷ್ಣಾಶುಗಗಳಿಂದ |
ದೇವಶತ್ರುವ ಸಬಾಂಧವರೆಲ್ಲರಂ ತರಿದು |
ದೇವಪತಿ ಶಚಿಯನ್ನೊಯ್ದಂತೊಡನೆ ಕರೆದ್ಯೊವ ಚಿಂತೆಯಾತಕ್ಕೆ ತಾಯೆ || ೧೧ ||

ಅಡವಿಯೊಳು ನಿಮ್ಮಗಲಿದಂದಿಂದ ರಾಘವಂ |
ಪಿಡಿದ ಚಿಂತೆಯೊಳೊಂದು ಕಡೆಯ ನಿಲ್ಲದೆ ಸುಖವ |
ಪಡೆಯದಲೆ ಮಾಂಸಮಧುಸೇವನೆಗಳಂ ಬಿಟ್ಟು ವನ್ಯಾದಿಗಳನು ತೊರೆದು ||
ನಡುಕ ರೋದನ ಪ್ರಮತ್ತಾಲಾಪ ನಿಡುಸುಯಿಗ |
ಳಡಿಗಡಿಗೆ ಪೆರ್ಚಿಸುತ ಮುಂಗಡೆಯಲಿರ್ಪುದ |
ನ್ನೆಡಹಿ ಕಾಣದೆ ಭವದ್ಗತಚಿತ್ತದಿಂದಿರ್ಪನಿದು ಸತ್ಯಮಂಬುಜಾಕ್ಷಿ || ೧೨ ||

ನಿದ್ರೆಯೆಂಬುದನರಿಯ ನಿಬಿಡತರ ಮೃದುವಾಣಿ |
ಪೊದ್ದದಾತನ ಕಿವಿಯ ಷಡ್ರುಚಿಗಳಾಸಕ್ತಿ |
ಯೊದ್ದದಾಜಿಹ್ವೆ ಫಲಪುಷ್ಪ ಮಧುರಾಹಾರ ವಾರ್ತಾಪ್ರಶೂನ್ಯಮಾಗಿ ||
ಮುದ್ದುಮೊಗ ಮುಗುಳುನಗೆ ಮುಡಿಯಸೊಬಗಂ ನೆನೆದು |
ಬದ್ಧವಿಶ್ವಾಸದಿಂ ಬಲಿಯಿಟ್ಟು ರಕ್ಕಸನ |
ಉದ್ದುರುಟುವಂ ನಿಲಿಸಲೆಂದು ಯೋಚಿಸುತಿರ್ಪ ರಘುನಾಥ ಜನಕಜಾತೆ || ೧೩ ||

ಅಂಗದ ಪ್ರಮುಖ ಕಪಿನಾಯಕರು ನಿಮ್ಮ ಪಾ |
ದಂಗಳಂ ಕಾಣಲುಜ್ಜುಗದಿಂದ ಬೇಡೆ ಕಪಿ |
ಪುಂಗವಂ ಸಂತಸದಲಪ್ಪಣೆಯ ಬೆಸಗೊಂಡರದ ಮನದೊಳಿಟ್ಟೊರ್ವರ ||
ಸಂಗಡುಸುರದೆ ಮಹದ್ಯತ್ನದಿಂದಿರ್ಪ ನರ |
ಸಿಂಗ ವಿಕ್ರಮ ರಾವಣನ ಕುಲವ ಸಂಹರಿಸಿ |
ಹಿಂಗದ್ಯೊದಪ ನಿಮ್ಮನಿದು ಸತ್ಯಮೆಂದರಿದು ಚಿಂತೆಯಂ ಬಿಡು ಮದಂಬೆ || ೧೪ ||

ಪವನಸುತನುಸಿರ್ದ ನುಡಿಗಳಲಧಿಕ ಹರ್ಷ ಸಂ |
ಭವಮಾಗೆ ಧರಣಿಜೆಯು ಹನುಮನೊಡನಿಂತೆಂದ |
ಳವಿ ದ್ರವಿಸುವಂತೆ ಹಲಹಲದೊಳಮೃತವು ಜನಿಸಿದಂತೆ ದೈತೇಯ ಜನರ ||
ನಿವಹದೊಳು ಶುಭವಾಣಿ ನಿನ್ನಿಂದಮಾಂ ಕೇಳು |
ತವಿರಳದ ಸಂತೋಷವಿತ್ತುದನಿಶಂ ಪೇಳ್ವೆ |
ಪ್ಲವಗಪತಿ ಕಾಲಗತಿಯಂ ಮೀರಲಾರಿಂದ ತೀರ್ವುದದನೊರೆವೆ ಕೇಳು || ೧೫ ||

ಸಿರಿಯೊಳಿರ್ದರು ದರಿದ್ರತೆಯನಾಂತಿರ್ದರುಂ |
ಧುರ ವಿಜಯನಾದರು ದಿವಾಭೀತನಾದುರುಂ |
ಪರಮಸುಖದಿಂದಿರಲಿ ಕಷ್ಟದೊಳ್ಮುಳಿಗಿರಲಿ ಪ್ರಾರಬ್ಧ ರಶ್ಮಿಯಿಂದ ||
ಬರಸೆಳೆಯದುಳಿಯದೀ ವಿಧಿಯಖಿಳ ಪ್ರಾಣಿಗಳ |
ನಿರತಮಿದು ರಘುವೀರ ಲಕ್ಷ್ಮಣಾದ್ಯರ ನಿನ್ನ |
ಪರಿಕಿಸು ಮೃಗೇಂದ್ರ ವಿಕ್ರಮ ಪೇಳ್ವುದೇಂ ಕಾಲವಶಮಲ್ಲದುಳಿದುದೇನು || ೧೬ ||

ರಕ್ಕಸರ ಕುಲವಿನಾಶಂಗೈದು ದಶಗಳನ |
ನೊಕ್ಕಲಿಕ್ಕುತ ತ್ರಿಕೂಟಾದ್ರಿಯಂ ಶರಧಿಯೊಳು |
ಗಕ್ಕನುನ್ಮೂಲಮೆನಲಿಟ್ಟು ಚಿಂತಾಂಬುಧಿಯ ದಾಂಟ ರಘುವೀರ ಬಂದು ||
ಮಿಕ್ಕ್ನ ದಾನವರುಗಳ ತರಿವುದೆನ್ನೀ ಪೇಳಿ |
ದಕ್ಕರವನಾಂ ಕಾಣ್ಬುದೆಂದು ಮಾಸಗಳೆರಡು |
ಮಿಕ್ಕಿರ್ಪುದಾಯುಷ್ಯ ಪ್ಲವಗಪತಿಪೇಳಿಂದು ನೀಂ ಗತಿಯನಾಥ ಬಂಧು || ೧೭ ||



ಬಿಡಿಸಿ ಪೋಷಿಸಲೆಂದು ಬಹುವಿಧದಿ ಖಳನನುಜ |
ನೊಡನೆ ಬೋಧಿಸೆ ತಿಳಿಯದಾದ ತಿಂಗಳು ಪಥಂ |
ಕಡೆಗೊಳಿಸಲುಳಿದುದೆರಡೇ ಮಾಸಮನಿತರೊಳು ವಶವಾಗದಿರ್ದಡೆನ್ನ ||
ಕಡಿದು ತಿಂಬೆನೆನುತ್ತ ರಾವಣಂ ಶಪಥಮಂ |
ಪಿಡಿದಿರ್ಪನೆಂದಾ ವಿಭೀಷಣನಸತಿ ಹಿತದ |
ನುಡಿಯಲಟ್ಟಿದಳೆನ್ನ ಬಳಿಗೆ ತನ್ನಯ ತನುಜೆಯನಲೆಯೆಂಬವಳ ಬೇಗ || ೧೮ ||

ಚಾರಿತ್ರವರ್ಜಿತಂ ದಶಕಂಠ ಧರ್ಮಗಳ |
ನಾರು ತಿಳಿಪಿದಡರಿಯ ಮೃತ್ಯುವನ್ನರಸುತಿಹ |
ಕ್ರೂರ ತ್ರಿಶಿರ ಪ್ರಮುಖ ಪದಿನಾಲ್ಕುಸಾಸಿರದ ಖಳರನೊಂದೇ ನಿಮಿಷದಿ ||
ಓರುವನೆ ತರಿದಿಟ್ಟನೆಂಬ ಶೌರ್ಯವ ಮನಕೆ |
ತಾರದುನ್ಮತ್ತತೆಯೊಳಿರುವ ಜಂತುಗಳಾಗ |
ಪಾರವಿಾ ವಾರಿಧಿಯದೆಂತು ಮನದಿಷ್ಟ ಕೈಗೂಡುವುದು ಕಪಿಲ್ಲಲಾಮ || ೧೯ ||

ಶರಜಾಲ ಭಾನುಯುತ ಭಾಸ್ಕರೋಪಮ ರಾಮ |
ನರಿತೋಯದಂಗಳಂ ಶೋಷಿತ ಪ್ರೀತಿಯಿಂ |
ಕರೆದೊಯ್ವರೆಂದೆನ್ನನೆನುತ ಕಂಬನಿಯಿಡುತ ನುಡಿವ ಜಾನಕಿಯ ನೋಡಿ ||
ಮರುತಸುತ ಮರುಕದಿಂದಿಂತೆಂದ ರಾಘವನ |
ಪೊರೆಗಾನು ಪೋಗಿ ಭವದೀಯವೃತ್ತವನರುಪೆ |
ತ್ವರಿತದಿಂದೈತಂದು ರಕ್ಕಸರ ಸಂಹರಿಸಿ ಕರೆದೊಯ್ವನಿದು ನನ್ನಿಯು || ೨೦ ||

ಅನಿತರೊಳು ರಕ್ಕಸರ ದುರ್ನುಡಿಗಳಿಂದಲೀ |
ಮನವ ಕಂದಿಸಲೇತಕಪ್ಪೆ ಸ್ಕಂಧವನಡರೆ |
ವನಧಿಯಂ ದಾಂಟ ಕ್ಷಣಮಾತುರದಿ ಕರೆದೊಯ್ದು ಶ್ರೀರಾಮಗೊಪ್ಪಿಸುವೆನು ||
ಕಿನಿಸಿಂದ ದೇವದೈತ್ಯಾದಿಗಳು ಬಂದೆನ್ನ |
ಕೆಣಕಲಮ್ಮರು ಬಂದರೊರ್ವರುಂ ಪಿಂದಿರುಗ |
ರೆನಿಸು ಜನಮಾದರುಂ ತರಿದಿಡುವ ಸಾಹಸಂ ತನಗುಂಟು ತಾಯೆ ನೆಲದೆ || ೨೧ ||

ಸಿದ್ಧಿಯಂ ಕಾಂಕ್ಷಿಸುವ ಯೋಗಿಯಂದದಲಮಿತ |
ಬದ್ಧಾನುರಾಗದಿಂದಿರ್ಪ ರಾಘವಚಂದ್ರ |
ನಿದ್ದೆಡೆಗೆ ರೋಹಿಣಿಯೊಲೆಸೆವ ನಿಮ್ಮಯ ಚರಣಗಳನೊಯ್ದುಕೊಡುವೆನೀಗ ||
ಬದ್ಧಮಿದು ದಾನವರಗಣಿಸೆನೆನ್ನುತಲತುಲ |
ಶ್ರದ್ಧೆಯಿಂ ಬಿನ್ನಪಂಗೈದ ಪ್ಲವಗಾಧಿಪತಿ |
ಯುದ್ಧತ ಪರಾಕ್ರಮವ ನೋಡಿ ಧರಣೀಜಾತೆ ನಸುನಗೆಯೊಳಿಂತೆಂದಳು || ೨೨ ||

ವಿಪುಲ ವಿಕ್ರಮ ದೈತ್ಯರಂ ಕಳೆದು ಕರೆದೊಯ್ದು |
ತಪನವಂಶಜಗೀವೆನೆಂದೊರೆವೆಯಲ್ಪತನು |
ವಪರಿಮಿತ ಸಾಗರವನೆಂತು ಪಾರವ ಕಾಣ್ಬೆನೆಂದು ನಿಶ್ಚಯಗೈದುದು ||
ವಿಪರೀತಮಾಗಿ ಕಂಗೆಸೆವುತಿದೆ ಕೇಳ್ನಿನ್ನ |
ಕಪಿತನ ಪ್ರಕಟಮಾದುದೆನುತ್ತ ಸಂಶಯಾ |
ದಪನಮಂ ಕಂಡು ಚಿಂತಿಸುತ ಮಾರುತಿ ಧರಣಿಜಾತೆಯೊಡನಿಂತೆಂದನು || ೨೩ ||

ಹುಲುಕಪಿಯೆನುತ್ತ ಚಿತ್ತದಿ ತಿಳಿದು ರಕ್ಕಸರ |
ಬಲವ ಪೆರ್ಚಿಸಿ ಬುದ್ಧಿಗಲಿಪುದಿದು ಸಹಜ ಮ |
ದ್ಬಲ ಪರಾಕ್ರಮವ ನಿಟ್ಟಿಸಿ ಮಗುಳೆ ಮಮತೆಯಿಂ ದಯೆಗೆಯ್ಯವೇಳ್ಕುಮೆನುತ ||
ಕಲಿತನದಿ ತನುವಬೆಳೆಸಿದ ಶುಕ್ಲ ಚಂದ್ರಮನ |
ಕಳೆ ಪೆರ್ಚಿ ಬರ್ಪಂತೆ ಬಾನೆಡೆಯ ಮಸ್ತಕಂ |
ನಿಲುಕಲಂಜನೆಯಸುತ ಮೈಥಿಲಿಯ ಮುಂಗಡೆಯಲೆಸೆದ ಕನಕಾಚಲದೊಲು || ೨೪ ||

ಅಸದೃಶದ ವೀರ ರೌದ್ರಂಗಳಿಗೆ ಶೃಂಗಂಗ |
ಳೆಸೆವಂತೆ ಭೀಕರದ ದಾಡೆಗಳು ಕಂಗೆಸೆದು |
ದಸಮಾನ ನೀಲಕಂಧರ ಶಿರಪ್ರಾಸೂನ ಕೌಟಿಲ್ಯಚೌರ್ಯತೆಯೊಳು ||
ಪೊಸತೆನಿಪ ಕೋಕನಚ್ಛವಿಯಾಂತ ಮುಖಬಿಂಬ |
ದೆಸಕದಿಂ ಮಂದರೋಪಮದಿಂದ ಮಾರುತಿಯು |
ರಸೆಯಾತ್ಮಭವೆಯ ಮಾನಸರಂಜನಂ ಗೈವುತಿಂತೆಂದು ಬಿನ್ನವಿಸಿದಂ || ೨೫ ||

ಈ ಶೈಲಮಿಾವನಂ ರಕ್ಕಸರಪಡೆ ದೈತ್ಯ |
ರೀಶ ನೀರಧಿಸಹಿತಮೆತ್ತಿಕೊಂಡೊಯ್ವೆನೆನ |
ಗೀಶನಡ್ಡಗಿಸಿದರು ಮಶಕೋಪಮಿತಮಾಗಿ ಪಾರಿಸುವೆನಾಗಸಕ್ಕೆ ||
ಈ ಶಂಕೆಯನ್ನುಳಿದು ಶೋಕಮೋಹವ ತೊರೆದು |
ಬೇಸರದೆ ಬಹುದೆನುತ ಪೇಳ್ವ ಕಪಿಯಂ ನೋಡು |
ತಾ ಸೀತೆ ನಸುನಗುತ ವಿಸ್ಮಯಾಕ್ರಾಂತಮನಳೆನಿಸಿ ಮಗುಳೆಂದಳವಳು || ೨೬ ||

ಕೇಳು ಶಾಖಾಮೃಗೋತ್ತಮ ಪ್ರಭಂಜನಗತಿಯ |
ಜಾಳೆನಿಪಗಮನ ಶಿವನಂತೆಸೆವ ಬಲ ಮತಿಯ |
ಸೂಳು ಗೀಷ್ಪತಿಗಧಿಕಮಸಮಾನ ವಿಕ್ರಮನೆನುತ್ತಮಾಂ ತಿಳಿದಿರ್ಪೆನು ||
ಖೂಳ ರಕ್ಕಸನಭಯ ನಿನಗುಂಟೆ ಮಾರ್ಗದೊಳು |
ಭಾಳಲೋಚನನಾಗಲಡ್ಡಗಿಪನೇ ಕಾರ್ಯ |
ದೇಳಿಗೆಯ ಮತಿಯೊಂದನೊರೆವೆನಾಲಿಸು ಕುವರ ನಿಖಿಲ ಲೇಖಾಜೀವರ || ೨೭ ||

ಮರುತಗತಿಯಿಂದ ನೀಂ ತ್ವರಿತದಂಬರಗಮನ |
ವೆರದ್ಯೆದುವತಿವೇಗಕಾನೆಂತು ಧೈರ್ಯದಿಂ |
ಬರುವೆ ಶತಯೋಜನದ ಶರನಿಧಿಯ ಗಗನದಿಂದೀಕ್ಷಿಸುತ್ತೆಂತಿರ್ಪೆನು ||
ಭರಕಂಜಿ ನೀರಧಿಯೊಳುಂ ಕೆಡೆಯೆ ನೀಂ ಗೈದ |
ಪರಮಸಾಹಸಮೆಲ್ಲ ವ್ಯರ್ಥಮಪ್ಪುದು ನಿನ್ನ |
ದೊರೆಗದೇಂ ಬಿತ್ತರಿಪೆನೆಂಬುದಂ ಮತಿಯೊಳಾಳೋಚಿಸದೆ ಪೇಳ್ವೆಯಕಟ || ೨೮ ||

ಗಮನ ಭಯಕಾನಂಜಿ ಬಾಯ್ಬಿಡಲು ರಕ್ಕಸರು |
ಸಮರಕ್ಕೈತರದುಳಿಯರಾ ವೀರರೊಳು ಸೆಣಸ |
ಲಮಿತ ಯತ್ನಂ ಗೆಯ್ಯುವವಸರದಿ ಭೀತಿಯಿಂ ಬೀಳದುಳಿವೆನೆ ಬಾಲಕ ||
ನಿಮಗವರೊಳಪ್ಪ ಕದನದಿ ಜಯಾಜಯಮಾರ್ಗೆ |
ಸಮನಿಪುದೊ ತಿಳಿವುದೆಂತದನು ಸಿಲ್ಕಿದರೆನ್ನ |
ಕುಮತಿಗಳು ಮರ್ದಿಸದೆ ಜೀವದಿಂದುಳುಹುವರೆ ತಿಳಿದು ನೋಡ್ಕೆ ಮನದೊಳು || ೨೯ ||



ಪತಿಯ ಕಾರ್ಯವ ನೆನೆದು ಪದುಳದಿಂದೆನ್ನನುಂ |
ಮತಿಯಿಂದ ಬಂದಂತೆ ಮಗುಳ್ಕೈದಿ ರಾಘವನಿ |
ಗತಿಪ್ರಿಯಂ ಪುಟ್ಟುವೊಲು ಬಿನ್ನವಿಸಿ ಬೇಗದಿಂದೈತಂದು ಕರೆದೊಯ್ಯುವ ||
ಯತನಗೆಯ್ಯುವುದುಚಿತಮಲ್ಲದನುಚಿತ ಸಮಯ |
ಖತಿಯಿಂದಲೇನುಫಲ ಭೂತಳದಿ ಪಿರಿಯರಹ |
ಮತಿಯುತರು ಮೆಚ್ಚುವಂತಾಳೋಚನಂಗೈದು ಮಗುಳೆಸಗು ಕಜ್ಜಗಳನು || ೩೦ ||

ಕ್ರೂರ ರಕ್ಕಸರ ಗಣಿಸದೆ ವಾರ್ಧಿಯಂ ದಾಂಟಿ |
ಪಾರಮಂ ಕಾಣಿಸುವ ಶಕ್ತನಹುದೆಂದೆನಗೆ |
ತೋರಿರ್ಪುದಾದಡೆಯು ರಘುವೀರನುಳಿದನ್ಯಪುರುಷರಂ ಸೋಂಕೆನೆಂಬ ||
ವೀರವ್ರತಮೊಂದುಂಟು ದುರುಳ ರಕ್ಕಸನಗಿದು |
ಧಾರಿಣಿಯು ಸಹಿತಮೆನ್ನಂ ತಂದುದಕೆ ಜನರು |
ದಾರ ದುರ್ಮತಿಯಿಂದ ನುಡಿವರನುಚಿತಮದಕೆ ಪೇಳ್ವೆನೇಂ ಪರಿಹರಗಳ || ೩೧ ||

ಕಳವಿನಿಂದೆನ್ನ ಕದ್ದೊಯ್ದು ರಾವಣ ತನ್ನ |
ನಿಳಯದೊಳಗಿಟ್ಟು ದುರ್ಯಶವಾಂತ ನೀಂ ವೀರ |
ಖಳ ಕುಲವ ಸಂಹರಿಸಿ ಮೂರ್ಲೋಕಮರಿವಂತೆ ಕರೆದೊಯ್ಯೆ ಕೀರ್ತಿಬಹುದು ||
ಜಲಜಾಪ್ತ ಕುಲತಿಲಕನೆಡೆಗೈದಿ ಕರೆತಂದು |
ಜಲನಿಧಿಯನುತ್ತರಿಪುದುಚಿತಮೆಂದಾ ಸೀತೆ |
ಯುಲಿಯ ಲಾಲಿಸಿ ಹರ್ಷಗೊಂಡಾ ಸಮಿಾರಸುತ ವಂದಿಸುತಮಿಂತೆಂದನು || ೩೨ ||

ಬುದ್ಧಿಗಲಿಸಿದ ಪರಿಯು ಬಲು ಚೆಲುವನಾಂತುದ |
ತ್ಯುದ್ಧತದ ಗಮನದಿಂ ಸ್ತ್ರೀಸ್ವಭಾವಂ ಭೀತಿ |
ಬದ್ಧಿಸದೆ ಬಿಡದೆಂಬುದುಚಿತಮೆರಡನೆಯಣುಗ ಸುಚರಿತ್ರೆಯರನಾಳ್ದರು ||
ಬದ್ಧರಾಮಾದನ್ಯರಂಗ ಸ್ಪರ್ಶನ ನಿಮಗೆ |
ಪೊದ್ದದೆಂದಿಗು ತಾಯೆ ಸಾಮಾನ್ಯ ಸತಿಯರೊಳ |
ಗಿರ್ದಪುದೆ ಪತಿಭಕುತಿ ಪರದೇವತೆಯು ನೀನೆ ಯೆಂದು ಮಗುಳಿಂತೆಂದನು || ೩೩ ||

ಚರಣಸೇವಕನೆಂಬ ಭಕ್ತಿಭಾವದೊಳಾನು |
ಧರಿಸಿ ರಾಘವನೆಡೆಗೆ ತ್ವರಿತದಿಂ ನಡೆವೆನೆಂ |
ದೊರೆದುದಲ್ಲದೆ ಬಲದೊಳಂ ಬಿನ್ನಪಂಗೈದುದಲ್ಲದಲೆ ಬೇರಿಲ್ಲವು ||
ಶರನಿಧಿಯು ದುರ್ಲ್ಲಂಘ್ಯ ದೈತೇಯ ಸಮುದಯಂ |
ಧುರವಿಜಯ ನಿರ್ಲಿಪ್ತವಾರ್ತೆ ತಿಳಿಯದ ಕತದಿ |
ಪರಮಪುರುಷಂ ನಿಷ್ಪ್ರಯತ್ನದಿಂದಿರ್ದನೀನಿನಿಸು ದಿನ ಕೇಳು ತಾಯೆ || ೩೪ ||

ಪ್ರೀತಿಯಿಂದೆನ್ನೊಳೀವರೆಗುಸಿರ್ದ ಶುಭಕರದ |
ಮಾತುಗಳನಾಲಿಸುತ ಹರ್ಷದಿಂ ರಘುವೀರ |
ಭೂತಳದೊಳುಳ್ಳ ಕಪಿನಾಯಕರನೊಡಗೊಂಡು ಬರುವ ಸಂದೆಗಮಿಲ್ಲವು ||
ಯಾತುಧಾನರ ಕುಲಂ ಬಾಣಕಾಹುತಿಯಹುದು |
ತಾ ತಪ್ಪದಿದು ದೇವಿ ಕುರುಹನಿತ್ತಡೆ ಪೋಗಿ |
ನಾ ತಳುವದೆಲ್ಲ ಬಿನ್ನವಿಪೆನೆನೆ ಜನಕಸುತೆ ಹರ್ಷದಿಂದೊರೆದಳೊಲಿದು || ೩೫ ||

ಗುರುತುಗಳೊಳಧಿಕವಿಾ ಕುರುಹು ತಿಳಿ ಕಪಿರಾಯ |
ಪರಮಪಾವನಮೆನಿಪ ಗೋದಾತಟದೊಳೆಸೆವ |
ಗಿರಿಯ ತಪ್ಪಲೊಳೊಂದುದಿನ ಪರ್ಣಮಂದಿರದಿ ರಘುವೀರ ಹರ್ಷದಿಂದ ||
ಮರೆದೊರಗಲೆನ್ನಂಕದೇಶದೊಳು ನಿದ್ರೆಯಂ |
ಧರಿಸಿರ್ಪನೆಂದಾನು ಜಾಗ್ರತೆಯೊಳಿರಲೊಂದು |
ಪರಿಯಾದುದಂ ಪೇಳ್ವೆ ಬಂದುದಾ ಸಮಯದೊಳಗೊಂದು ಕರಟಂ ವೇಗದಿ || ೩೬ ||

ಸನ್ನಿಧಿಗೆ ಬರಲಾನು ಲೋಷ್ಟದಿಂದಿಡೆ ಕಾಕ |
ತನ್ನ ದುರ್ಬುದ್ಧಿಯಿಂದೈತಂದು ಕುಚತಟಗ |
ಳನ್ನು ತುಂಡದೊಳಲೆಯೆ ಚಂಚುಪುಟದಾಘಾತದಿಂ ಸುರಿವ ರಕ್ತದಿಂದ ||
ಖಿನ್ನತೆಯನಾಂತಾನು ಪತಿಯ ನಿದ್ರಾಭಂಗ |
ಮನ್ನೆಸಗದಿರಲು ಕ್ಷಣಕೊಮ್ಮೆ ಕಾಕವರಾಕ |
ಭಿನ್ನಗೈದುದು ಸ್ತನಾಂತರವ ಪಲಭೋಜನದಲೆರಕಮಾದಾಸೆಯಿಂದೆ || ೩೭ ||

ಮಗುಳೆ ಮಗುಳಾಂ ನಿವಾರಿಸಲೆನ್ನ ಗಣಿಸದಂ |
ತೊಗುಮಿಗೆಯ ಕೋಪದಿಂ ಬಲಿಭೋಜನದ ಕಾಟ |
ಮಿಗೆ ಪೆರ್ಚಿಬರಲನಿತರೊಳಗಾದುದೆಚ್ಚರಿಕೆ ರಘುವಂಶ ಧರಣಿಪತಿಗೆ ||
ಒಗುವ ರಕುತದಧಾರೆಯಂ ಕಾಣುತಿಂಗಳವ |
ನುಗುಳ್ದುವಕ್ಷಿಗಳಾಗ ಕೋಪ ಕೊನರಿಡಲೆನ್ನ |
ಬಗೆಯ ನಿಟ್ಟಿಸುತಮುಪಚರಿಸಿ ಕ್ರೋಧವನಾಂತ ಹರಿಯೊಲಿಂತೆಂದನಾಗ || ೩೮ ||

ಮೊರೆವುತಾಶೀವಿಷದ ತೆರದೊಳಿಂತೆಂದನೀ |
ಪರಿಗೈದ ದುರ್ಮೇಧನಾವ ಪಂಚಾಸ್ಯಗಳ |
ಧರಿಸಿದ ಭುಜಂಗಮದ ಸರಸಕೆಳಸಿದ ಗತಾಯುಷನಾರು ತೋರೆನ್ನುತ ||
ಭರದಿಂದ ಘರ್ಜಿಸುತ ನಾಲ್ದೆಸೆಯ ನಿಟ್ಟಿಸುತ |
ಮಿರಲಿದಿರೊಳೆಸೆಯೆ ಬಲಿಭೋಜನಂ ತುಂಡದೊಳು |
ಭರಿತಮಾಂಸದಲಿ ಕಂಗೆಸೆಯೆ ನೋಡುತಮಾಗ ಕಾಲಾಗ್ನಿಯೊಲ್ಕನಲುತ || ೩೯ ||

ಕುಡಿಯಿಡುವ ಕೋಪದಿಂದಾಗಳೈಷಿಕವೊಂದ |
ಪಿಡಿದು ಬ್ರಹ್ಮಾಸ್ತ್ರಯೋಜನೆಗೈದು ದುಷ್ಕಾಕ |
ನೆಡೆಗಿಡಲು ವಡಬಾಗ್ನಿಯಂತೆ ದಳ್ಳುರಿಗಳಂ ಕಿಡಿಗಳಂ ಕೆದರುತಾಗ ||
ಘುಡುಘುಡಿಸುತ್ತೈತರಲು ವಾಯಸಂ ಭಯಗೊಂಡು |
ಕಡೆಗೋಡಿ ಚತುರದಶ ಭುವನಗಳ ಸಂಚರಿಸಿ |
ಕಡೆಗೆ ಶಕ್ರನ ಪೊರೆಗೆ ಪೋಗಿ ಮೊರೆಯಿಟ್ಟಿಡವನಿಂತೆಂದ ಭೀತಿಯಿಂದೆ || ೪೦ ||

ಪೊಡವಿಪತಿ ಶ್ರೀ ರಾಘವೇಂದ್ರ ಕೋಪಿಸಲಾವ |
ನಡಗಿಕೊಳಲು ಸಮರ್ಥ ಮೂಲೋಕದೊಳು ಕ್ರೂರ |
ಸಿಡಿಲ ಪೊಡೆತಕೆ ಕೊಡೆಯು ಮರೆಯಹುದೆ ದುರ್ಬುದ್ಧಿ ಯಾಕೆ ಕರುಣಾಂಬುನಿಧಿಯ ||
ಎಡೆಗೈದಿ ಮರೆವೊಕ್ಕರಾತನೇ ರಕ್ಷಿಸುವ |
ನಡೆ ಯೆಂದರಾ ಕಾಕನೈತಂದು ಭಯದಿ ಮುಂ |
ಗಡೆಯಲಪರಾಧಿಯಂ ಸಲಹು ಶರಣಾಗತನನೆನುತಸುರ ನುತಿಗೈದನು || ೪೧ ||



ದೇವ ಪದಿನಾಲ್ಕು ಲೋಕವ ತೊಳಲಿ ಕಂಗೆಟ್ಟು |
ದೇವಪತಿಯೆಡೆಗೈದಲಾತ ಭಯಗೊಳುತಟ್ಟ |
ಲಾವನಿಂದೆನ್ನ ತನುರಕ್ಷಣಮದಾಗದಿರಲೈತಂದು ಭಕ್ತಿಯಿಂದ ||
ಪಾವನತರಾಂಘ್ರಿಯಂ ಮರೆವೊಕ್ಕೆ ತಪ್ಪಿದರ |
ಕಾವುದುಚಿತಂ ದಯಾಶಾಲಿಗಳ್ ದೇವರಿಗೆ |
ದೇವ ಶರಣಾಗೆನುತ ಕಾಕ ಸನ್ನುತಿಗೈದನಿದಿರೊಳುಂ ಕಂಪಿಸುತಲೆ || ೪೨ ||

ಮರುತವೇಗಂ ಧರಾಧರಗಮನ ಗಜಸತ್ವ |
ವೆರೆದನವ ಸುರರಾಜನಣುಗ ಮುನಿಶಾಪದಿಂ |
ದೊರೆದುದೀ ಮೌಕುಲಾಕೃತಿ ಮಹಾಸಾಹಸಿಕ ಮರೆವೊಕ್ಕನೆಂದು ದಯದಿ ||
ಪೊರೆಯಲೆಂದಿಚ್ಛೈಸಿ ಕಾಕನೊಡನಿಂತೆಂದ |
ಶರವಮೋಘಂ ಮೋಘಗೆಯ್ಯಲಸದಳ ಭಯದಿ |
ಶರಣೆಂಬೆ ನೀಂ ಬಂದುಮದರಿಂದ ಸಲಹಬೇಕಾದುದಾವಶ್ಯವೆಮಗೆ || ೪೩ ||

ಖಗವರ್ಯ ಕೇಳ್ನಿನ್ನ ನೇತ್ರದೊಳಗೊಂದನಾ |
ಶುಗಕಿತ್ತು ತನುರಕ್ಷಣಂ ಗೈವುದೆನೆ ಕಾಕ |
ಮಿಗೆ ಹರ್ಷದಿಂದೊಂದು ನೇತ್ರಮಂ ಬ್ರಹ್ಮಾಸ್ತ್ರಕಿತ್ತು ದೇಹವನು ಸಲಹಿ ||
ರಘುನಾಥಗೆರಗಿ ನುತಿಸುತ ಪಾಕಶಾಸನಿಯು |
ಚಿಗಿದನಾಗಸದೆಡೆಗೆ ಸಂತಸದೊಳೆನಗಾಗಿ |
ಮಿಗೆ ದಯದಿ ಬ್ರಹ್ಮಾಸ್ತ್ರಯೋಜನಂಗೈದ ದಯಮೇನಾಯ್ತು ಕಪಿಲಲಾಮ || ೪೪ ||

ಜಗದೀಶ ರಾಘವನ ಸತಿಯೆನಿಸಿ ರಕ್ಕಸರ |
ನಗರದೊಳನಾಥೆಯಂತನುದಿನದಿ ತೊಳಲುವುದು |
ಬಗೆಗೆ ಗೋಚರಮಾಗದಿಹುದೆ ಸೌಮಿತ್ರಿಗಂ ದಯಮೆಳ್ಳನಿತು ತೋರದೆ ||
ಸಗರವಂಶಜ ಮುನಿದರೀ ಚತುರ್ದಶಲೋಕ |
ಬಗೆಯೊಳುಂಟೇ ತನಯ ವಿಧಿವಶದ ದೌರ್ಭಾಗ್ಯ |
ಮಗಣಿತದೊಲಂಡಲೆವುದೇಂಗೈವೆನೆನುತ ಮಗುಳಿಂತೆಂದು ಪೇಳ್ದಳೊಲಿದು || ೪೫ ||

ಪಿತೃಮಾತೆಯರನುಳಿದು ಸತಿಯೊಳಾಸೆಯ ಪರಿದು |
ಕತಿಪಯದ ಕಷ್ಟಗಳನಾಂತಟವಿಯೊಳು ಚರಿಸು |
ತತಿಶಯ ಪ್ರಿಯದಿಂದಮನುದಿನಂ ಪೂಜಿಸುವನೆನ್ನ ಗುರುಭಕ್ತಿವಿಡಿದು ||
ಸುತಗಧಿಕ ಸೌಮಿತ್ರಿ ಶೂರರಗ್ರೇಸರಂ |
ಕ್ಷಿತಿಯೊಳೆಲ್ಲಿಹಳೆಂಬುದೆಣಿಸದಾದನೆ ದಯಾ |
ಚ್ಯುತಿಯಾಯ್ತೆ ಪ್ರಿಯಕರದಿ ಯೆನ್ನ ದುಷ್ಕರ್ಮದಿಂದಣುಗ ಸೂಚಿಸು ವೇಗದಿ || ೪೬ ||

ತೋರದೆಂದಿಗು ದುಃಖಸಾಗರದ ಕೊನೆಯನು |
ತ್ತಾರಣಂಗೈವರಾರುಂಟೆಂದು ಮಾನಸಕೆ |
ಬಾರಿಬಾರಿಗು ಖಚಿತಮಾಗಿ ಚಿಂತೆಯೊಳಸುವಿಗನುತಾಪ ಪೆರ್ಚುತಿದೆಕೊ ||
ಧೀರ ನಿನ್ನಿಂ ಶೋಕ ಪಾರಮಾಗುವುದೆಂದು |
ದಾರಧೈರ್ಯಂ ಮನಕೆ ತೋರುತಿದೆ ಬೇಗದು |
ದ್ಧಾರಗೈದಪುದೆಂದು ಪೇಳಿ ಪಸ್ತ್ರದಿ ಬದ್ಧಮಾದ ಚೂಡಾಮಣಿಯನು || ೪೭ ||

ತೆಗೆದಾಗ ಕೈಗಿತ್ತಡಾನಂದಸಾಗರಂ |
ಮಿಗೆ ಹಸ್ತಗತಮಾದ ಮಾಳ್ಕೆಯಿಂದಂ ಪೆರ್ಚಿ |
ನಿಗಮಾಂತ ಮಂದಿರನ ಸನ್ನಿಧಿಯೊಳಿರ್ದಂತೆ ಹಿಗ್ಗುತಂ ಪವನಸುತನು ||
ಅಗಣಿತೋತ್ಸಹದಿಂದಲಾ ಮಣಿಯ ಮಸ್ತಕದಿ |
ಮಿಗೆ ಮಡಗಿ ನಲಿದು ನುತಿಗೈದು ಸಂಭ್ರಮದಿಂದ |
ಮಗುಳೆ ಮಗುಳೆರಗುತ್ತಮಮೃತದಾಸ್ವಾದನದೊಳಿರ್ಪಮರರಂತೆಸೆದನು || ೪೮ ||

ಪರಮಸಂತೋಷದಿಂ ಚೂಡಾಮಣಿಯ ಬೇಗ |
ಮರುತಜನ ಕೈಗಿತ್ತು ಧರಣೀತನೂಜಾತೆ |
ಯೊರೆದಳೀ ರತ್ನಮಂ ನೋಡಿದಾಕ್ಷಣಮೆನ್ನ ಮಾತೆಯಂ ಪಂಕ್ತಿರಥನ ||
ಸ್ಮರಿಸುವಂ ರಘುನಾಥ ಮದ್ದುಃಖತಾರಣೆಗೆ |
ನಿರತ ನೀಂ ಕಾರಣಂ ಮುಂದಪ್ಪ ಕಜ್ಜಗಳ |
ತ್ವರಿತದಿಂ ಬಿನ್ನವಿಸಿ ಹರಿವಿಕ್ರಮನ ತಂದು ಸಲಹವೇಳ್ಕೆಂದಳೊಲಿದು || ೪೯ ||

ಜನಕಜಾತೆಯು ನಿರೂಪಿಸಿದರ್ಥರಾಶಿಗಳ |
ಮನದೊಳಿಂಬಿಟ್ಟು ಪವನಾತ್ಮಭವ ಶ್ರೀಪಾದ |
ವನಜಗಳಿಗಭಿನಮಿಸಿ ಪಯಣದೆತ್ನದಿನಿಲಲು ನೋಡುತ ಸಮಿಾರಸುತನ ||
ವಿನಯದಿಂ ಬಾಷ್ಪಗದ್ಗದವಾಣಿಯಿಂ ಬೆರೆದು |
ಹನುಮ ರಘುವೀರಲಕ್ಷ್ಮಣಸೂರ್ಯನಂದನರ |
ವಿನತಾದಿಕಪಿವೃಂದ ಕೌಶಲಗಳಂ ಕೇಳ್ದಳೆಂದರುಪವೇಳ್ಕೆಂದಳು || ೫೦ ||

ಆವ ಪರಿಯೊಳಗೆನ್ನ ಕರೆದೊಯ್ದು ಚಿಂತೆಗಂ |
ಠಾವಿಲ್ಲದಂತೆಸಗಿ ಜೀವರಕ್ಷಣೆಗೈವು |
ದೀ ವಸುಧೆಯೊಳು ಕೀರ್ತಿಯನ್ನಾಳ್ದು ಧರ್ಮಜಸಗಳನಧಿಕಮಾಗಿ ಗಳಿಸಿ ||
ಕೋವಿದರ ತಿಂಥಿಣಿಯಲನುದಿನಂ ನುತಿಪಂತೆ |
ದೇವರಾಘವಗೆಂತು ತಿಳುಪವೇಳ್ಕೆಂಬುದಂ |
ಪಾವಮಾನಿಯೆ ನಿನಗೆ ಪೇಳ್ವುದೇಂ ಸರ್ವಜ್ಞನೀನಲ್ತೆ ತ್ರೈಜಗದೊಳು || ೫೧ ||

ಎಂದೊರೆದ ಜಾನಕಿಯ ನುಡಿಗಂ ಜಗತ್ಪ್ರಾಣ |
ನಂದನಂ ಸಂತಸದಲೆರಗಿ ಬಿನ್ನಪಗೈದ |
ಬಂಧುರದ ಚಿಂತೆಯಂ ಬಿಡು ತಾಯ ನಾಂ ಪೋಗಿ ವಿಜ್ಞಾಪನಂಗೆಯ್ಯಲು ||
ಬಂದಾಕ್ಷಣದಿ ದೈತ್ಯಕುಲವ ಸಂಹರಗೈವ |
ನಿಂದಿರಾವರ ರಾಮಬಾಣದಿದಿರಿನೊಳಾವ |
ನಿಂದುಜೀವದೊಳುಳಿವ ದೈತ್ಯಪನ್ನಗಯಕ್ಷದೇವತಾನಿಚಯದೊಳಗೆ || ೫೨ ||

ತರಣಿಶಶಿಗಳ ಗತಿಯ ಶರನಿಧಿಯ ಭೀಕರವ |
ಸುರಪ್ಪಹರವಿಕ್ರಮವನೊಂದಾಶುಗದಿ ನಿಲಿಸು |
ತರಿನಿಕೃಂತನಗೈದು ಸಂತಸದಿ ನಿಮ್ಮನೀ ನಗರದಿಂ ಕರೆದೊಯ್ವರು ||
ಮರುಗಲೇತಕೆ ತಾಯೆ ಕುರಿ ದಶಾಸ್ಯಂ ಬರವ |
ಭರವನಾಂತೊಪ್ಪುವನೆ ಯೆನುತ ಬಿನ್ನಪಗೈದ |
ಮರುತಜನ ನುಡಿಗಳಂ ಮನ್ನಿಸುತ ಧರಣಿಸುತೆ ಮಗುಳೆಮಗುಳಿಂತೆಂದಳು || ೫೩ ||



ಮಗನೆ ನೀನಿಲ್ಲಿಂದಮೈದಿ ಶರಧಿಯ ದಾಂಟೆ |
ಸುಗುಣಖನಿಯೆಡೆಗೆಂದಿಗೈದುತಿಹೆ ದುಃಖಗಳ |
ಬಗೆಯದಿರ್ದೆಂ ಭವತ್ಸನ್ನಿಧಿಯ ದುಷ್ಕೃತವೆ ಬಲದಿಂದಮಗಲ್ವುದಾಯ್ತು ||
ಮಿಗೆ ದುಃಖ ಪೆರ್ಚಿದುದು ನಿನ್ನಕಾಣದೆ ದಿನಪ |
ಯುಗಮೆನಿಸಿ ಕಳೆಯಲಾಯ್ತಯ್ಯ ನೀಂ ಬರ್ಪನ್ನ |
ಮೊಗುಮಿಗೆಯ ಜೀವಮಿರ್ದಪುದೊ ಮತ್ತೇನಹುದೊ ನಾನರಿಯೆ ಮನದ ಪರಿಯ || ೫೪ ||

ಎಂತು ಶೋಕಾಂತಮಂ ಕಾಣುವೆನೊ ಚಿಂತೆಗಂ |
ಚಿಂತೆ ಬಂದೊದಗಿದುದು ಉರಿದರೊಳಗುರಿಯನುಂ |
ತಾಂ ತಳೆಯದಿಟ್ಟಂತೆ ನಿನ್ನ ಗಮನಮದಾಯ್ತು ಪ್ಲವಗಸಾಹಾಯ್ಯದಿಂದ ||
ಚಿಂತಾಯಕಂ ಬಂದು ದಶಕಂಠನನ್ವಯವ |
ಭ್ರಾಂತಿಯಂ ಪರಿಹರಿಸಿ ಹರುಷಮಂ ಪಾಲಿಸುವೊ |
ಲೆಂತು ನೀಂ ಸಂವಿಧಾನಂಗೈವೆಯೋ ಮಹಾಪುರುಷ ನೀನರಿವೆಯದನು || ೫೫ ||

ಖಗರಾಜನೊರ್ವ ಮಾರುತನೊರ್ವ ನೀನೊರ್ವ |
ನೊಗುಮಿಗೆಯ ಸಾಗರವನುತ್ತರಿಪ ಬಲಯುತರು |
ಮಿಗೆ ಭೂತತತಿಯೊಳಾರ್ಗಿಲ್ಲವೀ ಸಾಮರ್ಥ್ಯಮದರಿಂದ ಶ್ರೀರಾಮನ ||
ಬಗೆಗೆಂತು ಕಾಣ್ಬಡಿಸಿ ಕಪಿಸೈನ್ಯದೊಡವೆರೆದು |
ಸುಗುಣರಂ ಕರೆತಂದು ಮದ್ದುಃಖರಾಶಿಯಂ |
ಒಗೆದಪೆಯೊ ನೀನಲ್ಲದಿನ್ನಾವನೆನಗಿಲ್ಲ ಸಾಧಕಂ ಕಾರ್ಯದೊಳಗೆ || ೫೬ ||

ತರಿದು ರಕ್ಕಸರ ಬೆನ್ನಿನೊಳೆನ್ನ ಭಕ್ತಿಯಿಂ |
ಕರೆದೊಯ್ಯೆ ನೀಂ ರಘುವರೇಣ್ಯಗಪಕೀರ್ತಿಕರ |
ಧರಣಿಯೊಳ್ಮೆಚ್ಚರಿದನದರಿಂದಮಿಾಪರಿಯ ಪದಕೆ ನೀ ತಿಳುಪಿ ಬೇಗ ||
ಕರೆತಂದು ದೈತ್ಯರಂ ಸವರುವಂದದೊಳೆಸಗಿ |
ತರಣಿಯುಳ್ಳನಕ ಕೀರ್ತಿಯ ಗಳಿಸವೇಳ್ಕೆಂದು |
ಧರಣಿಸುತೆ ನುಡಿಯೆ ಪವಮಾನನಂದನ ಮಗುಳೆ ವಿಜ್ಞಾಪನಂಗೈದನು || ೫೭ ||

ಇನಿತು ಚಿಂತೆಯದೇಕೆ ತಾಯೆ ಲಾಲಿಸು ಸೂರ್ಯ |
ತನಯನತಿಬಲಪರಾಕ್ರಮಿ ಕೋಟ ಶತಕೋಟಿ |
ವನಚರರನಾಳ್ದಪಂ ಗರುಡಮರುತಾದಿಗಳ ಧಿಕ್ಕರಿಪ ಜವಮುಳ್ಳರ ||
ವನಧಿಯಂ ವಾಜ್ಮಾತ್ರದೊಳು ದಾಂಟ ರಕ್ಕಸರ |
ಜನನಾಥನಂ ತರಿದು ನಿಮಗೆ ಹರುಷಾಧಿಕ್ಯ |
ವನು ಸಮರ್ಪಣೆಗೈವನಿದಕೆ ಸಂದೆಗಮಿಲ್ಲ ನಂಬುವುದು ನುಡಿಯ ತಾಯೆ || ೫೮ ||

ಹರಿಕುಲಾರ್ಭಟೆಯಿಂದ ಲಂಕಾನಗರಿ ತೋರ್ಪ |
ಪರುವತಂ ನಿಮಿಷದೊಳು ಹುಡಿಯಹುದು ರಕ್ಕಸರ |
ನೆರವಿ ನೀರಂ ಸಾರ್ವುದಿದು ನನ್ನಿ ಪರಿತಾಪಮಂ ಪರಿದು ಸುಖದಲಿಹುದು ||
ತರಣಿವಂಶಜರಿರ್ವರೆನ್ನೊಳೈತಪ್ಪ ಶಶಿ |
ಯುರುದಿವಾಕರರಂತೆ ವಾನರಸಮೂಹದೊಳು |
ಧುರದಿ ದೈತ್ಯರ ತರಿದು ನಿಮ್ಮ ಕರದೊಯ್ವರಿದು ಸಿದ್ಧ ಕೇಳ್ತಾಯೆ ನುಡಿಯ || ೪೯ ||

ಶಶಿಯೊಡನೆ ರೋಹಿಣಿಯು ಬೆರೆತಂತೆ ನೀಂ ಬೇಗ |
ನಸುನಗೆಯಲಚಿರೇಣ ರಾಮನಂಘ್ರಿಯಕಾಣ್ಬೆ |
ವಸುಮತಿಯೊಳಚ್ಚರಿಯ ಸಿಂಹಶಾರ್ದೂಲ ಕಪಿಬಲಮುಳ್ಳ ವಾನರರನು ||
ಸಸಿನೆ ನೋಡುವೆ ರಾವಣನ ವಂಶ ನೀರಾಗಿ |
ನಸಿದು ಪೋಪುದಕಾಣ್ಬೆ ಯಿಂದ್ರನಂಕದಿ ಪ್ರಿಯದೊ |
ಳೆಸೆವ ಶಚಿಯಂತೆ ತೋರುವೆ ತಾಯೆ ತ್ವರಿತದಿಂದಿದಕೆ ಸಂದೆಗಮಿಲ್ಲವು || ೬೦ ||

ಚತುರದಶಭುವನದೊಳು ರಾಮುಗೆಣೆಯಾರುಂಟು |
ವಿತತಸಮರದೊಳು ನಿಲುವವರುಂಟೆ ಲಕ್ಷ್ಮಣಗೆ |
ಪ್ರತಿಥಮರುತಾಗ್ನಿ ನಿಭರಿರ್ವರ್ಕೈತರೆ ಪಿತಾಮಹನಾದರಿದಿರಿಸುವನೆ ||
ಮತಿಹೀನ ಪಂಕ್ತಿಶಿರನೇಸರವ ನೇಸರಿನ |
ಜತೆಗೆ ಕಳ್ತಲೆ ಬಹುದೆ ರಕ್ಕಸಾಲಯದೊಳಿಹ |
ಕ್ಷಿತಿಯ ಸಂತ್ಯಜಿಸಿ ರಾಘವನಂಕದೊಳಗಿರ್ಪೆನೆಂದರಿವುದೀಗ ತಾಯೆ || ೬೧ ||

ಎನುತ ಪವಮಾನಸುತ ಬಿನ್ನವಿಸೆ ಜನಕಸುತೆ |
ಮನದಹರ್ಷದೊಳೆಂದಳೆಲೆ ಮಗನೆ ಭಾಸ್ಕರನ |
ಘನತಾಪದಿಂಬೆಂದ ಸಸ್ಯಾಳಿಗಮೃತರಸ ಸುರಿಯಲಾನಂದಿಸುವೊಲು ||
ವಿನಯ ಮಧುರತೆಯಾಂತ ನಿನ್ನ ನುಡಿಗಳ ಬಳಗ |
ಮನಕೆ ಸಂತಸಮಾಗಿ ಪೋಪ ಪ್ರಾಣಂಗಳುಂ |
ಘನಹರ್ಷದೊಳಗಿರುವುವೇನೆಂಬೆನಾದರುಂ ಮಗುಳೊರೆವೆ ಮನದಿರವನು || ೬೨ ||

ಕ್ರೀಡೆಯಿಂ ಭಾಳದೊಳಗಿಟ್ಟ ಬೊಟ್ಟುಂ ತೊಂಗೆ |
ಕೂಡೆ ಶೈಲದ ಮನಶ್ಶಿಲೆಯಿಂದ ತಿಲಕಮುಂ |
ನಾಡೊಡೆಯ ವಿರಚಿಸಿದ ಸಂಪೂರ್ಣದಯದಿಂದ ಬಂದಾ ಜಯಂತ ಬಿಡದೆ ||
ಕಾಡುತಿರಲತಿಕೋಪದಿಂದ ಬ್ರಹ್ಮಾಸ್ತ್ರಮುಂ |
ಪೂಡಿ ದರ್ಭೆಯೊಳಿಟ್ಟ ಕರುಣವೆನ್ನಲ್ಲಿರ್ದು |
ಖೋಡಿ ದಶಕಂಧರನ ತರಿಯದಲುಪೇಕ್ಷಿಸುವುದೇನೆಂದು ತಿಳಿಪು ತನಯ || ೬೩ ||

ನಿನಗಾನುಕೊಟ್ಟ ಚೂಡಾಮಣಿಯ ನಿಟ್ಟಿಸುತ |
ಮಿನಿಸು ದಿನ ಶೋಕಪ್ರತಾರಣಂ ಗೈದಿರ್ದೆ |
ತನಯ ಕೇಳದು ಭವದ್ವಶಮಾದುದಿಲ್ಲಿಂದ ಮುಂದೆ ಚಿಂತಾಶರಧಿಯ ||
ಘನಮದೆಂತಪಹರಿಪೆ ಕ್ರೂರದುರ್ಮಾರ್ಗದಿಂ |
ಕನಲುತಿಹ ರಕ್ಕಸೀಗಣಮಧ್ಯದೊಳಗೆಂತು |
ತನು ಪೋಷಣಂಗೈವೆನೆಂದು ಪೇಳುತ ಮಗುಳೆ ಧರಣಿಸುತೆ ಮತ್ತೆಂದಳು || ೬೪ ||

ನಲವನೆನಗೀವ ನಿನ್ನೋಪನ ಶಿರೋರತ್ನ |
ಮೊಲಿದಿತ್ತೆ ನಿನ್ನ ಪ್ರಿಯನುಡಿಯಿಂದ ಪ್ರಾಣಗಳ |
ನಿಲಿಸಿರ್ಪೆನೊಂದುತಿಂಗಳು ಕೃಪಾರಸದಿಂದಮೈತಂದು ದೈತ್ಯಕುಲವ ||
ಗೆಲಿದು ಕರೆದೊಯ್ದುರುತ್ತಮನುಮಲ್ಲದಿರಲಿನ್ನು |
ಪಲವು ಮಾತುಗಳೇನು ಶ್ರೀ ರಾಮಚಂದ್ರಪದ |
ಕಲಿತಮೆನಿಸುವ ತನ್ನ ಜೀವಮುಂ ಸಿದ್ಧಮೆನುತರುಪು ರಘುವೀರನಿಂಗೆ || ೬೫ ||



ಈ ವಿಧದಿ ಜನಕಜಾತೆಯು ಪೇಳ್ದಭಿಜ್ಞಾನ |
ಠಾವ ತಿಳಿದಂಜನಾಸುತ ಬಿನ್ನಪಂಗೈದ |
ದೇವಿ ಲಾಲಿಪುದೆನ್ನ ನುಡಿಯೆಂದಿಗಾದರುಂ ಪುಸಿಯಪೊದ್ದದೆನುತ್ತಲಿ ||
ಕೋವಿದರು ಪೇಳುವರು ಕುರುಹನಾಂ ಕೊಂಡೈದಿ |
ದೇವ ರಾಘವನಂಘ್ರಿಗೊಪ್ಪಿಸಿದ ತಕ್ಷಣದಿ |
ರಾವಣನು ಪುತ್ರಮಿತ್ರಾದಿ ಬಾಂಧವರು ಸಹ ಪೋದನೆಂದರಿ ಚಿತ್ತದಿ || ೬೬ ||

ನಿಮ್ಮ ಶುಭವಾರ್ತೆಯಂ ಕೇಳ್ದಾಕ್ಷಣದಿ ರಾಮ |
ಸುಮ್ಮಾನದಿಂದ ಲಕ್ಷ್ಮಣ ತರಣಿಸುತ ಸಹಿತ |
ಲೊಮ್ಮನವಿ ವಾನರರಸೇನೆಯಂ ಪಿಂತಿಟ್ಟು ಬಂದುದಧಿಯನ್ನು ದಾಂಟಿ ||
ಗಮ್ಮನೀ ದಶಗಳನ ಕುಲವ ಸಂಹರಿಸುತ್ತ |
ದುಮ್ಮಾನಮುಂ ಪರಿದು ಸಂತಸದಿ ಕರೆದೊಯ್ವ |
ತಮ್ಮಯೋಧ್ಯಾನಗರಕಿದು ಸತ್ಯಮೆಂದೆಣಿಪುದಿನಿತು ಪುಸಿಪೊದ್ದದನಘೆ || ೬೭ ||

ಎಂದು ಬಹುವಿಧದಿಂದ ಕುಸ್ತರಿಸಿ ಜಾನಕಿಯ |
ಸಂದೇಹಮುಂ ಪರಿದು ಚೂಡಾಮಣಿಯ ಪಿಡಿದು |
ನಿಂದು ಕರಗಳ ಮುಗಿದು ಮಗುಳೆ ವಂದನೆಗೈದು ಮರುತಸುತ ಬಿನ್ನವಿಸಿದಂ||
ಇಂದಿರಾವರನೆಡೆಗೆ ಪೋಪರಪ್ಪಣೆಗೊಟ್ಟ |
ರಿಂದೆನುತ ವಿಜ್ಞಾಪನಂಗೆಯ್ಯಲಾ ಧರಾ |
ನಂದನೆಯು ಹರ್ಷದಿಂ ಶುಭನುಡಿಗಳಿಂ ಪರಸಿ ಕಳುಪಲನುಗೈದಳಾಗ || ೬೮ ||

ಪೇಳು ಶ್ರೀರಾಮನಂಘ್ರಿಗೆ ನಮಸ್ಕಾರಮಂ |
ಪೇಳು ಸೌಮಿತ್ರಿಗಾಶೀರ್ವಾದ ವಚನಮಂ |
ಪೇಳು ಸುಗ್ರೀವಾದಿಕಪಿವೃದ್ಧರೆಲ್ಲರಂ ಬೆಸಗೊಂಡಳೆನ್ನು ಮುದದೆ ||
ಆಳಿದೊಡೆಯನ ಚರಣಗಳ ಕಂಡು ಸೌಖ್ಯಮಂ |
ತಾಳಿ ಸಂತಸಗೊಂಬುದೀ ಸರಣಿಯೊಳು ಶುಭದ
ಜಾಲಸಂಭವಿಸಲೆಂದೆನುತ ಪರಸಿದಳಾಗಲಂಜನಾಸುತನ ಪ್ರಿಯದೆ || ೬೯ ||

ಪರಸಿ ಸಂತೋಷದಿಂ ಬೀಳ್ಕೊಟ್ಟ ಜಾನಕಿಯ |
ಚರಣಕಾನತನಾಗಿ ಬೀಳ್ಕೊಂಡು ಜವದಿಂದ |
ಮರುತಜಂ ಮಗುಳೊಂದು ತಾಣದೊಳ್ಕುಳ್ಳಿರ್ದನಾನಂದಸಂದೋಹದಿ ||
ತರಣಿವಂಶಜರಾಮಪುರದರಸನಂಘ್ರಿಗಳ |
ದರುಶನೋತ್ಸುಕದಿಂದೆ ಮುಂದಪ್ಪ ಕಜ್ಜಗಳ |
ಪರಿಯನಾಳೋಚಿಸುತಮಿರ್ದ ಭಾಸ್ಕರ ಬರ್ಪ ಪಥವ ಸಂರಕ್ಷಿಸುತಲೆ || ೭೦ ||

**ಹನ್ನೆರಡನೆಯ ಸಂಧಿ ಸಮಾಪ್ತಂ.**

# ಹದಿಮೂರನೆಯ ಸಂಧಿ

ಸೂಚನೆ || ಭೂಮಿಜಾತೆಯಲನುಜ್ಞೆಯನಾಂತು ಮರುತಸುತ |
ತಾಮಸಾಶರನ ನಂದನವ ಭಂಜಿಸಲೆಂದು |
ತಾಮರಸಮಿತ್ರನುದಯದಲಿ ನಿಶ್ಚಯಗೈದು ವಿಜಯಮಂ ಮಾಡ್ವನೊಲಿದು ||

ಧರಿಸಿ ಚೂಡಾಮಣಿಯ ಧರಣಿಜೆಯ ಬೀಳ್ಕೊಂಡು |
ಹರುಷದಿಂ ನಡೆಗೊಂಡು ಬಂದೊಂದು ತಾಣದೊಳು |
ಮರುತಸುತ ಕುಳ್ಳಿರ್ದು ನಂದನವನೋಡುತಿರಲನ್ನೆಗಂ ಮಂದಗತಿಯು ||
ಬೆರೆದು ತಣ್ಪಾಂತೆಲರು ಮೆಲ್ಲಮೆಲ್ಲನೆ ತನ್ನ |
ತರಳಗಂ ಹಸ್ತಗತಗೈದೀಯೆ ಕಾರ್ಯಗಳ |
ಪರಿಮಳಿಸಿ ಸಂಚಲನೆಗೆಯ್ಯಲೆಳಸಿದ ಮನೋಹರಮೆನಲು ಕೇಳ್ ಭವಾನಿ || ೧ ||

ದೇವತಾಯತನಗಳಲೆಸೆವ ಕಂಬುನಿನಾದ |
ಮೋವಿತಾ ಸಮಯದೊಳು ಗಾಣಿಕ್ಯಹರ್ಮ್ಯಾಂತ |
ರಾವನಿಯೊಳತಿಮಧುರತಾರಸ್ವರಾನ್ವಿತದ ಗಾಯನಂ ತಲೆದೋರ್ದುದು ||
ಭಾವಭವನಭಿಲಾಷೆಗಂತರಾಯಂ ಕ್ರೂರ |
ಸಾವಧಾನದೊಳಡಸಿ ದ್ವಿಜಕುಲದ ಕಲಕಲಾ |
ರಾವ ವ್ಯೆದೋರಿದುದು ಮರುಗುತಿರ್ದುವು ಜೊನ್ನವಕ್ಕಿಗಳು ತತ್ಸಮಯದಿ || ೨ ||

ಬಿಗಿಬಿಗಿದು ತಕ್ಕೈಸಿ ಮೊಗಮೊಗಗಳೊಂದೆನಿಸಿ |
ನಗುತ ಚೆಂದುಟಿಯಿಾಂಟಿ ನಲಿದು ತಾಣವನಂಟಿ |
ಮಿಗೆ ರತೋತ್ಸವಗೈದು ಬಗೆಬಗೆಯ ಲಲ್ಲೆಗಳಲಲಸಿ ಸುಖನಿದ್ರೆಯಿಂದ ||
ಮುಗುದೆಯರ ಸಂತಸಪ್ರತ್ಯೂಹ ಮನಸಿಜನ |
ಸೊಗಸಿಗಷ್ಟಮಚಂದ್ರ ಸೊಬಗಿಯರ ಮಾನಸವ |
ದಿಗಿಲುಗೊಳಿಸುವ ಚಚ್ಚರೆನೆ ತಾಮ್ರಚೂಡಗಳ ರುತ ಮೊಳಗಿತಾ ಸಮಯದಿ || ೩ ||

ಪತಿಯೊಳನುರಾಗ ಮಿಗೆ ಪೆರ್ಚೆ ನೋಟಂ ಮನೋ |
ವಿತತ ಸಂಕಲ್ಪಜಾಗರ ಕಾರ್ಶ್ಯಮರತಿಗಳ |
ಜತೆಯನೊಂದುತ್ತ ಲಜ್ಜೆಯನುಳಿವುತುನ್ಮತ್ತದೆಸೆಯನನುಭವಿಸಿ ಮುಂದೆ ||
ರತಿಗೆಳಸಿ ಸುರತಾಂತಮೂರ್ಛೆಯೊಳಗಿಹ ನಿಶಾ |
ಸತಿಯ ಚಿಕುರಂಗಳೇಂ ಚೆಲ್ಲಿದುವೊಯೆನೆ ಕಳಾ |
ಪತಿಯ ಗಮನದೊಳು ವಿರಳತೆಯಿಂದ ಮರ್ಬದೇನಚ್ಚರಿಯ ತೋರುತಿಹುದೊ || ೪ ||

ತೊಡರಿರ್ದ ಹಾರಗಳನೊಡನೆ ಸೈಪಿಟ್ಟು ತೋ |
ಳ್ತೊಡೆಗಳಂ ಪೆರಸಾರ್ಚಿ ಕದಪಿನೊಳು ವೀಟಿಯಂ|
ತೊಡೆದು ಬಿಂಬೋಷ್ಠಮಂ ಸವರಿ ಜವದಿಂ ತನ್ನ ಮೇಲುದಂ ಸಿಂಗರಿಸುತ ||
ನಡೆಯ ಸಪ್ಪುಳ ತೋರದಂತೆ ಮೆಲ್ಲನೆ ಮಾರ್ಗ |
ವಿಡಿದು ಬೆದರ್ಗಂಗಳಿಂ ನಾಲ್ದೆಸೆಯ ನಿಟ್ಟಿಸುತ |
ನಡೆದರಲ್ಲಲ್ಲಿ ಚರಣಾಯುಧದ ಪೆರ್ದನಿಗೆ ಜಾರಿಣಿಯರತಿವೇಗದಿ || ೫ ||



ಕದಪಿನೊಳು ಮಕರಿಕಾಪತ್ರ ಬೆಮರಿಂ ಪರಿಯೆ |
ಚದರೆ ಭಾಳದೊಳಿಟ್ಟ ತಿಲಕ ಸೌರಭ್ಯ ಸಂ |
ಪದವ ಧಿಕ್ಕರಿಸಿ ಕುಚಮಂಡಲಂ ಶೃಂಗಾರರಸ ವಿರಕ್ತಿಯನಾಂತೊಲು ||
ಅಧರದಿ ರದಕ್ಷತಂ ಕುಚತಟದ ಕೂರುಗರ |
ಚದುರಿಂದ ಕುಂಕುಮದಿ ಮಾಜುತ್ತ ಭಯದಿಂದ |
ಮದುರುತಿಹ ಪದಗಳಂ ನೆಲದಿ ನಿಶ್ಶಬ್ದಮೆನಲಿಡುತ ಪೈದಿದಳೊರ್ವೆಯು || ೬ ||

ಕರೆದನತಿಮಧುರನುಡಿಗಳಿನಿಂತು ಕುಡುನೋಟ |
ದೆರಕದಿಂ ಬಿಗಿಯಪ್ಪಿ ಕೊಸರುತಂ ಚೆಂದುಟಿಯ |
ಸರಸದಿಂದೀಂಟೆ ಗಲ್ಲಗಳಲುಗಿ ಕುರುಳ್ಗಳಂ ಕಿರುವೆರಳೊಳೊತ್ತಿ ನಲಿಸಿ||
ಸ್ಮರರಸೋದಯಗೈದು ಚಿತ್ತ್ರಬಂಧಗಳಿಂದ |
ನೆರೆದನಿಂತೆನುತಾ ವಿಲಾಸಗಳ ನೊಂದೊಂದ |
ಸ್ಮರಿಸುತ್ತ ಪಿಂದಿರುಗಿ ನೋಡುತ್ತೈದಿದಳೊರ್ವೆ ಸುದತಿ ನಿಜಸದನದೆಡೆಗೆ || ೭ ||

ಪೆರೆನೊಸಲೊಳಿಟ್ಟ ಕತ್ತುರಿ ಜಾರೆ ಕದಪುಗಳೊ |
ಳಿರುವ ಪತ್ರಾಂಕುರಂ ಜಾರೆ ಕುಂಡಲಗಳುಂ |
ಭರದಿ ಜಾರಲ್ ಸ್ಮರನಮದಜಾರಲಧರರುಚಿ ಜಾರೆ ಮೇಲುದು ಜಾರಲು ||
ತುರುಬಿನೊಳಗಿಟ್ಟ ಮಾಲಿಕೆ ಜಾರೆ ನಿರಿಜಾರೆ |
ಸರಸಸಲ್ಲಾಪ ಸವಿನುಡಿ ಜಾರೆ ಭೀತಿಯಿಂ |
ಚರಣಪಲ್ಲವಜಾರೆಯೊರ್ವೆ ಮೂಡಲನೋಡೆ ಜಾರನಂ ಜಾರಿಸಿದಳು || ೮ ||

ಸೆರಗ ಪಿಡಿಯದಿರೆಲವೊ ಕೋಳಿ ಕೂಗಿದುವೆಮ್ಮ|
ನೆರೆಯರೆಚ್ಚರುಗೊಂಬರೆಂದು ಭೀತಿಯೊಳುಳಿದು |
ಕರವ ಬಿಡಿಸುತ ಬೆದರುನೋಟದಿಂ ಮೂಡಲಿನರಾಗಮಂ ನೋಡಿ ಬೆದರಿ ||
ಕಿರುದೊಡೆಯ ನಡುಕದಿಂ ದಟ್ಟಡಿಗಳಿಡುತ ಮುಂ |
ದರಿಯದತಿ ಚಪಲತೆಯೊಳೈದುವವಸರದಿ ಕುಚ |
ಗಿರಿಗಳೊತ್ತಿನ ಚಂದ್ರರೇಖೆಗಳ ನಿಟ್ಟಿಸುತ ಮರುಗುತ್ತೈದಿದಳೊರ್ವೆಯು || ೯ ||

ಹರುಷಗೊಳೆ ದ್ವಿಜ ಚಕ್ರ ಹಂಸೋದಯಾರಕ್ತ |
ನೆರೆದ ತಾಮಸ ಜರುಗುತಿರೆ ಕಂಡು ಪದ್ಮಿನಿಯು |
ಅರೆದೆರದು ನೇತ್ರಗಳನಿನವಿರಹಸಮ್ಮೂರ್ಛೆ ತಿಳಿದಂತೆ ಸಂಭ್ರಮಿಸಿರೆ ||
ಸಿರಿಯ ಮಂದಿರದಂತೆ ಸಂತಸದ ಕಮಲಗಳ |
ಪೊರೆಯಲಾನಂದದಿಂ ಸುಳಿವಂಚೆಗಳ ಕಂಡು |
ಭರದಿ ಖಿನ್ನತೆಯಾಂತ ದೋಷಾಕರಂ ಕಂಡು ಕಳೆಗೆಟ್ಟನಾ ಸಮಯದಿ ||೧೦ ||

ಅನಿಮಿತ್ತ ದ್ವಿಜಗಣವನಲೆದು ಜಾರಾಧಿಕ್ಯ |
ದನುವಿಂದ ಹಂಸಗತಿಗೂಣಯುವ ಕಲ್ಪಿಸುತ |
ಮನಮೊಲಿದು ಕೌಶಿಕಾಭ್ಯುದಯಮಂ ಬಯಸುತ್ತ ಪಿಡಿದು ಕಮಲಾದ್ವೇಷಮಂ ||
ವಿನಯದಿಂ ಕುಮುದಿನಿಯನೊಡವೆರದ ರಾಜಂಗ |
ದನುಮತಿಸಿ ಬಹವೆ ಕಳೆಗಳು ಮಿತ್ರಗಪಕೃತಿಯ |
ನೆನೆದನೇಂ ಬಾಳ್ದಪನೆ ಯೆನಲೋಷಧಿಯಧವಂ ಕಳೆಗುಂದಿಬೆಳ್ಪಾದನು || ೧೧ ||

ಜಾರಚೋರರಸಖ್ಯ ಮಿತ್ರವಂಚನೆ ನಿಶಾ |
ಚಾರಣಂ ಸ್ವಚ್ಛಂದನೊಡನೆ ನೇಹಗಳಾಂತ |
ಧಾರಿಣೀಶನ ಪೊದ್ದುತಿರುವ ಸತ್ಸಂತತಿಗಳೆಂಬಂತೆ ತಾರಕೆಗಳು ||
ಭೂರಿ ಪತನೋದ್ಯೋಗಮಾಂತು ವಿರಳತೆಯಾಗ |
ಲೋರಂತೆ ದೋಷಾಕಂ ಪಿಡಿದಚಿಂತೆಯಿಂ |
ಪಾರಲನುಗೈದು ಕಂಗೆಟ್ಟು ಕಳೆಗುಂದಿದಂ ತತ್ಸಮಯಕಚ್ಚರಿಯೆನೆ || ೧೨ ||

ಸಿರಿಯುಳ್ಳಕಾಲದೊಳು ಸರಸಸಲ್ಲಾಪಗಳ |
ಮಿರುಗಿಸುತಮಿರುತ ವಿಪದಂ ತೋರಲನ್ಯರೊಳ |
ಗಿರುಳಿರ್ದು ತನುಸುಖವ ಪಡೆದು ಮುಗುಳಾ ತಾಣಕಡಸೆ ದುರ್ದೆಸೆಗಳಾಗ ||
ಸ್ಮರಿಸಲ್ಕೆತರಲೆಂದಿನಂತೆ ಸಂತಸವಿತ್ತು |
ದರರೆ 1ಮತ್ತಳಿ ಕುಳಕೆ ಗುಣದೋಷಗಳಚಿಂತೆ |
ಪರಿಕಿಸಿದರುಂಟೇ ಮಹಾತ್ಮತತಿಗೆನೆ ಕಮಲಮೆಸೆದುವಾವಾವೆಡೆಯೊಳು || ೧೩ ||

ಪದ್ಮಿನಿಯ ವೈಭವವ ಕಂಡು ಕಂಗಳ ಮುಗಿದು |
ಛದ್ಮಸೌವ್ಯಾಪಾರಯುತರ ನೋಡುತ ನಲಿವು |
ತಾಧ್ಮಾನತಾನಂದಗೊಳುತ ದ್ವಿಜರಂ ಪಳಿವ ಕುಮುದಿನಿಯ ಸಂದೋಹಕೆ ||
ಸದ್ಮಾಯತಮದಾಗದುಳಿದಪುದೆ ವಿಪದ ಮಾ |
ಪದ್ಮ ಪೆರರತಿಶಯಕೆ ಹಿಗ್ಗುವರಿಗೊಲಿವಂತೆ |
ಪದ್ಮಿನಿಗೆ ದಯೆಗೆಯ್ಯಲೆಂಬಂತೆ ಕೈರವಗಳಲ್ಲಲ್ಲಿ ಮುಗಿದುವಾಗ || ೧೪ ||

ಪ್ರಾಚೀ ನಿತಂಬಿನಿಯ ಸೀಮಂತ ಕುಂಕುಮ ಮ |
ರೀಚಿಯೋ ಮಂದೇಹ ದಾನವರ ಮಸ್ತಕ ವಿ |
ಮೋಚನದ ರಕ್ತಪ್ರವಾಹಮೋ ಹಂಸನಾಡುಂಬೊಲನೊ ಕೋಕನಗಳ ||
ವೈಚಿತ್ರ್ಯನಂದನಮೊ ಮಂದಾರ ಪಾದಪ ಮ |
ಹಾ ಚಕಿತ ಚೆಂದಳಿರೊ ಯೆಂಬಂತೆ ರಾಗವೆ |
ತ್ತಾ ಚೆಲ್ವ ಪೂರ್ವಾದ್ರಿಮಣಿಶಿಲೆಯ ಪೊಳಪೆನಲ್ ತೋರ್ದುದಾಗರುಣೋದಯಂ|| ೧೫ ||

ದಿನಲಕ್ಷ್ಮಿಯುಟ್ಟ ಕೌಸುಂಭಾಂಬರವೊ ದೈತ್ಯ |
ಜನರ ಮರ್ದಿಸಲಿಂದ್ರನಿಟ್ಟಗ್ನಿಶರಮೊ ಪ್ರಿಯ |
ದನುವಿಂದ ಶರನಿಧಿಯು ಕೊಟ್ಟ ಭೂಷಣರತ್ನದುರುಕಾಂತಿ ಪಜ್ಜಳಿಸಿತೊ ||
ಇನ ತಪೋಜ್ವಾಲೆಯೋ ಮಂದೇಹರಕ್ಕಸರ |
ತನುವಿಂದ ಸುರಿವ ರೋಹಿತಮೊ ಬಿಸಿಲ್ವಕ್ಕಿಗಳ |
ಮನದರಾಗಂ ಪೆರ್ಚಿತೆನಲು ಮೂಡಲೊಳರುಣ ರಾಗಂ ಸರಾಗಮೆಸೆಯೆ || ೧೬ ||

ಲೋಕಾಂಧಕಾಸುರನ ಧಾಳಿಯಿಂ ಧೃತಿಗೆಟ್ಟು |
ಕೋಕನದ ನೇತ್ರಗಳ್ಮುಗಿದುಕೊಂಡೊರಗಿರ |
ಲ್ಕಾಕಾಶಕೇಶನುಂ ಕಾಣುತ್ತೆ ಖತಿಮಸಗಿ ಪೂರ್ವಾಸೆ ಪದ್ಧತಿಯೊಳು ||
ರೋಕಿನಿಂದಾ ನಿಶಾಟನ ಕೊಲ್ಲಲುರಿಗಣ್ಣ |
ಭೀಕರದಿ ತೆರೆದನಹುದೆಂಬಂತೆ ದಿನನಾಥ |
ವೈಕರಿಯೊಳುದಯಾದ್ರಿ ಮೂರ್ಧ್ನಿಯೊಳ್ಮೈದೋರಿ ಬೆಳಗಿದಂ ಭೂತಳವನು || ೧೭ ||

---
1 ಪುತ್ತಳಿ.



ಇದು ನೋಡಲ್ಕೈಂದ್ರಿಯಳಲಂತಿಕೆಯೊ ಮೇಣು ಮ |
ತ್ತಿದು ಪೂರ್ವಶೈಲ ರಕ್ತೋಷ್ಣೀಷದತಿಶಯಮೊ |
ಇದು ಕಾಲವಿಧು ತಮೋದೈತ್ಯಸಂಹರಣಕೆಂದಟ್ಟಿದ ಸಹಸ್ರಾರಮೊ |
ಇದು ದಿವಸ ತರುಣಕ್ರೀಡಿಪ ರನ್ನಕಂದುಕಮೊ |
ಇದು ಜಗಜ್ಜೀವನೋನ್ಮೇಷ ಜೀವನರತ್ನ |
ದುದಯಮೋ ಯೆನಲಾಗ ಪೂರ್ವಾದ್ರಿ ಶಿಖರದೊಳಗಾಗಳಿನ ಬಿಂಬಮೆಸೆಯೆ || ೧೮ ||

ರವಿ ಗರ್ಭಮಾಂತ ಪ್ರಾಚೀನಿತಂಬಿನಿಯ ಮುಖ |
ಸುವಿಮಲಮೊ ಸುಪ್ರೋತ್ಥಿತೈರಾವಣನ ದಂತ |
ಚ್ಛವಿಯೊ ತಾಮಿಸ್ರ್ರದಾನವ ಶತ್ರುಸಮುದಯವನೋಡಿಸಿದುಷಃಕಾಲನ ||
ಪ್ರವಿಲಸದುದಾರಾಟ್ಟಹಾಸ ವ್ಯಾಪನೆಯೊ ಪ್ರಾ |
ಗ್ಯುವತಿಗೆ ವಿಲಾಸಿದಿಂ ಪೂರ್ವಭೂಭೃತ ಚೆಲ್ಲು |
ವವಿರಳದ ಪಟವಾಸಮೋ ಯೆನಲ್ ಮೂಡಲೊಳು ಕಿರುವೆಳಗು ತೋರ್ದುದಾಗ || ೧೯ ||

ಕಾಲಕಾರುಕ ಮನಃಪ್ರಿಯದಿಂದಮಾ ಪೂರ್ವ |
ಶೈಲಾಗ್ರದೊಳು ಬಡಬನೆಂಬ ಕುಲಮೆಯನಿಟ್ಟು |
ಲೀಲೆಯಿಂ ರವಿಬಿಂಬವೆಂಬ ಲೋಹದ ಪಿಂಡಮಂ ಕಾಸಿ ಬಡಿಯಲಾಗ ||
ಆಲಸ್ಯಮಿಲ್ಲದಾ ಕಿಡಿಗಳುಂ ಚೆಲ್ಲಿದೊಲು |
ಬಾಲಕಿರಣಂಗಳು ಮೆಲ್ಲಮೆಲ್ಲನೆ ಪೊರಟು |
ಭೂಲೋಕದಾಂಧ್ಯಗಳ ಪರಿಹರಿಸಿ ಸಂತಸವನಿತ್ತ ಚಕ್ರಂಗಳುಲಿಯೆ || ೨೦ ||

ನಿರತಂ ಮಹೋತ್ಪಲ ಶ್ರೀಕರಂ ರಕ್ತಾಂಗ |
ಗುರುಸೌಮ್ಯದರ್ಶನಂ ಕವಿಚಕ್ರವರ್ತಿ ಬಂ |
ಧುರದ ಮಂದವಿಹಾರ ಸ್ವರ್ಭಾನುಗತಿಗ್ರಹ ಕೇತುವೆನೆ ವಿಶ್ವರೂಪ ||
ಧರಿಸಿರ್ಪನೋ ಸೂರ್ಯನೆಂಬಂತೆ ಪಜ್ಜಳಿಸಿ |
ಗಿರಿಯ ಮಸ್ತಕರತ್ನದಂತೆಸೆಯೆ ಭೂತಳದಿ |
ಪರಿದು ಪೋದುದು ತಮಸ್ಸಂಗ ದ್ವಿಜಸಂದೋಹಕರಕಾದುದಾನಂದವು || ೨೧ ||

ದೊರೆಯಂತೆ ಚಕ್ರಾನುರಾಗ ಶೃಂಗಾರರಸ |
ದೆರೆಯನೊಲು ಪದ್ಮಿನೀಸಮುದಯಾಮೋದಕರ |
ಹರಿಯೆನೆ ರಥಾಂಗಭರಣೋದ್ಯುಕ್ತ ಜ್ಞಾನಿಯೆನಲಭ್ರಮಾಕರನಾಗುತೆ ||
ವರಮಂತ್ರಯೋಗಿಯಂದದಿ ಜಪಾಧಿಕ ರುಚಿಯ |
ಬೆರೆದು ಸೂತ್ರಿಕನಂತೆ ದಿಙ್ಮಾತ್ರಗೋಚರದಿ |
ಮೆರೆವರ್ಕಬಿಂಬಮುದಯಾಚಲಾಗ್ರದೊಳಮಿತದಚ್ಚರಿಯ ತೋರ್ದುದಾಗ ||೨೨ ||

ಮಂದೇಹದುರಧಿಗಮ ಹಂಸಾಭಿಧಾನಯುತ |
ಛಂದದ ಮನೋಜ್ಞರುಚಿ ಪೀತಾಂಬರಂ ತಮೋ |
ವೃಂದ ಮೋಚನನಿಪುಣಮನುದಿನಾಭ್ಯುದಯ ಶೋಭಿತ ಲೋಕಬಂಧುವೆನಿಸಿ ||
ಸಿಂಧ್ವಂತರೀಪಾಶ್ರಯದಿ ಬೆಳಗುತೆಸೆವ ರವಿ |
ಯಿಂದಿರೇಶನ ಗುಣಾವಹನೆನಿಸಿ ಭೂತಳಕೆ |
ಪೊಂದಿರ್ದ ತಾಮಸವ ಪರಿದನೋ ಯೆನೆ ಬಾಲಸೂರ್ಯಕರಮೆಸೆದುದಾಗ || ೨೩ ||

ಪರಮ ಕಲ್ಯಾಣರುಚಿ ಲೋಕಬಾಂಧವ ದಿವ್ಯ |
ಪುರುಷೋತ್ತಮಾಶ್ರಯಂ ಸಮಧಿಕಾಂಬರ ರತ್ನ |
ನುರುಜಾರಚೋರಭೀಕರರೂಪ ವಿಖ್ಯಾತ ರಾಜ ತೇಜೋಹರಣದೆ ||
ಮೆರೆವ ಲೋಕಾಲೋಕ ಮಂಜುಳದ ಸತ್ಕೀರ್ತಿ |
ವೆರೆದು ಕಮಲಾಭಿವರ್ಧನೆಗೈದು ಭೂಭೃತರ |
ಶಿರದ ಭೂಷಣ ಚಕ್ರವರ್ತಿಯಂದದೊಳಹಸ್ಕರ ತೋರ್ದನತಿಶಯದೊಳು || ೨೪ ||

ದಿನಪನುದಯಂಗೆಯ್ಯಲನಿಲಾತ್ಮ ಸಂಭವಂ |
ಮನದ ಹರ್ಷದಿ ನಿಂದು ನೋಡಲ್ಕೆ ಪೂರ್ವಮಂ |
ನೆನೆದುಕೊಂಡನ್ನೆಗಂ ತದ್ದಿನಪ ಮಂಡಲಂ ಕಂಪಿಸುತೆ ಕಾಣ್ಬಡಿಸಲು ||
ಕೊನರಿ ಕಿರುನಗೆಯುಣ್ಮೆ ಭಯಬೇಡ ನೀಯೆಮಗೆ |
ಜನಕ ಮಿತ್ರನೆನುತ್ತ ನೀಡಿ ಹಸ್ತಾಬ್ಜಮಂ |
ಹನುಮಂತನುಂ ಮುಂದಣುರುಕಜ್ಜಮಂ ಮನದೊಳಿಚ್ಛೈಸಿ ಕೈಕೊಂಡನು || ೨೫ ||

ಕಲಿತೇಂದ್ರಪದನಾಗುತಾಗ ಕೌಶಿಕವೈರಿ |
ನೆಲ ಜಡಾಪಹನಾಗುತರಿ ರಕ್ಷ ಮಂದಪಿತ |
ಸಲಲಿತ ಸುಹೃಜ್ಜನಕ ಮುಮ್ಮೂರ್ತಿಯಾದಡಂ ದ್ವಾದಶಾತ್ಮಕನೆನಿಸುತ ||
ನಿಲಸಾಯನದ್ವಯೋಲ್ಲಾಸಿಯಾದರು ಜಗ |
ತ್ಕಲನ ಪ್ರಕಾಶನೈ ಕಾಯನಾಶನ ಸಮು |
ತ್ಕಲಿತನಾದರು ಪ್ರತೀಕ್ಷಣರಾಗಹರನೆನಿಪ ಭಾಸರ್ಕ್ಕಂ ಕಂಗೊಳಿಸಿದಂ || ೨೬ ||

ಅವಿರಳ ತಮೋ ಮಹಾರ್ಣವದಿ ಮಗ್ನತೆಯಾಂತ |
ವಿವಿಧ ಜೀವನ ಪುನಃಕರಣ ಕರಣಮುಮಾಗಿ |
ತವಕದಿಂ ಕಾಲಶಕ್ತ್ಯುದ್ಬೋಧಮಾಗಿರ್ಪ ಖರ್ವ ರಾಜಸದ ತೆರದಿ ||
ನವಪೂರ್ವ ಸಂಧ್ಯಾರುಣಿವ್ಯಾಪ್ತ ಬ್ರಹ್ಮಾಂಡ |
ನಿವಹದಂತಃಪೂತಮೆನಿಸೆ ಸೌವರ್ಣಮಯ |
ಲವಲವಿಕೆಯಾಂತ ಭಾಸ್ಕರನುದಯ ಶೈಲದೊಳ್ಕರಮೆಸೆದನಾ ಸಮಯದಿ || ೨೭ ||

ಜರಿಯೆ ತಾಮಸವೃಂದ ಜಾರಿಣಿಯರಾನಂದ |
ಪರಿಯೆ ಕುಮುದೋತ್ಸಾಹ ಜರುಗೆ ರಾಜನನೇಹ |
ಸರಸಿಜಗಳರಳೆ ಸೌರಭ್ಯಮಾರುತಮರಳೆ ದ್ವಿಜಕುಲಂ ಹರುಷಿಸುತಿರೆ ||
ಸುರಕುಲವ ಪೋಷಿಸುತ ತನ್ನನೊಳಕೊಂಡಿರ್ಪ |
ವರ ವೀತಿಹೋತ್ರನಪಚಿತಿವರ್ಧನಂ ಗೆಯ್ಯೆ |
ತರಣಿ ಪೂರ್ವಾದ್ರಿಮೌಳಿಯ ರತ್ನಮೆನಿಸಿದಂ ಲೋಕಜೀವನಮೆಂಬೊಲು || ೨೮ ||

ರಸೆಯೊಳುಳ್ಳಖಿಳ ಪ್ರಾಣಿಗಳ ಸಂದೋಹಮಂ |
ನಿಶೆಯೆಂಬ ನಂಜು ಬಂದಡಸಿ ಚೇತನಗಳಂ |
ಬಸವಳಿಸೆ ವೈಕುಂಠಪತಿ ಕೃಪಾದೃಷ್ಟಿಯಿಂದುಜ್ಜೀವನಂ ಗೈವಡೆ ||
ಮಿಸುನಿವರ್ಣವನಾಂತು ಲೋಕೈಕಮಿತ್ರತೆಯ |
ಪೆಸರಿಂದ ಸರ್ವಮುಂ [1]ಸಾತ್ವಿಕಾಕೃತಿಗೊಳಿಸೆ |
ನಸುನಗುತ ಕಲ್ಯಾಣಮಾದುದೋ ಯೆಂಬಂತೆ ಪೊಂಬಿಸಿಲು ಮುಂಬರಿದುದು || ೨೯ ||

---
1 ಸಾತ್ಮಸಾ.



ಧರೆಯ ತಾಮಸವನೆಲ್ಲವ ನೀಗೆ ಕಮಲಭವ |
ಹರುಷದಿಂ ಹೈರಣ್ಯಗರ್ಭ ಸುಷಮೋತ್ಕಲಿತ |
ದುರುಜೀವರತ್ನಮಂ ಪೂರ್ವಶಿಖರಿಯೊಳಿಟ್ಟರಖಿಳ ಭೂತಂಗಳದರ ||
ಕಿರಣ ಸೋಂಕಿಂದ ಮತ್ತತೆ ಪೋಗಿ ಚೈತನ್ಯ |
ವೆರದು ಪೊಂಬಣ್ಣದಿಂ ಮೆರೆವುದೋ ಯೆನಲಹ |
ಸ್ಕರನ ತೇಜೋನ್ನತೆಯು ತೀವಿತಾಗೆಣ್ದೆಸೆಯಲನುರಾಗಮಂ ಪಡೆವೊಲು || ೩೦ ||

ಯುವತಿಯರ ಸೀಮಂತ ಸಿಂಧೂರ ಪೀತೋಷ್ಣ |
ನಿವಹಪ್ರವಾಳ ಗಂಡಸ್ಥಲೀ ರಮ್ಯಕರ |
ನವಕರ್ಣ ಪತ್ರ ಸುಷಮುಚ್ಛಟಾರಾಜಿ ಪೊಂದೊಡಿಗೆ ಪೊಂಬಟ್ಟೆಯುಡಿಗೆ ||
ವಿವಿಧ ಚಾತುರ್ಯಗಳ ಸೌವರ್ಣಲತೆಗಿದುವೆ |
ನವ ಯೌವನೆಯರ ಶೃಂಗಾರದನುರಾಗವೇಂ |
ಬುವಿಯೊಳಗೆ ಪಸರಿಸಿತೊ ಯೆನಲು ಕರಮೆಸೆದುದಾ ಪೊಂಬಿಸಿಲು ದೆಸೆದೆಸೆಯೊಳು|| ೩೧ ||

ಸರಸಿಗಳ ಮುಖಗಳಂ ಕಾಣದುರೆ ಕಾತರದಿ |
ಧರೆಯುನೆಲ್ಲವ ಸುತ್ತಿ ಬತ್ತಿ ಮತ್ತಾಸಕ್ತಿ |
ವೆರೆದು ಸುಂದರಿಯ ನಿಟ್ಟಿಸುತ ಗಲ್ಲಗಳಲುಗಿ ಬಾಯ್ಗೂಡಿ ಸ್ಮರಸಮರದಿ ||
ಬೆರದೇಕರಿಷ್ಟತೆಯೊಳಿರ್ಪ ಚಕ್ರಂಗಳಿಗೆ |
ಹರುಷದಿಂ ಭಾಸ್ಕರಂ ಪೊಂಬಟ್ಟೆಯಂ ತನ್ನ |
ಕರಗಳಿಂದಿತ್ತನೋ ಯೆನಲು ಬಾಲಾತಪಂ ಭಾಸಿಸಿತ್ತಚ್ಚರಿಯೆನೆ || ೩೨ ||

ಜಾರಿಣೀವಿಸರಕೆ ಚತುರ್ಥೀ ಚಂದುದರ್ಶನಂ |
ಚೋರಸಮುದಾಯಕಪರದ್ವೀಪ ವಿಧುರಾಜ |
ಜಾರಸಮುದಯ ಪಜ್ಜೆಯಿಡಲು ಕಾಳೋರಗನ ಪೆಡೆ ದೈತ್ಯಸಂದೋಹಕೆ ||
ಮಾರಕಾವಸ್ಥೆಯುದಧಿಯ ಪೆರ್ಚನಡಗಿಸುವ |
ತೋರರನ್ನದ ಕಾಂತಿಯೋ ಯೆನಲ್ಕೆಳೆಬಿಸಿಲು |
ತೋರಿದುದು ದಶದಿಶೆಯೊಳತುಳಮಾದ ಪ್ರಭಾ ಥಾಳಥಳ್ಯೋನ್ನತೆಯೊಳು || ೩೩ ||

ಕೋಕನದ ಮಿತ್ರನುದಯಿಸಲಾಗ ಸಂತಸದಿ |
ಲೋಕಮಾನಂದಗೊಳುತಿರಲಿತ್ತ ಮಾರುತಿ ಯ |
ಶೋಕನಂದನ ದೇಶದೊಳಗೊಂದು ತಾಣದೊಳು ಕುಳಿತು ನಾಲ್ದೆಸೆಯ ನೋಡಿ ||
ಶ್ರೀಕಾಂತನೆಡೆಗೈದುವರೆ ಕಾರ್ಯಮೇನಾದು |
ದೀ ಕಪಟ ರಕ್ಕಸರ ಪರಿಯನರಿಯದೆ ಪೋಗಿ |
ಮೂಕನಂತಿರವೇಳ್ಕುಮೆಂತೆನುತ ಚಿಂತಿಸಿದ ಮುಂತಪ್ಪ ಕಜ್ಜಗಳನು || ೩೪ ||

ಸಿಂಧುವಂ ದಾಂಟ ನಿಶೆಯೊಳಗೆ ದಾನವನಗರ |
ಮೊಂದಿ ಶೋಧಿಸಿ ತೊಳಲಿದುದಕೆ ಪುರುಷಾರ್ಥಮೆನ |
ಗೊಂದಾಯ್ತು ಜನಕನಂದನೆಯ ಶುಭಚರಣಗಳ ದರ್ಶನಂ ಲಾಭಮಾಯ್ತು ||
ಮುಂದಪ್ಪ ಕಾರ್ಯಂಗಳಿನಿತಾದರುಂ ಮನಕೆ |
ಬಂದುದಿಲ್ಲಾಂ ಪೋಗಿ ಕಾಣೆ ರಘುಕುಲರನ್ನ |
ಚಂದದಿಂ ವೃತ್ತಗಳ ಬೆಸಗೊಂಡರೇಂ ಬಿನ್ನಪಂಗೈವೆನಕಟೆಂದನು || ೩೫ ||

ನಗರ ವಿಸ್ತರಮೆನಿತು ಸಾಗರಮುದೆಂತಿಹುದು |
ಮಿಗೆ ಬಲಿಗಳಾರಾರು ದಶಕಂಠನಿರವದೇ |
ನೊಗುಮಿಗೆಯ ಬಲವಿಕ್ರಮಂಗಳೆಂತಿಹವವನ ಕಾರ್ಯ ಕರ್ತೃತ್ವಮೇನು ||
ಬಗೆಯೊಳೇಂ ಬಗೆದಿಹಂ ಸಚಿವರಾರುಂಟವನಿ |
ಗಗಣಿತ ಪ್ರಯತ್ನಂಗಳಾಳೋಚನಂಗೈವ |
ಬಗೆಯುಂಟೊ ನಿರ್ಭಯದೊಳಿಹನೊ ತಿಳುಪೆನಲದೇಂ ಬಿನ್ನವಿಪೆನಬ್ಜಾಕ್ಷಗೆ || ೩೬ ||

ಕಾರ್ಯಸಾಧನಕೆ ಕಾರಣಗಳಗಣಿತಮಿಹವು
ಧೈರ್ಯಮೊಂದೇ ಮುಖ್ಯಸಾಧನ ತದಾಶ್ರಯದಿ |
ಸೂರ್ಯಕಿರಣಂಗಳೆನಲಪರಿಮಿತ ಬುದ್ಧಿಗಳು ಕಾಯ್ದಿರ್ಪವೆಣ್ದೆಸೆಯೊಳು ||
ಆರ್ಯಮತಮೊಂದನಾಶ್ರಯಗೈದು ಮುಂಗೈದ |
ಕಾರ್ಯಾವರೋಧದಿಂ ಸಾಧಿಸಲ್ಬಲ್ಲನವ |
ನಾರ್ಯ ಸನ್ಮತನಲ್ಲದೇಕಚಿಂತೆಯೊಳೊಂದು ಕೈಸಾರಲರಿದೆಂದನು || ೩೭ ||

ಕಾಮರೂಪಿಗಳು ರಕ್ಕಸರತಿ ಪರಾಕ್ರಮರು |
ಸಾಮದಿಂದೊಡಬಡರು ಭೇದಮೆಸಗುವರೆ ನಿ |
ಸ್ಸೀಮಬಲರದರಿಂದ ಗಣಿಸರಾಜಿಯೊಳಿವರ ದಂಡಿಸಲಶಕ್ಯಮಹುದು ||
ಈ ಮಹಿಯೊಳಿನ್ನಾವುಪಾಯದಿಂ ದಾನವ |
ಸ್ತೋಮದ ಬಲಾಬಲಗಳರಿತು ರಘುಕುಲವಾರ್ಧಿ |
ಸೋಮನೆಡೆಗೈದುವೆನೆನುತ್ತಮಾಳೋಚಿಸುತಮಿರ್ದ ಪವನಾತ್ಮಭವನು || ೩೮ ||

ದನುಜರ್ವಿಕ್ರಮದ ವಶರಹರಲ್ಲದುಳಿದ ತ್ರೀ |
ಣ್ಯನು ಬುದ್ಧಿಯಿಂ ಸಾಧ್ಯರಲ್ಲ ಮದಮಾದ್ಯರೀ |
ಜನರ ಗೆಲುವರಸಾಧ್ಯ ಮೇಣೊಂದುಪಾಯಗಳು ಸಾಗಲರಿದೀ ತಾಣದಿ ||
ಘನಪರಾಕ್ರಮದಿಂದ ಕಾರ್ಯಸಾಧಕಮಲ್ಲ |
ದೆನಗೊಂದರಿಂದ ಮನದಿಷ್ಟಮಾಗದೆನುತ್ತ |
ಹನುಮ ತನ್ನೊಳ್ತಾನೆ ಚಿಂತಿಸಿದನರೆನಿಮಿಷ ಕಾರ್ಯಾನುಕೂಲತೆಗಳ || ೩೯ ||

ಸಂಗರಾಂಗಣದಿ ಸೆಣಸಿದರ್ಕೈದಿ ಬರ್ಪಸುರ |
ಪುಂಗವರ ಶೌರ್ಯಾದಿಗಳ ತಿಳಿದು ದಶಮೌಳಿ |
ಯಂಘವಣೆಯಂ ಕಂಡು ಯೋಚಿಸಿದಕಾರ್ಯಗಳ  ಪರಿಯನೆಲ್ಲವನು ತಿಳಿದು ||
ಹಿಂಗುವುದೆ ಸೌಕರ್ಯಮಿಾ ಕಾರ್ಯಮೇತರಿಂ |
ಸಂಗಡಿತಮುಪ್ಪುದೆನುತಾಳೋಚಿಸುತ ದೈತ್ಯ |
ರಂಗ ತಿಳಿವಡೆ ಪ್ಲವಂಗಮನಾಥ ಪರಿಪರಿಯೊಳಾಳೋಚನಂಗೈದನು || ೪೦ ||

ಏನುಪಾಯಂಗೈದರಸುರರ್ಕೈತಪ್ಪರಿಂ |
ದೇನೆಸಗವೇಳ್ಕೆನುತ ತನ್ನೊಳರಿದಂ ಮರುತ |
ಸೂನು ಮತಿವಂತರೊಳಗಗ್ಗಳನೆನುತ್ತೊರೆವರಲ್ತೆ ಧೀಮಂತರೆಲ್ಲ ||
ಮಾನನಿಧಿ ದಶಗಳಗೆ ನೇತ್ರೋಪಮಿತವು ವೈ |
ಮಾನಿಕರ ನಂದನೋಪಮದಶೋಕಾವನ ನ |
ವೀನಮಾಗೊಪ್ಪುತಿದೆ ಮುರಿದಿಟ್ಟರಳವಟ್ಟು ಬಹುದು ಮನದಿಷ್ಟಮೆನುತ || ೪೧ ||



ಬನವ ಮುರಿದಡೆ ದೈತ್ಯರೈತಹರು ದಾನವರ |
ಘನವ ಕುಗ್ಗಿಸಲರಿದು ಯೋಧರತಿಕೋಪದಿಂ |
ಮನಬಂದೊಲ್ಕೈತಪ್ಪರವರ ಮರ್ದಿಸೆ ಪಂಕ್ತಿಕಂಠನಿಗೆ ಕೋಪಾಗ್ನಿಯು ||
ಜನಿಸಲಟ್ಟುವನಿಂದ್ರಜಿತ್ಪ್ರಮುಖ ವೀರರೊಳ |
ಗೆನಗಹುದು ಯುದ್ಧ ಪಿಡಿದ್ಯೊದರಾಕ್ಷಣ ದೈತ್ಯ |
ಜನನಾಥನಂ ಕಾಣ್ಬೆನಿದು ನನ್ನಿಯೆನುತರಿದು ನಿಶ್ಚಯಂಗೈದನಾಗ || ೪೨ ||

ಭೀಮಬಲ ರಕ್ಕಸರ ಪರಿಯನೆಲ್ಲವ ತಿಳಿದು |
ರಾಮುಪುರದರಸನಂಘ್ರಿಯ ನೋಡಲೈದುವೆಂ |
ತಾಮಸಂಗೈದು ನಿಷ್ಫಲಮೆನುತ ಕಾರ್ಯಮಂ ದೃಢತರದಿ ಸಾಧಿಸುವರೆ ||
ನೇಮಮಂ ಮಾನಸದಿ ಮಾಡಿ ಶ್ರೀಮದ್ವನ |
ಸ್ತೋಮಮಂ ಸಂಹರಿಸಲನುಗೈದನಾಗ ಸು |
ತ್ರಾಮ ಮಿತ್ರನ ಸುತನ ನೆನೆದು ಪವಮಾನಸುತ ನಾಲ್ದೆಸೆಯನೀಕ್ಷಿಸಿದನು || ೪೩ ||

**ಹದಿಮೂರನೆಯ ಸಂಧಿ ಸಮಾಪ್ತಂ**

# ಹದಿನಾಲ್ಕನೆಯಸಂಧಿ

**ಸೂಚನೆ** || ವನವ ಸಂಹರಿಸಿ ಕಿಂಕರರ ಬಳಗವ ಸವರಿ |
ಘನಹರ್ಮ್ಯಮಂ ಮುರಿದು ಜಂಬುಮಾಲಿಯ ತರಿದು |
ಹನುಮನತಿಕೋಪದಿಂ ಮಂತ್ರಿಸುತರಂ ಮಡುಹಿ ಮೆರೆದನಾತೋರಣದೊಳು||

ಕ್ರೂರ ವಿಕ್ರಮದಿಂದ ಕಾರ್ಯ ಕೃತಿಯಹುದೆನುತ |
ಮಾರುತನಸುತ ತಿಳಿದಶೋಕ ವಿಪಿನವ ಮುರಿಯ |
ಲೋರಂತೆ ನಿರಿನಿಟಿಲುನಿಟಿಲೆಂಬ ರಭಸಮುಂ ತುಂಬಿತೆಣ್ದೆಸೆಯನಾಗ ||
ದೂರೀಕೃತಗಳಾದವನುಸರಿಪ ಶುಕಪಿಕಂ |
ಶಾರಿಕಾ ಮೃದುಲ ಕೇಳೀ ಮೃಗಂಗಳು ಬನಂ |
ಥಾರುಥಟ್ಟಾಗಿ ಕೆಡೆದುದು ಧರಾವಲಯದೊಳ್ನಿಮಿಷದೊಳ್ಕೇಳು ಗಿರಿಜೆ || ೧ ||

ಪ್ರಸವ ಕುಲವಾಮ್ಲಾನಮಾದವಾ ಪಕ್ಕಿಗಳು |
ದೆಸೆದೆಸೆಗೆ ಪಾರಿದುವು ಭೀಕರವ್ಯಾಳಗಳು |
ರಸೆಯನುಳಿದುವು ಶಿಲಾಗೃಹ ಚಿತ್ರಮಂದಿರಂ ಕೇಳಿಕಾ ಗೃಹಗಳೆಲ್ಲ ||
ಕುಸಿದು ಭೂತಳಕುದುರೆ ದಿವ್ಯಲತೆ ವಿಟಪಿಗಳ |
ಪೆಸರಿಲ್ಲದಾದುದರೆ ನಿಮಿಷದೊಳು ಸಂವರ್ತ |
ದೆಸಕ ಭಾಸ್ಕರನುರುಬೆಯಿಂದ ಲೋಕಗಳಪ್ಪ ತೆರನಾದುದಾ ನಂದನಂ || ೨ ||

ಆದುದದ್ಭುತ ನಿನಾದಂ ಪೌರಜನರಿಗಂ |
ದಾದುದತಿ ಘೋರತರ ಸ್ವಪ್ನಂಗಳಲ್ಲಲ್ಲಿ |
ಬಾಧಕರ ಭೀಕರಂ ಜನಿಸಿ ರಕ್ಷೋಗಣಂ ನಡನಡುಗುತಾಳೋಚಿಪ ||
ಹಾದಿ ಸಂಭವಮಾಗಲಾ ಬನದ ಕಾವಲಿನ |
ಮೇದುರ ಪರಾಕ್ರಮದ ದೈತ್ಯರಿಗೆ ತಾಮಸಂ |
ಪೋದುದೆಚ್ಚತ್ತು ನೋಡಿದರಾಗ ಕಾನನದ ಭೀಮಬಲ ವೀರಕಪಿಯ || ೩ ||

ಗಿರಿಯಂತೆ ಕಂಗೆಸವ ಹರಿಯ ನೋಡುತ ಭಯದಿ |
ಧರಣಿಜಾತೆಯ ಪೊರೆಗೆ ಬಂದು ರಕ್ಕಸಿಯರಂ |
ದುರುತರದ ಭೀಕರದ ವಿನಯಸಂಕಲಿತ ಮೃದುವಚನದಿಂ ಬೆಸಗೊಂಡರು ||
ತರುಣಿ ಕೇಳ್ಕಪಿಯಾರದೇಂ ಕಾರಣಂ ಬಂದು |
ಮುರಿವುದೀ ನಂದನವನಾರು ಕಳುಪಿದರು ನಿ |
ನ್ನರುಗಿನೊಳು ಪೇಳ್ವುದೇನೆಂಬುದಂ ವಿಸ್ತರಿಸವೇಳ್ಕೆಂದಡಿಂತೆಂದಳು || ೪ ||

ಅಪರಿಮಿತ ಮಾಯಾವಿಲಾಸ ರಕ್ಕಸರುಗಳ |
ವಿಪರೀತಕೃತ್ಯಗಳ ಬಲ್ಲರಾರ್ಕಾರ್ಯಗಳ |
ಗುಪಿತಂಗಳುಂ ನಿಮಗೆ ತಿಳಿದಪವದಹಿಯಪದಸರಣಿಯಹಿಕುಲವರಿವುದು ||
ನೆಪವನಾನೆಂತರಿವೆನೆಂದೆನಲು ರಕ್ಕಸಾ |
ಧಿಪನೆಡೆಗೆ ಕೆಲರೋಡಿ ಭೀತಿಯಿಂ ವೃತ್ತಾಂತ |
ಕುಪಿತ ಕಪಿಯಾರ್ಭಟೆಯನೆಲ್ಲವಂ ಭಿನ್ನವಿಸಲನುಗೈದರಾ ಸಭೆಯೊಳು || ೫ ||



ಆವ ದೇಶದ ಕಪಿಯೊ ಮಾನವಂ ಕಳುಪಿದನೊ |
ಪಾವಿನಂದದಿ ಮೊರೆದಶೋಕ ಬನಮುಂ ಕಿಳ್ತು |
ದೇವಿಯೊಳು ಸಂಭಾಷಣಂಗೈದು ಪಿಂದಿರುಗುತುತ್ಸವದೊಳಿಮನಂದದಿ ||
ಸಾವಧಾನದೊಳಿಹುದು ಪೌಲಸ್ತ್ಯದೂತನೋ |
ದೇವಪರಿಚರನೊ ಶ್ರೀರಾಮು ಜಾನಕಿಯೆಡೆಗೆ |
ಈ ವಸುಧೆಗಟ್ಟಿದನೊ ಕಂಡು ಕೇಳ್ದರಿಯೆವೀ ಕಪಿಯ ಶೌರ್ಯೋನ್ನತೆಗಳ || ೬ ||

ಸುಮನೋಹರಾಕೃತಿಯ ನಂದನಂ ಧ್ವಸ್ತಮುಂ |
ದಮಿತ ಭವನಂಗಳೆಲ್ಲಂ ನಾಶನಗಳಾದು |
ವಮಲಕಾಸಾರ ಮೃಗಪಕ್ಷಿಯ ದುರಾವಸ್ಥೆ ಯೆನಿತೆಂದು ಪೇಳ್ವೆವರಸ ||
ಅಮರಪತಿ ಕಪಿರೂಪನಾಂತು ಬಂದಿಹನೊ ಯಿ‌ಾ |
ಕ್ರಮವಾರಿಗಿಲ್ಲ ಸಂಗ್ರಾಮದೊಳು ನಿರ್ವಹಿಪ |
ಕ್ರಮವಾರ್ಗೆ ತೋರದಿದ ಬಿನ್ನವಿಸಲಂಜುವೆವು ವಿಪರೀತ ಕಾರ್ಯಗಳನು || ೭ ||

ಬನವನೆಲ್ಲವ ಮುರಿದು ಸೀತೆಯಿಹ ಶಿಂಶುಪಾ |
ವನವ ಬಿಟ್ಟುದು ಬಾಯ್ಗೆ ಬಂದಂತೆ ಬಗುಳುತಿಹು |
ದಿನವಂಶನಾಥನ ಪರಾಕ್ರಮವ ಸುಗ್ರೀವ ಲಕ್ಷ್ಮಣರ ಬಾಹುಬಲವ ||
ಅನುಪದಂ ಪೇಳುವುದು ಸೀತೆಯೊಳು ವೃತ್ತಾಂತ |
ವನು ಪೇಳ್ವುದಾವ ನೆಲದೊಳ್ಪುಟ್ಟಿತೋ ಕಪಿಯ |
ದಿನಿಸೊಂದೆಯಲ್ಲದಾ ವಿಕ್ರಮಕೆ ಪಾಸಟಿಯನೆಂತೆಂದು ಪೇಳ್ವೆವರಸ || ೮ ||

ಬಿತ್ತರದಿ ದಾನವಿಯರರುಪೆ ಲಾಲಿಸಿ ರಾಕ್ಷ |
ಸೋತ್ತಮಂ ಬಡಬಾಗ್ನಿಯಂತೆ ಭೋರ್ಮೊರೆವುತ್ತ |
ಮತ್ತಿತ್ತ ನಿಟ್ಟೆಸಲ್ಕಂಗೆಸೆದರಿದಿರಿನೊಳಗಾತ್ಮಾನುರೂಪ ಚರರು ||
ಮತ್ತಗಜನಿಭರಾದ ಮಹಿತಬಲ ರಾಕ್ಷಸರ |
ಮೊತ್ತಮಂ ಕಂಡು ಪ್ರಿಯದಿಂ ಕರೆದು ಪೇಳಿದಂ |
ಮುತ್ತಿಗೆಯನಿತ್ತು ರಾಮನ ದೂತನಂ ಪಿಡಿದು ತಹುದೆನುತ ಕೋಪದಿಂದ || ೯ ||

ಕಿಂಕರರಶೀತಿಸಾಹಸ್ರರತಿ ವೇಗದಿಂ |
ಪಂಕ್ತಿಮಸ್ತಕಪೇಳ್ದ ಶಾಸನವನಾಂತು ನಿ |
ಶ್ಶಂಕೆಯಿಂ ಶೂಲಮುದ್ಗರ ಕೂಟ ಮೊದಲಾದ ತೀಕ್ಷ್ಣ ಶಸ್ತ್ರಗಳ ಪಿಡಿದು ||
ಸೋಂಕಿದಡೆ ಸುರಪಶಿಖಿಯಮನೈರುತಾದಿಗಳ |
ಬಿಂಕಮಂ ಮುರಿದಿಡುವೆವೆನುತ ಪೇಳುತ್ತೆಮನ |
ಕಿಂಕರರ ಮಾಳ್ಕಿಯೊಳಗೈತಂದರಂಜನಾಸುತನ ಪಿಡಿವಾಸೆಯಿಂದ || ೧೦ ||

ಕಡುಗೋಪದಿಂದಹಸ್ಕರನ ಕಳ್ತಲೆ ಬಂದು |
ತುಡುಕುವಂದದಿ ಜಗದ್ಭೀಕರದ ಕಾರ್ಶ್ಯತರ |
ಸಿಡಿಲ ಮುತ್ತುವರವಂಚದ ಬಳಗದಂದದಿಂ ದಾವಾನಲನ ಪೊರೆಯೊಳು ||
ಯೆಡೆಯಾಡಲೆಳಸಿದ ಪತಂಗಸಮುದಯದಂತೆ |
ಖಡುಗ ಪಟ್ಟಿಸ ಸೂಲ ಮುದ್ಗರಾಯುಧಗಳಿಂ |
ಕಡುಗಲಿಗಳೈತಂದು ಬಳಸಿದರು ತೋರಣದೊಳಿಹ ಮಹಾಕಪಿವೀರನ || ೧೧ ||

ಸುತ್ತ ನಾಲ್ದೆಸೆಯಲಸುರರು ಕ್ರೂರ ಶಸ್ತ್ರಗಳ |
ಮೊತ್ತಂಗಳಿಂದಿಟ್ಟು ಸಿಡಿಲರವಮಂ ತೋರಿ |
ಬಿತ್ತರ ಪ್ರಹರಣಗಳಿಂದ ನಾನಾಪರಿಯಲಸ್ತ್ರ ಶಸ್ತ್ರಗಳಿನಿಡಲು ||
ಚಿತ್ತಜಾಹರಣ ಮಾರುತಿ ನೋಡಿ ಕಿಂಕರರ |
ನೊತ್ತಿ ಬಡಿದಿಡೆ ವನದಿ ವೈನತೇಯಾಕೃತಿಯ |
ನುತ್ತೆ ತಾಳಿದನದೇನದ್ಭುತವ ಪೇಳುವೆಂ ವಿಶ್ವೈಕ ವೀರನಿರವ || ೧೨ ||

ವೀರಾರ್ಭಟಿಗೆ ವ್ಯೋಮಚಾರಿಗಳ್ನಡುಗಿದರು |
ದಾರ ಶಿಖರಿಗಳೊಡೆದುವಾ ನಗರಿ ಕಂಪಿಸಿತು |
ಭಾರಣೆಯ ದನಿಗೇಳಿ ಖಗಮೃಗಗಳಿದೆವೊಡೆದು ಥಾರುಥಟ್ಟಾಗಿ ಕೆಡೆಯೆ ||
ವೀರರಗ್ರೇಸರಂ ಲಾಳವಿಂಡಿಗೆವಿಡಿದು |
ಕ್ರೂರ ವಿಕ್ರಮಿಗಳಂ ಸದೆದು ಕೆಡಪಿದನೊಂದು |
ಬಾರಿಯೊಳದೇನೆಂಬೆನಚ್ಚರಿಯ ನಿಮಿಷದೊಳಗಾಶ್ಚರ್ಯಕರಮಾಗಲು || ೧೩ ||

ದಶಗಳನ ಕಿಂಕರಾಶೀತಿಸಾಹಸ್ರಮಂ |
ವಸುಧೆಯೊಳ್ಬೀಳ್ಕೆಡಹಿ ರಾಮಲಕ್ಷ್ಮಣರುಗಳ |
ಪೆಸರನುದ್ಘೋಷಿಸುತ ಕಲ್ಪಾಂತರುದ್ರನಂತೈತಂದು ತೋರಣದೊಳು ||
ಅಸಮಾನ ವಿಕ್ರಮಂ ಕುಳ್ಳಿರ್ದು ನೋಡುತಿರ |
ಲಸುರೇಶನೆಡೆಗೆ ದೂರಿದರು ಕಿಂಕರನಿಚಯ |
ನಸಿದ ಪರಿಯಂ ಕೇಳಿ ಕೋಪದಿಂ ಭೋರ್ಮೊರೆವುತಿಂತೆದ ದಶಕಂಠನು || ೧೪ ||

ಕಪಿಗೇತಕಿನಿತುಸಾಹಸ ಪೋಗಿ ಬಲೆಗಳಂ |
ಗುಪಿತದಿಂ ಬೀಸಿ ಪಿಡಿತಂದು ಬಾಲವಕೊಯ್ದು |
ವಿಪರೀತಗೈದು ಬಿಟ್ಟಪುದೆನುತಮಾ ಜಂಬುಮಾಲಿಗಂ ಕರೆದು ಪೇಳೆ ||
ಅಪರಿಮಿತ ವಿಕ್ರಮಂ ಬರುತಿರ್ದನಿತ್ತಲೀ |
ಕಪಿಕುಲೋತ್ತಮನುದಯಶೈಲ ಶಿಖರದೊಳಿರ್ಪ |
ತಪನನಂದದೆ ತೋರಣಾಗ್ರದೊಳ್ಕುಳ್ಳಿರ್ದು ನೋಡಿದಂ ನಾಲ್ದೆಸೆಯನು || ೧೫ ||

ಕಂಡುದಿದಿರೊಳು ಮಹನ್ಮಂಡಲೋಪಮ ನಭವ |
ನಂಡಲೆವ ಕೇತನಗಳಿಂದ ಸುಮನೋಹರಾ |
ಖಂಡಲಾನಂದಕರ ವೈಜಯಂತದೊಳೆಸೆವ ಕರುಮಾಡವೊಂದ ನೆಲದೆ ||
ಪಾಂಡುರಭ್ರಗಳು ವಿಶ್ವಾಕಾರಮಾಂತಂತ |
ಖಂಡ ತೇಜೋಮಯದ ಸೌಧಮಂ ಕಾಣುತು |
ದ್ದಂಡ ವಿಕ್ರಮ ಹನುಮ ತನ್ನೊಳಾಳೋಚಿಸಿದ ಮಗುಳೊಂದು ಪರಿಯನಾಗ || ೧೬ ||

ಬನವನೆಲ್ಲವ ಮುರಿದೆ ಕಾಹಿನಸುರರ ತರಿದೆ |
ದಿನಪನಂತೆಸೆವ ಪ್ರಾಸಾದಮಂ ಮರ್ದಿಸುವೆ |
ನೆನುತ ನಿಶ್ಚಯಗೈದು ಬೇಗದಿಂದಡರಿದಂ ಮಣಿಖಚಿತ ಕರುಮಾಡಮಂ ||
ಇನವಂಶನಾಥ ರಘುನಾಥ ಜಯ ಸೌಮಿತ್ರಿ |
ಘನಶೂರ ಜಯ ಸೂರ್ಯತನಯ ಸೇನಾನಾಥ |
ನಿನಗೆ ಜಯವಾಗಲೆಂದೆನುತ ಕೊನೆಯೊಳ್ನಿಂದು ಕೂಗಿದಂ ಭೀಕರದೊಳು || ೧೭ ||



ಕೋಸಲೇಂದ್ರನ ದಾಸ ಮರುತಸುತ ರಕ್ಕಸರ |
ವಾಸಿ ಪರ್ವತವಜ್ರ ದಶಕಂಠ ಸಾಹಸ್ರ |
ಮಾಶಕೋಪಮಮೆನಗೆ ದೈತ್ಯರೆಲ್ಲರ ಸದೆದು ಲಂಕಾಪುರವ ಮರ್ದಿಸೆ ||
ವಾಸವ ಪ್ರಮುಖರಾನಂದಗೊಳುತಿರಲು ಜಲ |
ರಾಶಿಯಂ ದಾಂಟಿ ರಾಘವನೆಡೆಗೆ ಪೋಗುವೆಂ |
ಭೂಸುತೆಯ ಸುಕ್ಷೇಮವಾರ್ತೆಯಂ ಸಂತಸದೊಳೆನುತ ಭೋರ್ಮೊರೆದನಾಗ || ೧೮ ||

ಬರಸಿಡಿಲನಾದಕಿಮ್ಮಿಡಿಸಲಾರ್ಭಟಿ ದೈತ್ಯ |
ಚರರಂಜಿ ಭೂತಳಕೆ ಕೆಲರು ಧುಮ್ಮಿಕ್ಕುತಿರೆ |
ಶರಚಾಪಗಳ ಪಿಡಿದು ಮಾರಾಂತು ಕೆಲರು ನಿಲೆ ಕಂಡು ಕಡುಗೋಪಗೊಂಡು ||
ಮರುತಸುತ ಮದಕರಿ ಕರೀಷಕಷಣಂಗೈವ |
ತೆರದಲರೆನಿಮಿಷದೊಳು ದೈತ್ಯರೆಲ್ಲರ ಸವರಿ |
ಭರದಿಂದ ಕರುಮಾಡಮಂ ಮುರಿದನಾಕ್ಷಣದಿ ನಿಶ್ಶೇಷಮಪ್ಪಂದದೆ || ೧೯ ||

ಕಿತ್ತು ಬಜ್ಜರಗಂಬಮೊಂದರಿಂದಂ ಪೊಡೆಯೆ |
ಮತ್ತಗ್ನಿ ಪುಟ್ಟಿ ಸೌಧಮನೆಲ್ಲ ದಹಿಸಿದುದು |
ಬಿತ್ತರದ ರನ್ನಗಳ್ಛಟಛಟಾರ್ಭಟೆಯಿಂದ ಸಿಡಿದುವಾಗಸಕಾಗಲು ||
ಮತ್ತಾ ಸುಗೋಪುರಂ ದಹಿಸಿಪೋಪುದ ಕಂಡು |
ತತ್ತರಂ ಗೊಳುತಿರುವ ದಾನವರ ಕುಲವನೊದೆ |
ಯುತ್ತಮಂಬರಕಡರುತಟ್ಟಹಾಸಂಗೈದ ವೀರಕೇಸರಿಯ ಸುತನು || ೨೦ ||

ರಾಮನಾಜ್ಞೆಯೊಳು ಕಪಿರಾಯನಟ್ಟಿಹ ವಿಪುಲ |
ಭೀಮಬಲ ಪ್ಲವಗೇಂದ್ರಮಾದೃಶ ಸಹಸ್ರಗಳ |
ವೈಮನಸ್ಸಿನೊಳೆಸೆವ ಧರಣಿಜೆಯ ಕಂಡು ಮಿಗೆ ಬಾರೆಂದು ಬಹುವಿಧದೊಳು ||
ಈ ಮಹಿರಸಾತಳ ಸಮಸ್ತದೊಳಗರಸರಸು |
ತಾ ಮಹಾಬಲಿಗಳೀ ರಾವಣನ ಕುಲ ಬಲ |
ಭ್ರಾಮಕಂಗೊಳಿಸುವರೆನುತ್ತಮಾರ್ಭಟಿಸಿದಂ ಮರುತಸುತನಂಬರದೊಳು || ೨೧ ||

ವೀರ ರಘುವೀರನೊಳು ವೈರಮಂ ಬಯಸಿದವ |
ರಾರುಳಿವರಕಟ ದಶಕಂಠ ಕುಲಮಿಂದೆ ಸಂ |
ಹಾರಮಪ್ಪುದು ಬೆಂದುಪೋಪುದೈಸಲೆ ಲಂಕೆ ಯೆನುತಟ್ಟಹಾಸಗೆಯ್ಯೆ ||
ಭಾರಣೆಯ ರವಕೇಳ್ದುದಾ ಜಂಬುಮಾಲಿಗಂ |
ತೋರ ಕ್ರೋಧಂ ಪುಟ್ಟಲಾಕ್ಷಣದಿ ಪಲ್ಮೊರೆದು |
ದಾರ ಜವದಿಂ ಬಂದು ಕಂಡನಂಬರದೊಳಗೆ ಚರಿಪ ಕಪಿವಲ್ಲಭನನು || ೨೨ ||

ಸುರಚಾಪನಿಭ ಧನುಷ್ಟಂಕಾರಗೈವುತ್ತೆ |
ಸರಭಸದಿ ಶರಮೆಂಟ ತೊಡಿಸಿ ಕಾರ್ಮೇಘಮುಂ |
ಮೊರೆವಂತೆ ವೀರನಾದಗಳಿಂದ ಧಿಕ್ಕರಿಸಿ ಭೋಯೆನುತ್ತಾರ್ದು ಬೇಗ ||
ಧುರವಿಜಯ ಜಂಬುಮಾಲಿಯು ಕೋಲಮಳೆಗಳಂ |
ಕರೆಯೆ ಸುರಮಂಡಲಂ ನೋಡಿ ತಲ್ಲಣಗೊಳುತ |
ಮಿರೆ ಮರುತ್ಸಂಭೂತ ಕೋಪದಿಂ ಬಾನೆಡೆಯನಿಳಿದು ವೇಗದೊಳು ಬರಲು || ೨೩ ||

ಕಂಡಾ ಪ್ರಹಸ್ತಸುತ ಕಡುಗೋಪದಿಂ ಕೋಲ |
ತಂಡಂಗಳಿಂದೆಚ್ಚು ಬೊಬ್ಬಿರಿಯೆ ವಿಕ್ರಮೋ |
ದ್ದಂಡತೆಯನೀಕ್ಷಿಸುತ ಮರುತಸುತ ಸಾಲತರುವಂ ಕಿಳ್ತು ಪೊಡೆಯೆ ಬರಲು ||
ಗಂಡುಗಲಿ ದೈತ್ಯ ಕೆಂಗರಿಗೋಲ್ಗಳಿಂ ಮರನ |
ಖಂಡಿಸುತ ಬೊಬ್ಬಿಡುತಮಾಗ ವಕ್ಷಸ್ಥಳವ |
ನಂಡಲೆಯಲಂಜನಾಸುತ ಕೋಪದಿಂದೊಂದು ಗಿರಿಯ ಕಿಳ್ತಂದನಾಗ || ೨೪ ||

ಕಾಲರುದ್ರನ ಕೆಣಕಿ ಬಾಳ್ದರುಂಟೇ ಜಗ |
ಜ್ಜಾಲದೊಳು ಹನುಮನೊಳು ಸೆಣಸಿ ದೈತ್ಯಾಧಮನ |
ಬಾಲನೆಂತುಳಿವನೆಂದಖಿಲ ಸುರನಿಚಯಂಗಳಾಡುತಿರಲಾಕ್ಷಣದೊಳು ||
ಬಾಲಿಶ ಪ್ರಹಸ್ತಸುತ ಪರಿಘಮಂ ಪಿಡಿದು ತ |
ತ್ಕಾಲದೊಳು ಕೋಪಿಸಲು ಕೇಸರಿಯಸುತನವನ |
ಮೇಲಿಟ್ಟನಾ ಮಹಾಶೈಲಮಂ ನೆರೆದಸುರಪಡೆಯೆಲ್ಲ ತಲ್ಲಣಿಸಲು || ೨೫ ||

ಬಲಿಯೊಂದು ಪೊಡೆತದಿಂ ರಥಸಾಶ್ವಸಾರಥಿಯ |
ಕಲಿತ ಶರಚಾಪ ಸಹ ಜಂಬುಮಾಲಿಯು ಧರಾ |
ತಳದೊಳೇನಾದನೆಂಬುದ ಕಾಣದಾದುದಾ ದೈತ್ಯ ದಾನವರ ಪಡೆಗೆ ||
ಪಲಬಗೆಯ ಭೀತಿ ಸಂಭವಮಾದುದವಸರದಿ |
ಕಲಿ ಮರುತ್ಸುತ ಪ್ರಹಸ್ತಾತ್ಮಜನನರಿದಸುರ |
ಕುಲವನರೆ ನಿಮಿಷದೊಳಗೊರಸಿದನದೇಂ ಚಿತ್ರ ಸಾಹಸಿಯೊ ಭೂತಳದೊಳು || ೨೬ ||

ಅಳಿದಸುರ ಸಂತತಿಯ ನೋಡುತವರೊಳಗೊರ್ವ |
ನುಳಿದ ನಿಶಿಚರ ಪೋಗಿ ದಶಗಳಂಗರುಪಲ್ಕೆ |
ಬೆಳಗುವಗ್ನಿಗೆ ಘೃತಾಹುತಿಯಿತ್ತ ಮಾಳ್ಕೆಯೊಲು ಕೋಪ ಭುಗಿಲೆನುತಡರಲು ||
ಕೊಳುಗುಳಕೆ ಮಂತ್ರಿ ಸುತರೇಳ್ವರಂ ಕಳುಪಲವ |
ರಳುಕದತಿ ವಿಕ್ರಮದೊಳಮಿತ ಬಲದೊಡವೆರದು |
ಘಳಿಲನೈತಂದರಂಜನೆಯ ಕಂದನ ಪೊರೆಗೆ ಸಮವರ್ತಿಯನುಚರರೊಲು || ೨೭ ||

ಕರಿಯಂಘ್ರಿಕೃತಿಗಳಿಂ ಹರಿಯ ಹೂಂಕೃತಿಗಳಿಂ |
ವರಶತಾಂಗ ಧ್ವನಿಯ ಚಾಪಟಂಕಾರಂಗ |
ಳುರು ರವದಿ ಶಬ್ದಾಯಮಾನಮಂಬರಮಾದುದಖಿಲರುಂ ತ್ರಾಸಗೊಳಲು ||
ಧರೆ ನಡುಗೆ ದಿಕ್ಪಾಲರೆಲ್ಲ ಕಂಗೆಡೆ ಸುರರ್ |
ಮರುಗುತಿರ್ದುದು ದೈತ್ಯ ಪಡೆಯು ಭೀಕರದಿಂದ |
ಮರುತಸಂಭವಗೆಂತು ಜಯಮಹುದು ಶಿವಯೆನುತ ಮುನಿಗಳೀಕ್ಷಿಸುತಿರ್ದರು || ೨೮ ||

ಅನಿತರೊಳು ಮಂತ್ರಿಸುತರೈತಂದು ತೋರಣದೊ |
ಳನುವಿಂದ ಕುಳ್ಳಿರ್ದ ವೀರಕಪಿಯಂ ಕಂಡು |
ಮಿನುಗುವಷ್ಟಾಪದ ಶರಾಸನಗಳಂ ಪಿಡಿದು ಕೋಲ್ಮಳೆಗಳಂ ಕರೆಯಲು ||
ಹನುಮ ನೋಡಿದನವರ ಕರಲಾಘವಂಗಳಂ |
ಘನವಿಕ್ರಮದ ಪರಿಯ ಪೆರ್ಬಲದ ಮೇಲ್ಪರಿವ |
ಘನತೆಯಂ ನಿಲಿಸಲನುಗೈದು ತೋರಣದಿಂದಮಿಳಿದು ಪರಿಘವನು ಪಿಡಿದು || ೨೯ ||



ಲಾಳವಿಂಡಿಗೆಯಿಂದ ಕರಿಸಮುದಯವ ಪೊಡೆದು |
ಜಾಳುಗೈದಶ್ವ ಸಂತತಿಯ ನುಷ್ಟ್ರಂಗಳಂ |
ಪೋಳುಗೈದಾ ದಂಡಧರಗಿತ್ತು ತೇರ್ಗಳಂ ಚೂರ್ಣೀಕೃತಂಗೈವುತ ||
ಭಾಳಲೋಚನ ಕಲ್ಪಸಮಯದೊಳು ಸುಳಿದು ಕ |
ಟ್ಟಾಳುಗಳ ಸುಡುವಂತೆ ದೈತ್ಯ ಬಲಮಂ ಬೇಗ |
ಕಾಳೆನಿಸಿ ಕಡುಗೋಪದಿಂದಮಾತ್ಯರ ಸುತರ ತುಡುಕಲನುಗೈದನಾಗ || ೩೦ ||

ತುಡುಕಲೈತಹ ಕಪಿಯ ಕಂಡು ರಕ್ಕಸರಾಗ |
ಕಡುಗೋಪದಿಂದ ಕೆಂಗರಿಗೋಲ್ಗಳಿಂದೆಚ್ಚು |
ತಡೆಯದೆ ಕೃಪಾಣ ಶೂಲಂಗಳಿಂದಡಿಗಡಿಗೆ ಪೊಡೆದು ಬೊಬ್ಬಿರಿವುತಿರಲು ||
ಕೊಡನಮಗ ಕಡಲ ಸಾಹಸಕೆ ಬೆಚ್ಚುವನೆಂತು |
ನಡುಗುವುದೆ ತುಹಿನಾದ್ರಿ [1]ದಳ್ಳುರಿ ಪ್ರಹಾರಗಳಿ |
ಗೊಡನೆ ರಕ್ಕಸರಾರುಭಟೆಗೆ ಮರುತಾತ್ಮಭವನಳ್ಕುವನೆ ಮೂಜಗದೊಳು || ೩೧ ||

ಶರವೃಷ್ಟಿಯಂ ನಿವಾರಣೆಗೈದು ತೇರ್ಗಳಂ |
ಮುರಿದು ಹುಡಿಹುಡಿಗುಟ್ಟುತೊರ್ವರೊರ್ವರ ಪಿಡಿದು |
ಧರಣಿಗಪ್ಪಳಿಸಿ ಕಾಲಿಂದೊರಸಿ ದೈತ್ಯಬಲಮಂ ಪೊಕ್ಕು ಜವದೊಳಾಗ ||
ಕರಪಾದ ದಂತನಖ ಮುಷ್ಟಿಪ್ರಹಾರಗಳ |
ಭರದಿಂದಮರೆನಿಮಿಷದೊಳಗೆ ಪೂರ್ಣಂಗೈದು |
ಮರುತಸುತನೆಂದಿನಂದದೊಳು ತೋರಣದಗ್ರದೊಳ್ಕುಳಿತ ನಿರ್ಭಯದೊಳು || ೩೨ ||

ದಾನವರು ಮಂತ್ರಿಸುತರೆಲ್ಲ ಶಾಖಾಮೃಗ ಕೃ |
ಶಾನುವಿಂಗಾಹುತಿಯದಾಗಲುಳಿದೊಂದರೆಯೊ |
ಳಾ ನಗರದಧಿನಾಥಗಾದುದಾ ವೃತ್ತಾಂತ ಬಿತ್ತರದೊಳಾ ಸಮಯದಿ ||
ಏನಿದಚ್ಚರಿಯೆನುತ ಬೆರಗಿಂದ ದೈತ್ಯಪತಿ |
ತಾನೆ ತನ್ನೊಳಗೆ ಮುಂಗಾಣದಾಳೋಚಿಸಿದ |
ನೂನ ನಿಧಿಗಳೊಳಗ್ರಭವನಲ್ತೆ ಕಲಿದಶಾನನನೀ ಧರಿತ್ರಿಯೊಳಗೆ || ೩೩ ||

ಕೋಡಗಂ ಬಂದು ನಗರಿಯ ಪೊಕ್ಕುದೆನಲೇನು |
ಕೂಡೆ ಬನಮಂ ಮುರಿದುದೇನು ಕಿಂಕರರಂ ಸ |
ಗಾಢದಿಂ ಮಡುಹಿ ದೈತ್ಯರ ಬಡಿದು ಕಲಿ ಜಂಬುಮಾಲಿಯಂ ತರಿದುದೇನು ||
ಮೂಡುವತಿ ಕೋಪದಿಂ ಮಂತ್ರಿಸುತರೇಳ್ವರಂ |
ಜೋಡಗಲದಂತವರ ಪೊರೆಗೆ ಕಳುಪಿದ ಪರಿಯ |
ನೋಡಲಚ್ಚರಿಯಾಗಿ ತೋರದಿದೆ ಮಗುಳೊಂದುಪಾಯ ಶಿವಶಿವಯೆಂದನು || ೩೪ ||

ಸುರಪ ಮೊದಲಾದ ದಿಕ್ಪಾಲರೀ ಕಪಿರೂಪ |
ಧರಿಸಿ ಬಂದಿರ್ಪರಲ್ಲದಡೆ ವೈಕುಂಠದಿಂ |
ಹರಿ ತಾನೆ ಪಿಡಿದ ವಾನರ ವೇಷದಿಂ ಬಂದು ಪೊಕ್ಕು ಮನ್ನಗರಿಯೊಳಗೆ ||
ತರಿದ ರಕ್ಕಸಕುಲವನೆಲ್ಲರೊರ್ವರು ಕಣ್ಣ |
ತೆರೆದು ನೋಡಲ್ಕಳವೆ ಕಾಲವಶಮಂ ಮೀರ |
ಲರಿದಾರಿಗಾದಡಂ ಶಿವ ಮಹಾದೇವೆನುತ ಚಿಂತಿಸಿದ ಮಾನಸದೊಳು || ೩೫ ||

1. ದುಳ್ಳುರಿ.

ಜಗದೀಶ ರಾಮನಿಂದಸುವ ನೀಗುವೆನೆಂದು |
ಸುಗುಣಮತಿಯಿಂದಾನು ನೆನೆದುದಕೆ ಲೋಕೇಶ |
ನೊಗುಮಿಗೆಯ ಕೃಪೆಯಿಂದ ಕಪಿರೂಪನಾಂತಿಲ್ಲಿಗೈತಂದನಿದು ಸತ್ಯವು ||
ಜಗತಿಯೊಳಗಾಂ ಧನ್ಯ ಬಯಕೆ ಕೈಸಾರಿತೆಂ |
ದಗಣಿತ ಮನೋಹರ್ಷದಿಂದ ದಶಕಂಠ ನಸು |
ನಗುತ ಶ್ರೀರಾಮಪುರದೆರೆಯನೊಳ್ ಸೆಣಸುವಡೆ ಸಂತಸಂ ಗೊಂಡಿರ್ದನು || ೩೬ ||

**ಹದಿನಾಲ್ಕನೆಯ ಸಂಧಿ ಸಮಾಪ್ತಂ**

## ಹದಿನೈದನೆಯ ಸಂಧಿ

ಸೂಚನೆ || ಮರತಸುತ ಸಂವರ್ತಭೈರವನ ಮಾಳ್ಕಿಯೊಲು |
ಧುರದಿ ಸೇನಾಪತಿಗಳೈವರಂ ಸಂಹರಿಸಿ |
ಭರದೊಳಕ್ಷನ ತರಿದು ಮಗುಳೆ ರಾರಾಜಿಸಿದನುದಿತಭಾಸ್ಕರತೇಜದೆ ||

ಬಂಡಣದಿ ಮಂತ್ರಿಸುತರಳಿಯೆ ದಶಕಂಠ ಖತಿ |
ಗೊಂಡು ನಿಟ್ಟುಸಿರಿಡುತ ಯೂಪಾಕ್ಷ ದುರ್ಧರ ಪ್ರ|
ಚಂಡ ಪ್ರಘಸಂ ಭಾಸಕರ್ಣಂ ವಿರೂಪಾಕ್ಷರೆನಿಪ್ಪೈವರನ್ನು ಕರೆದು ||
ಚಂಡಬಲ ಕಪಿಯ ನಿಗ್ರಹಿಸಲ್ಕೈದುವುದು ವೇ |
ತಂಡಗಾಂಧರ್ವಭಟರಥಗಳಿಂದೊಡನೆ ಮುಂ |
ಕೊಂಡೆನುತ ನೇಮಿಸಿದ ಸೇನಾಪತಿಗಳಿಂಗೆ ಕೇಳದ್ರಿತನುಸಂಭವೆ || ೧ ||

ಕರೆದು ಸೇನಾಪತಿಗಳೈವರಂ ಕುಸ್ತರಿಸಿ |
ವರರಥಾಶ್ವಪದಾತಿ ಸಹಿತೈದಿ ಪ್ಲಾವಂಗ |
ರರಸನಂ ಪಿಡಿತಹರುಪಾಯಗಳ ಬಿತ್ತರದೊಳರುಪಿದಂ ಬಿತ್ತರದೊಳು ||
ಹರಿಯೆನುತ ಸಾಮಾನ್ಯಮತಿಯಿಂದಮೈದದಿರಿ |
ಸುರಮುನಿಪ್ರವರರೆನಗಪಕಾರಮೆಸಗುವಡೆ |
ವಿರಚಿಸಿದ ನಿಜನಿಜತಪೋಮೂರ್ತಿಯಲ್ಲದಿದು ಪ್ರಾಕೃತಂ ಮುನ್ನಲ್ಲವು || ೨ ||

ವಾಲಿಸುಗ್ರೀವ ಮೈಂಧ ದ್ವಿವಿಧ ಗಜ ಗವಯ |
ನೀಲ ನಳ ಶತಬಲಿ ಸುಷೇಣ ಪ್ರಮುಖರ ಮುನ್ನ |
ಕೇಳಿರ್ಪುದುಂಟಲ್ತೆ ಧೈರ್ಯ ಶೌರ್ಯೌದಾರ್ಯಗಮನ ಮಾಯಂಗಳಿಂದ ||
ಮೂಲೋಕಮಂ ಗಣಿಸದಿರುವುದಂ ಕಂಡು ಮದ|
ದಾಲಸ್ಯದಿಂದ ಸಾಮಾನ್ಯ ಬುದ್ಧಿಯೊಳೈದಿ |
ಬಾಲಸೂರ್ಯಪ್ರಭೆಯ ನೊಳಕೊಂಡ ಕಪಿವರನ ಕೆಣಕದಿರಿ ತ್ವರಿತದಿಂದ || ೩ ||

ತಿಳಿಯದೆ ಬಲಾಬಲಗಳರಿಗಳಿದಿರೊಳು ಪೋಗೆ |
ಕೊಳುಗುಳದಿ ಗೆಲುಮೆ ಸಮನಿಸದು ಧೀಮಂತರೀ |
ನೆಲದಿ ನಿಜಸಾಮರ್ಥ್ಯಮೆನಿಸಿದರ ಶೌರ್ಯಂಗಳರಿತಾತ್ಮ ಹಿತವನೆಸಗಿ ||
ನಿಲಯ ಕೈತಹುದುಚಿತಮದರಿಂದ ಮೆಚ್ಚರುಂ |
ದಳೆದು ನಿಜಕಾರ್ಯ ಕೈಗೂಡಿಬಹ ಮಾರ್ಗದೊಳ್ |
ತೊಳಲುವರೆನುತ್ತೊರೆದು ಬೀಳ್ಕೊಡಲ್ ಸೇನಾಗ್ರಯಾಯಿಗಳ್ ನಡೆದರೊಲಿದು || ೪ ||

ಪತಿಯ ನೇಮದಿ ಬಲೋದ್ಧತರಮಿತಬಲದೊಡನೆ |
ಕ್ಷಿತಿಯಳ್ಳುವಂದದಿಂ ತ್ವರಿತದಿಂದೈತಂದು |
ವಿತತಮಧ್ಯಾಹ್ನಬಾಸ್ಕರನಂತೆ ತೋರಣದೊಳಿಹ ಕಪೀಶ್ವರನ ಕಂಡು ||
ಕತಿಪಯ ಶರಂಗಳಿಂದಿಟ್ಟು ಬೊಬ್ಬಿಟ್ಟು ಮೇ |
ಣತಿಶಯದ ದಿತಿಸುತರು ದಶದಿಶೆಗಳಾಕ್ರಮಿಸಿ |
ಸತತ ಧಾರಾರೂಪ ಶಸ್ತ್ರದಾಸಾರಗಳ ಕರೆದರಾರ್ಭಟೆಗಳಿಂದ || ೫ ||

ಅಸುರರುದ್ಧತ ಬಾಣದೆಸುಗೆಯಿಂ ಕಪಿರಾಜ |
ನಸಮಧೈರ್ಯದಿ ನಭಸ್ಥಳಕಡರಿ ಬೊಬ್ಬಿಡುತ |
ವಸುಧೆಗಂ ಧುಮ್ಮಿಕ್ಕಲಾಗ ದುರ್ಧರನ ರಥವಾಜಿ ಶರಚಾಪಂಗಳು ||
ಪೆಸರಿಲ್ಲದಂತಾಗೆ ಪದತಳದಿ ಸಿಲ್ಕುತಾ |
ಗಸುರ ಹುಡಿಹುಡಿಯಾದರದ ಕಂಡು ಕೋಪದಿಂ |
ಪೊಸಮಸೆಯ ಕೋಲ್ಗಳಿಂದೊದಗಿದ ವಿರೂಪಾಕ್ಷ ಯೂಪಾಕ್ಷನತಿವೇಗದಿ || ೬ ||

ಬತ್ತೀಸಶಸ್ತ್ರಗಳಲಿಟ್ಟು ಬೊಬ್ಬೆಯನಿಟ್ಟು |
ಮತ್ತಸಿಯು ಶೂಲಪಟ್ಟಿಸ ಪರಶುಗಳಲಿರಿದು |
ಬಿತ್ತರದ ಪರಿಘದಿಂ ಪೊಡೆಯೆ ಕಪಿಕುಲಚಕ್ರವರ್ತಿ ಕಡುಗೋಪದಿಂದ ||
ಕುತ್ತಿ ಕೆಡಪಿದನಿರ್ವರಂ ಧರೆಗೆ ಜವದಿಂದ |
ನೆತ್ತರೊರತೆಗಳು ಸಹ ಕೆಡೆಯೆ ಕಂಡಾ ರಾಕ್ಷ |
ಸೋತ್ತಮಂ ಕ್ರೋಧದಿಂ ಮುಳಿದು ಪಟ್ಟಸವಿಡಿದು ಸಿಡಿಲಂತೆ ಪೊಡೆದನಾಗ || ೭ ||

ಭಾಸಕರ್ಣನ ಕ್ರೂರಶೌರ್ಯದಾರ್ಭಟೆಯಿಂದ |
ಬೇಸರದೆ ಕಪಿರಾಯ ಖಗಪತಿಯೊಲಂಬರದೆ |
ಭಾಸಿಸುತಮುರಗಮಂ ಪಿಡಿಯೆ ಭೂತಳಕೆರಗುವಂತೆ ದಾನವನ ಪಿಡಿದು ||
ವಾಸಿಯಂ ಕೆಡಿಸಿ ಸೀಳ್ದಿಟ್ಟು ಪದನಖದಿಂದ |
ಮಾಸುರನ ಚಿಮ್ಮಿ ಮಗುಳಾಗಸವನಡರಿದನಿ |
ದೇಸು ಬಲಿಯೆಂದೆನಿಸಲಕ್ಕು ಭೂತಳದೊಳಾಕೇಸರಿತನೂಜಾತನು || ೮ ||

ಮಡಿಯೆ ಸೇನಾನಿಗಳು ಮತ್ತೆ ಶೂಲವನೊಂದ |
ಪಿಡಿದು ಬಲಮನ್ನೊರಸಿ ಮಗುಳೆ ಮತ್ತೇಭಗಳ |
ಪಿಡಿದು ಗಜಗಳ ಬಡಿದು ತುರಗದಿಂದಶ್ವಗಳನಪ್ಪಳಿಸಿ ರಥಗಳಿಂದೆ ||
ಕೆಡಪಿ ತೇರ್ಗಳ ರಕ್ಕಸರ ಬಡಿದು ಯೋಧರಂ |
ಕೆಡಪುತರೆನಿಮಿಷದೊಳ್ಪಡೆಯ ಹುಡಿಹುಡಿಗೈದು |
ಘುಡುಘುಡಿಸಿ ಮಗುಳೆಂದಿನಂತೆ ತೋರಣದಲ್ಲಿ ಕುಳ್ಳಿರ್ದ ಮರುತಸುತನು || ೯ ||

ಬಲಸಮಗ್ರಂ ಮಹಾಬಲತನಯನಿಂ ಮಡಿದು |
ನೆಲದೊಳೊರಗಿದ ಪ್ರವೃತ್ತಿಯ ಕೇಳಿ ದಶಕಂಠ |
ಬಲರೌದ್ರ ಪೆರ್ಚುಗೆಯೊಳೆಡಬಲನ ನೋಡುತ್ತ ಮಹಿತವಿಕ್ರಮಿತನಯನ ||
ಕಲಿಗಳರಸಾಕ್ಷನಂ ನಿಟ್ಟಿಸಿದ ಮಾತುರದೊ |
ಳಲಘು ಬಲನೈತಂದು ಪದಸರೋಜಕೆ ನಮಿಸಿ |
ಕೆಲಬಲದ ಪಿರಿಯರಿಂದಾಶಿಷಂಗಳನಾಂತು ಸಮರಕಂ ಪೊರಮಟ್ಟನು || ೧೦ ||

ನರವಾಹನನ ತೇರ ಪೊರೆಯಲಿರುಕುವ ಪರಿಯ |
ಸುರುಚಿರ ಶತಾಂಗ ಪೂರ್ವಾರ್ಜಿತ ತಪಃಫಲದಿ |
ಬರಲು ಮಣಿಮಯ ಚಿತ್ರಬಾಲಸೂರ್ಯಪ್ರಭಾಥಾಳಥಳ್ಯದೆ ತೋರಲು ||
ಹರ ಸಮಾನ ಬಲಾಢ್ಯನಕ್ಷಯಕುಮಾರಕಂ |
ಹರುಷದಿಂ ಬಲವಂದು ಪೊಂದೇರನಡರಿ ಬಂ |
ಧುರದ ವಿಕ್ರಮದಿಂದ ಚಿತ್ರಕಾರ್ಮುಕವಿಡಿದು ಸಮರಕ್ಕೈತಂದನೊಲಿದು || ೧೧ ||



ಕರಿತುರಗರಥಪದಾತಿಗಳಾಗ ಸಂಗ್ರಾಮ |
ಧರಣಿಗೈದುದು [1]ಪೃಥ್ವಿ ಬೆಸಲಾದ ಮಾಳ್ಕೆಯೊಳು |
ಧುರವಿಜಯ ಯೋಧರ್ಕೈತಂದರಗಣಿತಮಾಗಿ ಸಕಲಶಸ್ತ್ರಾಸ್ತ್ರವಿಡಿದು ||
ಪುರದೊಳೆಸೆದಿಹಬಲಚತುರ್ಭಾಗದೊಳಗೊಂದು |
ಕರಿಘಟೆ ಸಮೇತಮೈತಂದುದೇನೆಂಬೆನಾ |
ಪರಿಯ ದುಂದುಭಿ ಕಹಳೆ ಕಾಂಸ್ಯಸುಷಿರಂ ವೀರವಾದ್ಯಗಳ್ ಭರಿತಮಾಗೆ || ೧೨ ||

ನಾದಮಯವಾದುದೆಣ್ದೆಸೆ ದೇವಸಮುದಯ |
ಕ್ಕಾದುದತಿಭಯ ಧರಾವಲಯ ನಡುಗಿತು ಶೈಲ |
ಮೇದುರಾಂಬುಧಿ ಚಲಿತಮಾದುದು ಬಲೋದ್ಧತದ ಪಾದಘಟ್ಟಣೆಗಳಿಂದ ||
ಭೂಧರಂಗಳು ನಡೆದು ಬರ್ಪವೊ ಬಲಾಹಕಂ |
ಮೋದ ಮೇಲ್ವರಿದೈದಿ ದಿನಪನಂ ಕವಿವಂತೆ |
ಕ್ರೋಧದಿಂ ದೈತ್ಯಬಲಸಹಿತಮಕ್ಷಂ ಬಂದ ಕಪಿಯ ಪಿಡಿವಳ್ತಿಯಿಂದ || ೧೩ ||

ಮುಂದುವರಿದೈತಪ್ಪ ಮದಗಜಂಗಳ ಮೊರೆವ |
ಬಂಧುರಸ್ವನದುರುಶತಾಂಗಹೂಂಕೃತಿ ಗೈವ |
ಸೈಂಧವನಿವಹದ ಹೇಷಾರವದೊಳಾರ್ಭಟಿಪ ವೀರ ಸಮುದಾಯದಿಂದ ||
ದುಂದುಭಿಯ ಧ್ವನಿಗಳಿಂ ಭೂತಳಂ ಕಂಪಿಸುವೊ |
ಲಂಧಕಾಸುರನಘಟ ನಿಲಿಪ ರಣಪಂಡಿತರ |
ವೃಂದವೈತಂದು ತೋರಣದಗ್ರದೊಳ್ಮೆರೆವ ಪ್ಲವಗಪತಿಯಂ ಕಂಡರು || ೧೪ ||

ಉದಯಗಿರಿಯಗ್ರದೊಳಗೆಸೆವ ರವಿಯಂದದಿಂ |
ಕದನಮಂ ಬಯಸಿ ಕುಳ್ಳಿರ್ದ ಕಪಿನಾಯಕನ |
ಪದವ ಕಾಣುತಮಕ್ಷನತಿ ಕೋಪದೃಷ್ಟಿಯಿಂದೀಕ್ಷಿಸುತ ಜರೆದನಾಗ ||
ಪದುಮಜಾದ್ಯರು ಕನಸಿಲೆಣಿಕೆಗೆಯ್ಯದ ದೈತ್ಯ |
ಸದನಮಂ ಪೊಕ್ಕೆ ಮದಮುಖ ಪಿಡಿದು ಚೇಷ್ಟೆಗಳ |
ಸದನಕಪಿ ಮಗುಳೆಲ್ಲಿ ಪೋಪೆ ಮುಂಗಾಣದಲಶಕ್ತ ದುರ್ಜನಕೆಳಸಿದೆ || ೧೫ ||

ವನಪಾಲಕರ ನಾಲ್ವರಂ ವಧಿಸಿ ವಿಟಪಿಗಳ |
ಘನತೆಯಂ ಮುರಿದಿಟ್ಟು ಪ್ರಾಸಾದಮಂ ಕೆಡಪಿ |
ದಿನಿತು ಮಾತ್ರಕೆ ಸುರಾಸುರರಾಜಿಯೊಳು ನಿನಗೆ ಸದೃಶಮಿಲ್ಲೆನುತ ತಿಳಿದೆ ||
ಇನವಿಕ್ರಮಗಳೆಡೆಯೊಳಂಟೆ ಕೈಗುಣಗಳಂ |
ಬಿನದಮಂ ಕಾಣದೀ ದುರ್ಮೇಧೆ ಸಮನಿಸಿತು |
ನಿನಗಿಂದನವಸರದೊಳಹುದು ಭೋಜನ ಕಪಿಪ್ರವರ ನೋಡೆನುತೆಚ್ಚನು || ೧೬ ||

ಚತುರತೆಯ ಪುಂಖಾನುಪುಂಖ ಬಾಲಕನೆಸುಗೆ |
ಯತಿಶಯದಿ ಭೂನಭಸ್ಥಲಮೇಕಮೆನಿಸಿಯುಡು |
ತತಿಗಳೆನಲಿನಶಶಿಗಳುಂ ತೋರೆ ಮಾರುತಂ ಚಲಿಸದಿರಲದ್ರಿ ನಡುಗೆ ||
ವಿತತ ಸಮರವ ಕಾಣುತಮರಮುನಿಸಂದೋಹ |
ವತಿಭೀತಿಯಿಂದ ತಲ್ಲಣಿಸುತಿರೆ ರಕ್ಕಸರ |
ಪತಿ ಕೋಪದಿಂ ಮೂರುಬಾಣದಿಂದೆಚ್ಚನಾ ಕಪಿವೀರನಂ ಜವದೊಳು || ೧೭ ||

1. ಬುಧ್ವಿ.

ಶರಘತಿಗೆ ಪಣೆಯೊಡೆದು ಪೂತ ಮಳ್ಮುತ್ತುಗದ |
ತೆರನಾದುದಂಗವಾಕ್ಷಣದಿ ಕಪಿವರ ಕೋಪ |
ಭರದಿಂದ ಪಲ್ಮೊರೆದು ಕಿಡಿಗರೆವ ನೇತ್ರಯುಗದಿಂ ನೋಡಿ ಗರ್ಜಿಸುತ್ತಂ ||
ಶರವರ್ಷಮಂ ಕುಮಾರಾಕ್ಷನಿಸುಗೆಯ ಶಸ್ತ್ರ |
ಕರಲಾಘವಂಗಳಂ ಸಹಿಸಲಸದಳವಾಗಿ |
ಹರಿಗಳಗ್ರೇಸರಂ ನಾಲ್ದೆಸೆಯ ನಿಟ್ಟಿಸುತ ರೋಷದಿಂ ಘುಡುಘುಡಿಸಿದಂ || ೧೮ ||

ಖಳಸುತನ ಬಾಣಪ್ರಹಾರದಿಂ ಲೋಹಿತದ |
ಜಳದೊರತೆಯಾದುದಂಗಾಂಗಂಗಳಲಿ ನಿಂದು |
ಕೊಳುಗಳದಿ ನಿರ್ವಹಿಸಲಳವಲ್ಲದಾಗಸದ ಗಮನಮಂ ತಿಳಿದು ಬೇಗ ||
ಜಳದ ಮೊಳಗುವ ತೆರದೊಳುಲಿದು ಖೇಚರಕಡರಿ |
ಸುಳಿದುವಿದ್ಯುನ್ನಿಭಾಕೃತಿಯಿಂದ ರಕ್ಕಸನ |
ತುಳಿವರಿಚ್ಛೈಸಿ ವಿನತಾಸುತಂ ವ್ಯಾಳಕುಲಮಂ ಪಿಡಿಯಲವ್ವಳಿಪೊಲು || ೧೯ ||

ಗರುಡನಂದದಿ ಗಗನದೊಳ್ಚರಿಪ ಮರುತಜನ |
ಪರಿಯ ಕಂಡಕ್ಷ ಶರಪಂಜರವ ಬಲಿದನಂ |
ಬರಮೆಲ್ಲ ಸುಲಭದಿಂ ಕೈವಶತೆಯಾದಂತೆ ತೋರುತಿರೆ ರೋಷವಿಡಿದು ||
ಖರತರದ ನಾರಾಚ ಕ್ಷುರವರ್ಧಚಂದ್ರಗಳ |
ನೆರವಿಯ ಪ್ರಯೋಗಿಸುತ ಕ್ರೀಡಾಮೃಗವನಿಡುವ |
ವರನಿಲಾಯದ ರಚನೆಗೈದುಂ ಮರುನ್ಮಾರ್ಗ ಸಂರೋಧಮಪ್ಪಂದದೆ || ೨೦ ||

ನೆಲದಿ ನಿಲುವರಸಾಧ್ಯಮಂಬರದ ಮಾರ್ಗದೊಳು |
ಚಲಿಸೆ ದುಸ್ಸಾಧ್ಯ ಮುಂಗಡೆಯೆ ಸುಳಿದಾಡುವಡೆ |
ಕೊಲದುಳಿಯ ದೈತ್ಯಸುತನಪ್ರತಿಮಸಾಹಸಿಕ ಬಲಿಗಳಗ್ರೇಸರನಲೆ ||
ಜಲಜಬಾಂಧವಕುಲಾಧಿಪಗೆಂತು ಜಯಲಕ್ಷ್ಮಿ |
ಯೊಲಿದಪಳೊ ಶಿವಶಿವಯೆನುತ್ತಚಾರಣ ಮೌನಿ |
ಕಲಿತವಿಚಿಕಿತ್ಸೆಯಿಂ ಕಂಪಿಸುತವೈದಿದರು ರಣವ ನಿಟ್ಟಿಸಲಮ್ಮದೆ || ೨೧ ||

ಪಾರಲಳವಲ್ಲ ಮತ್ತಾಜಿಯೊಳು ಗೆಲಲೆಂದು |
ತೂರಲ್ಕಶಕ್ಯ ಜವ್ವನ ಮದದೊಳಾರ್ಜಿಸಿದ |
ತೋರಬಲದಿಂ ದೈತ್ಯಸುತನಘಟು ಪೆರ್ಚುತಿದೆ ಹವಿಯುಂಡ ಪಾವಕನೊಲು ||
ಆರುಭಟೆಯಂ ನಿಲಿಸದಿರೆ ತ್ರಿಲೋಕವನೊಮ್ಮೆ |
ಸೇರಿಸುವೆನುದಕದೊಳಗಿಂದಿವನ ಸಂಹರಿಸಿ |
ಚಾರಣಾದಿಗಳಿಗತಿಯಶದ ಸಂತಸವಿಾವೆನೆನುತುಲಿದ ಮರುತಸುತನು || ೨೨ ||

ಎಂದತುಲವಿಕ್ರಮದೊಳಕ್ಷನ ಶತಾಂಗಾಗ್ರ |
ಕಂದು ಧುಮ್ಮಿಕ್ಕಿದಂ ರಥವಾಜಿ ಸಾರಥಿಗ |
ಳೊಂದೆ ನಿಮಿಷದೊಳು ಹುಡಿಹುಡಿಯಾಗಿ ಭೂತಳದಿ ಕೆಡೆಯಲಕ್ಷಂ ರೋಷದಿ ||
ಮುಂದಲಿಸುತನ್ನೆಗಂ ಮರುಕೊಳಿಸಿ ಮತ್ತೊಂದು |
ಸ್ಯಂದನವನೇರ್ದನಿಲಸಂಭೂತಗಿದಿರಾಗಿ |
ಸಂಧಿಸಿದ ಭೂವ್ಯೋಮ ಮಂಡಲಗಳಿಲ್ಲೆಂಬ ಮಾಳ್ಕೆಯೊಳ್ಕಣೆಗರೆಯುತೆ || ೨೩ ||



ಆದುದದ್ಭುತ ಸುರಾಸುರಯುದ್ಧಮಾನೆಲದೊ |
ಳಾದುದತಿ ಘೋರಭೀಕರ ರಣಾಂಗಣಮಸುರ |
ಕಾದಿದಂ ನಮುಚಿಜಂಭಾಸುರಾದಿಗಳಿಂಗೆ ನಾಲ್ವಡಿಯೆನಲ್ಕೆ ಧುರದೆ ||
ಭೇದನಂಗೈವರೊಳಪೊಗಲು ಸೂಚಿಸಪಾಯ್ತು |
ಹಾದಿ ಪವಮಾನಜಗೆ ಶತ್ರುನಿಗ್ರಹಚಿಂತೆ |
ಯಾದುದರೆನಿಮಿಷ ಗಗನಾಂಗಣದಿ ರೋಷದಿಂ ನಿಟ್ಟಿಸಿದನಾ ದೈತ್ಯನಾ || ೨೪ ||

ಅನಿತರೊಳಗುತ್ಸಾಹ ಪೆರ್ಚಿಬರೆ ಮಾನಸಕೆ |
ಹನುಮನತಿವೇಗದಿಂ ಸಾಲ್ವನಂದದೊಳೆರಗಿ |
ಹನನಗೈದಂ ರಥವನಸುರಪಡಿ ರಥದಿಂದಮಾತೇರನುಂ ಖಂಡಿಸೆ ||
ಘನವಿಕ್ರಮಂ ಪುನಃಸ್ಯಂದನದೊಳೈತರಲು |
ಕಿನಿಸಿಂದಮದ ಮುರಿವುತೀ ಪರಿಯಲುಡಿದ ರಥ |
ಮಿನಿಸೆಂದು ಲೆಕ್ಕಿಸುವರಳವಲ್ಲವಾದುದಾ ಕೊಳುಗುಳದೊಳೇನೆಂಬೆನು || ೨೫ ||

ತೇರುಳಿದು ಬಿಲ್ಗೊಂಡು ಶರಗಳಿಂದಿಡಲಸುರ |
ಭಾರಿಯ ಧನುರ್ಭಗ್ನಮಾಗೆ ಗದೆಯಂ ಕೊಂಡು |
ಸೂರಿಯನ ಮುಂದೇಹದಾನವರ್ತರುಬುವಂತತಿ ಕೋಪದಿಂ ಪೊಡೆಯಲು ||
ಕ್ರೂರ ದಾನವ ಗದಾಹತಿಯಿಂದ ಡೆಂಡಣಿಸಿ |
ಮಾರುತಾತ್ಮಜನಾಗಸವನಡರಿ ಚರಿಸಿದಂ |
ಚಾರಣರ ಪಥದಿ ಭೂತಳವನಾರೈವುತ್ತ ರೋಷತಾಮ್ರಾಕ್ಷನಾಗಿ || ೨೬ ||

ಪರಿಪರಿಯುಪಾಯಗಳ ನೆರಹಿದರು ರಕ್ಕಸಂ |
ಧುರದಿ ವಶಮಾಗದಿರೆ ಮಾರುತಿಯು ಕೋಪದಿಂ |
ಬರಸಿಡಿಲು ಗಿರಿಶಿಖರಕೆರಗುವಂದದಿ ನಭಸ್ಥಳದಿಂದಮಕ್ಷ ನೆಡೆಗೆ ||
ಭರದಿಂದಮೆರಗಿ ಪದಗಳಲೆರಗಿ ಬಾನೆಡೆಗೆ |
ತ್ವರಿತದಿಂ ನಡೆದು ನಖದಿಂ ಬಗಿದು ರೋಷದಿಂ |
ತಿರುಹಿ ತಿರೆಗಿಟ್ಟು ಮೆಟ್ಟಿದ ಚೂರ್ಣಮಪ್ಪಂತದೇಂ ಪೇಳ್ವೆನದ್ಭುತವನು || ೨೭ ||

ಪದದಿಂದಮೊರಸುತಕ್ಷನ ಸಮಾಪ್ತಿಂಗೈದು |
ಕದನದೊಳು ಮಾರಾಂತ ರಕ್ಕಸರ ಯೋಧರಂ |
ಸದೆದು ಕರಿಹಯರಥಂ ಕಾಲಾಳು ಮೇಲಾಳುಗಳ ಸೀಳ್ದುಬಿಸುಟು ಬೇಗ ||
ಬೆದರಿಸಿದನಾ ನಗರಿಯಂ ಕಲ್ಪರುದ್ರನೊಲು |
ಬೆದರಿದುದು ನೆರೆದ ಸುಮನಸರ ಜಂಗುಳಿ ಮಹಾ |
ಕದನದಾಟೋಪಮಂ ನಿಟ್ಟಿಸುವರಳವಲ್ಲಮತಿಘೋರ ಭೀಕರವನು || ೨೮ ||

ಬಲಸಮಗ್ರಂ ಮಡಿಯಲೊರ್ವರಿಲ್ಲದ ತೆರದಿ |
ಗೆಲುಮೆಯಿಂ ಪವನಸುತನುದಯಸ್ಥ ರವಿಯಂತೆ |
ನಲವಿಂದ ತೋರಣದಿ ಕುಳ್ಳಿರ್ದು ನಾಲ್ದೆಸೆಯ ನೋಡಿದಂ ಕೋಪದಿಂದೆ ||
ಕಲಿದೈತ್ಯನಂದನಂ ಮಡಿಯೆ ಗ್ರಾಮದೊಳುಳ್ಳ |
ಬಲಮೆಲ್ಲ ಬೆದರಿ ಕಂಗೆಟ್ಟು ಕಾತರವಟ್ಟು |
ಪಲುಬುತ್ತಮೈತಂದರಸುರೇಶನೆಸೆದಿರ್ಪ ವೋಲಗದ ಶಾಲೆಗಾಗ || ೨೯ ||

ಬಂದು ಭಯದಿಂದ ಸುರಪತಿಗೆರಗಿ ರಕ್ಕಸರ |
ವೃಂದ ಬಿನ್ನಪಗೈದುದೆಲೆ ದೇವ ಪೋದುದಾ |
ನಂದನಂ ಚೈತ್ರಪ್ರಾಸಾದ ಭೂಸಮನಾಯ್ತು ವನಪಾಲರುಂ ಮಡಿದರು ||
ಸಂದುಹೋದರು ಕಿಂಕರಾಶೀತಿಸಾಹಸ್ರ |
ಬಂಧುರದ ಬಲಿ ಪ್ರಹಸ್ತಾತ್ಮಜಂ ಹತನಾದ |
ನಿಂದೆ ಸೇನಾಪತಿಗಳೈವರುಂ ಮಡಿದರಾ ಮಂತ್ರಿಸುತರೇಳ್ವರಳಿದು || ೩೦ ||
ಅತುಲಬಲದಿಂ ಪೋಗಿ ವಿತತ ಧುರದೊಳು ಮಡಿದ |
ಶತಮುಖ ಪ್ರಮುಖ ಜಿತನಕ್ಷನಾದದ್ಭುತವ |
ತುತಿಸಲೆಂತಳವಹುದು ಕಪಿರೂಪನಾಂತ ಹರಹರಿವಿರಿಂಚಿಗಳಲ್ಲದೆ ||
ಕ್ಷಿತಿಯೊಳೀಪರಿಯ ವೀರರ ಕಂಡುದುಂಟೆ ಭೂ |
ಪತಿ ವಿಚಾರಿಸದಿರಲು ನಗರ ಜಲರಾಶಿಯೊಳು |
ಮತಿಯುಳಿದು ಮುಳುಗದಿರದೆನ್ನುತ್ತ ದೂರಿದರು ಪುರನಿವಾಸಿಗಳೆಲ್ಲರು || ೩೧ ||
ಬಗೆದನೇ ದೈತ್ಯಬಲ ಬಲವನರೆನಿಮಿಷದೊಳು |
ಮಿಗೆ ಲೀಲೆಯಿಂ ಸೀಳ್ದು ಮಗುಳೆಂದಿನಂದದಿಂ |
ನಗುತ ತೋರಣವೇರ್ದು ಕುಳ್ಳಿರ್ದು ಸುಗ್ರೀವ ಸೌಮಿತ್ರಿ ರಘುವೀರನ ||
ಬಗೆ ಬಗೆಯ ವಿಕ್ರಮಗಳಂ ಪೊಗಳುತಿರ್ಪನವ |
ಯುಗದಂತ್ಯದೊಳ್ ಜನಿಪ ಕಾಲನಲ್ಲದೆ ಕಪಿಯ |
ಬಗೆಯೆನ್ನಕೂಡದೆಲೆದೇವ ಭಯದಿಂ ಮುಕ್ತರೆನೆ ಸುಳಿದ ದಾನವರನು || ೩೨ ||
ಪೋದುದಿಂದಿಗೆ ಬಲಚತುರ್ಭಾಗದೊಳಗೊಂದು |
ಮೇದುರದ ವಿಕ್ರಮಂ ಪೆರ್ಚಿಬರುತಿರೆ ಪ್ಲವಗ |
ಯೋಧಪಂ ಕಾಳಗಕೆ ಬರುವ ವೀರರನಿದಿರನೋಡುತಿಹನತಿಕೋಪದಿ ||
ಈ ಧರಾಧರವ ಕಿಳ್ತಿತ್ತಿಕೊಂಡೊಯ್ವನವ |
ಭೇದಿಸುವ ದೈತ್ಯ ಸಂಕುಲಕೆ ಕಾಲಾಗ್ನಿಯಂ |
ತಾದನೆಂದರಿದು ಬೇಗದಿ ನಗರಮಂ ಸಲಹು ದೈತ್ಯೇಂದ್ರ ಚಿಚ್ಚರದೊಳು || ೩೩ ||
ನಡುಗುತಿದೆ ಯೋಧರುಗ್ಗಡ ಪಡೆಯ ಹಾದಿಯಂ |
ಪಿಡಿವುದಲ್ಲದೆ ಯುದ್ಧರಂಗದೊಳು ಮಾರ್ಮಲೆತು |
ತುಡುಕುವರ ಕಾಣೆನಭಯವನೀವ ಶೌರ್ಯಯುತರಂ ಕೇಳ್ದುದಿಲ್ಲ ಜಗದೆ ||
ಒಡೆಯ ನೀಂ ಕರುಣದಿಂ ಪಾಲಿಪುದು ಸಂತತಿಯ |
ಕಡುಭೀತಿಯಂ ಬಿಡಿಸಿ ಕಲಹಿಪ ಪ್ಲವಂಗಮನ |
ಪಿಡಿಯಲಿಚ್ಛೈಸೆನುತಮುಖಿಲ ಜನರುಂ ಪೇಳ್ದರಾ ಪಂಕ್ತಿಕಂಠನಿಂಗೆ || ೩೪ ||
ಭೀಮಾಟ್ಟಹಾಸದಿಂದೆಸೆವ ಕಪಿಚಕ್ರೇಶ |
ನಾ ಮಹಾಶೌರ್ಯಮಂ ಲಾಲಿಸುತ ಸಂವರ್ತ |
ಕಾಮಹರನಂದದಿಂ ಕಂಗಳೊಳ್ಕಿಡಿಗಳಂ ಕರೆಯುತ್ತ ದಶಮೌಳಿಯು ||
ಧೀಮಂತನಂಗೈದು ದಿವಿಜದಲ್ಲಣನ ಸು |
ತ್ರಾಮವೈರಿಯ ನೋಡಿ ಪ್ರೀತಿಯಿಂ ಕರೆದೆಂದ |
ರಾಮಪುರದರಸನನುಚರನ ಪಿಡಿತಹುದೆನುತ ಕಿಡಿಯಿಡುವ ಕೋಪದಿಂದ || ೩೫ ||

**ಹದಿನೈದನೆಯ ಸಂಧಿ ಸಮಾಪ್ತಂ**

---

## ಹದಿನಾರನೆಯ ಸಂಧಿ

ಸೂಚನೆ || ಸರಸಿಜಾಸನನಿತ್ತ ವರವ ಮನ್ನಣೆಗೈದು |
ದುರುಳರಕ್ಕಸರೊಡನೆ ಪ್ರಾಕೃತೋಪಮನೆನಿಸಿ |
ತ್ವರಿತದಿಂದೈತಂದು ದಶಶಿರನ ಸಭೆಯೊಳಾರಾಜಿಸಿದ ಕಪಿವೀರನು ||

ಸಮರ ದುರ್ಜಯನಕ್ಷನಳಿದ ವಾರ್ತೆಯ ಕಪಿ |
ಭ್ರಮಣೆಯಾರ್ಭಟೆಯನೆಲ್ಲವ ನಾಗರರ್ತಿಳುಪ |
ಲಮರವೈರಿಯು ಕೋಪದಿಂದ ಭೋರ್ಮೊರೆವುತ್ತಮಿಂದ್ರಜಿತುವನ್ನು ನೋಡಿ ||
ವಿಮಲಸಾಂತ್ವನಪೂರ್ವವಾಣಿಯಿಂದಂ ಕರೆದು |
ಕ್ರಮವ ವಿಸ್ತರಿಸಿ ಮುಂದಪ್ಪ ಕಾರ್ಯಾಂತರದ |
ಸಮತೆಯಂ ಪೇಳಲನುಗೈದ ಪ್ಲವಗಾಧಿಪನ ಪಿಡಿವಡೆ ನಗೇಂದ್ರಜಾತೆ || ೧ ||

ನೀನಸ್ತ್ರಶಸ್ತ್ರವಿಧಸಂತತಿಯೊಳಗ್ರಭವ |
ನೀನಮರರಸುರಕುಲ ಮರ್ದನ ಮಹಾವೀರ |
ಸೂನಾಸ್ತ್ರ ಜನಕನಗಜಾರಮಣಕಮಲಭವ ಮುಖ್ಯ ವಿಕ್ರಮಿಗಳೆಡೆಯ ||
ಆನಂದನುತಿಪಾತ್ರ ನಿಜತಪೋಬಲದಿ ಸ |
ನ್ಮಾನಗೊಳಿಸುತ ಕಮಲಭವನಿಂದ ಶರಮಾಂತ |
ಭಾನುತೇಜೋನಿಧಿ ಕುಮಾರ ಮಸ್ತಕಮಣಿಯೆ ಬಾರೆಂದು ಕರೆದನಾಗ || ೨ ||

ಧುರದೊಳು ಸುರಾಸುರರ ನೆರವಿಯಮರೇಂದ್ರನಂ |
ಮರೆಗೊಂಡು ಬಂದು ನಿನ್ನಿದಿರಿನೊಳ್ ನಿರ್ವಹಿಸ |
ಲರಿದು ದಯದಿಂದೊರ್ವರಂ ಸಲಹೆ ಚತುರದಶ ಭುವನದೊಳು ನೋಳ್ಪರಿಲ್ಲ ||
ಪರಿಪರಿಯ ಮಾಯೋಪವಿಕ್ರಮೋಪಕ್ರಮಗ |
ಳಿರವಖಿಲದೇಶಕಾಲವಿಭಾಗ ಸಂತತಿಗ |
ಳರಿತ ವಿಶ್ವೈಕವೀರನೆನುತ್ತಮುಸಿರುವೆಂ ತಿಳಿದೆಸಗು ಕಜ್ಜಗಳನು || ೩ ||

ನಿನಗೆ ಮಾರ್ಮಲೆವ ಸಂಗರಮಿಲ್ಲ ನಿನ್ನಸ್ತ್ರ |
ದನುವ ನಿಟ್ಟಿಸುವ ವಿಕ್ರಮರಿಲ್ಲ ಬಂಡಣದೆ |
ಮಿನುಗುವಾ ಪರಿಯತಿಳಿದವರಿಲ್ಲಮಿದುಸಿದ್ಧಮಸಮ ತಪದಿಂ ಧೈರ್ಯದೆ ||
ಯೆನಗೆ ಸಮ ಪೈನಾಕಪಾಣಿಯಾದರು ಧುರದಿ |
ನಿನಗಿದಿರು ಬರ್ಪರುಂಟೇ ತಾತ ನೀನಿರ್ದು |
ಜನಿತಮಾದದ್ಭುತವನಾಲಿಪುದು ಹುಲುಕಪಿಯ ದೆಸೆಯಿಂದಮಿಾ ನಗರದೆ || ೪ ||

ವೀರಕಿಂಕರರೆಲ್ಲಮಡಿದರು ಪ್ರಹಸ್ತಸುತ |
ರಾರುಭಟೆ ಶಮೆಯಾಯ್ತು ಮಂತ್ರಿಸುತರೇಳ್ವರುಂ |
ಧಾರಿಣಿಯೊಳುಂ ಕೆಡೆದರಲ್ತೆ ಸೇನಾನಿಗಳ ಕುರುಹಿಲ್ಲದಾಯ್ತು ಬಲದ ||
ಭಾರಣೆಯು ಕುಗ್ಗಿದುದು ಸಾರ ನೀನೊರ್ವ ವಿ |
ಸ್ತಾರ ವಿಕ್ರಮನಿರ್ಪೆಯಲ್ಲದಿತರರ ಶಕ್ತಿ |
ತೋರದೆನ್ನಯ ಮನಕೆ ತನಯ ಕೇಳ್ಕಾರ್ಯ ಸಂಸ್ಥಿತಿಗಳಭಿವರ್ಣಿಸುವೆನು || ೫ ||

ಬಲದಾಢ್ಯತೆಗಳಿಂದ ಚ್ಯುತನೆನಿಸನಮರೇಂದ್ರ |
ಕುಲಿಶ ಸಾರಾಯುಧಗಳಿಂದಲುಂ ಕ್ಷತನೆನಿಸ |
ನಲಘು ಗಮನದಿ ಪಿಡಿಯಲಪ್ಪಳಿಸಲುಂ ಸಿಲ್ಕನಪ ಮಹಾಬಲಕಲ್ಪನು ||
ಬಲೆಗಳಿಂ ವಶನಾಗನಗ್ನಿ ದೇಶೀಯನತಿ |
ಬಲಿಯೆನುತಮೆಚ್ಚುತ್ತ ಭವದಾತ್ಮರಕ್ಷಣೆಯ |
ನೊಲಿದು ಪ್ರಥಮದೊಳೆಸಗಿ ಮುಂದಪ್ಪ ಕಜ್ಜಗಳ ಕಾಣ್ಬುದುತ್ಸವದಿ ತನಯ || ೬ ||

ತಿಳಿದಾತ್ಮಬಲ ಶತ್ರುಬಲಗಳೆರಡಂ ಚಿತ್ತ |
ದೊಳಗಾತ್ಮರಕ್ಷಣೆಯ ರಿಪುಹನನ ಚಾತುರ್ಯ |
ಗಳನು ಯೋಚಿಸಿ ಸ್ವಕಾಯಾವಿರೋಧಮೆನಲ್ಕೆ ಸಾಧಿಸುವಯೋಗ್ಯನೆನುತ ||
ಕಳುಪುವೆನು ಕ್ಷತ್ರಮತವಿಡಿದು ಕಾರ್ಯಾಂಶಗಳ|
ಫಳಿಲನೆಚ್ಚರುದಳೆದು ಶತ್ರು ವಶಮಪ್ಪಂತೆ |
ಕೊಳುಗುಳವ ಜಯಿಸೆಂದು ಪೇಳುತ್ತ ಬೀಳ್ಕೊಟ್ಟನಿಂದ್ರಾರಿಯಂ ಪ್ರೇಮದಿ || ೭ ||

ತಾತನಾಜ್ಞೆಯ ಶಿರದೊಳಾಂತಸುರವಲ್ಲಭನ |
ಜಾತನತಿವೇಗದಿಂ ಬಲವಂದು ಪೊರಮಟ್ಟು |
ಜಾತಸಂಭ್ರಮದಿಂದಮಾತ್ಯರಪ್ಪಣೆವಿಡಿದು ಪಿರಿಯರಿಂ ನೇಮವಿಡಿದು |
ಯಾತುಧಾನರ ಬಲವನೊಡಗೊಂಡು ಕೊಳುಗುಳದ |
ಕಾತುರದೆ ಸಂತಸಂಗೊಳುತಮಮರೇಂದ್ರಜಿತು |
ವಾತವೇಗದ [1]ತುರಗಯುತರಥವನೇರಿದಂ ಕಲ್ಪಾಂತರುದ್ರನಂತೆ || ೮ ||

ತೇರಡರಿ ಬಲದೊಡನೆ ರಣಕುತೂಹಲನಾಗಿ |
ಸಾರಿದನಶೋಕನಂದನವ ತೋರಣದಿ ಕಪಿ |
ವೀರನೊಪ್ಪಿರೆ ನೋಡಿ ಹರುಷದಿಂ ಶರಚಾಪಗಳನಾಗ ಸೈಪಿಡುತಿರೆ ||
ಮಾರುತಿಯು ಕೇಳ್ದು ಬಲದಾರ್ಭಟೆಯ ಮನದೊಳಗೆ |
ತೋರ ಹರ್ಷದಿ ವಾಲಧಿಯ ಕೊಡಪಿ ನಗುತ ಮಾ |
ದಾರಾಟ್ಟಹಾಸಮನ್ನೆಸಗಿ ನೋಡುತಮಿರ್ದನಸುರಪಡೆ ಬರ್ಪ ಪರಿಯ || ೯ ||

ಗಗನಮೇಂ ಪೆತ್ತುದೋ ಜಗತಿಯೇಂ ಬೆಸಲಾಯ್ತೊ |
ಪಗಲದೇಂ ಮಾಲಿನ್ಯರೂಪನಾಂತುದೊ ಯೆನುತ |
ಬಗೆಯೊಳೂಹಿಸದಂತೆ ದಿಕ್ಕುಗಳನಾಪಹಿಸಿ ಪ್ರಬಲ ಬಲ ಬರುತಿರಲ್ಕೆ ||
ಮಿಗೆಕತ್ತಲಾವಹಿಸಿ ಸರ್ವಾಂಧತೆಯ ವಹಿಸೆ |
ಗಗನದೊಳು ದೇವಗಂಧರ್ವರಿಷಿ ಸಂತತಿಗ |
ಳೊಗುಮಿಗೆಯ ಭಯದಿಂದ ನಾಲ್ದೆಸೆಗೆ ಜಾರುತಿಂತೆಂದರತಿ ಚಿಂತೆಯಿಂದ || ೧೦ ||

ಅತಿಬಲಾಢ್ಯಂ ಮೇಘನಾದ ರಣಪಂಡಿತರೊ |
ಳತಿಶಯಂ ಸರ್ವಾಸ್ತ್ರವೇತ್ತ ಮಾಯಾನಿಲಯ |
ಯತನದೊಳಸಾಧ್ಯನೈತಹನೆಂದು ಕಪಿವರಗೆ ಸುಕ್ಷೇಮ ಸಂಜನಿಪುದೊ ||
ಕ್ಷಿತಿಜಾರಮಣಗೆಂತೊ ಮನದಿಷ್ಟ ಸಮನಿಸುವು |
ದತಿಶಯಮೆನುತ್ತ ಭೀತಿಯೊಳ್ಕೈದಿದರು ನೋಳ್ಪ |
ಕುತುಕದಿಂ ಕೆಲರು ಮುಗಿಲೆಡೆಯ ಮರೆಗೊಂಡಿರ್ದರಲ್ಲಲ್ಲಿ ಭಯಗೊಳ್ಳುತೆ || ೧೧ ||

1. ಭುಜಗ.



ಕಡುಗೋಪದಿಂದ ರಾವಣಿ ಮನೋವೇಗದಿಂ |
ನಡೆಸಿ ತೇರಂ ಸಮ್ಮುಖದಿ ನಿಂದು ಮಾರುತಿಯ |
ನುಡಿಸಿದಂ ಪ್ಲವಗ ನೀನಾರು ಮಗುಳೆಲ್ಲಿಂಪಮೈತಂದೆ ಮಗುಳಿಲ್ಲಿಗೆ ||
ಒಡಲ ಪೋಗಾಡಲೆಳಸಿದ ಮೂರ್ಖ ಮರಮರನ |
ತುಡುಕಿ ಪಣ್ಣಲಗಳಂ ತಿರಿದುಂಡು ಸುಖದಿಂದ |
ಕೆಡೆದಿರ್ಪುವುದುಳಿದನರ್ಥವನೇನ ಬಯಸಿದೆಲೊ ಜಾತಿಚೇಷ್ಟೆಯ ಮಾರದೆ || ೧೨ ||

ಅನುರೂಪಕಾರ್ಯಗಳನರಿಯದತಿದುರ್ಮೇಧೆ |
ಯನು ಪರಿಸಲೆಂತಪ್ಪುದಾತ್ಮ ಲಾಭಂ ಮರುಳೆ |
ಘನನಾದನಿದಿರೊಳಗೆ ಕದನದ ಪೆಸರ್ಗೊಂಬರುಂಟೆ ದೇವಾಸುರರೊಳು ||
ಘನತರದಶಕ್ತ ದುರ್ಜನದಿಂದ ಪತಿಕಾರ್ಯ |
ವನು ಕೆಡಿಸಿ ಪ್ರಾಣಮುಮುಳಿಯ ಸಂಪಾದಿಸಿಪೆ |
ವನಚರನೆ ತತ್ಫಲಗಳುಣವೇಳ್ಕುಮೆಂದೆನುತಮೆಚ್ಚ ಕೆಂಗರಿಗೋಲ್ಗಳಂ || ೧೩ ||

ಕಡಲ ತೆರೆಗಳೊ ವಿಷ್ಣುಮಾಸ್ವಾತಿ ಸಂಧಿಸಲು |
ಪೊಡೆವ ಬಿರುವಳೆಯೊ ನಿರ್ಘಾತ ಪಾತಂಗಳೇ |
ನಡಿಗಡಿಗೆ ಪೆರ್ಚುವುವೊ ಹೆರದೆಗೆಯದಂತೆ ಮುಂತೈತಪ್ಪ ಮಾರ್ಗಣಗಳ ||
ತೊಡುವ ಬಿಡುವಗ್ಗಳಿಕೆ ತಿಳಿಯದಾದುದು ನೋಳ್ಪ |
ರಡಿಗಡಿಗೆ ಬೆಚ್ಚಿ ಭ್ರಮೆಗೊಂಡು ಕೆಲಸಾರುತಿರ |
ಲುಡಿಯೆ ತಾರಕೆಗಳುಂ ಕಾದುವಂಭೋನಿಧಿಗಳೇನೆಂಬೆನದ್ಭುತವನು || ೧೪ ||

ಮರುಳಾದುದರೆನಿಮಿಷವಖಿಲಲೋಕಂ ಧರಾ |
ಧರಗಳಲ್ಲಾಡಿದುವು ಧರಣಿ ಕಂಪನಮಾಯ್ತು |
ಕರಿಗಳೆಲ್ಲವು ಬಧಿರತೆಯನಾಂತುವಾ ಚಾಪಟಂಕಾರರವಗಳಿಂದೆ ||
ಸುರಿವ ಶರವೃಷ್ಟಿಯಿಂ ರವಿಶಶಿಗಳೆಡೆಯಾಟ |
ಸುರರ ಸಂಚರಣೆಗಳ್ನಿಂದು ಮುಂಕಾದುದುರೆ |
ಸುರಪವೈರಿಯ ರಣೋತ್ಕರ್ಷ ಯಿನಿತನಿತೆನುತಮುಚ್ಚರಿಸಲಳವಪ್ಪುದೆ || ೧೫ ||

ಕದನಮುಖದೊಳಗಿಂದ್ರಜಿತು ಕ್ರೋಧಮೂರ್ಛೆಯಿಂ |
ದೊದರುತ್ತಮಮಿತಶಸ್ತ್ರಾಸ್ತ್ರಮಂ ಸುರಿಯುತಿರೆ |
ಬೆದರದಾ ಶರನಾಶನಂಗೈದು ಮರುತಸುತ ಕ್ರೋಧದಿಂದಾಡೊತ್ತುತ ||
ಬಿದುರುತಂ ಬಾಲಮಂ ಭೂತಳಕೆ ಧುಮ್ಮಿಕ್ಕಿ |
ಸದೆದು ಗಜರಥತುರಗ ಕಾಲಾಳುಗಳನ್ನೆಲ್ಲ |
ನೊದೆದೆಮನ ಸದನಕಂ ಕಳುಪುತಿರ್ದನದೇನು ಸಾಹಸಿಯೊ ಮೂಜಗದೊಳು || ೧೬ ||

ನೆರೆದ ಬಲಮಂ ಸವರಿ ಸುರರಾಜಪ್ರತಿಮಲ್ಲ |
ನಿರುವೆಡೆಗೆ ಸಂವರ್ತ ರುದ್ರ ಸುಳಿವಂದದಿಂ |
ಮೊರೆಯುತ್ತೈತಂದು ತೇರ್ಬಿಲ್ಲಂಬುಗಳ ಮುರಿದು ಮುಷ್ಟಿ ಪ್ರಹಾರಗೆಯ್ಯೆ ||
ಧುರವಿಜಯ ಸುರಪಜಿತು ರೋಷದಿಂ ಕರವೆತ್ತಿ |
ಪರಿಪರಿಯ ಪೊಡೆತಗಳಲಿರಿದು ಭಯಗೊಳಿಸುತ್ತ |
ಮರುಸುತ ನೊಳ್ದ್ವಂದ್ವಯುದ್ಧಸನ್ನದ್ಧತೆಯೊಳೆರಗಿದಂ ಸಿಡಿಲಂದದೆ || ೧೭ ||

ಬಿಗಿಬಿಗಿದು ತಳ್ಕೈಸಿ ವೇಗದಿಂ ಮುರಿದೌಂಕಿ |
ತೆಗೆದು ಭೂತಳಕೊತ್ತಿ ಬಿರುಮುಷ್ಟಿಯಿಂ ಕುತ್ತಿ |
ಬಗೆಬಗೆಯ ಮಲ್ಲಗಾಳೆಗವ ಪ್ರತಿಯಿಂದನಿಲಸುತನ ಕಂಗೆಡಿಪೆನೆನುತ ||
ಚಿಗಿದು ಚಿಗಿದಾರ್ಭಟಿಸಿ ಮಗುಳೆ ಮಗುಳಡಿಗಡಿಗೆ |
ಮಿಗೆ ಪೆರ್ಚುತಿಹ ಶಕ್ರಜಿತುವ ಕಾಣುತ ತೊಡರಿ |
ನಿಗುರಿದಂ ನಿರಿನಿಟಲು ನಿಟಲೆನುತ ಸಂಧಿಗಳು ನೆಗ್ಗುವೋಲ್ಮರುತಸುತನು || ೧೮ ||

ಪೊಡೆತಕ್ಕೆ ಪೊಡೆತ ಮಲವಿಗೆ ಮಲವು ನಿಷ್ಠುರದ |
ನುಡಿಗೆ ನುಡಿ ಕರಘಾತಗಳಿಗೆ ಕರಘಾತಂಗ |
ಳಡಿಗಡಿಗೆ ಪೆರ್ಚುತ್ತಮಂಧಕಾಸುರತ್ರಿಪುರಹರನ ಸಮರೋದ್ಧತೆಯೊಳು ||
ಬಿಡದೆ ಪೆಣಗಿದರುಭಯ ವೀರರೊರ್ವರ್ಜೈಸಿ |
ಪಿಡಿವರುಜ್ಜುಗದಿಂದಮನಿತರೊಳು ಪವನಸುತ |
ತೊಡರಿ ತಿರುಪಿಟ್ಟ ಭೂಮಿತಳಕೆ ತಾಕುವನಿತರೊಳೆದ್ದನಾ ದೈತ್ಯನು || ೧೯ ||

ಘೋರಸಮರದಿ ಮರುತಸುತನ ಮುಷ್ಟಿಗಳಿಂದ |
ತೋರಸಂಕಟಗೊಂಡು ಮೇಘನಾದಂ ಮುಂದು |
ದೋರದರೆನಿಮಿಷ ಮಾನಸದಿ ಚಿಂತಿಸುತಿರ್ದ ಸರಸಿಜಭವಾಸ್ತ್ರದಿಂದ ||
ಆರುಭಟೆ ತೀರುವುದೆನುತ್ತ ಯೋಚಿಸಿ ದೈತ್ಯ |
ವೀರ ತನ್ಮಂತ್ರಮಂ ನೆನೆದಾ ನಿಷಂಗದೊ |
ಳ್ತೋರುವಸ್ತ್ರವನು ಪೆರದೆಗೆಯಲಾದದ್ಭುತವನೆಂತೊರೆಯಲಳವಪ್ಪುದು || ೨೦ ||

ಭುಗು ಭುಗಿಲು ಭುಗಿಲೆನುತ ದಳ್ಳುರಿಯು ಮುಂಬರಿದು |
ಗಗನಾಂಗಣವನಡರೆ ರವಿಶಶಿಗಳೌನ್ನತ್ಯ |
ನಗೆಗಾಸ್ಪದಮದಾದುದಾಗ ಸಾಗರಗಳುಂ ತುಳುಕಿದುವು ಧರೆ ನಡುಗಲು ||
ಪೊಗೆಮುಸಗಿ ಜಗದಾಂಧ್ಯತೆಯ ನೆಸಗಿತಾರ್ಭಟಿಗೆ |
ದಿಗಿಲುಗೊಂಡಮರತತಿ ಬಾಯ್ಬಿಡುತಮಿರೆ ಕಂಡು |
ಮಿಗೆ ಸಂಕಟಂಗೊಂಡು ಕಮಲಭವ ತನ್ನೊಳಗೆ ತಾನೆ ಚಿಂತಿಸುತಿರ್ದನು || ೨೧ ||

ದುರುಳ ರಾವಣಿ ಮದೀಯಾಸ್ತ್ರವನ್ನೆಚ್ಚು ಬಂ |
ಧುರ ಪರಾಕ್ರಮಿ ಮರುತ್ಸುತನ ಪಿಡಿದಪನೆಂಬ |
ಭರದಿಂದ ಪೂಡುತಿಹನಾತನಿದಿರೊಳಗೆನ್ನ ಬಾಣ ಸಂಚರಿಪುದುಂಟೆ ||
ಧುರದೊಳಸ್ತ್ರಂ ತಿರುಗಿ ಬಂದುದಾದಡೆ ದೈತ್ಯ |
ತರಳನೆನ್ನಂ ಬಿಡಂ ಬನ್ನಬಡಿಸದೆ ಮಾಣ |
ಧರೆಯೊಳಪಹಾಸಕರಮೆಂತೆನುತ ಚಿಂತಿಸಿದ ಕಮಲಭವ ಭೀತಿಯಿಂದೆ || ೨೨ ||

ಆವ ಪರಿಯಿಂದಮಾಳೋಚಿಸಿದರದಕೊಂದು |
ತಾಪೆನಿಸದಾಯ್ತು ಮತ್ತಡಿಗಡಿಗೆ ಚಿಂತಿಸುವ |
ಭಾವ ಬೆಳೆವಳಿಯಾದುದಸ್ತ್ರಮಂ ರಕ್ಕಸನಿಗಿತ್ತೆನಾದುರ್ಮೇಧೆಯಿಂ ||
ಈ ವಸುಧೆಯೊಳಗೆ ದುರ್ಯಶಮಡಸಿತನಿತರೊಳು |
ಜೀವಕುಪಹತಿಯವನ ದೆಸೆಯಿಂದಮೆನುತ ರಾ |
ಜೀವಸಂಭವ ಮುಂದುತಿಳಿಯದನುತಾಪದಿಂ ತೊಳಲಿದಂ ಮಾನಸದೊಳು || ೨೩ ||



ಚಿಂತೆಯಿಂ ತೀರದಿದು ಪವನಾತ್ಮಜನ ಸಮುಖ |
ಕೆಂತಾದರೆಯು ಪೋಗಿ ತಿಳುಪಲೀಪರಿಗಳಂ |
ಸ್ವಾಂತರಂಗಕೆ ತಂದು ಮದ್ವಚನ ಮನ್ನಿಸುವ ಸರ್ವಜ್ಞನಲ್ತೆಯೆನುತ ||
ಸಂತಸದಲಾತಿರಸ್ಕರಿಣಿಯಂ ಬಾಗರೆವು |
ತಂತರಂಗದಿ ಮರುತ್ಸುತನೊಡನೆ ವೃತ್ತಾಂತ |
ದಂತರಾಂತರಗಳಂ ಬಿತ್ತರಿಸಿದಂ ಸರಸಿಜೋದ್ಭವಂ ಪ್ರೀತಿಯಿಂದೆ || ೨೪ ||

ದೇವತಾಸಮುದಯಕೆ ಪೂಜ್ಯ ಪಿರಿಯನೆನುತ್ತ |
ಭಾವಿಸುತ ಮಾಡಿದುದು ದಿಟಮೆನಿಸಿ ಸರ್ವಜನ |
ರೀ ವಿಧದಿ ಪೋಷಿಸುತ ಬರ್ಪಂತೆ ಕಮಲಾಕ್ಷನಾಜ್ಞೆಯಾಗಿರ್ದ ಕತದಿ ||
ಆವನಾದರು ತಪದೆ ಮೆಚ್ಚಿಸಲು ಬೇಡಿದುದ |
ನೀವೆನೆಂಬೀವಾರ್ತೆ ಪಸರಿಸಲು ಕಷ್ಟದಿಂ |
ರಾವಣಿಯು ಶರಮೊಂದ ಯಾಚಿಸಿದರಿತ್ತೆನಾಂ ದೇವರ್ಕಳೆಡೆಯೊಳಂದು || ೨೫ ||

ಶರವಮೋಘಂ ದೈತ್ಯಗುರುವಿನುಪದೇಶದಿಂ |
ದುರುಳದನುಜಂ ವಿಕಾಸಂಗೈದು ತ್ರಿದಿವಮಂ |
ಧರಣಿ ಪಾತಾಳಂಗಳಂ ಜೈಸಿ ಬಾಹುಬಲವಿಕ್ರಮವ ಪಸರಿಸುತ್ತಂ ||
ಖರತರೋಷ್ಣತೆಯಿಂದಮಿದಿರಿಲ್ಲವೆಂಬ ಬಂ |
ಧುರ ಗರ್ವದಿಂದ ವಿಶ್ವೈಕವೀರನೆನುತ್ತ |
ಚರಿಸುತಿಹನವ ಮಾಳ್ಪ ದುಷ್ಕೃತಿಯನೆಂತೆಂದು ವಾಚಿಸುವರಳವಪ್ಪುದು || ೨೬ ||

ಉತ್ತಮ ಪರಾಕ್ರಮಿಯೆನುತ್ತರಿದು ದಶಕಂಠ |
ನೊತ್ತರದ ಬಲದೊಡನೆ ಕಳುಪಲೀ ದುರ್ಮಾರ್ಗಿ |
ಬಿತ್ತರದ ಸಮರದೊಳ್ನಿಲಲರಿಯದಳ್ಕುತಂ ಶರವನವಲಂಬಿಸಿದನು ||
ಮತ್ತಮೋಘದ ಬಾಣ ಮೂಲೋಕಕಂ ಬಾಧೆ |
ಯಿತ್ತಪುದು ನಿಜಸತ್ವ ಮುಳ್ಳನಿತರೊಳಗೆ ನಿ |
ನ್ನೊತ್ತಿಗೈತರೆ ಸ್ವಪ್ರಭಾವ ಶಾಂತಿಯನ್ನೈದಿ ನಿರ್ವಿಣ್ಣತೆಯಲಿಪ್ಪುದು || ೨೭ ||

ಚತುರದಶ ಭುವನದೊಳಗುಳ್ಳಸ್ತ್ರಶಸ್ತ್ರಂಗ |
ಳತುಳತೀಕ್ಷ್ಣತೆ ಭವದ್ವಸು ಸಂಗದಿಂದಲು |
ನ್ನತವ ಪಡೆಯದೆ ದಿವಾಕರ ಶೋಭೆಯಿಂ ತಿರೋಹಿತವಿಧುಪ್ರಭೆಯೊಳಿಹವು ||
ಕ್ಷಿತಿಯೊಳಗೆ ವಿಧಿಯಸ್ತ್ರ ಮೋಘಮಾದುದೆನುತ್ತ |
ವಿತತ ಮಾದಪಯಶಸ್ಸನುವರ್ತಿಸುವುದು ಸಂ |
ತತಮಿದಂ ಮನ್ನಿಸುವುದುಚಿತಮಾಗಿದೆ ತಿಳಿದು ನೋಡು ಕೇಶಾಗ್ರಗಣ್ಯ || ೨೮ ||

ಅಂಗೀಕರಿಸಲಸ್ತ್ರದಿಂದ ಬಾಧೆಗಳು ಭವ |
ದಂಗಕಿಲ್ಲಮೆನುತ್ತ ಲೋಕವಿಖ್ಯಾತ ಕಪಿ |
ಪುಂಗವನೆ ಮದ್ವಚನ ಮನ್ನಿಸಿದ ಕೀರ್ತಿ ನಿನಗೊದಗುವುದು ಪೂರ್ವದೊಳಗೆ ||
ಸಂಗಡಿತಮಾದ ಮುನಿವರನ ವಾಕ್ಯವ ಸಲಿಸಿ |
ಹಿಂಗುವುದು ಪೂಜಾನುಮತವಲ್ಲ ಕೋಪದು |
ತ್ತುಂಗತೆಯೊಳೊಪ್ಪದಿರಲಪ್ಪುದೇ ದೇವತಾಸಭೆಗೆ ಮುಮ್ಮಳಿ ತಪ್ಪದು || ೨೯ ||

ಮುನಿಯ ಶಾಪವ ಸ್ಮರಿಸಿ ಮದ್ವಚನ ಮನ್ನಿಸಲು |
ನಿನಗಪ್ಪುದತಿಶಯದ ಜಸಮೆಂದು ಬಹುವಿಧದಿ |
ವನಜಪೀಠಂ ಪ್ರಾರ್ಥನಂಗೆಯ್ಯೆ ಮರುತಾತ್ಮಭವ ತನ್ನ ಚಿತ್ತದೊಳಗೆ ||
ನೆನೆದು ಮುಂತಪ್ಪ ಕಾರ್ಯಂಗಳಂ ಕಮಲಜನ |
ಮನಕೆ ಹರ್ಷವನೀವೆನೆನುತ ಸಮ್ಮತಗೊಂಡು |
ಹನುಮ ಬೀಳ್ಕೊಟ್ಟ ಪರಮೇಷ್ಠಿಯಂ ತ್ರಿದಶಕುಲಮೆಲ್ಲ ಸಂಭ್ರಮದಿ ನಲಿಯೆ || ೩೦ ||

ಸೂರಾನ್ವವಾಯನ ಕಟಾಕ್ಷ ಬಲದಿಂದೆನಗೆ |
ಸಾರಸಾಸನ ಶಿಳೀಮುಖದಿಂದಮೇಂ ಬಾಧೆ |
ತೋರಲರಿದೆಂದು ಸಂತಸದಲಿಪ್ಪನಿತರೊಳು ಮೇಘನಾದಂ ರೋಷದಿ ||
ಭಾರಣೆಯ ಶರವನಭಿಮಂತ್ರಿಸುತ ಬಿಡಲುರಿಯ |
ಕಾರುತಂ ಕೆಂಗಿಡಿಗಳುಗುಳುತಂ ಭೂತ ಸಂ |
ಚಾರಮಂ ನಿಲಿಸಿದುದು ಬ್ರಹ್ಮಾಸ್ತ್ರ ಮಹಿಮೆಗಳ ಪೇಳಲೆಂತಳವಪ್ಪುದು || ೩೧ ||

ಅಸುರಪಡೆ ಬೊಬ್ಬಿಟ್ಟುದಾಗ ದುಂದುಭಿಯ ರವ |
ಪಸರಿಸಿತು ವೀರಾಟ್ಟಹಾಸಂಗಳೆಡೆಗೆಡೆಗೆ |
ವಸುರಾಯ ಕಳೆಗುಂದಿ ಕಂಗೆಡಲ್ದೇವಸಭೆ ತಲ್ಲಣಂಗೊಂಡು ನಡುಗೆ ||
ಬಿಸಜಭವನಲಗು ಮೂಲೋಕಮಂ ಬೆದರಿಸುತ |
ಬಿಸಿಯನುಗುಳುತ ಬಂದು ಮಾರುತಿಯ ಕಾಣುತ್ತ |
ಬಸವಳಿದು ನಿಂದುದೆಡೆಯಾಡದಂತೊಪ್ಪಿದುದದೇನೆಂಬೆನಚ್ಚರಿಯನು || ೩೨ ||

ಮುಂದಡಿಯ ಬಿಟ್ಟು ಮೊರವಂ ಬಿಟ್ಟು ಮಧ್ಯದೊ |
ಳ್ನಿಂದಿರ್ಪ ಬಾಣಮಂ ಕಂಡಸುರನತಿಚೋದ್ಯ |
ದಿಂದ ನಿಟ್ಟಿಸುತಿರಲು ನೆರೆದ ಸುರವೃಂದಮತಿ ಮಂದವಿಕ್ರಮರಾದರು ||
ಬಂದುದೇನದ್ಭುತಮೆನುತ್ತಖಿಲಭೂತಗಳು |
ಸಂದೆಗದೊಳಿರಲಲುಗದಾ ಶರಂ ಮಧ್ಯದೊಳು |
ನಿಂದಿರ್ದುದಾ ಧರಾಂಬರಕಿಟ್ಟ ಕೀಲದೆಂಬಂತದೇಂ ಬಣ್ಣಿಸುವೆನು || ೩೩ ||

ನಿಲೆ ಸರಸಿಜೋದ್ಭವಕಳಂಬ ಕಾಣುತ ದೈತ್ಯ |
ಬಲವೆಲ್ಲ ಭೀತಿಯಿಂ ನಡುಗುತಿರೆ ದೇವಸಂ |
ಕುಲಮೆಲ್ಲ ಬೆರಗಾಗೆ ಬೇಡಿಕೊಳಲಂಜನಾಸುತನ ಪರಿಪರಿಗಳಿಂದ ||
ಜಲಜಪೀಠಂ ನಿರೂಪಿಸಿದರ್ಥಮಂ ಮಹಾ |
ಬಲತನಯ ನೆನೆದು ಬಾಗರೆದನಸ್ತ್ರವ ಸಾಧು |
ನಿಲಯನಾರ್ತಿವಿನಾಶನೆಂಬ ಬಿರುದಂ ಮೆರೆಯಲಾನಂದದುದ್ರೇಕದೆ || ೩೪ ||

ಸರಸಿಜಭವಾಸ್ತ್ರ ಬಾಗರೆಯಲ್ಕೈತಂದು ಮುಂ |
ಬರಿದು ತುಡುಕಿದುದು ಮಾರುತಿಯ ಮುನಿಶಾಪ ಬಂ |
ಧುರಶಿಳೀಮುಖರೂಪನಾಂತು ಬಂದಡಸಿದುದೊ ಭೂತಳದೊಳೆಂಬಂದದಿ ||
ಧರಣೀಸುರರ ನುಡಿಯು ಪುಸಿಯಹುದೆ ದೇವತಾ |
ಗುರು ನಿರೂಪಿಸಿದರ್ಥ ಸ್ವಾರ್ಥಮೆನಿಸದೆ ಜಗ
ದ್ಭರಿತವಿಕ್ರಮ ಸುವಿಕ್ರಮ ವಿಪ್ರವಾಣಿಯಂ ಸಲಿಸಲ್ಕೆ ಮೈಗೊಟ್ಟನು || ೩೫ ||



ಸ್ವಾಮಿ ಕಾರ್ಯಕೆ ಹಿತವ ಚಿಂತಿಸಿ ಚತುರ್ಮುಖನ |
ನೇಮಮಂ ಸಲಿಸಿ ದ್ವಿಜಸಂತತಿಯವಾಣಿ ನಿ |
ಸ್ಸೀಮಮೆಂದೆನಿಸುವಡೆ ಬ್ರಹ್ಮಾಸ್ತ್ರಮಂ ಕರೆದು ಸರ್ವಜನಸಂತಸವನು ||
ಪ್ರೇಮದಿಂ ಮಾಡ್ದನಲ್ಲದೆ ಶಸ್ತ್ರ ಹತಿಗಳಿಂ |
ದಾ ಮಹಾಪುರುಷಗೆತ್ತಣದು ಬಂದಸ್ತ್ರಮುಂ |
ಸಾಮದಿಂ ವಿಪ್ರವಚನವ ಸಾರ್ಥಕಂಗೈದು ನಡೆದುದಾ ಬೊಮ್ಮನೆಡೆಗೆ || ೩೬ ||

ಪಟುತರಾಸ್ತ್ರ ಪ್ರಬದ್ಧತೆಯಿಂದ ನಿಶ್ಚೇಷ್ಟೆ |
ಯಟನೆಯಭಿನಯಗೆಯ್ಯೆ ಕಂಡಾ ಸುರೇಂದ್ರಜಿತು |
ಚಟುಳವಿಕ್ರಮ ಪೆರ್ಚಿ ಗಹಗಹಿಸಿ ನಗುತಮಿರೆ ಕಂಡು ದಾನವರೆಲ್ಲರು ||
ನಟಸುತಂ ನಗುತ ಚಪ್ಪಳೆಗುಟ್ಟ ರಾವಣಿಯ |
ಧಟಶಿರೋಮಣಿಯೆನುತ ಪೊಗಳೆ ಶಣವಲ್ಕದಿಂ |
ಘಟನೆಗೈದಲು ಮನೋವ್ಯಥೆ ತೀರುವನ್ನಲಾ ದೈತ್ಯೇಂದ್ರನನುಯಾಯಿಗಳ್ || ೩೭ ||

ಬಂಧಿಸುತಮಿರೆ ರಜ್ಜುಗಳಲಿ ಭಯದಿಂ ಮರು |
ನ್ನಂದನನು ಕಂಗಳಂ ಮುಚ್ಚಿ ತೆರೆವುತಮಳ್ಗಿ |
ಪಿಂದೆಗೆದು ಕಿಲಕಿಲಾರವಮೆಸಗಿ ವಾಲಧಿಯನೊದರಿ ಪಲ್ಗಿರಿವುತಿರಲು ||
ಬಂದಾ ಸುರೇಂದ್ರಜಿತು ಸಿಲ್ಕಿತೀ ದುಷ್ಟಕಪಿ |
ಯಿಂದೆ ರಕ್ಕಸ ರಾಜನೆಡೆಗೆ ಕರೆದೊಯ್ದು ನಡೆ |
ತಂದ ವೃತ್ತಂಗಳಂ ಪೇಳಿಸುವುದೆನಲಸುರಪಡೆ ಬಂದು ಕವಿದುದಾಗ || ೩೮ ||

ಪೊರುವರಿಚ್ಛೈಸಿ ನಾಲ್ದೆಸೆಯ ರಕ್ಕಸರೆಲ್ಲ |
ತುರುಗಿ ಭೋರ್ಮೊರೆದು ಕರಪಾದಗಳ ಪಿಡಿದೆತ್ತಿ |
ಮೊರೆವುತೆದೆವೊಡೆದು ಭೂತಳಕುದುರಿ ಕರಪಾದಹತಿಯಿಂದ ಚೂರ್ಣಮಾಗೆ ||
ನೆರೆದ ದಾನವರ ಪಡೆಯೊರಗೆ ಕಂಡಿಂದ್ರಜಿತು |
ತರಿಸಿದಂ ಶಕಟಂಗಳದರ ಮೇಲಿಟ್ಟು ವಾ |
ನರನ ಕರೆದೊಯ್ವುದೆನಲಾಯಸದ ಶಕಟಗಳ ತಂದರು ನಿರಾಯಾಸದೆ || ೩೯ ||

ಪಿಡಿದೆತ್ತಿ ನಾಲ್ದೆಸೆಯಲಮರವೈರಿಗಳೆಲ್ಲ |
ಕಡುಗೋಪದಿಂದ ತಕ್ಕೈಸಿ ಮಂದರದಡಿಯ |
ಪುಡಿಯಾದ ಮಾಳ್ಕಿಯೊಲು ದನುಜರೆಲ್ಲರು ಮಡಿಯೆ ಮಗುಳಿಂದ್ರಜಿತು ಕೋಪದಿ ||
ಕಡೆಗಾಣದಾದುದೀ ಕಪಿಯ ಶೌರ್ಯಕೆ ದೈತ್ಯ |
ರುಡಿದು ಪೋದಪರಿದಕ್ಕೇಂಗೈವೆನೆಂದೆನುತ |
ಕಡುಚಿಂತೆಯಿಂದ ರಕ್ಕಸಯೋಧರಂ ನೆರಹಿ ನೆಗಪಲನುಗೈದರಾಗ || ೪೦ ||

ಮೇರುಮಂದರವನೆತ್ತುವ ಶಕ್ತಿಗಳನಾಂತು |
ದಾರದಾನವರೆಲ್ಲ ವಜ್ರಮೂರ್ತಿಯ ಭರಕೆ |
ಥಾರುಥಟ್ಟಾಗಿ ಧರೆಗುರುಳಿ ಶೋಣಿತಗಳಂ ಕರೆದು ಮುಖ ನಾಸಿಕಗಳ ||
ಮಾರುತನ ಬಾಧೆಯಿಂದೊರಗಲೀಕ್ಷಿಸುತಾ ಸು |
ರಾರಿ ನಿಜಚಿತ್ತದಿಂ ನೆನೆದನೀ ಮೂರ್ತಿಯನ |
ದಾರೊಯ್ವರೆಂತಪ್ಪುದೆನುತಮಾಳೋಚಿಸಿದ ತನ್ನೊಳರೆನಿಮಿಷ ಬಿಡದೆ || ೪೧ ||

ಮದಕರಿಯಹಸ್ತ ಪದದಡಿಯ ಸಿಲ್ಕಿದಮಶಕ |
ಮುದುರುವಂದದಿ ಮಹಾಭಟನ ಭಾರಣೆಯಿಂದ |
ಕದನಗಲಿಗಳು ಮಡಿಯಲಾಶಕಟ ಕೀಲುಡಿದು ಹುಡಿಯಾಗಲನಿತರೊಳಗೆ ||
ಒದಗಿ ರಥಗಳಲಿಟ್ಟರಾತೇರು ಮುರಿದುವೀ |
ಪದುಮಜಭವಾಂಡಮಂ ಪೊರುವರೆಂತಹುದು ನಿಜ |
ಮದಲಿಂಗಮಿಂದ್ರಜಿತು ಪೋದ ಭಟತೇರುಗಳನಾಕ್ಷಣದೊಳೊದಗಿಸುತಿರೆ || ೪೨ ||

ಮಿತಿಯಿಲ್ಲದಂತಾದುದೀ ಕಪಿಯ ಭಾರದಿಂ |
ಕ್ಷಿತಿಯೊಳಗೆ ಕೆಡೆದಸುರ ಸಮುದಯಂ ಕುಂದರದ |
ಜತೆಗೆ ಬಂದುವು ಮುರಿದ ರಥಮಾವ ತೇರುಗಳು ಭಾರಾವಹಗಳಾಗಲು ||
ಯತನಮೇಂಗೆಯ್ಯುವೇಳ್ಕೆನುತ ಕುಂಭಶ್ರವಣ |
ರಥವಲ್ಲದಿವಗೆ ಪಾಸಟೆಯಿಲ್ಲವೆಂದರಿದು |
ಹತಶೇಷದಾನವರನೆಲ್ಲ ಕಳುಪಿದ ಮಹಾಸ್ಯಂದನವ ತರಲು ಬೇಗ || ೪೩ ||

ಅನಿತರೊಳು ಮಾರುತಿಯು ಹೇಮಾದ್ರಿಯಂದದಿಂ |
ತನುವ ಪೆರ್ಚಿಸೆ ತನ್ನೊಳಗೆ ತಾನೆ ಚಿಂತಿಸಿದ |
ದನುಜ ಬಲದೊಡನಾಟದಿಂದಿರಲು ಕಳ್ತಲೆಯು ಸಮನಿಸಿತು ಪೊತ್ತು ಪೋಯ್ತು ||
ಎನಿತಾದರುಂ ದಶಾಸ್ಯನಪೊರೆಗೆ ಪೋದಲ್ಲ |
ದೆನಗೆ ತೀರದೆನುತ್ತಮಂತೆತ್ತಿಕೊಂಡೊಯ್ವ |
ಜನರಿಗೆ ಲಘುತ್ವದಿಂ ಮತಿಗೆ ಸಂತಸಗಳಂ ಕೊಡುತಿರ್ದನವಸರದೊಳು || ೪೪ ||

ಕಂಡು ಕುಂಭಶ್ರವಣನಾಯಸದ ತೇರಿನೊಳ |
ಗೊಂದಿಸಲು ಭರದಿಂದ ಕೆಲರು ಮಡಿದರ್ದೈತ್ಯ |
ವೃಂದದೊಳ್ಕೆಲಕೆಲರು ಕರಪದಂಗಳು ಪೋಗಿ ಬಾಧೆಯಿಂ ಕೆಡೆದಿರ್ದರು||
ಸಂದಣಿಯ ಕರದೀಪಿಕಾ ಸಹಸ್ರಗಳಿಂದ |
ಲೊಂದುಡಿಯಲೊಂದು ಮತ್ತೊಂದು ತರುಬುಗಳಿಂದ |
ಮುಂದು ಮೊಂಟುತ ಬರಲ್ತಿಳಿದು ಮಾರುತಿ ಬೆದರುವಭಿನಯವ ತೋರ್ದನಾಗ || ೪೫ ||

ಹುತವಹನಕಂಡರೀಪ್ಲವಗನಳ್ಕುವನೆನುತ |
ಮತಿಶಯದೆ ನಾಲ್ದೆಸೆಯ ಕರದೀಪಿಕಾದಿಗಳ |
ಜತೆಗೊಳಿಸುತಡಿಗಡಿಗೆ ಬೆದರಿಸುತ ಪಿಡಿದೆತ್ತಿ ಬೇಗಲಾತೇರೊಳಿಟ್ಟು ||
ಕತಿಪಯಗಜಂಗಳಂ ಕಟ್ಟಿ ಬೊಬ್ಬಿಟ್ಟರಾ |
ರಥಹತಿಗೆ ಸೈರಿಸದೆ ಭೂತಳಕೆ ಕೆಡೆಯಲ |
ಪ್ರತಿಮಬಲ ರಾವಣಿಯು ನಿಜಹಸ್ತದಿಂ ತೇರ ನಡೆಸಿದಂ ಖತಿಗೊಳ್ಳುತ || ೪೬ ||

ಪಿಡಿದಿರ್ಪ ಸನ್ನೆಗಳ ದೈತ್ಯರೆಡೆಗೆಡೆಗೆ ಬೊ |
ಬ್ಬಿಡುತ ನಡೆಸುತಮಿರಲ್ಭೇರೀಮೃದಂಗಗಳ |
ಪೊಡೆತದಿಂ ಕಿವುಡಾದುದಖಿಳಜನ ರಥ ಬರ್ಪವೀಥಿಪ್ರದೇಶಗಳಲಿ ||
ಕೆಡಪಿದಾಲಯಗಳೆನಿತೆನಿತೆನುತ ಗಣಿಸಲು |
ಗ್ಗಡಿಸಲಾರ್ಗಳವಹುದು ನಗರಮಂ ಪಾಳ್ಗೊಳಿಸ |
ಲೊಡನೆ ಬಂದಂ ಕಪೀಶ್ವರನೆನುತ ಘೋಳಿಟ್ಟುದಖಿಲಜನವಾ ಸಮಯದೆ || ೪೭ ||



ಬಲುತರಾಯಾಸದಿಂ ಬಾಧೆಗೊಳುತೀ ಕಪಿಯ |
ಬಲಿಗಳ್ಸಭಾಂತರಕೆ ತರಲು ಮುಂದೈತಂದು |
ನಲವಿಂದ ತಾತಂಗೆ ಪೊಡಮಟ್ಟು ಶಕ್ರಜಿತು ಮನ್ನಣೆಯೊಳೊಪ್ಪಿರುತಿರೆ ||
ಪಲವುವಿಧ ಕೋಟಲೆಗಳೊಳು ಮಾರುತಾತ್ಮಜನ |
ನೆಲಕಿಳುಹಿ ಪಿಡಿದೆತ್ತುತೆದೆಯೊಡೆದು ಕಷ್ಟದಿಂ |
ನಿಲಿಸಿದರು ದಶಮೌಳಿಯೆಸೆವ ಸಿಂಹಾಸನಕ್ಕಿದಿರಿನೊಳಗಚ್ಚರಿಯೆನೆ || ೪೮ ||

ಹನುಮ ನಿಟ್ಟಿಸಿದನಾ ದಶಕಂಠನಾಸ್ಥಾನ |
ದನುವ ಕೆಲಬಲದೊಳಿಹ ವಿಧಿಸುರೇಂದ್ರಾದಿಗಳ |
ಮನದೊಲವ ಪಿಡಿಯೆ ಪ್ರಾರ್ಥಿಸುವ ದಿಕ್ಪಾಲರತಿಕಾರ್ಪಣ್ಯದತಿಶಯಗಳ ||
ಕನಕಪೀಠದೊಳೆಸೆವ ಕಾಳರಕ್ಕಸನ ಸಿರಿ |
ಯನು ಕಂಡು ಬೆರಗಾಗುತೀಕ್ಷಿಸಿದನರೆನಿಮಿಷ |
ಮೆನಿತು ವೈಭವಮೆನುತ ಬಣ್ಣಿಸುವರಳವಪ್ಪುದಸುರನ ತಪೋಬಲಗಳ || ೪೯ ||

ಈ ಸುರಾಸುರರೆಲ್ಲ ಸೇವಿಸುವ ಸಂತಸಮ |
ದೀಸು ಮಣಿಕನಕಚಿತ್ರಿತ ಹಜಾರಂ ಸುರಸು |
ವಾಸಿನಿಯರೆಡಬಲದಿ ಬೀಸುತಿಹ ಚಾಮರಗಳತಿವಿಲಾಸದ ಹರ್ಷಮಂ ||
ಏಸುತಪದಿಂದ ಗಳಿಸಿದನೊ ಬುದ್ಧಿಯನೊಂದ |
ನೀಸು ರಕ್ಕಸವಿಭವಮಂ ಕಳೆವ ಹಾದಿಗಳ |
ನಾಸುರೀಕೃತ್ಯದಿಂ ನೀಗಿಕೊಳಲನುಗೈದನಕಟಕಟ ಶಿವಯೆಂದನು || ೫೦ ||

ವೀರಲಕ್ಷ್ಮೀಸಮಾಶ್ರಿತ ಬಲಾಢ್ಯತೆವೆತ್ತ |
ತೋರವಿಂಶತಿಭುಜಗಳಿಂದ ಮಣಿಮಕುಟ ಸಂ |
ಧಾರಣೆಯೊಳೊಪ್ಪುತಿಹ ಮಸ್ತಕಗಳಿಂದತಿವಿಶಾಲಶೃಂಗಗಳಿಂದಲಿ ||
ಮೇರುಗಿರಿಯಂದದಿಂದೆಸೆವ ರಕ್ಕಸರರಸ |
ಸೂರಿಯಪ್ರಭೆಯಿಂದಲಂಕಾರ ಶ್ರೀಕರದಿ |
ತೋರಿದಂ ರಕ್ತಮಾಲ್ಯಾನುಲೇಪನ ಶುಭಾಂಬರಗಳಿಂದತಿಶಯಮೆನೆ || ೫೧ ||

ಬಲಿಯ ಶಾರೀರಸಂಪದ ಮಹಾಭೋಗ ಸಂ|
ಕಲನೆಗಳ ನಿಟ್ಟಿಸುತಮತಿಹರ್ಷದಿಂ ಪವನ |
ಕುಲಪವಿತ್ರಂ ಕರುಣದಿಂದ ಮಿಂತೆಂದನೀಸಿರಿಯ ಭೋಗಿಪ ಪರಿಯನು ||
ಗಳಿಸಿಕೊಳದಲೆ ರಘೂತ್ತಮನರಸಿಯಂ ತಂದು |
ಕುಲಸಹಿತಕಾಳಪ್ಪ ಬುದ್ಧಿಯಂ ಯೋಚಿಸಿದ |
ಜಲಜಭವಲಿಖಿತಮಂ ಮೀರಲಾರ್ಗಳವಹುದು ಹರ ನಮಶ್ಶಿವಯೆಂದನು || ೫೨ ||

ಇಂತು ಕಪಿವೀರನಾಳೋಚಿಸುತಮಿರೆ ದೈತ್ಯ |
ಕಾಂತ ನಿಜಸುತನಿಂದ ತನ್ಮಹಾಮಹಿಮೆಗಳ |
ನಂತಪರಿಯಿಂ ಕೇಳ್ದು ಕುಸ್ತರಿಸಿ ನಂದನನ ಶಾಖಾಮೃಗಾಧಿಪತಿಯ ||
ಸಂತಸದಿ ನೋಡಿ ವೈಷ್ಣವತೇಜ ವಿಸ್ಮಯಾ |
ಕ್ರಾಂತಮಾನಸನಾಗಿ ಶ್ರೀರಾಮಪುರದ ಶ್ರೀ |
ಕಾಂತನಪರಾವತಾರಮೆನುತ್ತ ತಲ್ಲಣಂಗೊಂಡ ಹೃತ್ಸದನದೊಳಗೆ || ೫೩ ||

**ಹದಿನಾರನೆಯ ಸಂಧಿ ಸಮಾಪ್ತಂ**

# ಹದಿನೇಳನೆಯ ಸಂಧಿ

ಸೂಚನೆ ॥ ಇಂದ್ರಾದಿದೇವರ್ಕಳೆಲ್ಲ ಸಂಭ್ರಮುಗೊಳಲು |
ಪೇಂದ್ರ ವಿಕ್ರಮರಾಮನಂ ಪೊಗಳಿ ನಿಷ್ಠುರದ |
ಸಾಂದ್ರ ವಚನಗಳಿಂದ ದಶಶಿರನ ಧಿಕ್ಕರಿಸಿ ಜರೆದ ಪವಮಾನಸುತನು ॥

ವೀರರಸ ನೆಲದೆ ಸಾಂಗೋಂಪಾಂಗಮೆನಿಸಿ ಕಪಿ |
ವೀರನಾಕೃತಿಯಿಂದ ತೋರುವುದೊ ಬಾಣ ಕಪಿ |
ಧಾರಣಂಗೈದು ಬಂದಿಹನೊ ಕೈಲಾಸದೊಳು ಕಡುಗೋಪದಿಂ ಶಪಿಸಿದ ॥
ಕಾರಣಾತ್ಮಕ ನಂದಿ ಬಂದಿಹನೊ ಯೆನುತ ಮಾ |
ದಾರ ಚಿಂತೆಯೊಳು ದಶಕಂಧರಂ ನೋಡಿದಂ |
ಮಾರುತಿಯ ದಿವ್ಯತೇಜಃ ಪ್ರಭಾವೋನ್ನತಿಯ ಜತೆಯ ತಿಳಿಯದೆ ನಗಸುತೆ ॥ ೧ ॥

ನಿಮಿಷವಾ ಭೀಮಬಲ ಶಾಖಾಮೃಗವ ನೋಡಿ |
ಸುಮನಸಾರಿಯು ಪ್ರಹಸ್ತನ ಕರೆದು ನೇಮಿಸಿದ |
ಸಮದ ದುರ್ಮೇಥ ಕಪಿಯಿಲ್ಲಿಗೈತಂದುದೇಂ ಕಾರಣಂ ಕೇಳ್ವುದೆನಲು ॥
ಪ್ರಮುದಿತಾಂತಃಕರಣದಿಂದಾ ಪ್ರಹಸ್ತ ಮೃದು |
ವಿಮಲ ವಾಣಿಗಳಿಂದ ಬೆಸಗೊಂಡರೈತಂದ |
ಕ್ರಮುವದೇನಾರು ಕಳುಪಿದರೆಂಬುದಂ ತಿಳಿಪು ಪ್ಲವಗಾಧಿನಾಥನೊಲಿದು ॥ ೨ ॥

ಗೊರವನೇಂ ಕಳುಪಿದನೊ ಹರಿಯದೆಸೆಯಿಂದಮೇಂ |
ಬರವಾದುದೋ ಕಮಲಯೋನಿಯೈದಿಸಿದನೋ |
ಸುರಪ ಧನದಾದ್ಯಖಿಲ ದೇವತಾನಿಚಯದೊಳಗಾರು ಲಂಕಾನಗರಕೆ ॥
ಅರಿಯದಾರಟ್ಟಿರ್ಪರೆಂಬುದಂ ವಿಸ್ತರದ |
ಲೊರೆದಾತ್ಮ ರಕ್ಷಣಂಗೈದು ನಿಜಮಂದಿರ |
ಕ್ಕರುಗುವುದು ಲೇಸು ತಾಂ ಮಿಗುವುದಾಧಿಕ್ಯತರ ಕೇಳ್ ಪ್ಲವಂಗಮ ಹಿತಮಿದು ॥ ೩ ॥

ಪುಸಿಯ ಹೊದ್ದದ ನುಡಿಯನಾಡಿದಡೆ ಬಿಡಿಸಿ ನಿ |
ನ್ನಸು ರಕ್ಷಣಂಗೈವೆವಲ್ಲದಲೆ ಚಾಪಲ್ಯ |
ನುಸುಳು ಸೊಲ್ಲುಗಳಿಂದೆ ಸುಕ್ಷೇಮಕರಮಾಗಲರಿದೆನುತಮಾತ್ಯ ನುಡಿಯೆ ॥
ನಸುನಗೆಯಲಾ ದಶಾಸ್ಯನ ನೋಡಿ ಧಿಕ್ಕರಿಸಿ |
ಬೆಸಗೊಂಬ ರಕ್ಕಸನ ಗಣಿಸದಲೆ ಸ್ವೇಚ್ಛೆಯಿಂ |
ದುಸಿರಿದಂ ನಯನೀತಿಭೀತಿಪರಮಾರ್ಥಂಗಳೊಲವಾಂತ ನುಡಿಗಳಿಂದೆ ॥ ೪ ॥

ಸುರಪಶಿಖಿಯಮನಿರುತಿಮುಖ್ಯದೇವರ್ಕಳಾಂ |
ಕುರುಹರಿಯೆ ವಿಷ್ಣುವೆನ್ನಂ ಕಳುಪಲಿಲ್ಲವೀ |
ಪರಿಯೆಮ್ಮದಿದು ಸಹಜಮಲ್ಲದಲೆ ಕೃತ್ರಿಮಂ ಬೆರೆವುದಿಲ್ಲೀ ತಾಣದಿ ॥
ತರಣಿಕುಲರನ್ನ ಪಾವನ್ನ ಶ್ರೀರಾಘವನ |
ಚರನು ಸುಗ್ರೀವಸಚಿವಂ ಪವನನಂದನಂ |
ಪರಿಕಿಸಲು ಕಪಿಕುಲೋತ್ಪನ್ನ ಹನುಮಂತನೆಂಬಭಿಧಾನಮೆಂದರಿವುದು ॥ ೫ ॥



ನಗರಮತಿರಮ್ಯತರಮಾಗಿರ್ಪುದೆಂದು ಬಲು |
ಬಗೆಯಿಂದಮಖಿಲಜನರಾಡುತ್ತಮಿರಲದರ |
ಸೊಗಸ ನೋಡುವ ಕುತೂಹಲದಿಂದ ನೀರಧಿಯ ದಾಂಟಿ ಪಟ್ಟಣಕೆ ಬಂದು ॥
ಮಿಗೆ ಹರುಷಗೊಂಡೆ ನಿನ್ನಂ ಕಾಣ್ಬ ಸಂತಸದಿ |
ಪೊಗಲು ನಂದನವ ವನಪಾಲಕರು ಧಿಕ್ಕರಿಸ |
ಲಗಣಿತೋಪಾಯದಿಂದವರ ಕಳೆಯಲೆನುತ್ತ ಯೋಚಿಸುತಮಿರ್ದನಿತರೊಳ್ ॥ ೬ ॥

ಬಂದುದುಗ್ಗಡದಬಲವತಿಕೋಪದಾಟೋಪ |
ದಿಂದೆನ್ನನಲೆಯುತಿರಲಾತ್ಮರಕ್ಷಣೆಗೆಯ್ಯ |
ಲೆಂದವರನುಪಚರಿಸುವನಿತರೊಳ್ವಾನವರು ಬಂದು ನಿಷ್ಠುರಗಳಿಂದ ॥
ನಿಂದು ನಿರ್ವಹಿಸಲಳವಲ್ಲದಾ ರಕ್ಕಸರ |
ವೃಂದಮಂ ಸವರಲನ್ನೆಗ ಪ್ರಹಸ್ತನತನಯ |
ಬಂದೆನ್ನ ಘಾಸಿಗಿಕ್ಕಿದರವನ ಮರ್ದಿಸಲ್ವೇಳ್ಕಾದುದಸುವ ಪೊರೆಯೆ ॥ ೭ ॥

ಅನ್ನೆಗಂ ಬಂದರಾ ಮಂತ್ರಿಸುತರೇಳ್ವರು |
ತ್ಪನ್ನಬರಸಿಡಿಲ್ಗಳೆನಲವರ ಪರಿಹರಿಸಲ |
ತ್ಯನ್ನತ ಪರಾಕ್ರಮಿಗಳೈವರುಂ ಸೇನಾಧಿಪತಿಗಳೆಂದೈತಂದರು ॥
ಬನ್ನಬಡಿಸಿದರನೇಕಪ್ರಕಾರದಲವರ |
ಭಿನ್ನರಂ ಮಾಡಲಾಂ ಕಡುಗೋಪದಿಂ ಬಂದ |
ನಿನ್ನ ಮಗನಕ್ಷದೇವಾಸುರರೊಳಖಿಲಭಟದಲ್ಲಣಂ ಘಲ್ಲಣೆಯೊಳು ॥ ೮ ॥

ಬರಲಾಯ್ತು ಯುದ್ಧವಾಸುರವೀರರೆನ್ನೊಡನೆ |
ಹರಣಮಂ ಸಲಹಿಕೊಳಲೆಂದಾತನಂ ಕೊಂದೆ |
ಸುರಪಜಿತುವೈತಂದನಖಿಲಗಜರಥವೃಂದದೊಡನೆ ಕಡುಗೋಪದಿಂದ ॥
ಧುರದೊಳತಿ ವೈರದಿಂದಣಕಸಣಕಗಳೆಸಗಿ |
ಪರಿಪರಿಯ ಶಸ್ತ್ರಗಳಲಿಟ್ಟರೊಂದಂ ಗಣಿಸ |
ದಿರಲು ಬ್ರಹ್ಮಾಸ್ತ್ರಮಂ ಪೂಡಿದಂ ಭೀಕರಕೆ ಗಿರಿಧರಾತಳ ನಡುಗಲು ॥ ೯ ॥

ಮೂರುಲೋಕದೊಳುಳ್ಳ ಶಸ್ತ್ರಾಸ್ತ್ರತತಿ ಯೆಮ್ಮ |
ದಾರಿಯಂ ಬರಲಮ್ಮವೆಂದರಿತು ಕಮಲಭವ |
ಚಾರುತರ ನುಡಿಗಳಿಂ ಪ್ರಾರ್ಥಿಸಿದರಾ ಪಿರಿಯರನುಮತಿಯನೊಪ್ಪುಗೊಳಲು ॥
ಭಾರಣೆಯ ಕಣೆ ಬಂದು ಭಯದಿಂದ ನೋಡುತಿರ |
ಲೋರಂತೆ ಕರೆಯಲರೆನಿಮಿಷಮಿರ್ದೈದಿದರು |
ದಾರ ಬಲದಾನವರ್ಬಂದು ತುಡುಕಿದರೆನ್ನನತುಲರೋಷಾವೇಶದಿ ॥ ೧೦ ॥

ಬಿಗಿದ ರಜ್ಜುಗಳಿಂದಮಗಣಿತವಿಕಾರಗಳ |
ನಗೆನುಡಿಗಳಿಂದಣಕಸಣಕಮಾಡುತಮೆನ್ನ |
ತೆಗೆದು ತಂದರು ಸಭಾಂತರಕೆ ನಿಷ್ಕಾರಣದೊಳಾದುದೀಪರಿ ನಗರದ ॥
ಹಗರಣವನೊಪ್ಪಿ ಕೊಳಲಾಯ್ತು ನಿನ್ನಂ ಕಂಡು |
ಖಗವಂಶಭವನೆಡೆಗೆ ಜವದಿ ಪೋಗಲ್ಕೆಂದು |
ಮಿಗೆ ರೋಷಹರ್ಷದಿಂ ಮರುತಸುತನಿಂತೆಂದ ದಶಕಂಠನೊಡನೆ ಬಿಡದೆ ॥ ೧೧ ॥

ಸುಲಭವಲ್ಲವು ಭವದ್ದರುಶನವು ಕಾಣ್ಬೆನೆಂ |
ದೊಲಿದಿಚ್ಛೆಗೈದುದಕೆ ಸಂಭವಿಸಿತೀಪರಿಯ |
ಪಲವು ಕೋಟಲೆಯಾದುದೆನ್ನ ಮನದಿಷ್ಟಾರ್ಥ ಫಲಿಸಿತೀಯವಸರದೊಳು ||
ಅಲಘು ಶಾಸನನರಸು ನೇಮಿಸಿದ ತೆರದೊಳಾಂ|
ಕಲನೆಗೈವೇಳ್ಕಾದುದೀ ಲೋಕದೊಳು ಪೇಳ್ವ |
ಚೆಲುವ ಗಾದೆಯು"ಸೇವನಾ ಪರರಿಗೆತ್ತಣದು ಸುಖ ಕಷ್ಟ"ಸುವಿಚಾರವು || ೧೨ ||

ಇನಿತು ಕೋಟಲೆಯಿಂದ ಬಂದಾದರುಂ ದೈತ್ಯ |
ಜನನಾಥ ನಿನ್ನ ನೋಡುವ ಮನೋರಥದಿಂದ |
ಮೆನಗವಶ್ಯಕಮಾದುದಾದರಾಲಿಸು ಸಾವಧಾನದಿಂ ಭಾಷೆಗಳನು ||
ಇನಜಂ ಭವದ್ಭ್ರಾತ ಕ್ಷೇಮ ಕೌಶಲಗಳಂ |
ತನಯ ಭೃತ್ಯಾದ್ಯರ ಶಿವಕರಂಗಳಂ ಕೇಳಿ |
ಮನದಿಷ್ಟಮಂ ತಿಳಿಪಿ ಬಹುದೆಂದು ನೇಮಿಸಿದ ಕಪಿಕುಲೋತ್ತಮರ ಮುಂದೆ || ೧೩ ||

ಅದರಿಂದಮಿನಿತುಕಷ್ಟದೊಳಾದರುಂ ಬಂದು |
ಹೃದಯದಂತಸ್ಥಮಂ ತಿಳಿಪಿ ನಿನ್ನಯ ಕ್ಷೇಮ |
ದುದಯವ ಕನೀಯಸದ್ಭ್ರಾತೃವಿಂಗರಿಪುವುದವಶ್ಯಕರಮಾದುದೆನಗೆ ||
ಚದುರತನದಿಂ ಮನಸ್ಕರಿಸಿ ಲಾಲನೆಗೈದ |
ರಿದರಿಂದಮಭ್ಯುದಯಮಕ್ಕು ಬಹುಮಾನ ಬಂ|
ದೊದಗುವುದು [1]ರಾಕ್ಷಸೋತ್ತಮ ಲಾಲಿಸುವುದೀಗ ಮದ್ವಚನ ಹಿತಮೆನುತ್ತೆ || ೧೪ ||

ಜಲಜಾಪ್ತಕೃಪವಿತ್ರಂ ರಾಮಚಂದ್ರಬಂ |
ದೊಲವಿಂದಮಾಜನಸ್ಥಾನದೊಳಗನುಜ ಸಹ |
ಕೆಲವುವಿಪ್ರರ್ವೆರಸಿ ಧರ್ಮಶಾಸ್ತ್ರಾಲಾಪಗೈವ ಸಮಯದೊಳು ಬಂದು ||
ಸುಲಭಕೃತ್ಯಗಳೆಸಗಿ ಮಡಿದಂ ವಿರಾಧನಾ |
ಕುಲಗೆಡುಕಿ ಶೂರ್ಪನಖಿ ಕೆಣಕಿ ಖರದೂಷಣರ |
ಬಲಸಹಿತ ಕೋಳ್ಗೊಟ್ಟು ಬಂದು ವೈರೂಪ್ಯದಿಂ ಪೊಕ್ಕಳೀ ಪಟ್ಟಣವನು || ೧೫ ||

ತನಗಾದ ಮಾನಭಂಗಗಳ ವಿಸ್ತರಗೆಯ್ಯೆ |
ಕಿನಿಸಿಂದ ಮಾರೀಚನಂ ಮೃಗಾಕೃತಿಗೆಯ್ದು |
ಬನದಿ ವಂಚನೆಯಿಂದ ಜಾನಕಿಯ ಕಳ್ದೊಯ್ದೆ ಮೃತ್ಯುವಂ ಸತಿಯೆನ್ನುತ ||
ಜನನಾಥನಂಗನೆಯನರಸುತಂ ಮಾರ್ಗದೊಳ |
ಗನುಜನೊಡವೆರದಾ ಕಬಂಧನಂ ಸೀಳ್ದಿಟ್ಟು |
ಮನದೊಲವಿನಿಂದ ಶಬರಿಗೆ ಮುಕ್ತಿಯಂ ಕೊಟ್ಟು ಪಂಪಾತಟಕ್ಕೆ ಬರಲು || ೧೬ ||

ಕಂಡು ಸುಗ್ರೀವ ಭಯಗೊಂಡು ಚಿಂತಿಸಿ ತಿಳಿದು |
ಚಂಡಪ್ರತಾಪಿಯಂ ಮರೆವೊಕ್ಕು ಕೋಟಲೆಯ |
ತಂಡಂಗಳಂ ಬಿನ್ನಪಂಗೆಯ್ಯಲಭಯಮಂ ಕೊಟ್ಟು ಕಪಿರಾಜ್ಯ ಸಿರಿಯ ||
ಗಂಡುಗಲಿ ವಾಲಿಯಂ ತರಿದೊಂದು ಕೋಲಿಂದ |
ಖಂಡಪದವಿಯನು ಸುಗ್ರೀವಂಗೆ ದಯೆಗೆಯ್ದು |
ಪುಂಡರೀಕಾಯತೇಕ್ಷಣ ರಾಘವೇಂದ್ರ ನಿನಗಖಿಲ ಸುರಮುನಿಗಳೆಡೆಯ || ೧೭ ||

1. ರಕ್ಕ.



ಸಿರಿಯ ಪಾಲಿಸಲು ಸುಗ್ರೀವಭೂತಳದ ವಾ |
ನರರನಗಣಿತ ಮಹಾಕ್ಷೋಣಿ ಸಂಖ್ಯಾತಮಂ |
ಕರೆಸಿ ಮೂಲೋಕಮಂ ನೋಡಲಟ್ಟಿದ ವಾಯು ವೈನತೇಯ ಸಮಾನರ ||
ಹರಿಸಹಸ್ರದ ಬಲಂ ಗಜಶತಸಮಾನಮಿಾ |
ಧರೆ ನಭಸ್ಥಲ ರಸಾತಳದೊಳಂ ಸಂಚರಿಸಿ |
ಧರಣಿಜೆಯ ಕುರುಹನರಸುತ್ತಮಿಹರಾ ಮಹಾಬಲದಿಂದಮಾನೊರ್ವನು || ೧೮ ||

ನೀರಧಿಯ ದಾಂಟಿ ನಿಶೆಯೊಳಗೆ ಲಂಕಾನಾಮ |
ನಾರಿಯಂ ಧಿಕ್ಕರಿಸಿ ಪುಟಭೇದನದೊಳೆಲ್ಲ |
ಧಾರಿಣೀಸುತೆಯ ನರಸಿದರೊಂದುತಾಣದೊಳ್ಕಾಣದಿರೆ ಚಿಂತೆಯಿಂದ ||
ಧೀರ ನಿನ್ನರಮನೆಯನೆಲ್ಲ ಶೋಧಿಸಿ ಮನೋ |
ಹಾರನಂದನದೊಳಂ ನೋಡುತಿರೆ ಜನಕಜೆಯು |
ತೋರಿದಳ್ ಶಿಂಶುಪಾವೃಕ್ಷದೆಡೆಯೊಳಗಾದುದಾನಂದವೆನ್ನ ಮನಕೆ || ೧೯ ||

ಕಂಡು ಪೊಡಮಟ್ಟು ಸುಕ್ಷೇಮವಾರ್ತೆಯ ಪೇಳಿ |
ಕೊಂಡಪ್ಪಣೆಯೊಳಾನು ಬರುತಿರಲ್ದೈತೇಯ |
ತಂಡ ಕವಿದೀಪರಿಯ ಕಕ್ಕುಲಿತೆಗೈದರೀ ಧರೆಯೊಳಗೆ ತನುಜೀವನಂ ||
ಖಂಡಶರ್ಕರೆಗಿಂತ ಮಧುರಮದರಿಂದ ಮು |
ದ್ದಂಡಶೌರ್ಯವನೆಸಗಿ' ಮೂರ್ತಿಯಂ ಕಾಪಾಡಿ |
ಕೊಂಡೆ ಮರುತಾತ್ಮಭವ ಹನುಮನೆಂಬಭಿಧಾನ ಕೇಳು ರಾಕ್ಷಸವರೇಣ್ಯ || ೨೦ ||

ಎನಗಪ್ಪಣೆಯನಿತ್ತು ಕಳುಪುವವಸರದಿ ಕಪಿ |
ಜನಪನತಿಸಂತಸದೊಳೊರೆದ ಸುಕ್ಷೇಮಂಗ |
ಳನು ತಿಳುಪಿ ಮುಂದಪ್ಪ ಕಜ್ಜಗಳ ಬಿತ್ತರಿಸು ಸುಕ್ಷೇಮತರಕೋಸುಗಂ ||
ಇನನಗ್ರಜಾತ ದೈತ್ಯೇಂದ್ರನೆಂದೀ ಪರಿಯ |
ನಿನಸುತಂ ಪೇಳ್ದಿರ್ದ ಕತದಿಂದ ಬಂದು ನಿ |
ನ್ನನು ಕಂಡು ಹಿತವ ತಿಳುಪಲ್ಕಾದುದೆಂತೆನಲ್ಸಾವಧಾನದೊಳಾಲಿಸು || ೨೧ ||

ಬಿಡುಗಣ್ಣರೊಡೆಯ ಮುಂತಾದ ವೀರರು ತೃಣಕೆ |
ಕಡೆ ದೈತ್ಯವರ್ಗವೇಂ ಮಶಕಶಿಶುಗಳು ತೋರ್ಪ |
ಕಡಲದೇಂ ಗೋಷ್ಪದಂ ಕಾಣ್ಬಡುವುದಿಲ್ಲೆನಗೆ ಶಸ್ತ್ರಾಸ್ತ್ರಹತಿಯೆಂಬುದು ||
ಕೊಡನಮುಗನೊಡನೆ ನೀರಧಿಗಳೇಂ ಸೆಣಸುತ್ತ |
ಕಡೆಗಾಂಬುದುಂಟೆ ಶ್ರೀರಾಮಕಿಂಕರನೆನ್ನ |
ತೊಡಕುವುದು ಮೂಲೋಕದೊಳಗುಂಟೆ ದೈತ್ಯೇಂದ್ರ ಮದ್ವಚನಗಳ ಲಾಲಿಸು || ೨೨ ||

ದಾನವರ ಪಡೆಯನರೆನಿಮಿಷದೊಳು ಸಂಹರಿಸು |
ತೀನಗವ ಕಿಳ್ತಿತ್ತಿಕೊಂಡೊಯ್ದು ಬೇಗ ಸು |
ಮ್ಮಾನದಿಂ ರಘುವರನ ಮುಂದಿಟ್ಟು ವಂದಿಸುವ ಬಲಶೌರ್ಯಮುಂಟೆನ್ನೊಳು ||
ಮಾನಿನೀಮಣಿಯ ನಿಟ್ಟಿಸಿ ಬಪ್ಪುದೆಂದು ಭೂ |
ಜಾನಿ ನೇಮಿಸಿದ ಕಟ್ಟಳೆಯ ಮಾರಲ್ಬಾರ |
ದಾನಿನಿತು ರಕ್ಕಸರ ಸೊಣಗಕೃತ್ಯಂಗಳಂ ಸಹಿಸಬೇಕಾಯಿತರಸ || ೨೩ ||

ಅಜ ಭವಸುರೇಂದ್ರಾದಿ ದೇವರ್ಕಳಂ ಮುಗಿಯೆ |
ಭಜಿಸುವರೆ ಶ್ರೀರಾಮಡಿಂಗರಿಗರೀ ದೈತ್ಯ |
ನುಜುಗಮಂ ದಿಟ್ಟಿಯೊಳಗುಂಟೆ ಪತಿಕಟ್ಟಳೆಯ ಮಾರಲಮ್ಮದೆ ಭೀತಿಯಿಂ ||
ಅಜನ ನುಡಿಯಂ ಸಲಿಸಲೆಂದು ಶರಬಾಧೆಯಂ |
ತ್ಯಜಿಸದಂಗೀಕರಿಸಿ ನಿನಗೆ ಹಿತಮನ್ನುಸುರಿ |
ಋಜುಬುದ್ಧಿಯಂ ಮಾಡಲೈತಂದೆನಾಲಿಸಲು ಸುಕ್ಷೇಮಮಹುದು ಮುಂದೆ || ೨೪ ||

ವೇದವೇದಾಂಗಂ ಪುರಾಣೇತಿಹಾಸಗಳ್ |
ವೇದಾಂತನಿಷ್ಠೆ ಶಾಸ್ತ್ರಾಂತರಗಳಭ್ಯಾಸ |
ಬೋಧೆಯನ್ನಾಂತು ತಪದಿಂದಿಂದುಶೇಖರನ ಪದಪಯೋಜವನು ಪಿಡಿದು||
ಮೇದುರದ ಬಲಶ್ರೀ ಜಯೋನ್ನತಿಕೆಯಿಂದ ಹಿಮ
ಭೂಧರೋಪಮಿತನೆಂದಮಿತ ಶುಭವಚನಗಳ |
ಸಾಧುಗಳು ಪೊಗುಳುತಿರೆ ಕೇಳ್ದು ಹರುಷದೊಳಾನು ನೋಳ್ಪರೈತಂದೆನಲ್ತೆ || ೨೫ ||

ಸಕಲಧರ್ಮಂಗಳಂ ತಿಳಿದಾಚರಿಪ ಸಾಧು |
ಯುಕುತಿಯುಳ್ಳ ಮಹಾತ್ಮ ಪೆರರಂಗನಾಭಿರತಿ |
ಯುಕುತನಾದರದೇನು ಕಾರಣಮೆನುತ್ತದಂ ಪರಿಕಿಸುವಡೈತಂದೆನು ||
ಶಕುತಿಯುಳ್ಳರೆನುತ್ತ ತಲೆಗಳಿಂ ಶಿಲೆಗಳಂ |
ಪ್ರಕಟದಿಂ ತಾಗಿದವರುಂಟೆ ದುಸ್ಸಂಗದೊಳು |
ಸುಕುಮಾರಬುದ್ಧಿ ಪೆರತಾಗದದ ಧೀಯುತರು ರುಜುಗೈವರಸುರವರ್ಯ || ೨೬ ||

ಕಾಯಸುಖಮಂ ಬಯಸಿ ಕಷ್ಟತರದುಃಖದಿಂ |
ದಾಯಾಸ ಸಂಗಡಿಸಿ ಕಲಿತವಿದ್ಯಂಗಳಿಗ |
ಪಾಯಮಂ ಮಾಡುವರೆ ಧೀಯುತರು ನೀಂ ತಿಳಿಯದಿರ್ಪುದೇನುಂಟು ಜಗದೆ ||
ಈ ಯವಸ್ಥೆಯನಾರು ಬೋಧಿಸಿದರಯ್ಯ ವೀ |
ಕಾಯಮೇಂ ಶಾಶ್ವತಮೆ ಕ್ಷಣಸುಖಕೆ ರೌರವ ನಿ |
ಕಾಯಮಂ ಗಳಿಸುವುದಿದಾವ ಬಲ್ಲವಿಕೆ ನೀನರಿಯದುದೆ ರಕ್ಕಸೇಂದ್ರ || ೨೭ ||

ಕಲಿವಿರಾಧನ ವಧೆಯ ಖರದೂಷಣರ ಪರಿಯ |
ಬಲಯುತ ಕಬಂಧಾದ್ಯರಿರವ ಕೇಳುತ್ತಮಾ |
ಪೊಲಬನಂಗೀಕರಿಸಿ ಬಲುತಪದಲಾರ್ಜಿಸಿದ ಸಿರಿಯ ವೈಭವಗಳನ್ನು ||
ನೆಲಕಿಕ್ಕಲನುಗೈದೆಲಾ ಬಾಲ್ಯದಿಂ ನೀನು |
ಕಲಿತ ನೀತಿಗಳೆಲ್ಲಿಗ್ಪೈದಿದುವು ಭುಜಸತ್ವ |
ಕಲಿತನೆನ್ನುತಗಾಣದೊಳಗೆ ಕರಗಳನಿಟ್ಟರುಂಟೆ ರಾಕ್ಷಸವರೇಣ್ಯ || ೨೮ ||

ಚಂಡಬಲನಮರೇಂದ್ರತನಯನೊಗ್ಗೋಲಿಂದ |
ಕೊಂಡ ಬಳಿಕೀ ಜಗತ್ರಯದೊಳಗೆ ರಣಕೆ ಮುಂ |
ಕೊಂಡು ಬರ್ಪವರುಂಟೆ ಜನನಾದಿಸ್ಥಿತಿಲಯಗಳಾವನಿಂ ತೋರ್ಪಡಿಪುವು ||
ಗಂಡುಗಲಿ ಶ್ರೀರಾಮ ಸೌಮಿತ್ರಿ ಮಾಳ್ಪಯು |
ದ್ದಂಡಾಶುಗಗಳಿದಿರೊಳಾವ ಸಂಚರಿಪ ಕೋ |
ದಂಡದೀಕ್ಷಾಗುರುವ ತಿಳಿಯದಾಗಸಮೆಸಗಿ ನಿನಗಹಿತಮಂ ನೆನೆದಲೆ || ೨೯ ||



ಸಿರಿದೊರೆವುದತಿಶಯಂ ಜ್ಞಾನಸಂಭೂತಮಹು |
ದುರುಪುಣ್ಯಮುತ್ತಮಕುಲೋತ್ಪತ್ತಿಯರಿದು ನೀಂ |
ಹರನ ಕೃಪೆಯಿಂದಖಿಲಸಂಪದಂಗಳ ಗಳಿಸಿ ಸದ್ಬುದ್ಧಿಯಂ ಬಯಸದೆ ||
ಮರುಳಾದೆಯಕಟಕಟ ರಾಘವಂ ಮುನಿದಡೆಯು |
ಪೊರೆವರಾರುಂಟು ತ್ರಿಭುವನದೊಳಾರುಪದೇಶ |
ವೆರೆದಾತ್ಮಘಾತಕೆಂದೆಣಿಸಿದೆ ಮಹಾಮೋಹದೊಳು ಮಗ್ನನಾಗಿ ಬರಿದೆ || ೩೦ ||

ಎನಿತು ತಪದಾಢ್ಯತೆಯು ದೇವತಾಸಮ್ಮುಖಗ |
ಳೆನಿತಿರಲಿ ಪರದಾರರತಿ ಪುಟ್ಟಿದಾಕ್ಷಣಂ |
ತನತನಗೆ ತೊಲಗುವುವು ಚಂಡಾಲನಂ ಕಂಡ ಭೂದಿವಿಜರಂತೆ ಮರುಳೆ ||
ಘನತರಾಯುಷ್ಯ ಸುಜ್ಞಾನಬಲಸಂಪದಗ |
ಳನಿತು ಪೋಪುವು ಕುಲಂ ಕೆಡುಗು ದುಷ್ಕೀರ್ತಿ ಸಂ |
ಜನನಮಪ್ಪುದು ಪರಸ್ತ್ರೀರತನಿಗಾವುದುಂ ಫಲಿಸವಸುರೇಂದ್ರ ಕೇಳು || ೩೧ ||

ಮಾನಧನಹಾನಿ ಗಣಿಕಾಗಮನದಿಂದಹುದು |
ಮ್ಲಾನಕುಲಮಪ್ಪುದಾ ದಾಸೀಗಮನದಿಂದ |
ನೂನಮವಿರಾಗಮನದಿಂದಮಾಯುರ್ನಾಶಮಪ್ಪುದಿದು ತಪ್ಪಲರಿದು ||
ಜ್ಞಾನವಿರಹಿತದೊಳ್ಪರಾಂಗನಾಸಕ್ತಿಯಿಂ |
ಜ್ಞಾನಮಾಯುಷ್ಯಾದಿಗಳು ಪೋಪುವೆಂದುಸಿರ್ವ |
ಮಾನನಿಧಿಗಳ ನುಡಿಯ ಕೇಳ್ದರಿಯದೀಪರಿಯ ದುಷ್ಕೃತ್ಯಗಳ ನೆನೆವರೆ || ೩೨ ||

ಕಳವಿನಲಿ ರಾಮನಂಗನೆಯ ಕದ್ದೊಯ್ದು ಭೂ |
ತಳದಿ ವೀರತ್ವಸಂಭವಕೀರ್ತಿಗಂ ಮಸಿಯ |
ಬಳಿಯಲೆಳಸಿದೆ ಭೂತಳದೊಳಾರ ಮುಂಗಡೆಯ ನೀಂ ಶೂರನೆಂದೊರೆವೆಲೊ ||
ಪೊಳಲೊಳಗೆ ಮೃತ್ಯುದೇವತೆಯನಿಟ್ಟುಂ ಕುಲವ |
ಕಳೆಯಲನುಗೈದೆ ದುರ್ಮೇಧೆಯಿಂದೇಂ ಫಲಂ |
ತಿಳಿದಾತ್ಮ ಹಿತಮೆಂದು ಜಾನಕಿಯ ಶ್ರೀರಾಮಗೊಪ್ಪಿಸಿ ಕೃತಾರ್ಥನಹುದು || ೩೩ ||

ಕೊಳುಗುಳದಿ ಗೆಲುವೆನೆಂಬಾಸೆಯಂ ತೆಗೆದಿಟ್ಟು |
ಗಳಿಸಿರ್ಪ ಶಸ್ತ್ರದನುರಾಗಮಂ ಕಿಳ್ತಿಟ್ಟು |
ಜಲಜಭವನಿತ್ತ ವರದಾನದ ಮಹಾಸತ್ವದಭಿರತಿಗಳನ್ನು ಬಿಟ್ಟು ||
ನಳಿನಮುಖಿ ಸೀತೆಯಂ ರಾಘವಂಗಿತ್ತು ನೀ |
ನುಳಿವುಪಾಯವ ನೆನೆದು ಪುನರೈಸಿರಿಗಳನ್ನು |
ಗಳಿಸಿಕೊಳಲಿಚ್ಛೈಸು ಸುಲಭದಿ ಮನೋರಥಂ ಸಾರ್ವುದೈ ದೈತ್ಯನಾಥ || ೩೪ ||

ಸುರನರೋರಗ ಯಕ್ಷಗಾಂಧರ್ವ ಕಿಂಪುರುಷ |
ಶರಗಳಿಂದಂ ಮವಂಧ್ಯತೆಯ ದಾನವ ಭಟರ |
ಧುರವ ಲೆಕ್ಕಿಸದಂತೆ ಸರಸಿಜೋದ್ಭವನಿಂದಮಭಯಮಂ ಪಡೆದಿರ್ಪೆಯ ||
ಉರಗಯಕ್ಷಾಸುರರೊಳೊರ್ವರಲ್ಲವು ತಿಳಿಯೆ |
ತರಣಿಸುತ ಪ್ಲವಗಾಧಿನಾಥ ಮಾನುಷ ದೇಹ |
ಭರಣೆಯಿಂದೈತಂದ ಪರಬೊಮ್ಮ ರಘುವೀರನೆಂದು ತಿಳಿ ರಾಕ್ಷಸೇಂದ್ರ || ೩೫ ||

ಸರಸಿಜಾಸನನಿತ್ತ ವರಗಳಿಂದಂ ಪೊರಗೆ |
ಚರಿಸುವರೆ ಪೂರ್ವಾನುಭೂತವೆಂದೀ ಮಾತ |
ನರಿತು ಜಾನಕಿಯ ರಾಘವಗಿತ್ತು ಸಂತತಿಯನುಳುಹಿಕೊಂಬುದು ಲೇಸಲ್ತೆ ||
ತರಣಿ ವಂಶಜ ಮುನಿಯಲಾರು ಕಾಯ್ದಪರಿನ್ನು |
ಸುರಪಾದ್ಯರಮಿತರಂ ನಿಮಿಷಮಾತ್ರದಿ ಸೃಜಿಸಿ |
ಮರಳಿ ಸಂಹರಿಪ ಸ್ವಾತಂತ್ರ್ಯ ಪುರುಷನೆನುತ್ತ ತಿಳಿ ರಾಕ್ಷಸೇಂದ್ರ ಜವದಿ || ೩೬ ||

ಮರೆದು ಮಾಡಿದ ಪಾಪ ಮಾಜದಂತನುರೂಪ |
ತರಳರಂ ಪೆತ್ತಂತ ಧರ್ಮಸಂಹಿತಮಾದ |
ಪರಿಕರಗಳೊಂದೆಸಯಲಿರೆ ವಿಪದ್ರಾಶಿಗಳು ಸಂಜಾತಮಾಗದಿರವು ||
ಪರಿಪರಿಯಲಹಿತಗಳ ಪೊರೆಯಲಾ ವಂಶಮಿಾ |
ಧರಣಿಯೊಳಗಿರದು ನಿಶ್ಚಿತವು ಪರಮಾಪದದ |
ನಿರುಗೆಯವಿವೇಕಮೆಂದರಿದಾತ್ಮ ಹಿತಗಳಂ ಬಯಸು ರಕ್ಕಸನಾಯಕ || ೩೭ ||

ತಿಳಿ ಜನಸ್ಥಾನವಧೆಯಂ ವಾಲಿಸಮರದೊಳ |
ಗಳಿದುದಂ ಸುಗ್ರೀವಕಪಿವರ್ಯನಾದುದಂ |
ಜಲನಿಧಿಯ ದಾಂಟಿ ವಾನರಬಂದು ಭವದೀಯ ಬಲವಮರ್ದಿಸಿ ನಿಂದುದಂ ||
ಇಳೆಯೊಳಿದು ಸುಲಭಮಲ್ಲವು ಕೃತ್ಯಮೆಂದು ಹೃ |
ನ್ನಿಲಯದೊಳ್ ನಿಶ್ಚೈಸಿ ರಾಘವಗೆ ಸೀತೆಯಂ |
ಚಳಕದಿಂದೊಪ್ಪಗಿಸಿ ಗೋತ್ರ ರಕ್ಷಣೆಗೈವುದುಚಿತ ರಾಕ್ಷಸಲಲಾಮ || ೩೮ ||

ಈ ದೈತ್ಯಬಲವಿಾನಗಾಗ್ರದೊಳಗಿಹ ನಗರ |
ಮೇದುರ ಗಜಾಶ್ವರಥ ಸಂಕುಳಗಳಂ ಜವನ |
ಹಾದಿಯಂ ಪೊಂದಿಸುವಡಾನೊರ್ವ ವಾನರಂ ಸಾಕನ್ಯರೇತಕಿದಕೆ ||
ಭೂಧವಂ ಶ್ರೀರಾಮ ಕಪಿಸಮೂಹದಿ ಕುಳಿತು |
ಕ್ಷೋದೀಯಸ ವರಾಕನಂತರಿವೆನೆಂದ ಸಂ |
ಬಾಧೆಯೊಂದರೊಳಾನು ಕೈಗಾಯ್ದು ಬೋಧಿಸುವೆ ನಿನಗೆ ಹಿತಮಿತ ಪಥ್ಯಮಂ || ೩೯ ||

ಪೊಡವಿಯೊಳಗುಳ್ಳ ಪಾರ್ಥಿವರಾದರುಂ ಸಗ್ಗ |
ದೊಡೆಯ ಸರಸಿಜ ಪೀಠರಾಜ ಪಾಟೀರ ಪಾ |
ಲ್ಗಡಲಳಿಯರಾದಡಂ ರಾಮಗಪಕೃತಿಯೆಸಗಿದವನ ಕಾಯ್ವರಸಾಧ್ಯವು ||
ಪೊಡರ್ವ ಸಿಡಲಿನರವಕೆ ಕೊಡೆಗಳೇಂ ತಡೆದಪುವೆ |
ಮೃಡವಿಧೀಂದ್ರಾದ್ಯರಸ ಮುನಿಯೆ ಸಲಹುವರುಂಟೆ |
ಕೆಡು ಬುದ್ಧಿಯಿಂ ಕುಲವಿನಾಶನಂಗೆಯ್ಯದಲೆ ಶರಣುವೊಗು ರಘುನಾಥನ || ೪೦ ||

ಎಂದಿಗಾರ್ಜಿಸೆ ಬರ್ಪುದಂಚಿದೇರನ ಕೃಪೆಯ |
ನೆಂದಿಗೀದಿವ್ಯನಗರಿಯ ಗಳಿಸಲಕ್ಕು ಮಗು |
ಳೆಂದಿಗೀ ಸಿರಿಪುತ್ರಮಿತ್ರಾದಿ ಸಂಪದಗಳಂ ಸಾಧಿಸಲ್ಪೇಳ್ಕುಮು ||
ಮಂದಮತಿಯಿಂ ಮರುಳ್ಪಿಡಿದು ಸಂಪಾದ್ಯಮಂ |
ಕುಂದಿಸುವಡರೆನಿಮಿಷದೊಳಗಾವ ಮೇಧೆ ನೀಂ |
ಹಿಂದು ಮುಂದರಿಯದುನ್ಮತ್ತತೆಯೊಳಂ ಕೆಡದೆ ಹಿತಮೆನುತ ತಿಳಿವುದಸುರ || ೪೧ ||



ಸಿರಿಯನಾರ್ಜಿಸುವಡೇನತಿಯಶಯವು ಗಳಿಸಿದ್ಧೈ |
ಸಿರಿಯ ಜತನಂಗೈದು ಭೋಗಿಸುವುದಚ್ಚರಿಯು |
ನಿರತ ಸಂಪದವೃದ್ಧಿಗೈವಕಾರಣಗಳಂ ಬೆದಕುವುದು ಸ್ವಾಭಾವಿಕಂ ||
ಸಿರಿಯ ಮುಂದಣಬುದ್ಧಿ ಕರಚೆಲುವು ಮಳೆಯ ಮುಂ |
ದರುಗುತಿಹ ಗಾಳಿಸಹಜಮೆನುತ್ತ ಧೀಮಂತ |
ರೊರೆದಪರು ನಿನ್ನೆಡೆಯಲಲ್ಲದಲತಿವ್ಯಾಪ್ತಿಯಾಯ್ತು ಪಿರಿಯರ ಭಾಷೆಗೆ || ೪೨ ||

ಗುರುಸೇವೆ ಪಿರಿಯರನುಮತಿ ದೇವತಾನಿಚಯ |
ಪರಿಚರಣೆ ವಿಪ್ರಪೂಜನೆ ಸಾಧು ಸನ್ಮಾನ |
ಪರವಧೂ ಭೀರುತ್ವ ಲೋಕಾಪವಾದಭಯ ಗೋರಕ್ಷಣಾಧಿಕಗಳು ||
ಕರುಣಂ ದಯಾಪರತೆಯನೃತರಾಹಿತ್ಯಮೆಂ |
ಬುರುತರದ ಗುಣ ಬೀಜವೈಸಿರಿಗೆ ನಿನ್ನೊಳೀ |
ಪರಿ ತಿಲಾಂಶಗಳಿಲ್ಲದೆಂತಕಾರಣಕಾರ್ಯ ಜನ್ಮಮಾಯ್ತು ಕಟೆಂದನು || ೪೩ ||

ಶಶವಿಷಾಣಪ್ರಾಯಮಾದರಂದಯದ ಕುಲ |
ಪುಸಿ ಸತ್ಯ ಗಾಂಧರ್ವ ನಗರ ಬಾಂಧವತರುಣ |
ವೆಸರೆಂಬುದರಿಯ ಶುಚಿಯಮುದಿತಸ್ತಲ ಶಶಂಸತೆಯ ಭೂತೋದ್ವೇಗದ ||
ರಸೆ ನಿನಗೆ ಸಂಪದವು ವಶವಹುದೆ ಬಂದೊಡನೆ |
ನಿಶೆಯೊಳಗಪಾಶೆ ಸಂಚರಿಸಿದಂದದಿ ಚಲಿಸ |
ಲಸುಗಳಿಂದಿರ್ದಪುದೆ ಮೂಢತೆಯನೇಂಕತದಿ ಪಿಡಿದೆ ರಕ್ಕಸನಾಯಕ || ೪೪ ||

ನೀನಾತ್ಮ ಸುಖವ ಬಯಸದೆ ಮೌಖ್ಯವಿಡಿದಿರ್ದ |
ಡೇನ ಮಾಳ್ಪರು ಸಚಿವಸಾಮಂತರುಳಿದ ಜನ |
ರೀ ನೆಲದೊಳೆಂತಿರ್ಪರಖಿಲ ಜನಸಂತಾಪದಿಂದ ಸಿರಿಯೆಂತಿರ್ಪುದು ||
ಹಾನಿವೃದ್ಧಿಗಳನೆಣಿಸದೆ ದಿವಾಂಧತೆಯಿಂದ |
ಮೇನಹುದು ಸುಖಪ್ರಭುತ್ವತೆ ದಯಾಸತ್ಯಗಳು |
ನೂನಮಭಿವೃದ್ಧಿಕರಮೆಂದೆನಿಸಿ ಸಂಪದವನುಳುಹಿಕೊಂಬುದು ಲೇಸಲ್ತೆ || ೪೫ ||

ಧಾರಿಣಿಯೊಳರಸಾತ್ಮಬಲವ ಪರಿಕಿಸುತಮು |
ತ್ತಾರ ಶೌರ್ಯವ ತಿಳಿದು ಗೋತ್ರಸಂರಕ್ಷಣೆಯ |
ಭಾರಣೆಯ ಬುದ್ಧಿಯಿಂದೆಸಗವೇಳ್ಕುಮು ಹಿತಾಹಿತಗಳೊಂದಂ ತಿಳಿಯದೆ ||
ವೀರತೆಗೆ ಕೈದುಡುಕಲಾತ್ಮನಾಶನವು ಕೇ |
ಳ್ನೀರಧಿಯಗಸ್ತ್ಯನೊಳ್ ಸೆಣಸಿ ಸಂಕಟದಿ ಬಾ |
ಯಾರಿದುದ ಕೇಳ್ಪರಿಯದಾದೆ ನಿನಗೆಂತಪ್ಪುದತಿಶಯದ ಸೌಖ್ಯ ಮರುಳೆ || ೪೬ ||

ಜಲನಿಧಿಯ ಮಧ್ಯದೊಳು ನೆಲೆ ಕಾಮಚರ ದೈತ್ಯ |
ಬಲ ಸಹಾಯಂ ಸುರಪಜಿತುತನಯ ಲೋಕಗಳ |
ಗೆಲುವ ಬಲಶಾಲಿ ಕುಂಭಶ್ರವಣನನುಜಾತ ವಿಂಶತಿಮಹಾಭುಜಗಳು ||
ತಲೆಗಳುಂ ಪತ್ತು ದೀರ್ಘಾಯುಷಮವಧ್ಯತ್ವ |
ಮೊಲಿದಿರ್ಪುವೆಂಬ ಗರ್ವದಿ ದುಷ್ಟತನದಿಂದ |
ಸುಲಭಮಾರ್ಗವ ತಿಳಿಯೆ ಸುಖವು ಸಮನಿಸದಸುರನಾಥ ಕೇಳೀನೆಲದೊಳು || ೪೭ ||

ಬಿಸಿಲ ಝಳಕಿಟ್ಟ ಚಪ್ಪರ ಕಲ್ಪಮೇಘಗಳು |
ಬಸಿವ ಜಲಮಂ ಕಳೆವುದುಂಟೆ ಘುಡುಘುಡಿಸಿ ಬ|
ರ್ಷಶನಿಪಾತಕೆ ಪರೀಹಾರಗೈದಪುದುಂಟೆ ಮರುಳಾತಪತ್ರ ಮಗುಳೆ ||
ಬಿಸಜಸಂಭವನವರಮಿಾ ದೈತ್ಯಬಲಶೌರ್ಯ |
ದೆಸಕಮೇಂ ಕಾಯ್ದಪುದೆ ಶ್ರೀರಾಮಚಂದ್ರ ಬಂ |
ದೆಸೆವ ಬಾಣಂಗಳಿಗೆ ಮಾರಾಂತು ಕೈಗೊಡುವರುಂಟೆ ಮತ್ತೀನೆಲದೊಳು || ೪೮ ||

ಖರನಳಿದಪರಿಯ ವಾಲಿಯ ಧರೆಯ ಸುಗ್ರೀವ |
ನಿರವ ಕಪಿನಾಯಕರಗಾಧಬಲಪೌರುಷಗ |
ಳರಿತು ಲಕ್ಷ್ಮಣನಸ್ತ್ರದಾಟೋಪಗಳ ತಿಳಿದು ಕುಲಕೋಟಿಗಳನು ಪೊರೆಯೆ ||
ಶರಣುವೊಗು ರಾಘವನ ಧರಣಿಜಾತೆಯ ತಂದು |
ಚರಣಕರ್ಪಿಸಿ ಸಾಧುಜನರೊಡಂಬಡುವಂತೆ |
ನಿರತಿಶಯ ಸಂಪದವನಾರ್ಜಿಪುದು ಲೇಸೆಂದು ನೀನರಿವುದಸುರೇಶನೆ || ೪೯ ||

ಹಿಂದುಮುಂದರಿಯದೆ ಪ್ಲವಂಗ ಬುದ್ಧಿಯೊಳಣ್ಣ |
ಸಂದನಸ್ತ್ರಮಯಕ್ಕೆ ನೀನೊರ್ವನಾಪರಿಗೆ |
ಬಂದಿರ್ಪೆಯೆನುತ ಬಾಂಧವ್ಯದ ಕೃಪಾರಸದೊಳೀ ಪರಿಯ ವಿಸ್ತರದಲಿ ||
ಚಂದದಿಂ ತಿಳುಪಿ ಬಹುದೆಂದು ಸುಗ್ರೀವ ಕಪಿ |
ವೃಂದಮಧ್ಯದೊಳೊರೆದು ಕಳುಪಲಾನೀ ನೆಲಕೆ |
ಬಂದು ಸಂಬಾಧದಿಂ ಕಂಡು ತಿಳಿದನಿತನಾನುಸಿರ್ದೆದಾನವರರಸನೆ || ೫೦ ||

ಕಳವಿನಲಿ ಮೃತ್ಯುವಂಕಳ್ದು ಸಂಗ್ರಹಿಸಿ ನಿಜ |
ನಿಳಯದೊಳಗಿಟ್ಟಿರ್ಪುದಾವಮತಿ ದಾವಶಿಖಿ |
ಯುಳುಮೆಯಂ ಕಂಕುಳೊಳಗಿಟ್ಟು ಕಿಗ್ಗಾಳಿಯೊಳು ಪೊದೆಯ ಸಾರ್ದವ ಸೌಖ್ಯಮಂ ||
ತಳೆದಪನೆ ಸೀತಾಪ್ರಭಾವ ರಾಘವ ಕೋಪ |
ಜಳದಿಂದ ಕಾಳಿಮತೆಯಾಂತ ಲಂಕಾಪುರವ |
ಬಳಗಮಂ ನೋಡುತಂ ಹಿತವನಿನ್ನೊಳ್ಪೀನೆ ತಿಳಿ ದಾನವೇಂದ್ರ ಬೇಗ || ೫೧ ||

ಪರಹಿತವನೆಣಿಸಿ ಬೋಧಿಸಿದೆನಲ್ಲದೆ ಪುಸಿಯ |
ನೊರೆಯೆ ರಘುನಾಯಕನ ಮುಂದೆ ದೇವಾಸುರರು |
ಧುರದಿನಿಲುವಡಸಾಧ್ಯ ದೀರ್ಘತಪದಿಂ ಪಡೆದ ಸಂಪದವ ಪೋಗಾಡದೆ ||
ಧರಣಿಜೆಯನೊಪ್ಪಗಿಸಿ ಶರಣೆಂದು ಮೂಲೋಕ |
ದರಸನ ಕೃಪಾಬಲದಿ ಸುರರಾಜ ವಿಭವಮಂ |
ಚಿರಕಾಲಮನುಭವಿಸು ನಾಂ ಪೇಳ್ದುದುಳಿದುಪಾಯಾಂತರಗಳಿಲ್ಲಿಳೆಯೊಳು || ೫೨ ||

ಶ್ರೀರಾಮಪುರದರಸಸೇವಕಂ ಕಪಿಯೊರೆದ |
ಚಾರುತರ ವಚನಗಳ ಹಿತಮೆಂದು ಮಾನಸದಿ |
ತೋರಹರ್ಷವ ತಳೆದು ಧೀಮಂತರೊಡಬಡುವ ತೆರದೊಳಾಳೋಚಿಸುತಲಿ ||
ಈ ರಾಜಧಾನಿಯಂ ಪೊರೆವುದತಿ ಲೇಸೆಂದು |
ಮಾರುತಕುಮಾರ ಪೇಳಿದುದ ನಿಷ್ಠುರಮೆಂದು |
ದಾರಕೋಪಾವೇಶಮನನಾದ ದೈತ್ಯೇಂದ್ರನಿಂದ್ರಾದ್ಯಸುರರೆಡೆಯೊಳು || ೫೩ ||

**ಹದಿನೇಳನೆಯ ಸಂಧಿ ಸಮಾಪ್ತಂ**

---

## ಹದಿನೆಂಟನೆಯ ಸಂಧಿ

ಸೂಚನೆ || ಯಾತುಧಾನರ ನಗರಿ ಪಿತೃಸಖನಿಗರ್ಪಿಸುತ |
ಖ್ಯಾತಿಯಿಂದಮರಾರಿಗಳ ತರಿದು ಮರುತಭವ |
ಸೀತಾಂಘ್ರಿ ಪಂಕಜವ ಭಜಿಸುತಪ್ಪಣೆವಿಡಿದು ಬೀಳ್ಕೊಂಡನಾಪುರವನು ||

ಅತಿಹಿತದೊಳಂಜನಾಸುತ ನಿರೂಪಣೆಗೈದ |
ಚತುರತರ ವಾಣಿಯಂ ಕೇಳಿ ರೋಷದಿ ದೈತ್ಯ |
ಪತಿಯುರಗಪತಿಯಂತೆ ಮೊರೆದು ಪಲ್ಗಳನರೆದು ನಿಷ್ಠುರದಲಿಂತೆಂದನು ||
ಕ್ಷಿತಿಯೊಳೀಪರಿಯ ದುರ್ಮತಿಯ ಕಂಡರಿಯೆವೀ |
ಹತಕನಂ ತರಿಯದುಳಿಸಿದರೆ ಲೋಕಂಗಳಂ |
ವೆತೆಗಿಕ್ಕದಿರನೆನುತ ನಿಶ್ಚಯಂಗೈದ ದಶಶಿರನಾಗ ಕೇಳ್ ಭವಾನಿ || ೧ ||

ಕಾಲಪಾಶಾವಪಾಶಿತನಿಂಗೆ ಬುದ್ಧಿಗಳ |
ಜಾಲ ಹಿತಗೈದಪುದೆ ರೋಗಿಗೌಷಧಮುದೇಂ |
ಲಾಲಿತ್ಯ ಕರಮಹುದೆ ಕ್ಷಿತಿಯೊಳಗೆ ಕೇಡಿಗಂ ಮತಿಮರಣಕೌಷಧಗಳು ||
ಫಾಲಲೋಚನನಾದರುದಿಸುವುವೆ ದುಷ್ಟ ದಶ |
ಮೌಳಿಗೀನುಡಿಯಹಿತಮಾಗಿ ಪಲವಗೆಯಿಂದ |
ಬಾಲನುಡಿಗಳಲಿ ಜರೆವುತ್ತ ತರಿವುದೆನುತ್ತ ನೇಮಿಸಿದ ರಕ್ಕಸರಿಗೆ || ೨ ||

ಮದಮುಖನ ನಿಷ್ಠುರದ ಶಾಸನದಿ ದಾನವರು |
ಕದನ ಕರ್ಕಶ ಹನುಮನಂ ಪಿಡಿಯಲವ್ವಳಿಸ |
ಲದುಭುತವ ಕಂಡಾ ವಿಭೀಷಣಂ ಚಿಂತಿಸಿದ ಮುಂಗಾಣದರೆನಿಮಿಷವು ||
ಸದಗ ರಕ್ಕಸನಪಾಯವ ನೆನೆದ ನಿಷ್ಕೃತಿಯ |
ನಿದಕದೇಂ ಯೋಚಿಸುವೆನೆಂದು ಮೆಲ್ಲನೆ ಬಂದು |
ಪದಪಯೋಜಕೆ ನಮಿಸಿ ಮೃದುಮಧುರಭಾಷಣೆಯೊಳೆಂದ ದಶಕಂಠನೊಡನೆ || ೩ ||

ಸಕಲಾಗಮಜ್ಞ ಸರ್ವಜ್ಞ ಸತ್ಯಾನಂದ |
ನಿಕಟತ್ರಯಿಾ ಮಕುಟನಿಲಯ ಭೂಭೃಚ್ಛಾಪ್ತ್ರ |
ನಿಕರದಧಿನಾಥ ನಿನ್ನಯ ಚರಣಕವಿದಿತಾಂಶಂಗಳೇನುಂಟು ಜಗದೆ ||
ಯುಕುತಿಯುತವಾಣಿ ಬಾಲಕಶುಕಾದಿಗಳಿಂದ |
ರುಕುತಿಯು ಪರಿಗ್ರಾಹ್ಯಮೆಂದು ಭೂಮಿಾತಳದೊ |
ಳಕಳಂಕರೊರೆದಪರು ಸೇವಕರ ಭಾಷೆಯಂ ಕೈಕೊಳುವುದಸುರನಾಥ || ೪ ||

ಅಮರೇಂದ್ರ ಮೊದಲಾದರತುಲ ಸಿರಿವಂತರೀ |
ಕ್ರಮವ ನಂಗೀಕರಿಸರರಸ ಶಾಸ್ತ್ರನಿಷಿದ್ಧ |
ನಮುಚಿ ಮುಖ್ಯಾಸುರವರೇಣ್ಯರ್ಮಹಾಬಲರ್ ರಾಜ ಧರ್ಮವ ಮಿಾರದೆ ||
ಸಮತೆಯಿಂ ದೊರೆತನವನಾಳ್ದು ಸತ್ಕೀರ್ತಿಯಂ |
ದ್ಯುಮಣಿ ಸನ್ನಿಭ ವಿಕ್ರಮಂಗಳಂ ಖ್ಯಾತಿಯುತ |
ರಮಿತಕಾಲಂ ಬಾಳ್ದರೆಂಬುದು ಭವಚ್ಚಿತ್ತವರಿಯದುದೆ ದೈತ್ಯೇಂದ್ರನೆ || ೫ ||

ಅರಸುತನಕೂಣೆಯಂ ಸಜ್ಜನರಿಗಹಿತಕರ |
ಧರೆಯೊಳಖ್ಯಾತಿ ಶಾಖಾಮೃಗದ ವಧೆ ದೈತ್ಯ |
ರರಸ ಸದ್ವೃತ್ತದೂಷಣಮಾದ ಕತದಿಂದ ವಿಜ್ಞಾಪಿಸುವೆನಾಲಿಸು ||
ಅರಿಯಹುದು ತಪ್ಪುಗಳನೇಕಮೆಸಗಿಹನಿವನ |
ತರಿವುದುಂ ತಪ್ಪಲ್ಲವಾದಡೀ ಲೋಕದೊಳು |
ಚರರ ವಧಿಪುದು ರಾಜಧರ್ಮಸಮ್ಮತವಲ್ಲ ಕೇಳು ರಾಕ್ಷಸರನಲ್ಲ || ೬ ||

ಪೊಡೆವುದು ಕಶಾದಂಡದಿಂದಮಂಗವಿಲೋಪ |
ಮೊಡನೆ ನಾನಾವಿಧೋಪದ್ರವಂ ಚರರಿಗೊಡ |
ಬಡಿಕೆಯಲ್ಲದೆ ತರಿವುದೀ ಲೋಕಶಾಸ್ತ್ರದೊಳ್ ಕೇಳ್ದರಿಯೆ ಮುನ್ನ ಮಿದನು ||
ಕೆಡುಗನಾದಡದೇನು ಕೇವಲನಿಕೃಷ್ಟನಿವ |
ನೊಡೆಯನೆಡೆಗೈದಿ ತೋರಿಪರೊಂದು ಕುರುಹಿತ್ತು |
ನಡೆಸುವುದು ಲೋಕಸಮ್ಮತಮಾರ್ಯಮತವರಸ ಸತ್ಕೀರ್ತಿಕರ ಲಾಲಿಸು || ೭ ||

ಬಲಿಗಳೊಳುಬಲಿ ದೀರ್ಘದರ್ಶಿಗಳೊಳತಿದೀರ್ಘ |
ಚೆಲುವ ದೃಕ್ಫಲನನಾಗತ ವರ್ತಮಾನಗಳ |
ಕಲಿತಾಂತರಂಗದೇವಾಸುರರ ಮಧ್ಯದೊಳಗುಂಟೇ ಭವತ್ಸದೃಶರು ||
ಜಲಧಿ ಮೇಲ್ವರಿದರಡ್ಡೈಸುವವರಾರರಸ |
ನೆಲೆಯುಳ್ಳ ಚಿತ್ತರೀಪರಿ ಕೋಪವಶರಾದ |
ರುಳಿವುದಾರ್ಗಳವಹುದು ಪ್ರೀತಿಯಿಂದಾಲಿಪುದು ಬಿನ್ನವಿಪೆ ಪಿರಿಯರಿರವ || ೮ ||

ಉದರ ಪೋಷಣೆಗೆ ದೇಹವನು ವಿಕ್ರಯಗೈದು |
ಹೃದಯಸ್ಥ ಭೀತಿಯಿಂದಾಳ್ದನಾಜ್ಞೆಯ ಶಿರದೆ |
ಪದಗೊಳಿಸಿ ಸಂಚರಿಪರೀ ಚಾರು ಜನವಿಟರೊಳೇನುಂಟು ಗುಣದೋಷಗಳ್ ||
ಉದಧಿಯಂ ದಾಂಟೆ ದೇವಾಸುರರಿಗಸದಳದ |
ಸದನಮುಂ ತೊಳಲಿ ನಿಮ್ಮಯ ಸಮುಖದಿಂ ನಿಂದು |
ಚದುರಪೆತ್ತರಸನಂ ಪೊಗಳುತಿಹುದಚ್ಚರಿಯು ದೈತ್ಯೇಂದ್ರ ಭೂತಳದೊಳು || ೯ ||

ತನಗೆ ಬರುವತ್ಯಾಹಿತಂಗಳಂ ಲೆಕ್ಕಿಸದ |
ಲಿನವಿಕ್ರಮಂಗಳ ಭವತ್ಸಮುಖದೊಳು ಪೇಳ್ವ |
ರೆನಿತಾದರುಂ ಮಾಜದಂತೆ ವಿಸ್ತರಗೈದನಕಳಂಕ ಭೃತ್ಯನಿವನು ||
ಜನಪನೆಡೆಗೈದಿಯುಷ್ಮಚ್ಛೌರ್ಯ ಸಂದೋಹ |
ವನು ಬಿತ್ತರಿಸದುಳಿಯನಾಪ್ತವಚನಗಳವರ |
ಮನಕೆ ಭೀಕರ ಪುಟ್ಟುವುದು ಕೀರ್ತಿಲತೆ ಶತ್ರುಮಂದಿರದಿ ಬೆಳೆವುದರಸ || ೧೦ ||

ಇವನುಳಿದರಿನ್ನಾವ ಸಾಹಸಿಕ ದೈತ್ಯೇಂದ್ರ |
ಭವನಮಂ ಕಾಣ್ಬ ಭೂತಳದೊಳಂ ಮತ್ತಾವ |
ಜವಿಯುಂಟು ಪಗೆಯ ಮುಂಗಡೆಯ ನಿಮ್ಮಯ ಗುಣಾವಳಿಗಳಂ ಪೊಗಳ್ವರಾರು |
ಸುವಿವೇಕಿಯಾಗಲವಿವೇಕಿಯಾಗಲಿ ಭೃತ್ಯ |
ರವರ ಸೂದನಮಯೋಗ್ಯಂ ರಾಜಧರ್ಮಗಳ |
ನವಿರಳದೊಳರಿದಿರ್ಪೆ ಸರ್ವಜ್ಞಚಿತ್ತಕಾಂ ತಿಳಿಪಲೇಂ ಶಕ್ತನಹುದೆ || ೧೧ ||



ಹರನನುಗ್ರಹದಿ ಸಂಗ್ರಹಿಸಿದೀ ಬಲಶೌರ್ಯ |
ಸಿರಿಸಮೃದ್ಧಿಗಳರಿತು ಮಗುಳ್ದೈದಿ ಪೆರರೆಡೆಯ |
ಲೊರೆವರಾರುಂಟು ಮೇಲಾಶ್ಚರ್ಯಗಳ ನೋಡಲೈತಪ್ಪರೆಂತು ಮುಂದೆ ||
ಧುರದೊಳೆಚ್ಚಾಡುವುದದಾದರೊಡನೆ ಯೋಧರಿಹ |
ಪರಿಯನೆಂತರಿದಪರು ದೂತದಂಡನೆ ದೋಷ |
ಕರಮಾಗಿ ತೋರ್ದಪುದು ಲೋಕಶಾಸ್ತ್ರಂಗಳೊಳಗರಸ ದಯದಿಂದಾಲಿಸು || ೧೨ ||

ವಾನರನ ಕೊಂದ ರಕ್ಕಸರಾಯನೆಂಬುದೊಂ |
ದೂಣೆಯವು ಸಮನಿಸುವುದೊಂದು ಶೌರ್ಯೋನ್ನತಿಕೆ |
ಹಾನಿದೋರುವುದೆರಡು ನಿನ್ನವೈಭವ ಶತ್ರುವರಿಯದಂತಹುದು ಮೂರು ||
ನೀನರಿಯದುದನಾರು ಬಲ್ಲರಸುರೇಂದ್ರ ಸ |
ನ್ಮಾನಿಸಲು ಕಪಿಯಿಂದಮಮಿತಕಾರ್ಯಂಗಳ |
ನ್ಯೂನಮಾಗದೆ ವಶಂವದತೆಯಾಂತೊಪ್ಪುವವು ನಿಶ್ಚಯಮೆನುತ್ತರಿವುದು || ೧೩ ||

ಲೋಕಸಮ್ಮತ ಹಿತೋಕ್ತಿಗಳ ಪೇಳ್ದನುಜನಾ |
ಲೋಕನಂಗೈದು ಸಂತಸಗೊಂಡು ರಕ್ಕಸಾ |
ನೀಕದೊಳು ಪಿರಿಯಮತಿ ಕಾರ್ಯಕಾಲೋಚಿತಗಳರಿತೊರೆವನೆನುತ ಪೊಗಳಿ ||
ಶಾಖಾಮೃಗವ ವಧಿಸಿ ಧಾವಿಸುವ ದೈತ್ಯರ ನಿ |
ರಾಕರಿಸಿ ವೈರೂಪ್ಯಮೆಸಗುವುದು ನೀವೆನುತ |
ನೇಕ ವಿಧದಿಂದಾಪ್ತಜನರೊಳೊರೆವುತಮಿರ್ದ ದಶಕಂಠನಾನಂದದಿಂ || ೧೪ ||

ಆಸಮದೊಳಗಿಂದ್ರಜಿತು ಬೊಪ್ಪನೊಡನೆಂದ |
ನೇಸುವಿಧ ಶಸ್ತ್ರಾಸ್ತ್ರಗಳನಿಟ್ಟರೀ ಕಪಿಯು |
ವಾಸಿಗೆಟ್ಟಪುದಲ್ಲ ವಜ್ರಸನ್ನಿಭಕಾಯಮೊಂದನುಂ ಗಣಿಪುದಲ್ಲ ||
ಭಾಸುರ ಪರಾಕ್ರಮ ಶ್ರೀಕಲಿತ ಕೆಣಕಿದಡೆ |
ವಾಸವಾದ್ಯರ ತೃಣಕೆ ತಾರನೆಂದೊರೆವುತ್ತ |
ವಾಸವಾರಿಯು ನುಡಿಯಲಾದುದಾಲೋಚನೆಯು ದೈತ್ಯೇಶ ಚಿತ್ತದೊಳಗೆ || ೧೫ ||

ಕುಂತಪ್ರಮುಖ ಶಸ್ತ್ರತತಿಗಳೀತನ ಸೋಂಕ |
ವೆಂತಾದಡೆಯು ಶಿಕ್ಷೆಗೈದು ಬಿಡವೇಳ್ಕೆನುತ |
ಚಿಂತಿಸುತಮಿರೆ ದಶಾಸ್ಯಂ ಸುರಪಜಿತು ನೋಡುತಿಂತೆಂದನಯ್ಯನೊಡನೆ ||
ಪಿಂತಾನು ತಿಳಿದಿರ್ಪೆನಗ್ನಿಗಂಜುವುದೆನುತ |
ಸಂತಸದಲೊರೆಯೆ ಕರದೀಪಿಕೆಗಳಂ ತೋರೆ |
ಪಿಂತಿರುಗಿ ಪಲ್ಗಿರಿದು ಕಪಿತೆಯಂ ಪ್ರಕಟಿಸಿದನಖಿಳಜನ ನಗುವಂದದೆ || ೧೬ ||

ರಾವಣಂ ಕಂಡು ಕಪಿಯಂತರಂಗದ ಧೈರ್ಯ |
ಭಾವಮಿನಿತೆಂದರಿತು ಶಾಖಾಮೃಗಕೆ ಭೂಷ |
ಣಾವಳಿಯು ಲಾಂಗೂಲಮದಕೆ ಪ್ರಾಯಶ್ಚಿತ್ತಮೆಸಗಿ ಬಿಡಲದರಿಂದಲೆ ||
ಜೀವದಿಂದೈದಿ ತನ್ನಾಳ್ದವಂಗರುಪಲೆಂ |
ದಾವಿನೋದಂಗೆಯ್ಯಲಖಿಳ ದೈತೇಯರುಂ |
ತೀವಿದಾನಂದದಿಂದಿರಲಸುರ ನಾಯಕಂ ನಿಜ ಚರರಿಗಿಂತೆಂದನು || ೧೭ ||

ತರಿಸಿ ಪಟಗಳ ವಾಲಧಿಗೆ ಸುತ್ತಿ ತೈಲಂಗ |
ಳೆರೆದು ಹುತವಹನ ಸೋಂಕಿಸಿ ಬೀದಿಬೀದಿಗಳೊ |
ಳುರುತರಾರ್ಭಟೆಯಿಂದ ಪ್ರಾದಕ್ಷಿಣಂಗೈಸಿ ಬಿಡುವುದೆಂದಾಜ್ಞಾಪಿಸೆ ||
ಹರುಷದಿಂದಸುರರಂದಂಬರಗಳಂ ತಂದು |
ಹರಿಯ ಪುಚ್ಛಕೆ ಸುತ್ತುತಿರ್ದರಗ್ರಂ ತೋರು |
ತಿರಲರಮನೆಯೊಳಿರ್ದ ಪಟಗಳೆಲ್ಲವ ತಂದು ಪರಿವೇಷ್ಟಿಸಿದರು ಬಿಡದೆ || ೧೮ ||

ಮುಗಿದುವರಮನೆಯ ವಸ್ತ್ರಗಳೆಲ್ಲಮೂರೊಳಗೆ |
ತೆಗೆದುತಂದಾಕ್ಷಣಕೆ ಸುತ್ತಿದರನೇಕರಾ |
ನಗರದೊಳಗಿರ್ದಂಶುಕಂಗಳುಂ ಪೋದುವನಿತಿನಿತುಮಿನಿತಿಲ್ಲದಂತೆ ||
ಬೆಗಡುಗೊಂಡಸುರರೀಪರಿಯೊಳಂ ದೂರೆ ನಸು |
ನಗುತ ರಕ್ಕಸರಾಯ ನೇಮಿಸಿದ ಸ್ತ್ರೀಬಾಲ |
ರೊಗುಮಿಗೆಯ ವಸ್ತ್ರಗಳ ಸೆಳೆತಂದು ಪೂರ್ತಿಯಂ ಮಾಳ್ಪುದೊಮ್ಮನದೊಳೆಂದು || ೧೯ ||

ವನಿತೆಯರ ವಸ್ತ್ರಾಪಹಾರಮಂ ಕೇಳುತ್ತ |
ಹನುಮ ಶಿವಶಿವಯೆನುತ ಕಿವಿಗಳಂ ಮುಚ್ಚುತ್ತ |
ವಿನಯದಿಂ ವಾಲಮಂ ಲಾಲಿಸುತಮುಪಚರಣೆಗೈದನಾ ಸಮಯದೊಳಗೆ ||
ಘನತರದ ಪಾತಕಿಯು ದಶಮೌಳಿ ದುಷ್ಕೃತಿಯ |
ನೆನೆದ ಸ್ತ್ರೀಮಾನಭಂಗಂ ಪೊಲ್ಲಮಿಾನೆಲದ |
ಲೆಸಗೆ ದುರ್ಯಶ ಘಟಿಸದಂತೆ ಪ್ರೀತಿಯೊಳಿಂದು ಲಾಲಿಸುವುದೆನ್ನಸೊಲ್ಲ || ೨೦ ||

ಅಡವಿಯೊಳು ಮರಮರದಿ ನದಿನದಂಗಳತೀರ |
ವಿಡಿದು ಪಲಕಾಲವೆಮ್ಮೊಡನೆ ಸಂಚರಿಸುತಿರೆ |
ಬಡತನದೊಳಾದರೊಗ್ಗೇಣಿನರುವೆಯು ದೊರೆಯದಾಯ್ತಿನಿಸುದಿನವು ನಿನಗೆ ||
ಕಡುಗಲಿ ದಶಾಸ್ಯನೆಡೆಗೈತಂದ ಮಾತುರದಿ |
ಬಿಡುಗಣ್ಣರುಡುಗೆ ನಿನಗಬ್ಬಿದುದು ಮಗುಳಾಸೆ |
ಬಡಲು ಸಲ್ಲಂ ತುಷ್ಟಿವಡುವುದು ಯದೃಚ್ಛೆಯಿಂ ದೊರೆದುದಕೆ ಸಂತಸದೊಳು || ೨೧ ||

ಅತಿಕಾಂಕ್ಷೆಯಿಂದ ವಿಪರೀತ ಸಂಭವಮಹುದು |
ಸತಿಯರುಗಳಭಿಮಾನಮಂ ಸಲಹಿ ಲೋಕ ಸ |
ನ್ಮತ ಕೀರ್ತಿಯಂ ಗಳಿಸು ನೀನೆನುತ ಬಹುವಿಧದಿ ಪೇಳ್ದನಾವಾಲಾಗ್ರಕೆ ||
ಪತಿಯ ನುಡಿಯಂ ಕೇಳಿ ಸಂತಸದಿ ಕಾಮಿನೀ |
ಹಿತಮೆನಿಸಿ ಪರಿವೇಷ್ಟನಂಗೈದ ವಸ್ತ್ರಗಳ |
ತತಿಯೊಳಡಗಿದುದಾಗ ದೀರ್ಘತರವಾಲಧಿಯು ಪೆರ್ಚುಗೆಯನುಳಿದು ಬೇಗ || ೨೨ ||

ವಸನದಿಂ ಪರಿಪೂರ್ತಿಯಾದ ವಾಲಾಗ್ರಮ |
ನ್ನಸುರರೆಲ್ಲರು ಕಂಡು ತೈಲಂಗಳನ್ನೆರದು |
ಪೊಸತೆನಲು ವೀತಿಹೋತ್ರಪ್ರತಿಷ್ಠಂಗೈದು ಕೈಪರೆಗಳಂ ಕುಟ್ಟಲು ||
ಬಿಸಿಗಂಜಿದವನಂತೆ ಹನುಮನಂಗವಿಕಾರ |
ಮೆಸಗಲಸುರೇಶ ಗಹಗಹಿಸಿ ನಗುತಲೆ ನಗರ |
ರಸೆಯೊಳಗೆಮೆರೆಸಿ ಬಿಟ್ಟಪುದೆಂದು ನಿಶೆಚರರಿಗೊರೆದನುಲ್ಲಾಸದಿಂದ || ೨೩ ||



ಇನಿತು ಪೇಳಲು ದೈತ್ಯರನುವಾಗಿ ದುಂದುಭಿಗ |
ಳನು ಪೊಡೆದು ಕಹಳೆವರೆ ಚಪ್ಪಳೆಗಳಿಕ್ಕುತ್ತ |
ಘನಹರ್ಷದಿಂ ವೀಧಿಗೈತಂದರಂಜನಾ ಸುತನೋಡಿ ನಾಲ್ದೆಸೆಯನು ||
ಬಿನದಮೆನಿಸುವ ಪುರವ ನಿಶೆಯೊಳಗೆ ನೋಡಿದೆನು ||
ಮನಕಂ ಪ್ರಶಸ್ತಕರಮಾಗಲಿಲ್ಲವು ಪಗಲು |
ಮನೆಮನೆಗಳಂ ನೋಡಿ ಮನದಿ ಹರುಷಂಗೂಡಿ ಪೋಪುದತಿಲೇಸೆಂದನು || ೨೪ ||

ಇನ್ನೊಮ್ಮೆ ಪುರವ ದಿವದೊಳಗೆ ಸಂಚರಗೈದು |
ಚೆನ್ನಾಗಿ ಕೌತುಕಗಳೀಕ್ಷಿಸಿ ಮನೋರಥಗ |
ಳನ್ನು ಸಂಪಾದನಂಗೈದು ಪೋಗುವೆನೆಂದು ನಿಶ್ಚಯಂಗೈದು ಬಳಿಕ ||
ತನ್ನೊಳತಿಧೈರ್ಯದಿಂದಿರೆ ನೆರೆದ ದಾನವರ |
ಕುನ್ನಿಗಳ್ ಗಹಗಹಿಸಿ ನಗುತ ಬಹುವಿಧವಿನೋ |
ದೋನ್ನತಿಕೆಯಿಂ ಹಾಸ್ಯಮೆಸಗಿದರ್ಪರಿಪರಿಯ ವಾಕ್ಯವೈಭವಗಳಿಂದೆ || ೨೫ ||

ಭೇರೀಮೃದಂಗದಾರ್ಭಟೆಗಳಿಂ ಬೊಬ್ಬಿಡುತ |
ಕೇರಿಕೇರಿಗಳಲ್ಲಿ ತಿರುಗಿಸುತಮಿರಲಗ್ನಿ |
ಭೋರಿಡುತ ಪೆರ್ಚುತಿರೆ ತೈಲಂಗಳನ್ನೆರದು ಕೂಗಿ ಹಾಸ್ಯಗಳೆಸಗುತೆ ||
ಕ್ರೂರದಾನವರು ಸ್ತ್ರೀಬಾಲವೃದ್ಧರು ನೆರೆದು |
ಚೋರನಿವ ನೋಡೆನುತ ಪರಿಪರಿಯ ಕೂಗಿಡುತ |
ಮಾರುತಿಯ ನಗರಪ್ರದಕ್ಷಿಣಂಗೈಸಿದರು ನಿಮಿಷದೊಳಗಚ್ಚರಿಯೆನೆ || ೨೬ ||

ಅರಮನೆಗಳುಪ್ಪರಿಗೆಗಳು ಚಿತ್ರಕರುಮಾಡ |
ಸುರುಚಿರಲತಾಮಂಟಪಾದಿಗಳ ನೆಲ್ಲಮಂ |
ಮರುತಸುತ ನಿಟ್ಟಿಸುತಮಚ್ಚರಿಯಲೈತರುತಮಿರೆ ಕೌತುಕವ ನೋಳ್ಪರೆ ||
ತರಳರಂಗನೆಯರೆಲ್ಲರ್ನೆರೆದಶಕ್ತರಿಗೆ |
ಥರಣಿಯೊಳ್[1]ಗೊಪ್ಪುವುದೆ ಬಲವಮಿಾರಿದ ಶೌರ್ಯ |
ವರರೆ ಚೋರಂ ಸಿಲ್ಕಿ ದುರ್ಮಾರ್ಗದನುಭವವ ಪಡೆದನೆಂದೊರೆದರಾಗ || ೨೭ ||

ಬೀದಿಬೀದಿಯೊಳು ಕೌತುಕಮಾಗೆ ನೆರೆದು ಸ |
ಮ್ಮೋದದಿಂ ಹಾಸ್ಯಂಗಳೆಸಗಿ ಮನಬಂದಂತ |
ಬೋಧ ಜಾಳ್ನುಡಿಗಳಿಂದಖಿಲರಾಡುತಮಿರ್ದರನ್ನೆಗಂ ವಾರ್ತೆ ಪರಿದು ||
ಮೇದುರದಿ ಮನೆಮನೆಗಳೊಳ್ಪ್ರವೇಶಿಸಲು ಸಂ |
ವಾದಗೆಯ್ಯುತಮಿರ್ದರಲ್ಲಲ್ಲಿ ನೋಡುತ್ತ |
ಪೋದವರ್ಧರಣಿಜೆಯೊಳೊರೆದರೀ ವಾರ್ತೆಯಂ ಬಿತ್ತರದೊಳಾಕ್ಷಣದೊಳು || ೨೮ ||

ನಿನ್ನೆಡೆಯ ಮಾತಾಡಿಪೋದ ಕಪಿಯಂ ಪಿಡಿದು |
ಚೆನ್ನಾಗಿ ಕೈಗಟ್ಟಿ ಬಾಲಕಗ್ನಿಯನಿಟ್ಟು |
ಗನ್ನಗತಕವಮಾಡಿದನುಭವವ ತೋರುವರು ಪುರವೀಧಿವೀಧಿಗಳೊಳು ||
ತನ್ನ ಶಕ್ತಿಯನರಿಯದೆಸಗಿದುದು ಬಲುಪರಿಯ |
ಬನ್ನಬಡಿಸುವುದೆಂದು ನುಡಿಯಲ್ಧರಾಸುತೆಯು |
ಖಿನ್ನಮಾನಸಳಾಗಿ ಕ್ರತುಭುಜನ ಪ್ರಾರ್ಥನಂಗೈದಳತಿವೇಗದಿಂದ || ೨೯ ||

1. ಗಕ್ಕುವದೆ.

ಪತಿಯೆ ಪರದೇವತೆಯೆನುತ್ತಮಾನಿರ್ದು ಶುಭ |
ತತಿಗಳಂ ಕಾಣ್ಬುದುಂ ನಿಶ್ಚಯಮುದಾಗಿರ್ದ |
ರತಿಶಯದ ಸುಚರಿತ್ರೆಯೆನ್ನೊಳಗವಿಚ್ಛಿನ್ನಮಾಗಿನಿಂದಿರ್ದರೀಗ ||
ಖತಿಗೊಳಿಸುವಗ್ನಿ ಮಾರುತಿಗೆ ಹಿತಕರಮಾಗು |
ತತಿಶೀತಕರಮೆನಿಸಲೆಂದು ನಾನಾವಿಧದಿ |
ಕ್ರತುಭುಜ ಪ್ರಾರ್ಥನಂಗೈದಳತುಲಿತಮಂತ್ರತತಿಗಳಿಂದಂ ಪೊಗಳುತ || ೩೦ ||

ಸಾಧುಗಳ ಚರಿತೆ ಸತ್ಯಮುದಾದರನುದಿನಂ |
ಮೇದುರ ಪ್ರಿಯದಿಂದ ರಘುನಾಥನೆನ್ನ ಸಂ |
ಬಾಧೆಯಂ ಬಿಡಿಪುದುಂಟಾದರಸ್ಮದ್ಭಾಗ್ಯಮುಳ್ಳರಿಂದೀ ಸಮಯದಿ ||
ಬಾಧಿಸದಲಗ್ನಿ ತುಹಿನಾಕಾರದಿಂದಿರ್ದು |
ಮೋದಗೊಳಿಸಲಿ ಮರುತ್ಸುತನನೆನುತಂ ಪೊಗಳಿ |
ಮೇದಿನೀಸುತೆ ಮಗುಳೆ ಮಗುಳೆ ನೆನೆವುತ್ತಿರ್ದಳೀಂ ಕೃಪೆಯೊ ಕಪಿವರನೊಳು || ೩೧ ||

ದುರಳರಕ್ಕಸಿಯರೆಡೆಯೊಳ್ಸಿಲ್ಕಿ ಕಾರ್ಪಣ್ಯ |
ಕರಶೋಕದಿಂದಳಲುವೀ ದುರಾವಸ್ಥೆಯುಂ |
ಪರಿದು ಪೋಗುವುದು ನಿಜಮಾದಡೆ ಪತಿವ್ರತಾಧರ್ಮ ಸತ್ಯಮುದಾದಡೆ ||
ತರಣಿಸುತ ಲಕ್ಷ್ಮಣಾದ್ಯರಿಗೆ ಜಯಲಕುಮಿ ಸಂ |
ಭರಿತಮಹುದುಂಟಾದಡೆಯು ತುಹಿನಕಣದಂತೆ |
ಮರುತಜನ ವಾಲಾಗ್ರದಗ್ನಿಯಿರಲೆಂದೆನುತ ಪರಸಿದಳ್ ಧರಣಿಜಾತೆ || ೩೨ ||

ಸೀತಾತಪೋಮಹಿಮೆಯಿಂದಗ್ನಿ ಕಪಿವರಗೆ |
ಪ್ರೀತಿಕರ ಹಿಮಕಣದೊಲೆಸೆದು ಶುಭವಿಭವಂಗ
ಳಾತಿಶಯಮಂ ತೋರುವರೆ ಪ್ರದಕ್ಷಿಣಮಾಗಿ ತಿರುಗಿದುದು ವಾಲಾಗ್ರದೆ ||
ವಾತಾತ್ಮಭವನೆಂಬ ಪ್ರೀತಿಯಿಂಬಾಧೆ ಸಂ |
ಜಾತಮಾಗದೆ ಸುಖವಿನೋದದಿಂದಿರೆ ಧರಾ |
ಜಾತೆ ಸಂತಸದಿಂದ ಹಿಗ್ಗಿದಳಪೂರ್ವತರನುತಿಗೈದು ವಾಯುಸಖನ || ೩೩ ||

ತಿರುಗಿಸುತ ನಗರಮಂ ಹಾಸ್ಯದಿಂ ರಕ್ಕಸರ |
ನೆರವಿ ಕರತರೆ ಪುರದ್ವಾರದೇಶಕೆ ಮಹಾ |
ಪುರುಷರಗ್ರೇಸರಂ ಮುಂದಪ್ಪ ಕಜ್ಜಗಳನೆಣಿಸಿ ಶೌರ್ಯಗಳ ಬೆಳೆಸಿ |
ಪೊರೆಯೊಳಿಹ ರಕ್ಕಸರನೊದೆದು ಗೋಪುರಕಡರಿ |
ಧುರವಿಜಯಮಂದರೋಪಮಮಾಗಿ ಕಾಯಮಂ |
ಹರುಷದಿಂ ಪೆರ್ಚಿಸುತ ಮಗುಳಂಗುಟೋಪಮಿತನಾದನೊಂದೇಕ್ಷಣದೊಳು || ೩೪ ||

ಉಡಿದು ಪಾಶಗಳೆಲ್ಲ ಪೊಡವಿಯೊಳಗುದಿರಲ್ಕೆ |
ಕಡುಗಲಿ ಮಹಾಶೈಲದಾಕಾರಮಂ ತಳೆದು |
ಪಿಡಿದೊಂದು ಲಾಳವಿಂಡಿಗೆಯ ದೈತ್ಯರನೆಲ್ಲ ಸದೆಬಡಿದು ಸಂತಸದೊಳು ||
ತಡೆಯದಾ ಪುರವನೆಲ್ಲವಸುತ್ತಿ ಲಂಕೆಯಂ |
ಕೊಡಲಗ್ನಿ ಹೋತ್ರಂಗೆ ಪೂಜೆಯಹುದೆನುತಮು |
ಗ್ಗಡಿಸಿ ನಗರವಸುತ್ತಿ ಮೊದಲೊಳ್ಪ ಹಸ್ತನಾಲಯವನರ್ಪಿತಗೈದನು || ೩೫ ||



ಸುರರಗ್ರಭವನ ಪೂಜಿಸಿ ಹನುಮ ಮನದೊಳಗೆ |
ಹರನಸುತನಂ ಪ್ರಾರ್ಥನಂಗೆಯ್ಯಲುಪಹಾರ |
ಕರಣಗೈದುಂ ಪ್ರಹಸ್ತನ ಗೃಹವ ರಾವಣಿಯ ಮಂದಿರದೊಳಿಟ್ಟಗ್ನಿಯ ||
ಸರಭಸದಿ ಘಟಕರ್ಣ ವಜ್ರದಂಷ್ಟ್ರಂ ವಿಕಟ |
ತರಣಿವೈರಿಯು ರಶ್ಮಿಕೇತು ಶುಕಸಾರಣರ |
ವರಮಂದಿರಂಗಳ ಮಹಾಪಾರ್ಶ್ವನಾಲಯವನಿತ್ತನಾ ಕ್ರತುಭುಜಂಗೆ || ೩೬ ||

ಕರಿವದನ ದಂಷ್ಟ್ರನ ಕರಾಳ[1]ನಂಮಾಲಿಯಾ |
ಧುರವಿಜಯ ರೋಮಶನ ಮತ್ತಯುದ್ಧೋನ್ಮತ್ತ |
ದುರುಳವಿದ್ಯುಜ್ಜಿಹ್ವ ಶೋಣಿತಾಕ್ಷಾದಿಗಳ ಗೃಹಗಳರ್ಪಿಸುತಗ್ನಿಗೆ
ತ್ವರಿತದಿಂದ ಪಿಶಾಚ ಬ್ರಹ್ಮಘಾತಕ ಯಜ್ಞ |
ಹರ ಹ್ರಸ್ವಕರ್ಣ ಮಕರಾಕ್ಷ ಮೊದಲಾದವ |
ರ್ಗಿರವೆನಿಪ ಭವನಗಳ ವೀತಿಹೋತ್ರಂಗಿತ್ತು ನಡೆದನತಿ ಸಂಭ್ರಮದೊಳು || ೩೭ ||

ರಾವಣಾನುಜ ವಿಭೀಷಣನ ಗೃಹವಂ ಬಿಟ್ಟು |
ಪಾವಮಾನಿಯು ನಗರಮಂ ಸುಟ್ಟು ದೈತ್ಯವನ |
ದಾವಾಗ್ನಿಕಲ್ಪನೆಂದೆನಿಸಿ ರಕ್ಕಸಿಯಿರ್ಪ ಗೃಹದೆಡೆಗೆ ಬಂದು ನಿಂದು ||
ಈ ವಸುಧೆಯೊಳಗಗ್ನಿಪುರುಷ ಸಂತರ್ಪಣಂ |
ಭಾವಿಸುವಡೀಕೆಯಿಂದಾದುದೆನ್ನುತ ಪೇಳಿ |
ನೋವಿದಂ ಜ್ವಲನಗರ್ಪಿತಗೈದನಾ ಗೃಹವನೇನೆಂಬೆನಚ್ಚರಿಯನು || ೩೮ ||

ನಗರಿಯೆಲ್ಲವ ತೊಳಲಿ ನಾನಾಗೃಹಂಗಳಂ |
ಸೊಗಸಿಂದಮಗ್ನಿಪುರುಷಂಗಿತ್ತು ರಾವಣಂ |
ಗೊಗುಮಿಗೆಯ ಹರುಷಾಸ್ಪದವನೀಯುವರಮನೆಯ ಪೂರ್ಣಾಹುತಿಗೆ ನೇಮಿಸಿ ||
ಮಿಗೆಸಂತಸದಿ ಪರ್ವತಾಗ್ರದೊಳು ನಿಂದು ಬಲು |
ಬಗೆಯಿಂದಮಾ ಧನಂಜಯ ವೃದ್ಧಿಯಂ ನೋಡು :
ತಗಣಿತ ಸುವಚನಾಳಿಯಿಂದ ಪ್ರಾರ್ಥನೆಗೈದನಯ್ಯನಂ ಭಕ್ತಿಯಿಂದೆ || ೩೯ ||

ತರಳಗಂ ಸಂತಸವನೀವೆನೆಂದೈತಂದು |
ಮರುತ ತನ್ನಯ ಸಖನಕಂಡು ಸಂತಸಗೊಂಡು |
ಹರುಷದಿಂದಾಗ ಪ್ರೇಮಾಲಿಂಗನವನೆಸಗೆ ಮಿತ್ರನಾಗಮನದಿಂದ ||
ವರಜಾತವೇದಸನತೀವ ಪೆರ್ಚಿಗೆಯಿಂದ |
ಪುರದೊಳಭಿವೃದ್ಧಿಯಾಂತೆಸೆಯಲಾ ಪಟ್ಟಣಂ |
ಬೆರೆದಗ್ನಿ ಹೋತ್ರನೊಳಗೆರಕಮಾದಂದದೊಳ್ ತನ್ಮಯದಿ ಗೋಚರಿಸಲು || ೪೦ ||

ಹುತವಹನು ಪ್ರಬಲಮತಿಶಯಮಾಗೆ ಭವನಗಳು |
ಮಿತಿಯಿಲ್ಲದಗ್ನಿಮಯಮಾಗೆ ನವರತುನಗಳ |
ತತಿಗಳೆಲ್ಲವು ಸಿಡಿದು ಪುಟನೆಗೆವುತಿರೆ ಚಿಣಿಲುಚಿಟಿಲೆಂದು ರವಗೊಡುತಲಿ ||
ಸತತಗತಿಯಾತ್ಮಜಂ ನಿಟ್ಟಿಸುತಮಿರೆ ದೇವ |
ಯತಿ ನೋಡಿ ಹಿಗ್ಗುತ್ತಮಖಿಲಾಮರರ್ವೆರಸಿ |
ನುತಿಗೈದನಂಜನಾಸುತನ ನಾನಾಪರಿಯಲತಿಹರುಷಗೊಳ್ಳುತಾಗ || ೪೧ ||

1. ಜಂಬು.

ಬೆಳದುದಗ್ಗಿಯು ದಿವಾಕರನರುಣ ಕರಗಳಿನೆ |
ಥಳಥಳಿಪ ಪೊಂಗದಿರನಂಬರದಿ ಮಿನುಗಿಸುತ |
ಕಳಕಳಿಪ ಪೂತಮುಳ್ಮುತ್ತುಗದ ಮರನಂತೆ ತೋರ್ದುದಾಶ್ಚರ್ಯಕರದೆ ||
ನಳಿನಭವ ಸಹಜಗುಣವಂ ಧರಾತಳಕದೇ |
ನಿಳಿಸಿದನೊ ರಕ್ಕಸನಶೋಕನಂದನ ರತುನ |
ಕಳೆಯನಾಂತುದೊ ಯೆನೆ ಧನಂಜಯಂ ನಗರದಾಕಾರದಿಂ ರಂಜಿಸಿದನು || ೪೨ ||

ತಾರಾಪಥವನಂಟೆ ದೇವರ್ಕಳಿಗೆ ಸಿರಿಯ |
ತೋರುತಿರೆ ಕರುಮಾಡ ಸಮುದಯಂಗಳು ಬೆಂದು |
ಧಾರಿಣಿಗೆ ಕೆಡೆದಿರ್ದುವಾ ಮೇರುಗಿರಿ ಮಂದರಂಗಳಾಕೃತಿಗಳಿಂದ ||
ಚಾರುತರ ನವರತುನಮುಷ್ಣತೆಗೆ ಸಿಡಿಸಿಡಿದು |
ಪಾರಿದುವು ಬಾನೆಡೆಗೆ ದೇವತೆಗಳುಂ ಪ್ರಿಯದಿ |
ಮಾರುತಾತ್ಮಜಗದೇನರಳಮಳೆಯಂ ಸುರಿದರೋ ಯೆನಲ್ ತೋರ್ದುದಾಗ || ೪೩ ||

ಪುರಮುಗ್ನಿಹೋತ್ರನಿಗಭಿನ್ನರೂಪಾಂತಿರಲು |
ತರಹರಿಸಿ ಪ್ರಾಣಿಗಳ್ ನಿಲಲಮ್ಮದಲೆ ಕೆಲಕೆ |
ಲರು ತತ್ತರಂಗೊಂಡರಾರ್ಭಟಿಸಿ ಗೋಳಿಡುತ ಸಾರುತಿರಲೆಣ್ದೆಸೆಯೊಳು ||
ತ್ವರಿತದಿಂದಂಬರದ ಗತಿವಿಡಿದು ಕೆಲಕೆಲರು |
ಪರಿವುತಿರೆ ಕೆಲರಗ್ನಿಯೊಳ್ಸಿಲುಕಿ ಮೂರ್ತಿಗಳ |
ಮರೆದು ಹುರಿಕರಿಯಾದರಾ ನಗರದೊಳಗುಳ್ಳ ರಾಕ್ಷಸರ ನೆರವಿಯಾಗ || ೪೪ ||

ಪ್ರಳಯ ಭೈರವನೊ ಕಾಲಾಗ್ನಿಯೋ ಕಲ್ಪಾಂತ |
ನಳಿನಸಖನೋ ಕಾಲಕಾಲನೀ ಕಪಿರೂಪ |
ದಳೆದು ಲಂಕಾಪುರವನುರುಹಲೋಸುಗ ಬಂದನೋ ಯೆನುತ ನಾಲ್ದೆಸೆಯೊಳು ||
ಪೊಳಲಜನ ಬೊಬ್ಬಿಡುತ ಹಾ ಪುತ್ರ ಹಾ ತಾತ |
ಸುಲಭಮಲ್ಲದ ಲಂಕೆ ಸುಟ್ಟುಪೋದುದೆನುತ್ತ |
ತೊಳಲಿ ಬಳಲುತ ಕೂಗುತಿರ್ದುದಾ ರಕ್ಕಸರ ನೆರವಿಯಂಬುಧಿಘೋಷದಿ || ೪೫ ||

ತ್ರಿಪುರಹರನೇತ್ರಾಗ್ನಿಯಿಂದುರಿಧ ದಿವಿಷದರ |
ರಿಪುಶರೀರದ ಮಾಳ್ಕೆಯಂತೆಸೆಯೆ ದಾನವರು |
ಪ್ರಪಲಾಯನಂ ಶರಣಮೆಂದು ಬಂದುದ ಸೆಳೆದು ಸಾರುತಿರೆ ನಾಲ್ದೆಸೆಯೊಳು ||
ಅಪರಿಮಿತ ಸಂತಸದೊಳಮರತತಿ ಪೊಗಳುತಿರೆ |
ಕಪಿಕುಲೋತ್ತಮ ನೋಡಿ ವೇಗದಿಂ ವಾಲಾಗ್ರ |
ದುಪರಿ ಪ್ರತಿಷ್ಠಿತಾಗ್ನಿಯ ನೋಡುತಿಂತೆಂದ ನುತಿಗೈದು ಭಕ್ತಿಯಿಂದೆ || ೪೬ ||

ಸಕಲದೇವತೆಗಳಿಂ ಸಂಪೂಜ್ಯಮಾನ ನಿ |
ನ್ನಕಳಂಕಮೂರ್ತಿ ಪೂಜೆಯೊಳಖಿಳ ದೇವತಾ |
ನಿಕರ ಸಂತುಷ್ಟಿವಡೆದುದು ಪಿತನ ದಾಕ್ಷಿಣ್ಯದಿಂದೆನ್ನ ಮನದಿಷ್ಟಮುಂ ||
ಪ್ರಕಟದಿಂ ದಯೆಗೈದೆ ಸುಖರೂಪದಿಂ ನಿನ್ನ |
ಪ್ರಕೃತಿಯಂ ಸಾರೆಂದು ನೀರಧಿಯ ಸಾರ್ಚಿದಂ |
ಯುಕುತಿಯೆಂತುಟೊ ಪಾವಮಾನಿಯೆಂದಮರತತಿ ಪೊಗಳುತಚ್ಚರಿಗೊಳ್ಳಲು || ೪೭ ||



ಸವನಾಂತ್ಯದವಭೃಥಸ್ನಾನಮಂ ಮಾಳ್ಪಂತೆ |
ದಿವಿಜಾಗ್ರಭವ ಪೂಜೆಗೈದು ಕೃತಿಯೆಂದೆನಿಪ |
ಪವನಜನ ವಾಲಾಗ್ನಿಹೋತ್ರ ನೀರಧಿಯೊಳಗೆ ಮಜ್ಜನಂಗೆಯ್ಯಲಾಗ ||
ತವಕದಿಂ ಪೂವಳೆಯ ಕರೆದರಭ್ರದಿ ದೇವ |
ನಿವಹರಪ್ಸರೆಯರುಂ ಕುಣಿದರಾ ಗಾಯಕರ್ |
ವಿವಿಧಾನುರಾಗದಿಂ ಪಾಡಿದರ್ಮಾರುತಿಯ ಸಾಹಸಗಳುಗ್ಗಡಿಸುತೆ || ೪೮ ||

ಬನವ ಭಂಗಿಸಿ ದೈತ್ಯಜನವ ನೆಗ್ಗಿಸಿ ರತುನ |
ಘನಗೋಪುರಂಗಳಿಂ ಪೊಳೆವ ಲಂಕಾದ್ವೀಪ |
ವನು ದಹಿಸಿ ಜಯಲಕುಮಿವೆರಸಿ ಶೈಲಾಗ್ರದೊಳ್ಕುಳ್ಳಿರ್ಪ ಕಪಿರೂಪಿನ ||
ವನಜಪೀಠನ ನೋಡಿ ಸರ್ವಭೂತಂಗಳುಂ |
ತನತನಗೆ ನಡುಗಿದುದು ಕಾಲಾಗ್ನಿಯೆಂದರಿತು |
ಹನುಮನಂ ಪೊಗಳಿದುದು ಭಯಭರಿತ ಭಕ್ತಿಯಿಂದೇನೆಂಬೆನಚ್ಚರಿಯನು || ೪೯ ||

ಪುರಮೆಲ್ಲ ಜಾತವೇದಸನಿಂದ ಭಸ್ಮಮಾ |
ಗಿರೆ ಕಂಡು ಮಾರುತಿಯು ಚಿಂತಿಸಿದ ಕೋಪಮಿಾ |
ಪರಿಯೊಳೇನೊಂದರಿಯದಜ್ಞಾನದೊಳ್ಮುಳುಗಿಸಿದುದಕಟ ಕ್ರೋಧವನ್ನು ||
ಪೊರಡಲೀಸದೆ ನಿರೋಧಿಸುವ ಸತ್ಪುರುಷರೀ |
ಧರೆಯೊಳಗ್ಗಳರಲ್ತೆ ರೋಷ ರೌರವಮುಖ್ಯ |
ನರಕಂಗಳಿಗಭೇದಮೆಂಬುದೇ ದಿಟಮಲ್ಲದನ್ಯಮಲ್ಲೆನುತಿರ್ದನು || ೫೦ ||

ಪಾಪಗಳ ನೆಲೆಗಟ್ಟು ನೀಚೋಚ್ಚವಾಣಿಗಳ |
ಕೂಪಮೆಸಗದುದನೆಸಗುವ ತಾಣ ನುಡಿಯದುದ |
ಪ್ರಾಪನಂಗೈವ ಕಪಿ ಬಲಶಾಲಿ ಬಾಡಬನಬಿಂಬಮೆರಡಿಲ್ಲವೆಂಬ ||
ಕೋಪಮಂ ನೆಮ್ಮಿದವ ಗುರುಪಿತೃಭ್ರಾತೃಗಳ |
ರೂಪ ತಿಳಿವನೆ ಮಹಾಸನ್ನಿಪಾತೋಲ್ಬಣದಿ |
ಪೋಪುದೇನರಿದಿಹುದೆ ರೋಷವಶನಾದೆ ನಾನಕಟಕಟ ಶಿವಯೆಂದನು || ೫೧ ||

ಕೋಧಾನಲನ ನೆಮ್ಮಿದವ ಮೂಕನಾದ್ಯ ಸಂ |
ಭೇದಿಯಹನಹ ಕೋಪಜನನಮಾದೆಡೆಯನುಂ |
ಭೇದನಂಗೈದು ಮಗುಳನ್ಯರಂ ಸದೆದಪುದು ಕರಕಲಿತದಿಂಗಳಮದು ||
ಬಾಧಿಪುದು ಮೊದಲನ್ಯರಿಂಗೆ ದುಃಖವಕೊಡುವು |
ದೀ ಧರಾವಲಯದೊಳು ಸಕಲಾನುಭವಸಿದ್ಧ |
ಕ್ರೋಧಕೆ ವಶಂವದತೆಯಾಂತರಿಯದಾದೆನಕಟಕಟ ಶಿವಶಿವಯೆಂದನು || ೫೨ ||

ಹಿಂದು ಮುಂದರಿಯದೀನಗರಮಂ ಸುಡುವೆಡೆಯ |
ಮೊಂದಿನಿತು ತೋರದಾದುದು ಧರಾನಂದನೆಯ |
ಕುಂದುಹೆಚ್ಚುಗಳೆಣಿಸದಾದುದು ಕಪಿತ್ವಮಿಾಧರೆಗೆ ಗೋಚರಮಾದುದು ||
ಸಿಂಧುಲಂಘನ ನಿಶಾಟನ ಮುಖ್ಯಕಷ್ಟಗಳು |
ಪೊಂದಿದುವು ನಿಷ್ಫಲತೆಯನ್ನಕಟ ಮತಿಯೆನಗೆ |
ಮಂದಮೇಕಾಯ್ತೆನುತ ಜನಕಜಾತೆಯ ನೆನೆದು ಚಿಂತಿಸಿದ ಕಪಿವೀರನು || ೫೩ ||

ಮನದೊಳುದ್ದೇಶಿಸಿದ ಕಾರ್ಯಮುಳಿದೆಲ್ಲಮಂ |
ಘನತರದಿ ಸಾಧಿಸಿದುದಾಯ್ತು ಮೂಲವಿಘಾತ |
ವನುಗೈದ ಪಾತಕಿಯದೇನೆಂದು ಪೋದಪೆಂ ರಾಮಲಕ್ಷ್ಮಣರ ಪೊರೆಗೆ ||
ಎನಗಿಲ್ಲಿ ಪ್ರಾಣಸನ್ಯಾಸಮಂಬುಧಿ ಪತನ |
ಕೊನೆಗಗ್ಗಿಯೊಗುವುದಲ್ಲದಡಾರ್ಗೆ ಮುಖವನಾ |
ನನುವಿಂದ ತೋರ್ದಪೆನದೆಂತೆನುತ ತೊಳಲಿದಂ ಮಾನಸದಿ ಪವನಸುತನು || ೫೪ ||

ತ್ರಿಪುರದಹನೋಪಮಮುದಾಯ್ತು ಲಂಕಾಪುರಂ |
ವಿಪುಳಾತನುಜೆಯೆಂತು ಜೀವದಿಂದಿಹಳೆನ್ನ |
ಕಪಿತತ್ವ ಮುಲೋಕವಿದಿತಮಾಯ್ತೊರೋಷ ದೋಷಕಾಲಯಮಾದುದು ||
ನೃಪಸೇವೆಯಧಿಕಾಗಸಾಸಾರ ಯತಿಕಷ್ಟ |
ವಿಪರೀತ ಭಾಜನಮೆನುತ್ತ ನಾನಾಪರಿಯ. |
ಲುಪಮಿತದ ಚಿಂತೆಯಿಂ ಮರುಗಿ ತನ್ನೊಳ್ತಾನೆ ಮಗುಳೊಂದು ಪರಿಯನೆನೆದಂ || ೫೫ ||

ಧರಣಿಸುತೆ ಮಡಿದ ವಾರ್ತಾಶ್ರವಣ ಮಾತುರದೊ |
ಳರಸಳಿವ ಸೌಮಿತ್ರಿಯಣ್ಣನನುಸರಿಸದಿರ |
ಭರತನೀವಾಣಿಯಂ ಕೇಳುತ್ತಮುಸುಗಳೆವ ಶತ್ರುಘ್ನನೊಡನೆ ಮಡಿವಂ ||
ಅರಮನೆಯೊಳಂ ಮಾತೃವರ್ಗ ವಿಲಯವನೈದೆ |
ಹರಿಸುತಂ ಕೇಳ್ದಿರಂ ಪ್ಲವಗತತಿಯಿದ ಕಂಡು |
ಮರಣಮಪ್ಪುದುತಪ್ಪದಿನಿತನರ್ಥಾನರ್ಥ ಮೆಸಗಿದುದು ಮತಿಯೆಂದನು || ೫೬ ||

ತಿಳಿಯದಾನೈದಿದಡೆ ದುರ್ಯಶಂ ಘಟಿಸುವುದು |
ಖಳನ ಪಟ್ಟಣದೆಡೆಯ ನೀರಧಿಯ ತೀರದೊಳ್ |
ಜಲಪರ್ಣ ಮಾರುತಾಹಾರದಿಂದಾಯುವಂ ಕಳೆವೆನಿದು ನನ್ನಿಯೆನುತ ||
ತೊಳಲಿ ತನ್ನೊಳ್ತಾನೆ ಗಿರಿಯಗ್ರದೇಶದೊಳು |
ಕುಳಿತಿರ್ಪ ಪವನಸುತಗಮಿತ ಶುಭಸೂಚಕಂ |
ಪೊಳೆದುಸಿರ್ದವಂಗದೊಳು ಚಿಂತಾಮಲಿನಪಂಕ ತೊಳೆದುಪೋಗುವ ತೆರದೊಳು || ೫೭ ||

ಅನಿತರೊಳಗಂಬರದಿ ಪೋಪ ಚಾರಣಲೋಕ |
ವನಘ ಚಾರಿತ್ರೆಯಂ ಪೊಗಳುತ್ತ ತಮ್ಮೊಳಗೆ |
ಘನತರಾನಂದದಿಂದಿಂತೆಂದರೀ ಧರಾತಳದಿ ಧೀಮಂತರೊಳಗೆ ||
ಹನುಮಂ ಗರೀಯಸಂ ಪ್ರಳಯಾಗ್ನಿಯೊಲು ತಮ್ಮ |
ಜನಕಸುತೆ ಪೊರತಾಗಿ ಲಂಕಾನಗರಿಯನ್ನು |
ಕಿನಿಸಿಂದ ಭಸ್ಮಸಾತ್ಕೃತಗೈದನೇಂ ಪ್ರೌಢನೆನುತೊರೆದರಾಗಸದೊಳು || ೫೮ ||

ತನಗಾದ ಶುಭನಿಮಿತ್ತಗಳ ಚಾರಣರುಲಿಗ |
ಳಿನಿರಸಂ ಶ್ರುತಿವಿಹಿತಮೂಗಲಾಕ್ಷಣ ಪರಿದು |
ದಿನನುದಯದೊಳಗಂಧತಾಮಿಸ್ರ ಜಗುಳುವಂದದೆ ಚಿಂತೆ ಜರಿಯಲಾಗ ||
ಮನಕೆ ಸಂತಸಮಾಗೆ ಮಗುಳೊಮ್ಮೆ ರಾವಣನ |
ಬನವ ನೋಡುವೆನೆಂದು ಬೇಗದಿಂದೈತಂದು |
ವನಧಿಮೇಖಲೆಯಾತ್ಮಭವೆಯ ಕಂಡಾನಂದಪರವಶತೆಯಾಂತನಂದು || ೫೯ ||



ನಿಧಿಯಕಂಡ ದರಿದ್ರನಂತೆ ಹಿಗ್ಗುತಲಿ ಸ |
ನ್ನಿಧಿಗೈದಿ ಚರಣಕಾನತನಾಗಿ ನಿಲೆ ಪಯೋ |
ದಧಿಯೂರ್ಮಿಮಾಲಿಕಾನಿವಹಮೆನಿಪ ಕಟಾಕ್ಷವೀಕ್ಷಣವ ಪರಪಿನೋಡಿ ||
ವಿಧಿಭವೇಂದ್ರಾದಿಗಳಪಾಂಗ ದರ್ಶನದಿಂದ |
ಮಧಿಕ ಸಿರಿವಂತರೆಂದೆನಿಸುವಂದದೆ ವರವ |
ನುದಧಿಸುತೆ ಪಾಲಿಸಿದಳಂಜನಾ ನಂದನಗೆ ಬುಧರು ಸಂತಸಗೊಂಬೊಲು || ೬೦ ||
ಕರುವಕಂಡೆಳಗಂದಿಯಂತೆ ಧರಣೀಜಾತೆ |
ಮರುತಸುತನಂ ಕಂಡು ಪ್ರಿಯನುಡಿಯೊಳುಪಚರಿಸಿ |
ತರಳ ನಂಜಿನಮಡುವಿನಿಂದಿಳಿದು ಬಂದೆನ್ನ ಮನಕೆ ಸಂತಸವನಿತ್ತೆ ||
ಚಿರಜೀವಿಯಾದ ಕತದಿಂ ಜಯಪ್ರದಮಾಗಿ |
ದುರಳರಕ್ಕಸ ಸಂತೆಯಂ ಕಳಿದು ರಾಘವಗೆ |
ಹರುಷದಾಯಕನಾದುದೆನ್ನ ಭಾಗ್ಯದ ಬೆಳಸೆನುತ್ತ ಲಾಲನೆಗೈದಳು || || ೬೧ ||
ಮನದೊಲವಿನಿಂದಮಂಬುಜಪಾಣಿ ಕುಸ್ತರಿಸೆ |
ಹನುಮನತಿಭಕ್ತಿಯಿಂ ಪದಪಯೋಜಕೆ ನಮಿಸಿ |
ಜನನಿ ಯುಷ್ಮತ್ಕಟಾಕ್ಷದ ಲೇಶದಿಂದ ಸೃಷ್ಟ್ಯಾದಿ ಕಾರ್ಯಗಳಪ್ಪುವು ||
ದನುಜ ದಶಕಂಠ ಪ್ರಮುಖರು ಮಶಕಶಿಶುಗಳೆಂ |
ದೆನಿಪರು ಭವಚ್ಚರಣನೆನಹಿಂದ ಪದಿನಾಲ್ಕು |
ಜನಪದೇಶಾನತ್ವ ಸಮನಿಪುದು ರಘುನಾಯಕ ಪ್ರೀತೆ ಕೇಳು ಮಾತೆ || ೬೨ ||
ಅಪ್ಪಣೆಯನಿತ್ತರಾಳ್ದನ ಚರಣಮಂ ಕಂಡು |
ಬಪ್ಪೆನಬುಜಾಂಬಕನ ನೇಮದಿ ಪದಾಬ್ಜನತ |
ನಪ್ಪೆನೆಂದೆರಗಿ ಬಿನ್ನಪಗೈದ ಮಾರುತಿಯ ಕಂಡು ನಿಜ ಕರುಣದಿಂದ ||
ಅಪ್ಪ ನಾಂ ಪೇಳ್ವುದೇನೀತಾಣದೊಳಗೆ ನಾ |
ನಿಪ್ಪವಸ್ಥೆಗಳ ಚಾಕ್ಷುಷಮಾಗಿ ತಿಳಿದೆ ಮುಂ |
ದಪ್ಪುದೇನುಂಟೆಲ್ಲ ಸರ್ವಜ್ಞ ನೀಂ ಬಲ್ಲೆಯೆನುತ ಮಗುಳಿಂತೆಂದಳು || ೬೩ ||
ಜಯವಂತನೆನಿಸಿ ದೈತ್ಯರ ಕುಲವ ಸಂಹರಿಸಿ |
ಭಯ ರಹಿತನಾಗಿ ದುರ್ದಶೆಗಳೆಲ್ಲವ ನೀಗಿ |
ಖಯ ಖೋಡಿಯಿಲ್ಲದತಿ ಹರುಷದಿಂ ರಾಮನ ಪದಾಬ್ಜಮಂ ಕಂಡೆರಗುತ ||
ರಯದಿಂದಮೈತರುವುದೆಂದು ಬೀಳ್ಕೊಡೆ ಹನುಮ |
ಭಯಭರಿತ ಭಕ್ತಿಯಿಂ ಭಜಿಸುತಪ್ಪಣೆವಿಡಿದು |
ನಯಸಾರವೆತ್ತು ಪಿಂದಿರುಗಿ ನಾಲ್ಕಡಿಯಿಟ್ಟು ಸಾಷ್ಟಾಂಗವೆರಗಿ ಮುದದಿ || ೬೪ ||
ಶ್ರೀರಾಮಪುರದೆರೆಯನಂಘ್ರಿದರ್ಶನಗೈವ |
ತೋರಕಾಂಕ್ಷೆಯೊಳಂಜನಾತನಯ ಮನದಿ ನಲ |
ವೇರಿ ಹೊಂಪುಳಿವೋಗಿ ಮಾರ್ಗವಿಡಿದೈತಂದು ನಿಂದೊಂದು ತರುನೆಳಲೊಳು ||
ಧಾರಿಣೀನಂದನೆಯು ದಿವ್ಯಮೂರ್ತಿಯ ಹೃದಾ |
ಗಾರದೊಳಗಿಟ್ಟು ಸಂತಸವಟ್ಟು ವೇದಾಂತ |
ಸಾರವಚನಗಳಿಂದ ನುತಿಗೈದನೇಂ ಸುಕೃತಿಯೆನುತುಸಿರಲಕ್ಕುಮಗಜೆ || ೬೫ ||

**ಹದಿನೆಂಟನೆಯ ಸಂಧಿ ಸಮಾಪ್ತಂ**

# ಹತ್ತೊಂಬತ್ತನೆಯ ಸಂಧಿ

ಸೂಚನೆ || ನೀರಧಿಯನುತ್ತರಿಸಿ ನಿಜವಂಶ ಸಂಭೂತ |
ಶೂರ ಕಪಿ ನಾಯಕರ ಸಂತಸಂಗೊಳಿಸುತ್ತ |
ಮಾರುತಿಮಹಾಕಪಿಗಳ್ಕೈತಂದು ಸುಗ್ರೀವನುಪವನವ ಪೊಕ್ಕರಾಗ ||

ವಿಧಿಭವಸುರೇಶಾನೆ ವಿವಿಧಾಗಮಸುಗಾನೆ |
ಮಧುಸೂದನ ಪ್ರಮುಖರುದಿತ ಮಂದಿರೆ ನೀನೆ |
ಬುಧ ಚಿತ್ತ ಪದ್ಮ ಸದ್ಮಾಯತ ಪರಾಕಾಶೆ ಧಾರಾನುವರ್ತಿ ನೀನೆ ||
ಕುಧರಸುತೆ ಸೊಲ್ಲುವೆಣ್ಣು೦ ಲಕುಮಿ ನವಚಕ್ರ |
ದುದಯವರ್ಣಸ್ವರೂಪಿಣಿ ಮಹಾಮಾಯೆ ಜಗ |
ದುದಯಾಸ್ತಮಾನಕಾರಿಣಿ ಕಾರಣಾತ್ಮಕೆ ನಮೋ ಯೆನುತ ಪೊಗಳ್ದನಗಜೆ || ೧ ||

ದೇವಿ ನೀಂ ವಿಶ್ವಮೂರುತಿ ವಿಧಾತ್ಮಿಕೆ ಜಗ |
ಜ್ಜೀವ ರೂಪಿಣಿ ಸಚ್ಚಿದಾನಂದಮಯೆ ಲೋಕ |
ಪಾವನೆ ಭವತ್ಕೃಪಾಲೇಶಸಂಪರ್ಕದಿಂದೀಶನಾಕೃತಿ ಯೆನಿಪುದು ||
ಭಾವಿಸುವರುಂಟೆ ಮಹಿಮೆಗಳ ನಿರ್ವಾಚ್ಯಮೆಂ |
ದೋವಿ ಶ್ರುತಿಗಳ್ಪೊಗಳುತಿರಲ್ "ಯತೋವಾಚ" ಮೆಂ |
ದಾ ವಿಧದ ಚಿದ್ರೂಪ ತುತಿಸಲಾನೇಸರವ ತ್ರಿಜಗನ್ಮಯಳೆ ಜಯ ಜಯ || ೨ ||

ನಿರುಪಮ ನಿಜಾನಂದೆ ಗಾಯತ್ರಿ ಸಾವಿತ್ರಿ |
ನಿರತಿಶಯವೆನಿಸುವೋಂಕಾರಂ ವಷಟ್ಕಾರ |
ದಿರವೆ ಸ್ವಾಹಾಸ್ವಧಾವ್ಯಾಹೃತಿಮಯಾಕಾರದಿಂದಖಿಲ ಸುರಗಣವನು ||
ಪೊರೆವ ಸರ್ವಾತ್ಮಕೆ ಪರಂಜ್ಯೋತಿ ಮುಂಮೂರ್ತಿ |
ನಿರುಗೆ ಸರ್ವಾಕಾರೆ ಸಾಧುಮಂದಿರೆ ನಿಗಮ |
ಶಿರಲಾಲಿತಾಂಘ್ರಿಯುಗೆ ದೇವಿ ಜಯಜಯಮೆನುತ ನುತಿಸಿದಂ ಧರಣಿಸುತೆಯ || ೩ ||

ತೋರುವ ಪ್ರಪಂಚ ಚೇಷ್ಟೆಗಳು ಯುಷ್ಮತ್ಕೃಪಾ |
ಧಾರ ಭವದಾಜ್ಞೆಯಿಲ್ಲದೆ ತೃಣಂ ಸಂಚರಿಸ |
ಲಾರದಂಬಿಕೆ ಸಕಲಭೂತಂಗಳೊಳು ಚೇತನಾಕೃತಿಯ ತಳೆದನುದಿನಂ |
ಭೂರಿಸುಖದುಃಖಗಳನನುಭವಿಸಿ ಪರಪಥವ |
ತೋರಿ ನಿಜರೂಪ ಸಾಕ್ಷಾತ್ಕೃತಿಯೊಳಾನಂದ |
ಪೂರದೊಳಗಾಡಿಸುವೆ ಪುರುಷರಂ ಸಚರಾಚರಂಗಳೊಳ್ಸಂತಸದೊಳು || ೪ ||

ಆವರಣ ವಿಕ್ಷೇಪರೂಹಿಂದವಿಶ್ವರನ |
ಜೀವಭಾವಂಗೈದು ಮುಗುಳೊಲಿಯೆ ನಿರ್ವಾಣ |
ತಾವಿಗ್ಯೊದವೆ ನಾಲ್ಕುರೂಪಿಂದ ಪುರುಷರಿಗೆ ಭೋಗಮೋಕ್ಷಂಗಳೀಯೆ ||
ಪಾವನಾಕೃತಿ ಪ್ರವರ್ತನಮುಲ್ತೆ ಚರಣರಾ |
ಜೀವದಾಶ್ರಯಗೈದ ಕಿಂಕರನ ಸುತನೆನುತ |
ಭಾವಿಸುತ ಪೊರೆವುದು ಪರಬ್ರಹ್ಮಮೂರ್ತಿಯೆನುತಂ ತುತಿಸಿದಂ ಮಾರುತಿ || ೫ ||



ಅಂತರಂಗದೊಳಂಬಿಕಾ ಭಜನೆಯಂ ಮಾಡೆ |
ಸಂತಸದೊಳಾಜಗಜ್ಜನನಿ ಭಕ್ತಿವಿರಕ್ತಿ |
ಸಂತತಜ್ಞಾನಮೈಶ್ವರ್ಯರೂಪಿಂದಾತನೊಳು ಪೂರ್ಣವಾಗಿ ನಿಲಲು ||
ಅಂತಕಾಂತಕನಬ್ಜಭವನಬ್ಜಕರದೇವ |
ಪಂತಿಗಗ್ಗಳನೆನಿಸಿ ವ್ಯಾಪಕಾಕೃತಿದಳೆದು |
ಸ್ವಾಂತಾನುರಾಗದಿಂದಾಳ್ದನೆಡೆಗೈದುವರೆ ಪೊರಮಟ್ಟನನಿಲಸುತನು || ೬ ||

ಸುರರಾಲಯೋಪಮಿತ ಮಂದರ ಸಹೋದರಂ |
ನಿರತಂ ನಿಲಿಂಪಜನ ಖೇಲಾವಿನೋದನಂ |
ಪರಿವ ನಿರ್ಝರನಿಕಟ ದರಿರಮ್ಯ ಕರಮಾದ ವನರಾಜಿ ಖಗಮೃಗಗಳ ||
ಶರಣಮೆನಿಸುವ ಶೈಲಮೊಂದತಿ ವಿನೋದದಿಂ |
ಪರಿಶೋಭಿಸಲು ಕಂಡು ಮರುತಾತ್ಮಭವ ಮನೋ |
ಹರುಷದಿಂದಮರಿಷ್ಟನಾಮಶೈಲೇಂದ್ರಮಂ ಬಂದಡರ್ದನರ್ತಿಯಿಂದೆ || ೭ ||

ಶಿಖರದೆಡೆಯೊಳ್ನಿಂದು ದ್ವಿಜಹರೀಂದ್ರಾದಿಗಳ |
ಮುಖರಮಂ ಕೇಳುತ್ತ ತನುವಪೆರ್ಚಿಸುತ ಮು |
ಲ್ಲಿಖಿತಾಂಬರೋನ್ಮಸ್ತನೆನಿಸಿಯುತ್ತರ ತೀರಕೈದುವಭಿಲಾಷೆಯಿಂದೆ ||
ಸುಖಮಯಸುಮೂರ್ತಿ ಸಂಚಲನೆಗೈವುತಮುಗ್ನಿ |
ಸಖನ ಹೃದ್ದೇಶದಿ ನಿರೋಧಿಸುತ ಸಿದ್ಧಿಗಳ |
ಮುಖಗೈದನಂಜನಾಸುತ ತ್ರಿವಿಕ್ರಮನೀತನಹುದೆಂಬೊಲಾ ಸಮಯದಿ || ೮ ||

ತನುವ ತೊನೆದಾಡಿ ನಾಲ್ದೆಸೆಯ ನಿಟ್ಟಿಸಿ ತನ್ನ |
ಮನದೊಳಮರೇಂದ್ರನುತ ರಾಘವನ ಚರಣಗಳ |
ನೆನೆದು ಧರಣೀಸುತೆಗೆ ವಂದಿಸುತ ಪುಟನೆಗೆದು ಗಗನಗತಿವಿಡಿಯಲಾಗ ||
ಘನಶೈಲಮಿಳಿದುದು ರಸಾತಳಕೆ ಪವಮಾನ |
ತನಯ ಪದಘಟ್ಟಣೆಗದೇನೆಂಬುದತಿಶಯದೆ |
ತನತನಗೆ ಬೆಗಡುಗೊಂಡುದು ದೇವಸಭೆ ಮಹಾಬಲಿಯಾಗಮನದೇಳ್ಗೆಗೆ || ೯ ||

ಪಿಡಿದು ಪವಮಾನ ಪಂಥಾನದೊಳ್ಮರುತಗತಿ |
ವಿಡಿದಭ್ರಜಾಲದೊಳಪೊಕ್ಕು ಪೊರಡುತ ತೋರ್ದ |
ನುಡುಪನೆರಡನೆಯಾತನೆಂಬಂತೆ ಖೇಚರರಿಗತಿವಿನೋದಗಳೆಸಗುತ ||
ಮೃಡವಿಕ್ರಮಂ ಸುಪರ್ಣಾಧ್ವದೊಳ್ವೇಗದಿಂ |
ನಡೆಯುತ್ತ ಬರಲೂರು ಕರಜಾತ ಪವಮಾನ |
ನಡಿಗಡಿಗೆ ಪೆರ್ಚಿದಂ ಪ್ರಳಯಜಂಝಾನಿಲ ಸಹೋದರಂ ತಾನೆಂಬೊಲು || ೧೦ ||

ಅತಿವೇಗದಿಂದಭ್ರಗತಿವಿಡಿದು ಬರುವ ಮಾ |
ರುತಿ ನಿನಾದಂಗೆಯ್ಯೆ ಪರ್ಜನ್ಯ ಗಂಭೀರ |
ದತಿಶಯದಿ ಕೇಳ್ಪಡೆ ಮಹೇಂದ್ರ ಶೈಲದೊಳಿರ್ದ ಶಾಖಾಮೃಗಂಗಳೆಲ್ಲ ||
ಪ್ರತಿಯಾಗಿ ಧ್ವನಿಗೊಡಲ್ಪ್ರೀತಿಯಿಂದಾ ಪ್ಲವಗ |
ತತಿಯ ಸಂತೈಸಿ ಜಾಂಬವ ನುಡಿದ ಶುಭಕಾರ್ಯ |
ಕೃತಿ ಮರುತ್ಸುತಬರುವನೆಮ್ಮ ಭಾಗ್ಯದ ಬೆಳಸೆನುತ್ತ ಸಂತಸಗೊಳುತಲೆ || ೧೧ ||

ಹರುಷದಿಂದೆಲ್ಲರಂಬರಪಥವ ನಿಟ್ಟಿಸುತ |
ಮಿರೆ ಮರುದ್ಗತಿಯಿಂದ ಬಂದು ಹನುಮಂತನಾ |
ಗಿರಿ ಶಿಖರದೊಳ್ನಿಂದರಾಪ್ಲವಂಗಾಧಿಪರ್ತಮತಮಗೆ ಸಂತೋಷದೆ ||
ಕರವಿಡಿದು ಪಕ್ವಫಲಪುಷ್ಪಗಳ ತಂದಾಗ |
ಪರಿವೇಷ್ಟನಂಗೈದುಪಾಯನಂಗಳ ನಿತ್ತು |
ಪರಿಪರಿಯಲುಪಚರಿಸಿ ಪೊಗಳಿ ಸಂತಸಗೊಳಿಸಲಾ ಜಾಂಬವ ಪ್ರಮುಖರು || ೧೨ ||

ಕುಲವೃದ್ಧರಾಪ್ತರಾ ಯುವರಾಜನುಪಚರಣೆ |
ಗೊಲವಿಂ ಮರುತ್ಸುತಂ ಸಂತಸದಿ ಪ್ರೇಮಾನು |
ಕಲಿತದಾಲಿಂಗನಂಗೈದೊರ್ವರೊರ್ವರಂ ಪ್ರೀತಿಯಿಂ ಸಂತೈಸುತ ||
ನೆಲದಣುಗಿಯಂಕಂಡೆನೆಂದೊರೆದು ಸಂತೋಷ |
ಜಲಧಿಯೊಳಗಾಲಿಸುತಮಂಗದನ ಕರವಿಡಿದು |
ಸುಲಲಿತಾನಂದಕರ ತರುನೆಳಲ ಸಾರಿದಂ ಕುಲವೃದ್ಧರೊಂದುಗೂಡಿ || ೧೩ ||

ಪ್ಲವಗತತಿಪರಿವೇಷ್ಟಿಸಿರಲು ಸಂತಸದಿಂದ |
ಪವನಸುತಕುಳ್ಳಿರಲು ನೆರೆದಶಾಖಾಮೃಗಗ |
ಳವಿರಳೋತ್ಸವದಿಂದಮಾನುಪೂರ್ವಿಕ ಕರ್ಮ ವೃತ್ತಮಂ ಬೆಸಗೊಳಲ್ಕೆ ||
ತವಕದಿಂ ಪಿರಿಯ ಭಲ್ಲೂಕಪತಿಯೊಡನೆಂದ |
ಭವದನುಗ್ರಹವಿಡಿದು ಶೈಲಾಗ್ರದಿಂ ನಡೆದು |
ವಿವಿಧಾಭ್ರಜಾಲಗಳಪಥವನನುಸರಿಸುತ್ತೈದಿದ ಪರಿಯ ಬಲ್ಲಿರಲ್ತೆ || ೧೪ ||

ಪೋಗುತಿರೆ ನೀರಧಿಯ ಮಧ್ಯದೊಳು ಗಿರಿಯೆದ್ದು |
ತಾಗಿದುದನೇನೆಂಬೆ ಗಗನಮಣಿಯುನ್ನಲಿವು |
ತಾಗ ವಿಂಧ್ಯೋಪಮಿತಮೆನಿಸಿರಲ್ಕಂಡಾನು ಪೊಡೆಯಲಾಂ ದೂರದಿಂದ ||
ತಾಗಿಸಲು ಭಯಗೊಂಡು ಮಾನುಷಾಕೃತಿಯಿಂದ |
ಕೂಗಿಟ್ಟುದಗ್ರದೊಳ್ಪತ್ರ ಲಾಲಿಪುದು ಮಿಗಿ |
ಲಾಗಸಂ ತನ್ನಿಂದಸಂತಸಂ ಸಂಭವಿಸದೆಂದೊರೆವುತಿಂತೆಂದುದು || ೧೫ ||

ಸುರಪ ಕೋಪದಿ ಶೈಲಗಳ ಪಕ್ಷವಿಚ್ಛೇದ |
ಕರ ಮೆಸಗುತಿರಲಂಜಿ ಬಂದು ಮರೆವುಗಲಾಗ |
ಮರುತ ದಯದಿಂದಮಂಬುಧಿಯೊಳಗೆ ಬೈಚಿಟ್ಟನದರಿಂದ ವಾಯುಸಖನು ||
ಗಿರಿಗಳರಸಂ ತುಹಿನಶೈಲಸಂಭವ ಜಗ |
ದ್ಭರಿತ ಮೈನಾಕನೆಂಬಭಿಧಾನಮುಪಚರಿಸೆ |
ವರುಣ ಕಳುಪಿದನುಪಾಯನಗಳಂ ಕೈಕೊಳ್ಳವೇಳ್ಕೆಂದು ನುಡಿದನಂದು || ೧೬ ||

ಮರುತಗಾನಗ್ರಭವನಾದ ಕತದಿಂ ನೀನು |
ತರಳಮತ್ತನುಜಾತನತಿಥಿ ಸತ್ಕುಲಜಾತ |
ಪರಮುಹರ್ಷಂಗೊಂಬನಾ ಜಗತ್ಪ್ರಾಣನಿನ್ನುಪಚರಣೆಗೈವರೆನುತ ||
ಪರಿಪರಿಯಲುಸಿರ್ದರಾನದಕೆ ಸಂತಸಗೊಂಡು |
ಮರಳಿ ಪೇಳಿದೆನರಸು ಕಾರ್ಯಕ್ಕೈದುವೆನೆನಗೆ |
ವಿರಚಿಸಿದ ಶುಭನುಡಿಗಳಿಂ ತುಷ್ಟನಾದೆನೆಂದುಪಚರಿಸಿ ನಡೆದೆನೊಲಿದು || ೧೭ ||



ಪಿಂದುಳುಪಿ ಶೈಲವ ಸಮೀರಣನ ಪಥವಿಡಿದು |
ಮುಂದಕ್ಕೈದುತಮಿರಲ್ ಜಲಧಿಯಿಂ ರವಿಯೆಡೆಗೆ |
ನಿಂದುದೊಂದದ್ಭುತ ವಿಕಾರಸ್ತ್ರೀವ್ಯಕ್ತಿಯೊಂದದ ಕಂಡು ಚಿಂತಿಸುತಿರೆ ||
ಬಂದು ಮೊದಲಿಸಿದುದು ಚಿರಕಾಲ ಪಸಿದಾನು |
ನಿಂದಿರ್ಪೆನೀ ಸಮಯದೊಳು ಬಂದು ವದನಮಂ |
ಪೊಂದುವುದೆನಲ್ಕಾನು ವಿನಯದಿಂ ಪೇಳಿಕೊಳೆ ತೀರದಾದುದು ಸಮಯದೆ || ೧೮ ||

ಕಿನಿಸಿಂದಮಾನು ಮೂರ್ತಿಯನು ಪೆರ್ಚಿಗೆಗೆಯ್ಯ |
ಲನಿತು ಮುಖಮಂ ಬೆಳೆಸುತ್ತೈತರಲ್ಕಂಡಾಗ |
ಮನದಿ ಚಿಂತಿಸುತ ತನುಸಂಕೋಚದಿಂ ವದನಮಂ ಪೊಕ್ಕುಪೊರಡಲಾಗ ||
ವನಿತೆ ಸಮ್ಮುದಗೊಂಡು ಸುರರು ನಿನ್ನಯ ಶೌರ್ಯ |
ವನು ಪರೀಕ್ಷಿಸಲೆಂದು ಕಳುಪಲಾಂ ಬಂದಿರ್ದೆ |
ನಿನಗೆ ಪಾಸಟೆಯಿಲ್ಲ ಪೋದಕಾರ್ಯಂ ಹಸ್ತಗತಮಪ್ಪುದೆಂದೊರೆದಳು || ೧೯ ||

ಸುರಸೆಯೆಂಬಭಿಧಾನವೆನಗೆಂದು ಪೇಳ್ದರಾಂ |
ಹರುಷದಿಂದಾಕ್ಷಾಯಣಿಯನು ಬೀಳ್ಕೊಂಡೈದೆ |
ಮರುತ ಪಥವಿಡಿದೈದುತಿರಲಾದುದದ್ಭುತಮದೇನೆಂದು ಬಿತ್ತರಿಪೆನು ||
ಸರಣಿ ಗಡಿಯಿಡುವಂಸದಳಮಾಗಿ ತಂತುವಿಂ |
ಬೆರೆದ ಪಟದಂತಾನು ನಿಂದು ನಾಲ್ದೆಸೆಯನುಂ |
ಪರಿಕಿಸುತಮಿರ್ದರೇನೊಂದಾದರುಂ ಕಣ್ಗೆ ತೋರದಾದುದು ವನದೊಳು || ೨೦ ||

ಏನಿದಚ್ಚರಿಯೆನುತ ಚಿಂತಿಸುತಮಿರಲಸುರೆ |
ತಾನೆ ತನ್ನಿಂದುಸಿರ್ದಳೆಲೆ ಕಪಿಯೆ ಪೂರ್ವದೊಳ |
ಗಾನು ಬೊಮ್ಮನ ವರವ ಪಡೆದಿರ್ಪೆ ಸಮ್ಮುಖದೊಳೊರ್ವ ಪಿಂದಿರುಗದಂತೆ ||
ನೀನೆನ್ನ ವದನಮಂ ಪುಗುವುದೆನ್ನುತ ತೆರದ
ಳಾನನವ ನಿಟ್ಟಿಸುತಮತಿವೇಗದಿಂ ತನುವ |
ತಾನವಂಗೈದು ಧುಮ್ಮಿಕ್ಕಿ ದೈತ್ಯೆಯ ಬಗಿದು ಪೊರಮಟ್ಟೆನಾಕ್ಷಣದೊಳು || ೨೧ ||

ಆರೆಂದು ತಿಳಿಯದಸುರೆಯನರಸು ಕಾರ್ಯಕೆಂ |
ದೋರಂತೆ ಗಗನಪಥವಿಡಿದೈದುತಿರೆ ಸುರ |
ಚಾರಣರ್ ಮೊದಲಾದರೆನ್ನ ಸನ್ನುತಿಗೈದು ಹಿತದಿಂದಮಿಂತೆಂದರು ||
ವೀರರಾಹುವಿನವ್ವೆ ಸಿಂಹಿಕೆ ಮಹೋತ್ಪಾತ |
ದಾರುಭಟೆಯಿಂದಖಿಲಜನರ ಛಾಯೆಯ ಪಿಡಿದು |
ಮಾರಿಯಂದದಿ ಕಬಳಿಸುವಳು ರಕ್ಕಸಿಯಿಂದು ಮಡಿದುದತಿಶಯ ಧರೆಯೊಳು || ೨೨ ||

ಪೊಡೆದೆ ಛಾಯಾಗ್ರಹವ ಮೂಲೋಕದತಿಶಯವ |
ಪಡೆದೆ ಲಂಕಾಪುರಂ ಸ್ವಾಧೀನಮಹುದು ನಿ |
ನ್ನೊಡೆಯನಿಷ್ಟಾರ್ಥಮಹುದೆನುತಮಾಶೀರ್ವಾದಗಳನೀಯಲಾನೆರಗುತ ||
ನಡೆದು ಪಥವಿಡಿದು ಲಂಕಾದ್ವೀಪಮಿರ್ಪೆಡೆಗೆ |
ಕಡಲ ಮಧ್ಯದೊಳೆಸೆವ ಪಟ್ಟಣವ ಕಂಡಾನು |
ಮೃಡ ನಮಃ ಶಿವಯೆನುತ ಬೆರಗುಗೊಂಡುಪವನದ ತರುಗೊನೆಯನೇರಿರ್ದೆನು || ೨೩ ||

ಸಾಮದಾನಾದ್ಯುಪಾಯಗಳಿಂದ ತೀರದಿರೆ |
ತಾಮರಸಮಿತ್ರನಸ್ತಮಿಪನ್ನ ಕಾಯ್ದಿರ್ದು |
ತಾಮಸಿಯೊಳೈದಿ ಮುಗಿಲಂಟಿರ್ಪ ಪೊಂಗೋಂಟೆಯೇರಿ ನೆಲಕಿಳಿಯಲಾಗ ||
ಆ ಮಹಾದ್ಭುತಮದೇನೆಂದೊರೆವೆ ಡಾಕಿನೀ |
ಸ್ತ್ರೀಮುಮಂ ಪೆತ್ತಾಕೆಯೈತಂದು ಧಿಕ್ಕರಿಸ |
ಲಾ ಮಗುಳೆ ನಯವಿನಯದಿಂ ತಿಳಿಪಿದರು ಮತ್ತೆ ಕೇಳದಾರ್ಭಟಿಸಲಾಗ || ೨೪ ||

ಪೆಂಗುಸೆನುತನುಮಾನದಿಂದ ಯಾಚಿಸಲವಳು |
ಹಿಂಗದೆನ್ನಂ ಪೊಡೆಯೆ ಕೋಪದಿಂ ಬೆರಳ್ಗಳಿಂ |
ದಂಗವಿಸಿ ಪೊಡೆಯೆ ಭೂತಳದೊಳಗೆ ಕೆಡೆದೊಡಲ ಕಳೆವ ಸಮಯದಿ ಪೇಳ್ದಳು ||
ಭಂಗಬಂದಡಸಿತೀ ನಗರಕ್ಕೆ ಕೇಳು ಕಪಿ |
ಪುಂಗವನೆ ನಿನ್ನಿಂದಮಾನಳಿದ ಮಾತುರದಿ |
ಮುಂಗಡೆಯಲೀ ರಾಜಧಾನಿವಶಮಾಯ್ತು ನಿನಗಸುರರೆಲ್ಲರು ಮಡಿದರು || ೨೫ ||

ಅಸಮಬಲ ಪೂರ್ವದೊಳು ಪೊಂಬೊಡೆಯ ಪಾಲಿಸಿದ |
ಪೊಸತೆನಿಪವರವಾನು ನಗರಾಧಿದೇವತೆಯು |
ನಿಶೆಯೊಳಂ ಕಪಿಯೊರ್ವನುಂ ತಿರಸ್ಕೃತಿಗೈದರಾಗ ಲಂಕಾನಗರವು ||
ಅಸುರಕುಲಸಹಿತ ನಾಶನಮಹುದು ಮದ್ವಚನ |
ಪುಸಿಯುಪೊದ್ದದು ಪೋಗಿ ಧರಣಿಜಾತೆಯ ಕಂಡು |
ಸಸಿನೆಬಹುದೆಂದೊರೆವುತಸುಗಳಂ ಕಳೆವೈದಲಾನಿತ್ತ ಸಂತಸದೊಳು || ೨೬ ||

ನೋಡುತ್ತೈತಂದೆ ಮನೆಮನೆಗಳೆಡೆವಿಡದಾಗ |
ಖೋಡಿ ದಾನವರುಗಳ ವಂಚನಂಗೈದು ಸುಳಿ |
ದಾಡಿ ರಾಜಾಗೃಹಗಳೆಲ್ಲಮಂ ಶೋಧಿಸುತ ಬಂದೆನರಮನೆಯ ಪೊರೆಗೆ ||
ಆಡಲೇನಸುರ ಮಂದಿರದ ವೈಚಿತ್ರ್ಯಗಳ |
ನಾಡೊಳಾರ್ಕಂಡರಿಯರತುಲ ತಪದಿಂ ಹರನ |
ಬೇಡಿಕೊಂಡಾರ್ಜಿಸಿದನಲ್ಲದೆ ಜಗತ್ರಯದೊಳಾರ್ಗುಂಟು ಸಿರಿಯ ಬೆಡಗು || ೨೭ ||

ಧುರವಿಜಯ ಸಮವರ್ತಿ ಕಿಂಕರಾಸುರರಮಿತ |
ಕರಿತುರಗದಾರೋಹಣಂ ಗೈದುನಾಲ್ದೆಸೆಯ |
ಬರಸಿಡಿಲಮಾಳ್ಕೆಯೊಳ್ ಗರ್ಜಿಸುತ ಕಾಯ್ದಿರ್ದರಾಸದನವನ್ನು ಬಳಸಿ ||
ಮರುತಸಂಚರಿಸುವರಶಕ್ಯಮಾಗಿರಲಾನು |
ಪರಿಕಿಸುತಣುತ್ವದಿಂ ಮೆಲ್ಲನೊಳಪೊಕ್ಕಲ್ಲಿ |
ಪರಿಪರಿಯ ನಾರಿಯರ ನಿವಹದೊಳ್ನೋಡಿದೆನು ವಸುಮತೀನಂದನೆಯನು || ೨೮ ||

ಅರಸುತಿರಲೊಂದೆಡೆಯಲಸುರೇಂದ್ರನೊರಗಿರ್ದ |
ನರಸಿಸಹಿತಾನೆಲಕ್ಕೈದಿ ನೋಡುತ ಮನಕೆ |
ಬೆರಗು ಸಮನಿಸಿ ಜನಕಜಾತೆಯೆಂಗನುಮಾನದೊಳು ನಿಟ್ಟಿಸುತ್ತಮಿರಲು ||
ಕರಚರಣದೊಳಗಮಂಗಲ ರೇಖೆಯೊಪ್ಪಿರ್ದು |
ದರಿಯದಾದೆನೆನುತ್ತ ಮಿಡುಕುತ್ತಮಾಪಾನ |
ಪರಿಸರವ ನೋಡಿ ಪಿಂದಿರುಗಿ ವೈಶ್ರವಣನ ವಿಮಾನದೆಡೆಗೈತಂದೆನು || ೨೯ ||



ಒಮ್ಮೆ ನೋಡೆದರೆ ಗೋಚರಮಾಗಲಿಲ್ಲ ಮಗು |
ಳೊಮ್ಮೆ ನೋಡುವೆನೆಂದು ನಗರಮೆಲ್ಲವ ಬಳಸಿ |
ದುಮ್ಮನದಿ ರಾವಣನ ನಿಲಯದೊಳಗರಸುತ್ತಮಿಾಪರಿಯಲೈದವಸರಂ ||
ಕಮ್ಮಗೋಲನ ಮಾತೆಯಂ ನೋಡಿ ಸಿಲ್ಕದಿರೆ |
ನೆಮ್ಮಿದಾಕಳ್ತಲೆಯೊಳೈದಿ ದೈತ್ಯೇಂದ್ರಂಗೆ |
ಸಮ್ಮಾನಕರಮೆನಿಪಶೋಕನಂದನವನ್ನು ಪೊಕ್ಕೆನತಿವೇಗದಿಂದ || ೩೦

ಪೇಳ್ವೆನೆಂತಾಬನದ ಸಿರಿಯ ತ್ರಿದಶರ ಕುಲವ |
ನಾಳ್ವನಿಂಗುಂಟೆ ಮತ್ತಾಬನದ ಸಂಭ್ರಮವು |
ತಾಳ್ವುದಾ ಚೈತ್ರರಥ ನಂದನಗಳನ್ನೆಗಂ ವೈಚಿತ್ರ್ಯಮೆಂಬೊಲಾಗ ||
ಬಾಳ್ವೆಗದು ಸಿರಿಯಕಣಿಯೆಂದರಿತು ನಾಲ್ದೆಸೆಯ |
ಜಾಳ್ವೋಗದರಸಿ ಕೌತುಕದಿಂದ ಶಿಂಶುಪದ |
ತಾಳ್ವೊಳಗೆ ಕೃಶದೀನತೆಯೊಳೆಸೆವ ಧರಣಿಜೆಯನಾಕಂಡೆ ಮೋದದಿಂದೆ || ೩೧ ||

ನಿರತಪ್ರತಿಪತ್ಪಾರಶೀಲನ ಕಳಾರೂಪ |
ಧರಿಸಿರ್ಪ ಜನಕಜೆಯ ಕಂಡು ಸಂತಸದಲಿರೆ |
ದುರುಳ ದಶಕಂಧರನು ಸ್ತ್ರೈಣದೊಡವೆರೆದಾಗ ಬಂದು ನಾನಾವಿಧದಲಿ ||
ಕಿರಿದಾದನುಡಿಗಳಿಂದುಪಚರಣೆಗೈದು ಬಂ |
ಧುರ ತಿರಸ್ಕೃತಿಯಾಂತು ಕೋಪಿಸುತ ಮಿರಲಾತ |
ನರಸಿ ಸಾಂತ್ವನಗೈದು ಕರೆದೊಯ್ದರರಮನೆಗೆ ದಾನವಿಯರತಿವೇಗದೆ || ೩೨ ||

ಬೆದರಿಸುತ ನಿಟ್ಟುರದಲೊಳಪೊಕ್ಕು ಮಾನಸವ |
ಚದರಿಸಲು ಗಣನೆಗೊಳ್ಳದೆ ನೀಚದೈತ್ಯೆಯರು |
ಗದರಿಕೊಳಲನಿತರೊಳು ತ್ರಿಜಟೆಯೆನಿಸುವಳೊರ್ವೆಕನಸನೆಚ್ಚರಿಸಲಾಗ ||
ಮದಮುಖಿಯರದ ಕೇಳ್ದು ಮರೆಯಾಗಲಲ್ಲಲ್ಲಿ |
ಪದುಮಾಕ್ಷಿಯಸುಗಳಂ ಕಳೆಯಲಿಚ್ಛೈಸುತಿರೆ |
ಕದಬದಂಗೊಂಡು ಕಂಗೆಟ್ಟಾನು ಚಿಂತಿಸಿದೆ ಚಿತ್ತದೊಳಗೊಂದು ಪರಿಯ || ೩೩ ||

ರಾಮ ವಂಶಾನುಕೀರ್ತನೆಗೈದರಾಲಿಸುತ |
ಪ್ರೇಮದಿಂದಿರೆ ಕಂಡು ವಂದನಂಗೆಯ್ಯಲಂ |
ದಾ ಮಹೀಸುತೆ ಕಪಟ ರಕ್ಕಸನೆನುತ್ತೆನ್ನ ನೆಚ್ಚದಿರಲಾನು ಬೇಗ ||
ರಾಮಣೀಯಕ ಮೂರ್ಮಿಯಂ ಸಮರ್ಪಣೆಗೆಯ್ಯ |
ಲಾ ಮಹಾಚಿತ್ತದನುತಾಪಮಂ ಪೋಗಾಡಿ |
ಕೋಮಲಾಂತಃಕರಣದಿಂ ಪೂರ್ವ ವೃತ್ತಗಳ ಬಿತ್ತರಂಗೈದು ಬೇಗ || ೩೪ ||

ಕರುಣಾರಸದೊಳೆನ್ನ ಕರತಳಕೆ ದಿವ್ಯಮಣಿ |
ಸಿರಿಯನಿತ್ತತಿಮುದದಿ ರಘುವರಂಗಿತ್ತೆನ್ನ |
ಪೊರೆವಂತೆ ಮಾಡೆನುತ್ತೊರೆದು ಬೀಳ್ಕೊಟ್ಟರಾನೈತಂದದೊಂದೆಡೆಯೊಳು ||
ತರುನೆಳಲಸಾರಿ ದೈತ್ಯೇಂದ್ರಸಂ ಕಾಣ್ಪೆನೆಂ |
ದುರುತರಾಮೋದದಿಂದತಿ ಪ್ರಿಯಂಕರ ಬನವ |
ಮುರಿದೆನೊಂದೇ ನಿಮಿಷದೊಳು ದಶಾಸ್ಯನ ಹರ್ಷಸತ್ವಗಳನೊರಸಿದಂತೆ || ೩೫ ||

ಕಂಡು ಕೆಲರಸುರರ್ಕೈತಂದರವರಂ ಸದೆಯೆ |
ಗಂಡುಗಲಿರಾವಣಗ ದೂರೆ ಕಿಂಕರ ದೈತ್ಯ |
ತಂಡಮನ್ನಟ್ಟಲುದ್ದಂಡದಿಂದವರನಾಂ ಚೆಂಡಿಬಿಡಲನಿತರೊಳಗೆ ||
ಭಂಡಣೋದ್ಧತ ಜಂಬುಮಾಲಿಯತಿರೋಷದಿಂ |
ಚಂಡವಿಕ್ರಮ ಬರಲ್ಕಾತನಂ ತರಿಯಲಾ |
ಖಂಡಲಾರಿಯ ಮತದಿ ಮಂತ್ರಿಸುತರ್ಕೈವರುಂ ಬಂದರತಿವೇಗದಿಂದ || ೩೬ ||

ಸೀಳಿಡಲ್ಕವರ ಸೇನಾಪತಿಗಳೇಳ್ವರುಂ |
ಕಾಳಗಕೆ ಮುಂಕೊಂಡು ಬರಲವರ ತರಿಯೆ ಕ |
ಟ್ಟಾಳು ರಾವಣಕುಮಾರಕನಕ್ಷನೈತಂದನತಿಬಲದೊಳಾನವನೊಳು ||
ತಾಳಿವೈರವ ಸಮರದೊಳಗೊರಸೆ ವಾರ್ತೆಯಂ |
ಕೇಳಿ ರಾವಣಿ ಬಂದು ಪರಿಪರಿಯ ಕೃತ್ರಿಮದ |
ಜಾಲದಿಂ ಕೋಟಲೆಯೊಳಲೆದರೊಳಗಾಗದಿರೆ ಬ್ರಹ್ಮಾಸ್ತ್ರಮಂ ಪೂಡಿದಂ || ೩೭ ||

ಸರಸಿಜಭವಾಸ್ತ್ರವೆನ್ನೆಡೆಗೆ ಬಾರದೆ ನಿಲಲು |
ಮರುಗಿ ಕಮಲಜ ಬಂದು ಯಾಚಿಸಲು ಋಷಿಪೇಳ್ದ |
ಪರಿಯಸ್ಮರಿಸುತಮೊಡಂಬಡೆ ಬಂದು ಬಂಧಿಸಿತು ನಿಮಿಷದೊಳಗಸುರರೆಲ್ಲ ||
ನೆರೆದೆನ್ನ ನೆಳದ್ಯೊದು ದಶಕಂಠನೆಡೆಯೊಳಿಡೆ |
ಕರದಾ ಪ್ರಹಸ್ತ ಪೌರಷದಿಂದ ಬೆಸಗೊಂಡ |
ರೊರೆಯದಾತನೊಳಾನು ರಕ್ಕಸರನಾಥನಿಂಗೆಂದೆನೊಂದಂ ಮಾಜದೆ || ೩೮ ||

ಸೂರವಂಶದ ಸಿರಿಯ ಸುಗ್ರೀವನಿಹಪರಿಯ |
ಧಾರಿಣೀಸುತೆಯಿಪ್ಪ ನೆರೆಯನುಳಿಯೆಂದೆನಗೆ |
ತೋರಿದಂದದೊಳೊರೆಯೆ ಲಾಲಿಸುತ ಕೋಪದಿಂ ತರಿವರಿಚ್ಛೈಸಲಾಗ ||
ಧಾರಿಣಿಯೊಳುಂ ಬುದ್ಧಿವಂತನನುಜಂ ಪರಿಯ |
ತೋರಿ ಪೇಳಲ್ಕೊಡಂಬಟ್ಟು ವಾಲಾಗ್ರಮಂ |
ಮಾರುತನ ಸಖನವಶಗೈದರಾನೈತಂದು ರಾಜವೀಥಿಯೊಳು ನಿಂದು || ೩೯ ||

ನಗರಮೆಲ್ಲವನು ಕ್ರತುವಹನಿಗರ್ಪಿಸಿ ಕೊಬ್ಬಿ |
ಜಗಳಕ್ಕೈತಂದ ರಕ್ಕಸಕುಲವ ಸಂಹರಿಸಿ |
ಮಗುಳೆ ಜಾನಕಿಯಂಘ್ರಿಗೆರಗಿ ಬೀಳ್ಕೊಂಡಾನು ನೀರಧಿಯ ದಾಂಟೆ ಮುದದಿ ||
ಸಗರವಂಶೋದ್ಭವನ ಕೃಪೆಯಿಂದಮೈತಂದು |
ಮಿಗೆ ಬಂಧುವರ್ಗಮಂ ನೋಡಿ ಕಾರ್ಯಾಂತರದ |
ಬಗೆಯ ನೆಚ್ಚರಿಸಿದಂ ಸಂಕ್ಷೇಪದಿಂದಾದ ಕಥೆಗಳೊಂದನು ಮಾಜದೆ || ೪೦ ||

ತಿಳಿದನಿತ ಮಾಜದುಸುರಿದೆ ಕಾರ್ಯದತಿಶಯಗ |
ಳೊಲವು ನಿಮ್ಮಯ ಚಿತ್ತವರಿಯದೇನಿಹುದೆಂದು |
ತಿಳುಪಲಂಗದ ಮುಖ್ಯ ಕಪಿವೀರತತಿ ಹರುಷ ವಾರ್ಧಿಯೊಳಗೋಲಾಡುತ ||
ಪುಳಕದಿಂದಿರೆ ಜಲಜಪೀಠಸುತ ಸಂತಸಂ |
ದಳೆದು ಪ್ರೇಮಾಲಿಂಗನಂಗೈದು ತುತಿಸಿದಂ |
ಕಳೆವೆತ್ತ ವಿಕ್ರಮ ದಯಾಗುಣಗಳಂ ಗಣಿಸತೀರದಾನಂದಕರದೆ || ೪೧ ||



ಬುದ್ಧಿಯುಳ್ಳನಿತನೆಸಗಿದೆ ಕಾರ್ಯದತಿಶಯ |
ಶ್ರದ್ಧೆಯಿಂ ಮುಂದಪ್ಪರಾಜಾನುಮತಗಳಂ |
ಸಿದ್ಧಿಗೈವರೆ ನೀಲನಳ ಮುಖ್ಯ ಪ್ಲವಗತತಿಯುವರಾಜ ರಾಜಸುತನು ||
ಯುದ್ಧಸನ್ನದ್ಧರಾಗಿರ್ಪರರೆನಿಮಿಷದೊಳ್ |
ಮರ್ದಿಸುವರಲ್ಪಬುದ್ಧಿಯ ದಶಾಸ್ಯನನೆನುತ |
ಮುದ್ಧತ ಪರಾಕ್ರಮವ ಪೊಗಳಿ ಮೌನದೊಳಿರ್ದ ಪವಮಾನತನಯನಾಗ || ೪೨ ||

ಹರುಷಗೊಂಡಖಿಳ ಶಾಖಾಮೃಗಂಗಳು ಪಿಡಿದು |
ಕರತಳಕೆ ಮುದ್ದಿಡುತ ವಾಲಾಗ್ರಚುಂಬನವ |
ವಿರಚಿಸುತಮಾಲಿಂಗನಂಗೈದು ಕರಗಳಂ ಮುಗಿದು ನುತಿಗೈದರೊಲಿದು ||
ಅರಸ ರಘುಪತಿ ಸುಮಿತ್ರಾತ್ಮಭವ ಸುಗ್ರೀವ |
ತರಳನಂಗದ ಬಲೀಮುಖ ಗೋತ್ರಪಾಲನೆಯು |
ಮರುತಸುತ ನಿನ್ನಿಂದಮಾದುದಿಂದಿನ ದಿನದೊಳೆಂದು ಸಂತಸಗೊಂಡರು || ೪೩ ||

ಅರಿವಿನಾಶನಕೀರ್ತಿ ಧೃತಿಮತಿ ನಿರಾತಂಕ |
ನಿರತಿಶಯ ಸಂತೋಷತತಿಗಳುಂ ಕೈಸಾರ್ವ |
ವರರೆ ನಾಮಸ್ಮರಣೆಯಿಂದೆನುತ ದೇವತಾನಿಚಯ ತುತಿಗೈವುತಿರಲು ||
ಕರುಣದಿಂದೆಮ್ಮೊಳವತರಿಸಿ ಬೆಂಬಿಡದೆ ಪ್ರಿಯ |
ವೆರಸಿ ಪೋಷಣೆಗೈವ ದಿವ್ಯವಿಗ್ರಹರದಾ |
ಕರತಳದಲಿರ್ದ ಬಳಿಕಖಿಳಾರ್ಥಸಿದ್ಧಿಗಳ್ದೊರೆವುದೇನತಿಶಯದೊಳು || ೪೪ ||

ಎಂದಖಿಳರುಸಿರಲಂಗದ ಕೇಳಿ ಪವಮಾನ |
ನಂದನನ ಪೊಗಳುತಿಂತೆಂದ ಶಾಖಾಮೃಗದ |
ಬೃಂದದೇಳ್ಗಿಗೆ ಬದ್ಧಕಂಕಣಂ ನೀನೆನಿಪ ಬಿರುದನುಂ ಮೆರೆದುಬೇಗ ||
ಇಂದೆಮ್ಮ ಕುಲವನುದ್ಧರಣೆಗೈದೆ ಮಹಾತ್ಮ |
ಮುಂದಪ್ಪ ಕಜ್ಜಗಳನೆಣಿಸಿ ವೇಗದಲಿ ರಘು |
ನಂದನನ ಕಾಣ್ಬುದುಚಿತಮೆನುತ್ತ ಪೇಳಲದನೊಪ್ಪುಗೊಂಡರ್ಸಕಲರು || ೪೫ ||

ಅರಿಗಳೆಡೆಯೊಳು ರಾಮನರಸಿ ಸಂಕಟಗೊಳುವ |
ಳುರು ಚಿಂತೆಯಿಂದ ರಘುವಂಶಭವನೊಪ್ಪಿರುವ |
ತರಣಿಸುತನುಭಯ ನೃಪತಿಗಳ ನೋಡುತಮುಗ್ರರೂಪಿಂದ ಚಿಂತೆಗೊಳುತಂ ||
ತ್ವರಿತದಿಂದ್ಯೆದಿ ಸಂತಸಗೊಳಿಸವೇಳ್ಕೆಂದು |
ಸುರಪಸುತ ಸುತನುಸಿರ್ದರಾಲಿಸುತ ಕಪಿವರರ್ |
ಹರುಷಿಸಲು ಋಕ್ಷಪತಿ ಸಂತಸಂಗೊಂಡು ಬಳಿಕಿಂತೆಂದ ನಂಗದನೊಳು || ೪೬ ||

ಮತಿವಂತ ಯುವರಾಜ ನೀನೊರೆದ ಸೊಲ್ಲಿಂದ |
ಮತಿಮನೋಹರ್ಷಮಾದುದು ಬೇಗದಿಂ ಪೋಗಿ |
ಕ್ಷಿತಿಯರಸನಂಘ್ರಿಸಾರಸವ ಕಾಣಲ್ವೇಳ್ಕುಮೆಂದ ಜಾಂಬವನ ನುಡಿಯಂ ||
ಪತಿಕರಿಸುತೆಲ್ಲರಾನಂದದಿಂ ಗಮನಮುಖ |
ದತಿಶಯದೊಳಿರೆ ಪವನಸುತ ಋಕ್ಷನಂಗದರ್ |
ಜತೆಗೊಂಡು ಬಾಂದಳದ ಗತಿವಿಡಿದು ನಡೆಯುತಿರೆ ಪಿಂದೈದೆ ಪ್ಲವಗತತಿಯು || ೪೭ ||

ಬಲ ಮರುತಪಥವಿಡಿದು ಬಾನೆಡೆಯೊಳ್ಳೈತರಲು |
ಜಲಜ ಬಾಂಧವನುದಯಮಂ ಕಾಣದಾಂಧತೆಯು |
ನೆಲನೆನಿಸಿ ನಿಬಿರೀಸ ನೆಳಲ ಪೊರಿಸುತ ಬಂದು ನಂದನವ ಕಂಡರಂದು ||
ಪಲವು ಚಿತ್ರವಿಚಿತ್ರ ಪಣ್ಫಲಗಳನ್ನಾಂತು |
ನಲವಿಂದ ತೋರುತಿರೆ ಕಪಿನಾಯಕರು ಭೂಮಿ |
ಗಿಳಿದರಾ ಬನವನಿಟ್ಟೈಸುವರಭಿಲಾಷೆಯಿಂದತಿಮನೋಹರ ಪೆರ್ಚುತೆ || ೪೮ ||

ನಿರುತಂ ಸುಗಂಧಾನಿಲಂಗಿಕ್ಕೆಯಾಗಿ ಶುಕ |
ಪರಪುಟ್ಟಗಾಲಯಂ ಯೆಂದೆನಿಸಿ ಮಾಧುರ್ಯ |
ಭರಿತನವಪರಿಪರಿಯ ಫಲರಾಜಿಗಾವಾಸ ತೌರೆನಿಸಿ ಭ್ರಮರೌಘಕೆ ||
ತರಣಿಯಂತಾವಗಂ ಛಾಯಾನುಕೂಲ ಸಂ |
ಸ್ಫುರಣೆಯಿಂದಧ್ವಗರಿಗುರುಶ್ರಮನಿವಾರಿಸುವ |
ವರವಸಂತಾಡುವಾಡುಂಬೊಲಮದೆಂಬಂತೆ ಮಧುವನಂ ಮುಂದೆಸೆದುದು || ೪೯ ||

ಸಕಲ ಲೋಕಾನಂದಕರಮೆನಿಸಿ ದೇವತಾ |
ನಿಕರದ ಮನೋರಥವಸಲಿಸುವ ಮಹೋದ್ಯಾನ|
ರಕುತಿಯಿಂ ಕಂಗೆಸೆಯಲತಿ ಹರುಷದಿಂದೆಲ್ಲರೈತಂದು ಬನದೆಡೆಯೊಳು ||
ಭಕುತವತ್ಸಲ ರಾಮಪುರದರಸನಂಘ್ರಿಗಳ |
ಸುಕುಮಾರ ವಚನರಚನೆಗಳಿಂದ ಪಾಡುತ್ತ |
ಶುಕಪಿಕ ಪ್ರಮುಖದುಲಿಗಳನಾಲಿಸುತ ಬಂದು ತರುನೆಳಲೊಳೆಸೆದಿರ್ದರು || ೫೦ ||

## ಹತ್ತೊಂಬತ್ತನೆಯ ಸಂಧಿ ಸಮಾಪ್ತಂ

# ಇಪ್ಪತ್ತನೆಯ ಸಂಧಿ

ಸೂಚನೆ || ನಿಗಮಶಾಖಾಶಿಖಾನಿಲಯ ಪ್ರವಾಳಾಂಘ್ರಿ |
ಯುಗದರ್ಶನೋತ್ಸವದೊಳಂಜನಾ ಸುತಮುಖ್ಯ |
ರಗಣಿತಾನಂದಮಯರೆನಿಸಿ ಸನ್ನುತಿಗೈದರಮರತತಿ ಮೆಚ್ಚುವಂತೆ ||

ಅವಧರಿಸು ಗಿರಿರಾಜತನುಜೆ ಪವಮಾನಸುತ |
ಯುವರಾಜನಂಗದ ಪ್ರಮುಖರೈತಂದು ಸುಖ |
ದವಿರಳ ಮನೋಹರೋದ್ಯಾನಮಂ ಕಂಡತುಲ ಸಂತಸಂಗೊಂಡುಬಂದು ||
ವಿವಿಧಫಲಪುಷ್ಪ ಮಧುಸಹಿತ ಕಂಗೆಸೆವ ಭೂ |
ಯುವತಿಯ ಶಿರೋರತ್ನಮೆನಿಪ ನಂದನದೊಳಗೆ |
ನವತರೋತ್ಸುಕ ಖೇಲನೆಯನೆಸಗಲಿಚ್ಛೈಸುತಂಗದನ ಬೆಸಗೊಂಡರು || ೧ ||

ಅರಸ ಮತ್ತೀ ಬನದೊಳಮಿತ ಮಧುಫಲಸಹಿತ |
ಮಿರುವರಪ್ಪಣೆಗೊಡಲು ಸಂತಸದಿ ಪೀರ್ದು ಬಂ |
ಧುರದಲ್ಲೈದುವೆವಾಳ್ದನೆಡೆಗೆಂದು ವಾನರರ್ಬೆಸಗೊಂಡರಾಸೆಗೊಂಡು ||
ತರಣಿ ನಂದನನ ಮಾತುಳನು ದಧಿಮುಖನಿದಂ |
ಪರಿಪಾಲನಂಗೈವನೆಂದು ಕುಲವೃದ್ಧರಂ |
ಹರುಷದಿಂ ಬೆಸಗೊಂಡು ಮಧುಪಾನಕಪ್ಪಣೆಯನಿತ್ತನಾ ಕಪಿವರರಿಗೆ || ೨ ||

ಮಧುಪಾನಕಪ್ಪಣೆಯನೀಯಲಂಗದನಾಗ |
ಮುದಿತ ಕಪಿನಾಯಕರು ಮೋದಗೊಳುತಿರೆ ಕೆಲರ್ |
ಹೃದಯಸ್ಥ ಹರ್ಷಮಂ ತೋರೆ ನರ್ತಿಸುತಮಿರೆ ಕೆಲರು ಗಾಯನಗೈದಿರೆ ||
ಸುಧೆಯ ಕಂಡ ನಿಲಿಂಪರೆನೆ ಕೆಲರು ನಮಿಸುತಿರ |
ಲಧಿಕಹಾಸ್ಯಗಳೆಸಗೆ ಕೆಲರು ಕೆಲರವನಿಯೊಳ್ |
ಪದಗಳಿಡದಾಗಸಕೆ ಪುಟನೆಗೆದು ತನುಲಾಗುವೇಗದಿಂ ನಡಿಸೆ ಕೆಲರು || ೩ ||

ಬಂದೊರ್ವರೊರ್ವರಾನನಗಳೀಕ್ಷಿಸಿ ಕರಗ |
ಳಿಂದ ಕರಗಳ ಪೊಡೆದು ಗಹಗಹಿಸಿ ನಗೆನುಡಿಗ |
ಳಿಂದೊರ್ವರೊರ್ವರಂ ಸೆಳೆದಪ್ಪಿವಾಲಧಿಗಳಾಘ್ರಾಣನಂಗೈವುತ ||
ಬಂಧುರಪ್ರೇಮದಿಂ ಪೆರ್ಮರಗಳಡರಿ ಮುದ |
ದಿಂದ ಲಂಘಿಸುತನ್ಯವೃಕ್ಷಂಗಳಿಗೆ ತುದಿಗ |
ಳಿಂದ ಭೂತಳಕೆ ಧುಮ್ಮಿಕ್ಕಿ ಕುಣಿದರ್ಕೆಲರು ವಾನರರು ಸಂತಸದೊಳು || ೪ ||

ಕೆಲರು ಪಾಡುತಮಿರಲ್ಕೆಲರಾಡುತಿರೆ ಮತ್ತೆ |
ಕೆಲರು ಹಾಸ್ಯಗಳೆಸಗೆ ಕೆಲರು ಲಾಸ್ಯಗಳೆಸಗು |
ತೊಲಿದು ಪರಿರಂಭಣಂಗೈದು ಪೊಗಳುತಮಿರೆಲ್ಕೆಲಬರಾನಂದಗೊಳಲು ||
ಪಲವಿಧದ ಚೇಷ್ಟೆಗಳಲಾ ಕಪಿಪ್ರವರ ಮನ |
ದೊಲವಿಂದ ಮಧುಪಾನ ಹರ್ಷದಿಂದೀ ಪರಿಯ |
ನಲಿವುತೈತಂದು ಮನಬಂದಂತೆ ಮಾಕ್ಷಿಕವನುಣಲು ವಿಸಟಂಬರಿದರು || ೫ ||

ಪರಿದು ತರುತರುಗಳಗ್ರಗಳಡರಿ ಮನಬಂದ |
ತೆರದಿ ಕ್ಷೌದ್ರವ ಪೀರುತಿರೆ ಪುಷ್ಪಫಲಗಳಂ |
ಪರಿದು ಭೂತಳಕೆ ಚೆಲ್ಲಿದುದಲ್ಲಿಗಲ್ಲಿ ಮುಗುಳೊಂದು ವಿಟಪಿಗಳ ಬಿಡದೆ ||
ಸರಸ ಸಲ್ಲಾಪದಿಂ ಮಧುಪಾನಗೈದು ವಾ |
ನರರೆಲ್ಲರಿಚ್ಛೆಯಿಂದಿರಲು ವನಪಾಲರುಗ|
ಳರರೆ ಸುಗ್ರೀವನ ಮನಃಕಾಂತದುಪವನವ ನಿರ್ಭಯಂ ಪೊಕ್ಕರೆನುತ || ೬ ||

ಬಂದರಾ ಬನದ ಕಾಹಿನ ಜನರ ಧಿಕ್ಕರಿಸ |
ಲಂದು ದಧಿಮುಖನೆಡೆಗೆ ದೂರಲತಿಕೋಪದಿಂ |
ಮಂದಮತಿಗಳಪೊಡೆದು ಕೆಲಸಾರ್ಚಿಬಿಡಲೆನುತ ಕಳುಪಿದಂ ಕಪಿವೀರರ ||
ಮುಂದರಿಯದತಿರೋಷದಿಂದ ವಾನರರೆಡೆಗೆ |
ಬಂದು ತರ್ಜನಭರ್ಜನಾದಿಗಳನೆಸಗೆ ಕಪಿ |
ವೃಂದ ಕೋಪಿಸುತ ಧಿಕ್ಕೃತಿಗೈದು ನಿಟ್ಟುರಗಳಿಂದ ತಾಡನಗೈದರು || ೭ ||

ಮತ್ತರೀಪರಿಯ ಮನಬಂದಂತೆ ಕೋಪದಿಂ |
ಮತ್ತೆ ದಧಿಮುಖಚರರು ಪೊಡೆದು ಪ್ಲವಗತತಿಯ |
ಕುತ್ತಿ ನಖದಂಷ್ಟ್ರ ತಲಹತಿಗಳಿಂ ಪರಿಪರಿಯ ರುಜೆಗಳಂ ಕೊಡುತಬರಲು ||
ತತ್ತರದಿ ಭಯಗೊಂಡು ಬೇಗದಿಂ ಹನುಮಂತ |
ನೊತ್ತಿಗೈತಂದು ದೂರಿದರಾಗ ಹರ್ಷದಿಂ |
ದಿತ್ತನಪ್ಪಣೆಯ ಮಧುಪಾನಕೆಂದಾಬನಕೆ ಶಾಖಾಮೃಗಂಗಳಿಂಗೆ || ೮ ||

ದಧಿಮುಖನ ಭೃತ್ಯರುಪಟಳಕಂಜಲೇನುಂಟು |
ಮಧುಪಾನಗೈದು ಸುಖದಿಂದಿರ್ಪುದವರುಗಳ |
ಬೆದರಿಸುವೆ ನಾನೆಂದನುಜ್ಞೆಯಂ ಪಾಲಿಸಿದಡಂಗದಂ ನೋಡಿ ನಲಿದು ||
ಹೃದಯದಾನಂದದಿಂ ಕಪಿಗಳೊಡನೆಂದ ಭಯ |
ದುದಯಮೇತಕೆ ಪ್ರಭಂಜನತನಯ ಪೇಳ್ದಂತೆ |
ಚದುರಿಂದಮಾತ್ಮಸುಖವಡೆವುದೆಂದಪ್ಪಣೆಯನಿತ್ತನಾ ಕಪಿವರರಿಗೆ || ೯ ||

ಮರುತಸುತ ಪೇಳಿದಡಕಾರ್ಯಂಗಳಾದರುಂ |
ವಿರಚಿಸಲ್ವೇಳ್ಕು ಮತ್ತೆಸಗಿದರಿಗಪಜಯಂ |
ಬರಲಮ್ಮದೆಂದೆನುತ ಯುವರಾಜಪೇಳ್ದರಾನಂದದಿಂ ಕಪಿವೀರರು ||
ಹರುಷಗೊಳುತ್ತೈದಿ ದಧಿಮುಖನ ಕಿಂಕರರುಗಳ |
ಚರಣ ಜಾನುಗಳಿಂದ ತಾಡನಂಗೈದು ಮುಂ |
ಬರಿದು ಮಧುಸೇವನೆಯ ಮಾಡಿದರದೇನೆಂಬೆನಚ್ಚರಿಯನಾ ಸಮಯದೆ || ೧೦ ||

ಪಾನಮದದಿಂ ಕೆಲರು ಪೊಡೆವುತಿರಲಾಚರರ |
ನಾನಂದದಿಂ ಕೆಲರು ಮಧುವ ಸೇವಿಸುತಿರ |
ಲ್ಕಾನನೌಕಸರು ಕೆಲರೈದಿ ವನಪಾಲಕರ ಪೊಡೆದು ಪೊರವಡಿಸುತಿರಲು ||
ವಾನರರ ಬಾಧೆಯಿಂದಲ್ಲಿ ನಿಲ್ಲದೆ ಪರಿ |
ಮ್ಲಾನವದನದಿ ಪೋಗಿ ದಧಿಮುಖಗೆ ಪೇಳುತಿರ |
ಲಾ ನುಡಿಗೆ ಚಿಂತಿಸುತಲಿರಲು ಬಲಿಮುಖರೆಲ್ಲ ಮನದೊಲವಿನಿಂದೆಸೆದರು || ೧೧ ||



ಸಾರಘೋನ್ಮತ್ತದಿಂದಾ ಮರ್ಕಟರು ತರುಗ |
ಳಾರೈದು ಶಾಖೆಗಳ ಪಿಡಿದು ಕೆಲರಿರೆ ಜವದಿ |
ಧಾರಿಣಿಗೆ ಧುಮ್ಮಿಕ್ಕೆ ಕೆಲಕೆಲಬರಲ್ಲಲ್ಲಿ ಸುಪ್ತಿಗಳನನುಸರಿಸಲು ||
ತೋರಹರ್ಷದೊಳೊರ್ವರೊರ್ವರಪ್ಪುತ ಮುದಾ |
ಹಾರಬಲದಿಂದ ಗಹಗಹಿಸಿ ನಗುತಿರೆ ಕೆಲರು |
ದಾರ ಗಾಯನಮೆಸಗಲತಿ ಮದೋತ್ಕಟದಿಂದಮಂಜಿಕೆಯ ನೀಗಿ ಮುದದೆ || ೧೨ ||

ಮನಬಂದ ತೆರದೆ ಬನಮಂ ಸುತ್ತುತಿರೆ ಕಂಡು |
ಕನಲಿ ದಧಿಮುಖ ತನ್ನ ವಾನರರನೊಡಗೊಂಡು |
ಕಿನಿಸಿಂದಮಿಂತೆಂದ ತರಣಿತನಯನಪೊರೆಗೆ ಪೋಗಿ ತಾರೇಯ ಗೈದ |
ದಿನಿಸುಗಳನೆಲ್ಲ ಬಿತ್ತರಿಸಿ ಸುಗ್ರೀವನಿಂ |
ದಿನಿಸು ಕಪಿಗಳಕೊಲಿಸಿ ಶಿಕ್ಷೆಗೈಸುವೆನೆನುತ |
ಮನದಹಂಕಾರದಿಂ ನಡೆದ ವನಪಾಲಕರನೊಡಗೊಂಡು ವೇಗದಿಂದ || ೧೩ ||

ರಾಮಲಕ್ಷ್ಮಣತರಣಿಸುತರಿರ್ಪ ತಾಣಕಂ |
ದಾ ಮಹಾಕಪಿಕಾನನೌಕಸರನೊಡಗೊಂಡು |
ಕಾಮರೋಷಾಗ್ನಿ ಪೆರ್ಚುಗೆಯಿಂದಮೈತಂದನರೆನಿಮಿಷ ಮಾತ್ರದೊಳಗೆ ||
ತಾಮಸಂ ಮ್ಲಾನವದನದೆ ಬಂದು ಪತಿಯಪದ |
ತಾಮರಸಗಳಿಗೆರಗೆ ಕಂಡು ಸುಗ್ರೀವನತಿ |
ಪ್ರೇಮದಿಂದಭಯಮನ್ನಿತ್ತು ಮಗುಳುಪಚರಿಸಿ ಬೆಸಗೊಂಡರೊರೆದನಂದು || ೧೪ ||

ಅವಧರಿಸು ಜೀಯ ಶಾಖಾಮೃಗಗಳೊಡಗೊಂಡು |
ಯುವರಾಜ ಮಧುವನದ ಪೊರೆಗೆ ನಡೆತಂದು ಮನ |
ದವಿವೇಕ ಪೆರ್ಚುಗೆಯೊಳಾ ಪ್ಲವಂಗರಿಗಿತ್ತನಪ್ಪಣೆಯ ಮಧುಪಾನಕೆ ||
ತವಕದಿಂದವರೈದಿ ತಮ್ಮಿಚ್ಛೆಯಿಂ ತಿರುಗಿ |
ವಿವಿಧ ತರುಗುಲ್ಮಲತೆಗಳ ಕಿಳ್ತು ವನವನುಂ |
ನವಸಿದರದೇನೆಂಬೆ ಕದಳಿಕಾನಂದನವ ಪೊಕ್ಕ ಮದಕರಿಗಳಂತೆ || ೧೫ ||

ಪವಮಾನ ಸುಳಿಯಲಮ್ಮನು ತರಣಿ ಸಂಚರಿಸ |
ನವಿರಳ ಸುವಿಕ್ರಮಂ ಶಕ್ರದಿಕ್ಪಾಲಾದ್ಯ |
ರವನಿಯಂ ನಿಟ್ಟಿಸರು ರಾಜಾಜ್ಞೆಯಿಂದುಳಿದ ಪ್ರಾಣಿಗಳು ದಿಟ್ಟಿಸುವರೆ ||
ಲವಲವಿಕೆಯುಂಟೆ ಪಿತೃಪೈತಾಮಹಾದಿಗಳ |
ನವರಸಾಸ್ಪದ ಬನಧ್ವಸ್ತಮಂ ಮಾಡ್ದವನ |
ತವಕದಿಂ ದಂಡಿಸದೆ ಸುಮ್ಮನಿರೆ ಶಾಸನಂ ಕೆಡುಗು ಕೇಳ್ಮುಂದೆ ಜೀಯ || ೧೬ ||

ಎಂದು ದಧಿಮುಖ ಕ್ರೋಧದಿಂದ ನಾನಾಪರಿಯ |
ಲಂದೊರೆದ ನುಡಿಗಳಂ ಕೇಳಿ ರವಿತನಯ ದಯ |
ದಿಂದಮುಪಚರಿಸಿ ಮನ್ನಣೆಗೈದು ಮಾತುಳನ ಕುಳ್ಳಿರಿಸಿ ಪ್ರೀತಿಯಿಂದೆ ||
ಬಂಧುಗಳ್ಬೆರಸಿ ನಂದನಕೆ ಬಂದಾ ತರಳ |
ನಂದು ಮಧುಪಕ್ವಫಲ ಭೋಜನಂ ಗೈದಡಾ |
ನಂದವಾದುದು ನಮಗೆ ಪವನಾತ್ಮಸಂಭೂತನಿಂದಧಿಕಮೇನಿರ್ಪುದು || ೧೭ ||

ಕೃತಕಾರ್ಯಯುತದ ಶಾಖಾಮೃಗಂಗಳು ತನ್ನ |
ಸುತನಪ್ಪಣೆಯೊಳಮಿತ ಮಧುಪಾನ ಪೆರ್ಚುಗೆಯೊ |
ಳತಿ ವಿಲಾಸಂ ಬಡೆದುದೆಮಗೆ ಸಮ್ಮತವಲ್ಲದಿನಿತಿಲ್ಲ ಕಿನಿಸು ಮನದೆ ||
ಕ್ಷಿತಿಯೊಳಾರಾದಡಾರ್ಜಿಸಿದ ಸಂಪದ ತಮ್ಮ |
ಸುತ ಬಂಧುಭೃತ್ಯೋಪಯೋಗ್ಯಮಾದಡೆ ಬಹುಳ |
ಕೃತಕೃತ್ಯರಹರೆನುತ ಪೇಳ್ವಪಿರಿಯರ ನುಡಿಯ ಕೇಳ್ದರಿಯದಾದೆಯಕಟ || ೧೮ ||

ನಂದನಂ ಜಾಂಬವ ಪ್ರಮುಖಕಪಿ ಕುಲರೆನ್ನ |
ಬಂಧುವರ್ಗ ಸಮೇತ ಬಂದು ಮನಬಂದಂತೆ |
ನಂದನದಿ ಪಕ್ವಫಲ ಮಧುಪಾನಗೈದುದೆಮಗಿಷ್ಟವೀ ಭೂತಳದೊಳು ||
ಬಂಧುರ ಪ್ರಿಯಜನರಿಗನುಕೂಲ ಹಿತವೆಮಗೆ |
ಬಂದಂತೆ ಪೆರತಿಲ್ಲವೆಂದು ದಧಿಮುಖಗೆ ರವಿ |
ನಂದನಂ ಪೇಳುತಿರುವನ್ನೆಗಂ ಲಕ್ಷ್ಮಣಂ ಬಂದು ಬೆಸಗೊಂಡನಂದು || ೧೯ ||

ಮಾತುಳನದೇಂ ಕತದೊಳೈತಂದನುಪಚರಿಪು |
ದಾತನಿಗದೇನನಿಷ್ಟತೆಯೆಂದಿಗುಂ ಜನಿಸ |
ದಾತುರಂ ಬರಲದೇಂ ಕಾರಣಂ ಕಪಿಗಳಾರ್ಬಂದು ವನಮಂ ಪೊಕ್ಕರು ||
ಭ್ರಾತನನುದಿನ ತೊಳಲಿ ಬಳಲುತಿಹ ನೆಡೆವಿಡದೆ |
ಸೀತೆಯಂ ನೆನೆನೆನೆದು ಚಿಂತೆಯೊಳು ಚಿಂತೆ ಸಂ |
ಜಾತ ಮಾದರದೆಂತು ಪೇಳೆಂದು ಬೆಸಗೊಳಲ್ ರವಿತನಯ ಪೇಳ್ದನಂದು || ೨೦ ||

ಆತಂಕ ಮೇನಿಲ್ಲವರಸ ಶಾಖಾಮೃಗ |
ವ್ರಾತಮೊಡಗೊಂಡು ದಕ್ಷಿಣದಿಶೆಗೆ ನಡೆದ ಕಪಿ |
ನೇತಾತ್ಮಭವನೆಮ್ಮ ನಂದನಕೆ ಬಂದಿರ್ಪ ತನ್ನಿಚ್ಛೆಯಿಂದ ತಾನೆ ||
ವಾತಭವನನುಮತಿಯೊಳಾ ಬನವ ಪ್ಲವಗರಿಂ |
ಗಾತಿಥ್ಯಗೈದನೆಂಬತಿ ಕೋಪದಿಂ ಬಂದ |
ನೀತ ದಧಿಮುಖನೆನ್ನಮಾತುಳಂ ಕ್ರೋಧಕಂ ಶಾಂತಿಯೆಸಗುವೆನೆಂದನು || ೨೧ ||

ಬನಪುಟ್ಟಿದಂದಿಂದ ದೇವಾಸುರಾದಿಗಳು |
ಮನದಿ ನೆನೆವರಸಾಧ್ಯ ತನ್ನಿಚ್ಛೆಯಿಂ ತಾನೆ |
ತನಯನಪ್ಪಣೆಯಿಂದ ಕಪಿನಾಯಕರ್ಪೊಕ್ಕು ಮಧುಪಾನಗೈದುದೇನು ||
ಯೆನುತಮಾಳೋಚಿಸುತಮಿರೆ ತೋರ್ದುದತಿಶಯಂ |
ಮನಕೆ ಪತಿಕಾರ್ಯ ಸಂಗ್ರಹ ಬಲೋತ್ಕಟದಿಂದ |
ಬನವಪೊಕ್ಕರೆನುತ್ತಮರಿದಾತನುಪಚರಣೆಗೈವೆ ನಾನಾವಿಧದೊಳು || ೨೨ ||

ನೋಡಲಕ್ಕುಮೆ ಬನವನಾರಾದಡಿನ್ನು ಮಾ |
ತಾಡಲಕ್ಕುಮೆ ಜೀಯಕೃತಕಾರ್ಯ ಸೂಚನೆಯ |
ಮಾಡಲೋಸುಗ ಬನವ ಪೊಕ್ಕರಲ್ಲದೆ ಸ್ವೇಚ್ಛೆಯಾಟಕಂ ಪೊಗಲಿಲ್ಲವು ||
ರೂಢಿಗತಿಶಯಬಲಂ ಸಾಹಸಂ ಜಯಸಿರಿಯ |
ನಾಡುತ ಮರುತ್ಮಭವ ಸೀತಾಂಘ್ರಿ ಪಂಕಜವ |
ನೋಡಿ ಬಂದಿಹನಾತನನುಮತಿಯೊಳೆಲ್ಲರಾನಂದಮಯರೆನಿಸಿರ್ಪರು || ೨೩ ||



ಸಂದೇಹಮಿಲ್ಲ ಪವಮಾನನಂದನನಿಂದೆ |
ಬಂದಿರ್ಪುದತಿಶಯಂ ಸ್ಮರಿಸಿದರ ಕಾರ್ಯಕಂ |
ಕುಂದೆನಿಸನೀ ಧರೆಯೊಳಾತನೈದಿದ ಕಾರ್ಯಕೂಣೆಯುಮದೇನಪ್ಪುದು ||
ಯೆಂದು ಸೌಮಿತ್ರಿಗುಸಿರಿದ ನುಡಿಯಕೇಳ್ದು ರಘು |
ನಂದನಂ ಸಂತಸದೊಳೆಂದನಾ ಪ್ಲವಗರಂ |
ಬಂಧುರದ ಜವದಿಂದ ಬರಿಸವೇಳ್ಕೆನಲಾಗ ರವಿತನಯ ಹರುಷಗೊಳುತೆ || ೨೪ ||

ಮಾತುಳನ ಕರೆದು ಪೇಳಿದ ಹರುಷದಿಂದ ಕಪಿ |
ವ್ರಾತಜನರೊಳಗೆ ಮಧುಪಾನಗೈದುದರಿಂದ |
ಜಾತಹರ್ಷಿತನಾದೆ ಜಾಂಬವಪ್ರಮುಖರಂ ಕಾಣಲುಜ್ಜುಗಗೊಳುವೆನು ||
ಪ್ರೀತಿಯಿಂದೈದಿ ಕಳುಪೆಂದು ನೇಮಿಸಲಾಗ |
ಭೂತಳವನುಳಿದು ಗಗನಾಂಗಣದೊಳೈತರುತ |
ಮಾತನಿರಲಿತ್ತಮಂಗದ ಸಕಲ ಕಪಿವರರ ಕರೆದು ಮುಗುಳಿಂತೆಂದನು || ೨೫ ||

ಇನಸುತನ ಪೊರೆಗೆ ದಧಿಮುಖನೈದಿ ದೂರಿರ್ಪ |
ಬನಮೆಲ್ಲ ಪಾಳಾದುದೆಂದು ಪೇಳ್ದಾಕ್ಷಣದಿ |
ಘನಕ್ರೋಧ ಸಂಭೂತಮಹುದುಗ್ರಶಾಸನಂ ರೋಷದಿಂದೇಂಗೈವೆನು ||
ವನಜಾಕ್ಷ ರಾಮನೆಡೆಗೈದಿ ಭೀತಿಯನೀಗಿ |
ತನುಪೋಷಣಂಗೈವುದುಚಿತಮಲ್ಲದೆ ತಡೆವು |
ದೆನಗಪ್ರಶಸ್ತಕರಮಾಗಿರ್ಪುದೆಂದೊರೆದ ಯುವರಾಜನೆಲ್ಲರೊಡನೆ || ೨೬ ||

ಅಂಗೀಕರಿಸುತಖಿಲ ಶಾಖಾಮೃಗೋತ್ತಮರ |
ನಂಗ ಮಂಗಳದೇವತಾ ವಾರ್ತೆಗಳನು ರಘು |
ಪುಂಗವಂಗೆಚ್ಚರಿಸಲೈದುವನಿತರೊಳಾದುದಂಬರದೊಳತಿಶಬ್ದವು ||
ಕಂಗಳಂ ಪರಪಿ ಗಗನಾಂಗಣವ ನೋಡುತಿರೆ |
ಸಿಂಗರದ ತೆರಳ್ಕೆಯಂತೈತಂದು ಭೂತಳದೆ |
ಮುಂಗಡೆಯಲೆಸೆಯೆ ದಧಿಮುಖ ಮುಖ್ಯ ಕಪಿವರರಕಂಡ ಹರಿಸುತನ ಸುತನು || ೨೭ ||

ಹರಿಕುಲವ ಕಂಡು ಸಂತಸದಲಿರೆ ತಾರೇಯ |
ಚರಣಕಭಿನುತಿಗೈದು ತುತಿಸಿ ಕರಗಳ ಮುಗಿದು |
ಭರದಿ ಕೈವಾರಿಸುತ ದಧಿವಕ್ತ್ರ ಬಿನ್ನಪಂಗೈದನತಿ ವಿನಯದಿಂದ ||
ದೊರೆ ದಯಾಪರನೆಮ್ಮ ಪೊರೆವರಸಿನಣುಗನೆಂ |
ದರಿತರಿಯದಯ್ಯನೆಡೆಗೈದಿ ದೂರಿದುದ ಪತಿ |
ಕರಿಸಿ ಕಾಯ್ವುದೆನಲ್ಕೆ ಬೆಸಗೊಂಡನುಪಚರಿಸಿ ಯುವರಾಜನಕ್ತಿಯಿಂದೆ || ೨೮ ||

ಗುರುವಿನೆಡೆಗೈದಿ ನೀಂ ದೂರ್ದುದೇಂ ಕೋಪಿಸದೆ |
ಕರುಣದಿಂದಾಜ್ಞಾಪಸಂಗೈದುದೇನೆಂಬು |
ದರಿವಂತೆ ಪೇಳೆಂದು ಕೇಳ್ದಂಗದನ ಕೂಡೆ ದಧಿಮುಖಂ ಪೇಳ್ದನಂದು ||
ಹರಿಗಳೈತಂದು ತನ್ನಿಚ್ಛೆಯಿಂದೀ ಬನದಿ |
ಚರಿಸುತಿರೆ ರಾಜಾಜ್ಞೆವಿಡಿದಾಂ ನಿವಾರಿಸಲು |
ತರದಿರಲ್ಮನಕರಸಿನೆಡೆಗೈದಿ ಬಿನ್ನಪಂಗೈದೆನೀ ಪರಿಗಳನ್ನು || ೨೯ ||

ಆಲಿಸುತ ಸುಗ್ರೀವನತಿಮೋದಗೊಂಡೆಂದ |
ಪಾಲನಂಗೈದ ಬನವಸ್ತು ಸಾರ್ಥಕಮಾಯ್ತು |
ಲೀಲೆಯಿಂದಿಷ್ಟಬಂಧುಗಳಿಗುಪಯೋಗಮಾಯ್ತೆನ್ನ ಸಿರಿಯೆಂದ ಮುದದೆ ||
ಬಾಲನಂಗದ ಮುಖ್ಯರೆಲ್ಲರಂ ತ್ವರಿತದಿಂ |
ದಾಲಯಕೆ ಕಳುಪೆಂದು ನೇಮಿಸಿದರಾನು ಕಪಿ |
ಜಾಲದೊಡನೈತಂದು ನೃಪನಿರೂಪಿಸಿದರ್ಥಮಂ ಬಿನ್ನಪಂಗೈದೆನು || ೩೦ ||

ತರಣಿಸುತನೊಡನೆ ಬಿತ್ತರಿಸಿದೀವಾರ್ತೆಗಳ |
ನರಿತಣ್ಣದೇವರಂ ಬಿನ್ನವಿಸಿ ಸೌಮಿತ್ರಿ |
ಹರುಷದಿಂ ಧರಣಿಜೆಯ ಕಂಡವಾರ್ತೆಯ ಕೇಳಲುಜ್ಜುಗದೊಳಿರಲಿತ್ತಲು ||
ಕರೆದು ಕಳುಪಿದರೆಮ್ಮ ಗಮ್ಮನೈತಂದು ಬಂ |
ಧುರ ಪ್ರೇಮವಿತ್ತಪುದು ಲೇಸೆಂದು ಸುಗ್ರೀವ |
ನೊರೆದನೆಂದಾ ಕಪೀಶ್ವರ ಪೇಳಲಾನಂದಗೊಂಡರಾ ಕಪಿಮುಖ್ಯರು || ೩೧ ||

ವನಪಾಲಕಾಧಿಪನ ವಿನಯದಿಂ ಮನ್ನಿಸುತ |
ಹನುಮತ್ಪ್ರಧಾನ ಹರಿಯೂಥಪರನೊಡಗೊಂಡು |
ವಿನತಾತನಯನಂತೆ ಗಗನಪಥದೊಳ್ಬರುತಮಿರಲಿತ್ತ ರಘುನಾಥನು ||
ಜನಕಜಾತೆಯ ನೆನೆದು ಘನವಿರಹದಿಂ ಕಂದಿ |
ಕನಲುತಿರೆ ಕಂಡು ಬಹುಧೋಪಚಾರದೆ ಸೂರ್ಯ |
ತನಯ ಸಮ್ಮತಿಗೊಳಿಸಲನುಗೈದ ತತ್ಕಾಲ ಸದೃಶತರನುಡಿಗಳಿಂದೆ || ೩೨ ||

ಸ್ವಾಮಿ ಲಾಲಿಪುದೆನ್ನ ಬಿನ್ನಪವ ಕಪಿವರರು |
ಭೂಮಿಜಾತೆಯ ಕಂಡು ಕುರುಹಕೊಂಡಲ್ಲದಿ |
ನ್ನೀ ಮಹಿಗೆ ಬರಲಮ್ಮರಿದು ಸಿದ್ಧ ಬುದ್ಧಿಯುತನಂಗದಂ ಕಾರ್ಯಮುಳಿದು ||
ಆ ಮಹಾಬನವ ಪೊಗಲೆಂತಹುದು ಮಗುಳೆ ನಿ |
ಸ್ಸೀಮಮೆನೆ ಮಧುಪಾನಗೈದರೆಂತಳವಡುವು |
ದಾ ಮರುತ್ಸುತಜಾಂಬವಪ್ರಮುಖರಮಿತ ಮತಿಯುತರು ಭುವನತ್ರಯದೊಳು || ೩೩ ||

ಧೃತಿಮತಿ ಬಲೋತ್ಸಾಹ ಸಹಿತ ಚೇಷ್ಟಾದಿಗಳು |
ಕೃತಕಾರ್ಯರಿಂಗಲ್ಲದನ್ಯರಿಂಗಳವಡದು |
ಚತುರ ಪವನಾತ್ಮಭವನಿಂದವಿಾ ಕಾರ್ಯ ಕೈಗೂಡಿರುವುದುಳಿದರಿಂದ ||
ಹಿತಮಿಲ್ಲ ಸೀತೆಯಂ ಕಂಡು ಕುರುಹಂ ಕೊಂಡು |
ಜತನದಿಂ ಬಂದಿರ್ಪರಿತ್ತ ಯೋಚಿಸುತಮತಿ |
ಪಿತೆಗೆ ಮನಮನ್ನೀಯಸಲ್ಲ ಲಾಲಿಸುಜೀಯ ಪ್ರೀತಿಯಿಂದೆನ್ನ ಸೊಲ್ಲ || ೩೪ ||

ಎನುತ ರಘುನಾಯಕಂಗುಪಚರಿಸುತಿರಲಿತ್ತ |
ಘನರವಂ ಕೇಳ್ಪಟ್ಟತಾಕಾಶ ಮಂಡಲದೊ |
ಳಿನಸುತ ಪ್ರಮುಖರೀಕ್ಷಿಸುತಿರ್ದರನ್ನೆಗಂ ಶಾಖಾಮೃಗಂಗಳೆಲ್ಲ ||
ಹನುಮತ್ಪ್ರಧಾನರಾಗಸದಿಂದ ನೆಲಕಿಳಿದು |
ಮನಬೊಲವಿನಿಂದ ರಘುವೀರಂಗೆ ಪೊಡಮಟ್ಟು |
ಜನಕಜಾತೆಯ ಶಿವಂಕರವಾರ್ತೆಯಂ ತಿಳುಪಿ ತುತಿಸಿ ಕರಗಳ ಮುಗಿದರು || ೩೫ ||



ಹರಿಗಳುಸಿರಿದ ಸುಧೋಪಮಘಾಣಿಯುಂ ಕರ್ಣ |
ಸರಣಿಯಂ ಸೋಂಕಲಾನಂದಮಯನಾಗುತ್ತ |
ತರಣಿಸಂಜಾತ ನಲಿವುತ್ತಮಿರೆ ಸೌಮಿತ್ರಿ ಸಂತೋಷಪುಳಕವೆರೆಯೆ ||
ನರದೇವನತಿಮನೋಹರುಷದಿಂ ಹಿಗ್ಗುತ್ತ |
ಹರಿಗಳಂ ಪೊಗಳಿ ಪ್ರಸವಣಗಿರಿಗೈತಂದು |
ತರುನೆಳಲೊಳಾಮೋದದಿಂದ ಮನ್ನಿಸೆ ಬಲೀಮುಖರು ಸಂತಸದಿ ಪೊಗಳಿ || ೩೬ ||

ನೀರಧಿಯ ದಾಂಟಿದುದ ನಿಶೆಯೊಳಾಸುರನಗರ |
ಚಾರಣಂಗೈದುದಂ ರಾವಣಾಂತಃಪುರದ |
ನಾರಿಯರ ಕಂಡುದಂ ಜವದಿಂದಶೋಕವನಮಧ್ಯದೊಳು ವಿಟಪಿಯೆಡೆಯ ||
ಧಾರಿಣೀಸುತೆಯ ಕಂಡುದನುಂಗುರವನಿತ್ತು |
ಚಾರು ಮಣಿಯಂ ಕೊಂಡು ದಾನವರ ಸದೆಬಡಿದ |
ಪಾರ ವಾರಾನ್ನಿಧಿಯ ಮಗುಳೆ ದಾಂಟಿದ ಪರಿಯ ಕಪಿಗಳೆಚ್ಚರಿಸಲಾಗ || ೩೭ ||

ಜನಕಜೆಯ ಕ್ಷೇಮವಾರ್ತೆಯ ಕೇಳಿ ಶ್ರೀರಾಮ |
ಮನದಹರ್ಷದಿ ಕಪಿಗಳಂ ಕೇಳ್ದನವನಿಜೆಯ |
ನಿನಿತು ವಿಧದಿಂ ಕಂಡಪರಿಯೆಂತು ಪೇಳೆನಲ್ ಶಾಖಾಮೃಗಂಗಳೆಲ್ಲ ||
ಮನದಸಂತಸದಿಂದ ವೃತ್ತಾಂತವೆತ್ತ ಶ್ರೀ |
ಹನುಮಂತನಂ ತೋರಲನುಮೋದದಿಂ ಮನದಿ |
ನೆನೆದು ಧರಣೀಜಾತೆಯಿಪ್ಪ ದೆಸೆಗಭಿನಮಿಸಿ ಬಿನ್ನವಿಸಲನುಗೈದನು || ೩೮ ||

ದೇವ ಲಾಲಿಸು ಚರಣನೇಮದಿಂ ಪೊರಮಟ್ಟು |
ಭೂವಳಯಮಂ ಚರಿಸುತೊಂದೆಡೆಯ ಬಿಲದೊಳಗೆ |
ಗಾವಳಿಯೊಳಂ ಕಳೆದು ಕೆಲವುದಿನಗಳ ಕಷ್ಟದಿಂ ಪೊರಟು ಸರಣಿವಿಡಿದು ||
ಸಾವಧಾನದಿ ಮಹೇಂದ್ರಾದ್ರಿಯೆಡೆಗೈತಂದು |
ಕೋವಿದ ಜಟಾಯುಷ ಭ್ರಾತನನುಮತಿವಿಡಿದು |
ದೇವಿಯಂ ನೋಡಲುದಧಿಯ ದಾಂಟೆ ಜಾಂಬವಪ್ರಮುಖರಪ್ಪಣೆಯನಾಂತು || ೩೯ ||

ಅಂಗದನನುಜ್ಞೆಯಿಂ ಬರುತಿರಲು ಶೈಲಗಳ |
ಪುಂಗವಂ ತಾಗಲವಗಂ ತಿಳುಪಿ ಸುರಸೆಯಂ |
ಮುಂಗಡೆಯ ಸಂತೈಸಿ ಮತ್ತೆ ಛಾಯಾಗ್ರಹನ ಕಳೆದಾ ತ್ರಿಕೂಟದೆಡೆಯ ||
ಸಿಂಗರದ ಬನದಿ ರವಿದೇವ ಪಶ್ಚಿಮಶೈಲ |
ಕಂಗಮಿಪ ಪರಿಯಂತಮಿರ್ದು ನಿಶೆಯೊಳ್ಪಟ್ಟ |
ಣಾಂಗಣವ ಪೊಕ್ಕು ಲಂಕಿಣಿಯ ಬೀಳ್ಕೊಟ್ಟು ಮುಂದೈದಿ ನಿಟ್ಟಿಸುತಮಾಗ || ೪೦ ||

ರಾವಣಾಂತಃಪುರವ ನೋಡಿ ಶೃಂಗಾರ ಜನ |
ದಾವನಿಯೊಳಂ ತೊಳಲಿ ಪ್ರತಿಪಚ್ಛಶಿಕಳಾ |
ಭಾವದಿಂ ಶಿಂಶುಪಾಕ್ರೋಡದೊಳಗವನಿಜೆಯ ಚರಣಕಮಲಗಳ ನೋಡಿ ||
ದೇವರಿತ್ತುಂಗುರವನೊಪ್ಪಿಸಿ ದಯಂಬಡೆದು |
ಜೀವರತ್ನವಕೊಂಡು ಪುನರಪ್ಪಣೆಯ ಬೇಡೆ |
ಠೀವಿಯಿಂ ಚಿತ್ತವೃತ್ತಿಯೊಳಿರ್ದುದುಸಿರಿದುದ ವಿಜ್ಞಾಪಿಸುವೆನಾಲಿಸು || ೪೧ ||

ಚತುರದಶಭುವನಮಂ ಸೃಜಿಸೆ ಕರ್ತರು ದೇವ |
ತತಿಯೊಳುತ್ತಮ ರಾಮಲಕ್ಷ್ಮಣರ್ದಯವೆರಸಿ |
ಮತಿಯೊಳೆನ್ನಂ ನೆನೆಯದಿಹುದು ನೋಡುವರೆನ್ನ ಭಾಗ್ಯದೇಳಿಗೆಯ ಬೆಳಸು ||
ಖತಿಯಿಂದ ದಾನವಿಯರನುದಿನದಿ ಮಾಳ್ಪದಾ |
ಪತಿತಖಳ ವಚಿಸುವ ದುರಾಗ್ರಹದ ವಾಣಿಗಳ |
ವೆತೆಗಳೆಲ್ಲವ ಸವಿಸ್ತರವಾಗಿ ಬಿನ್ನವಿಸೆ ಮಗುಳೆ ವಿಜ್ಞಾಪಿಸುವುದು || ೪೨ ||

ಪಾಕಶಾಸನನಣುಗನೆಸಗಿದ ದುರಾಚಾರ |
ಭೀಕರಕೆ ಕುಶವ ಬ್ರಹ್ಮಾಸ್ತ್ರಗೈದೆಚ್ಚರವ |
ನಾಕಾದಿಲೋಕಮಂ ತೊಳಲಿ ಮರೆಯೊಗಲವನ ಕಾಯ್ದು ರಕ್ಷಿಸಿದ ದಯವ ||
ಕಾಕಮಾತ್ರನಿಗಿನಿತು ಸಾಹಸಂಗೈದು ಮಗು |
ಳೀಕರಾಳ ಪಿಶಾಚಮಂ ಸ್ಮರಿಸದೆನ್ನಂ ನಿ |
ರಾಕರಿಪುದುಚಿತವೆಯೆನುತ್ತ ಚರಣಂಗಳಿಗೆ ತಿಳುಪು ಮರೆಯದೆ ಬಾಲಕ || ೪೩ ||

ಏನಾದರೊಂದು ಕಷ್ಟಂಗಳಿಂದಿನಿಸು ದಿನ |
ಹಾನಿವೃದ್ಧಿಗಳೆಣಿಸದನಘ ಚರಣಂಗಳಂ |
ಮಾನಸದೊಳಿಟ್ಟಸುಗಳಂದಳೆದು ಮುಂದೊಂದು ವಾಸರಂ ಜೀವಿಸುವುದು ||
ತಾನು ಸೂಚಿಸದಾದರೆರಡು ತಿಂಗಳುಪರಿ |
ಮ್ಲಾನತೆಯೊಳಿರ್ದಪೆಂ ಬೇಗಲೈತಂದೆನ್ನ |
ಮಾನರಕ್ಷಣೆಗೈವ ಪರಿಯೊಳೆಚ್ಚರಿಪುದೆಂದೊರೆದು ಬೀಳ್ಕೊಟ್ಟರಾಗ || ೪೪ ||

ತಿಳುಪೆ ಪವನಾತ್ಮಭವ ವಾಣಿಯಂ ಲಾಲಿಸುತ |
ನಳಿನಾಕ್ಷನಾ ಶಿರೋರತ್ನಮಂ ನಿಟ್ಟಿಸುತ |
ಮಳಲುತಿರೆ ಕಂಡು ಸೌಮಿತ್ರಿ ಖಿನ್ನತೆಯಾಂತು ಪಲುಬುತಿರೆ ಸುಗ್ರೀವನು ||
ತೊಳಲುತಿರಲಿಂತೆಂದ ರಘುನಾಥಗೀರತ್ನ |
ಪೊಳೆದುದೆಮ್ಮಯ ವಿವಾಹದಿ ಜನಕ ಕೃಪೆಯಿಂದ |
ನಳಿನಮುಖಿ ಸೀತೆಗಿತ್ತನು ಶಕ್ರದತ್ತಮಿದು ಜನಕರಾಜಗೆ ಪೂರ್ವದಿ || ೪೫ ||

ಅಂದಿನಿಂ ಬೈತಲೆಯೊಳಿರ್ದುದೀಮಣಿ ಪೂರ್ವ |
ದಿಂದ ವೈದೇಹಿಗತಿಮೋದಕರಮಿಾ ರತ್ನ |
ಮೊಂದ ಕಂಡೆನು ಸೀತೆಯುಳಿದಿಂದು ಕಾಲವಶಮೆನುತ ಸಂತಾಪಗೊಂಡು ||
ಮುಂದೇನ ಸೂಚಿಸಿದಳೆಂಬುದಂ ವಿಸ್ತರಿಪು |
ದೆಂದರಾ ಪವಮಾನನಂದನಂ ಭಕ್ತಿಯಿಂ |
ದೆಂದ ಜನಕಜೆಯುಸಿರ್ದ ಪರಿಗಳೆಳ್ಳನಿತಾಗ ಮಾಜದಂತಳ್ತಿಯಿಂದ || ೪೬ ||

ಪದಿನಾಲ್ಕು ಲೋಕದೊಳಗಿದಿರಿಲ್ಲದತಿ ಬಲರ್ |
ಕದನಕರ್ಕಶ ದಯಾಪರ ಮಾನಶಾಲಿಗಳ್ |
ಕುಧರಧೃತಿ ದಿವ್ಯಾಸ್ತ್ರಯುತರದೇಂ ಕಾರಣದೊಳೆನ್ನ ಮರೆದಿರ್ಪಪರಿಯು ||
ಹೃದಯಕಚ್ಚರಿಯಾಗಿ ತೋರುತಿದೆ ಮದ್ಭಾಗ್ಯ |
ದುದಯಮೊ ಕೃಪಾರಹಿತರಾದರೋ ಮದವಸ್ಥೆ |
ಯುದಿತಮಾಗದೆ ಪೋದುದೋ ವತ್ಸ ಪೇಳೆಂದು ಮಗುಳೆಮಗುಳಿಂತೆಂದಳು || ೪೭ ||



ಜಗತಿಯೊಳು ಧರ್ಮಂ ಪತಿವ್ರತಾನಿಷ್ಠೆಯುಂ |
ಮಿಗೆ ಸತ್ಯವಾದರೆನ್ನಲ್ಲಿ ರಘುನಾಯಕನ |
ಬಗೆಯೊಳುದಿಸಲಿ ಕರುಣಮಿಾ ದುಃಖಸಾಗರವ ದಾಂಟುವಂದದಲಿ ತಿಳುಪಿ ||
ಸಗರಗೋತ್ರಲಲಾಮಗೆಚ್ಚರಿಸು ಪ್ರಾಣಗಳ |
ಮಿಗಲೀಸರೀ ದುಷ್ಟಜನರು ನೀನೈದೆನುತ |
ಮೊಗುಮಿಗೆಯ ಕಷ್ಟದಿಂ ಬೀಳ್ಕೊಡಲ್ಕೆರಗಿ ಕರಗಳ ಮುಗಿದು ನಾಂ ಬರುತಿರೆ || ೪೮ ||

ತರಳ ತಾನಿನಿಸುದಿನ ರನ್ನಮಂ ನಿಟ್ಟಿಸುತ |
ಮಿರುತಿರ್ದೆನನ್ನೆಗಂ ನೀಂ ಬಂದು ಮನ್ಮನವ |
ಹರುಷಗೊಳಿಸಿದೆ ಮಗುಳೆ ನಿನ್ನಾಳ್ದನೆಡೆಗೈದಲಾನೊರ್ವಳಾವ ಪರಿಯ ||
ದುರುಳೆಯರ ಕೋಟಲೆಯೊಳಿರುವೆನೀಪರಿಗಳೆ |
ಚ್ಚರಿಸಿ ಚರಣಕೆ ಬೇಗಮೊಡಗೊಂಡು ಬಂದೆನ್ನ |
ಪೊರೆದಪುದೆನುತ್ತ ಬಲುಪರಿಯಲುಸಿರಿದುದೆಂತು ಗಣಿಸಿ ಬಿನ್ನವಿಪೆ ಜೀಯ || ೪೯ ||

ಖಗಸುತಗೆ ಲಕ್ಷ್ಮಣಗೆ ಕಪಿಕುಲೋತ್ತಮರಿಂಗೆ |
ಸಗರವಂಶಜಗೆ ಮತ್ಕಷ್ಟಗಳನೆಲ್ಲಮಂ |
ಮಿಗೆ ತಿಳುಪಿ ಕ್ಲೇಶದಂಭೋನಿಧಿಯ ದಾಟಸುವುದೆಂದು ಬಹುವಿಧದಿ ಪೇಳೆ ||
ಸುಗುಣೆರನ್ನೆಗೆ ತಿಳಿದ ಮಾಳ್ಕೆಯೇ ಬಿನ್ನವಿಸಿ |
ಮುಗಿದು ಕರಗಳನಾಜ್ಞೆವಿಡಿದು ಬಂದೆನು ದೇವ |
ಮಿಗೆ ಕರುಣದಿಂ ಕಾಯವೇಳ್ಕೆಂದು ಪವನಜಂ ಪೇಳಿ ಮಗುಳಿಂತೆಂದನು || ೫೦ ||

ನಿರುತೋಪವಾಸಂ ಭವಚ್ಚರಣಭಾವನಾ |
ಪರಿಚರಣೆಯಿಂ ಮಲಿನವಾಸದಿ ಕೃಶಾಂಗತೆಯ |
ಬೆರದಿರ್ಪ ತಾಮಸಿಯ ಧರಣೀತನೂಭವೆಯ ಸಾಧ್ವಿಯರ ಮಕುಟಮಣಿಯ ||
ಪೊರೆಯವೇಳ್ಕಾಂ ತಿಳಿದಮಾಳ್ಕೆಯೊಳ್ಪಾದಕೆ |
ಚ್ಚರಿಸಿದೆ ಪತಿವ್ರತೆಯ ಚಿತ್ತಾನುಮೋದಕರ |
ನಿರುಗೆಯಂ ಪಾಲಿಸುವುದೆಂದೆರಗಿ ಪವಮಾನತನಯ ಮೌನದೊಳಿರ್ದನು || ೫೧ ||

ಸತತ ಗತಿಯಾತ್ಮಭವ ಕರ್ಣಾಮೃತವನುಸಿರ |
ಲತಿಹರ್ಷದಿಂ ನೆರೆದ ಕಪಿವರಾದಿಗಳೆಲ್ಲ |
ಕ್ಷಿತಿಯ ನಂದನೆಯ ಪೊಗಳುತ್ತಮಿರೆ ಸುಗ್ರೀವ ಲಕ್ಷ್ಮಣಪ್ರೀತಿಗೊಳಲು ||
ಅತಿಶಯ ಮನೋತ್ಸವದಿ ಶ್ರೀರಾಮಪುರದರಸ |
ಸತಿಸಹಿತಮಿರ್ಪೆನೆಂಬಾನಂದ ಸಾಮ್ರಾಜ್ಯ |
ಯುತನೆನಿಸುತೇನೊಂದನೆಣಿಸದೆ ನಿವಾತಸ್ಥಕಲಿಕಾಸದೃಕ್ಷನೆನಿಸೆ || ೫೨ ||

**ಇಪ್ಪತ್ತನೆಯ ಸಂಧಿ ಸಮಾಪ್ತಂ**

# ಇಪ್ಪತ್ತೊಂದನೆಯ ಸಂಧಿ

ಸೂಚನೆ ‖ ಭಕ್ತವತ್ಸಲತೆಯಿಂದಂಭೋಜ ಸಂಭವಾ |
ಸಕ್ತ ಲೋಕಾಭಿಷೇಚನಗೈದು ಮಾರುತಿಗೆ |
ಮುಕ್ತಿಸೋಪಾನದುಪದೇಶದಿಂ ಮನ್ನಿಸಿದ ಶ್ರೀರಾಮಚಂದ್ರನೊಲಿದು ‖

ಅವಧರಿಸು ಗಿರಿರಾಟ್ತನೂಜೆ ಪ್ರಿಯಮಂ ಪೇಳ್ದ |
ಪವಮಾನಭವನ ವದನಾಲೋಕನೋತ್ಸವದಿ |
ಕುವಲಯಾಧಿಪ ರಾಮಭದ್ರನತಿಹರುಷದಿಂದಿಂತೆಂದನಳ್ತಿಯಿಂದ ‖
ರವಿಯನ್ವವಾಯರಕ್ಷಕ ನಿನಗೆ ಪದಿನಾಲ್ಕು |
ಭುವನಂಗಳಿತ್ತರೆಣೆಯಲ್ಲಮದರಿಂದಮಾಂ |
ನವಕಮೆನೆ ಸರ್ವಸ್ವಮಂ ಕೊಡುವೆನೆಂದೆನುತ ಪರಿರಂಭಣಂಗೈದನು ‖ ೧ ‖

ಸ್ಮರಣೆಮಾತ್ರದಲಿ ವೈಕುಂಠಾದಿ ಪುರುಷಾರ್ಥ |
ದೊರಕುವುದೆನುತ್ತರಿತು ಹರವಿರಿಂಚಿಪ್ರಮುಖ |
ಪರಮಋಷಿಗಳ ಸದಾಭ್ಯಾಸ ನಿರ್ಮಲಚಿತ್ತಕಿನಿಸಾದರುಂ ನಿಲುಕದ ‖
ಪರಬೊಮ್ಮ ಮಾನುಷಾಕಾರದಿಂದವತರಿಸಿ |
ಕರುಣದಿಂದಾಲಿಂಗನಂಗೈದನೇಂ ಧನ್ಯ |
ಮರುತಸುತನೆಂದೊರೆಯಲಹುದು ಶ್ರೀರಾಘವಗಭಿನ್ನತೆಯ ಮಹಿಮೆಗಳನು ‖ ೨ ‖

ಸೆಳೆದಪ್ಪಿ ಗಲ್ಲಗಳನಲುಗಿ ಮುದ್ದಿಸುತ ಕರ |
ತಳದಿಂದಮಂಗಮಂ ನೇವರಿಸಿ ಕುಳ್ಳಿರಿಸಿ |
ನಳಿನಭವ ಪಟ್ಟಮಂ ದಯೆಗೈದು ಪ್ರಮುದದಿಂದಿಂತೆಂದ ರಘುನಾಥನು ‖
ಪೊಳಪಿಲ್ಲದಾಯಮಂ ಧೃತಿಮತಿ ವ್ಯಾಪಕತೆ |
ದಳೆದು ಸುಖದಿಂ ಸೃಷ್ಟಿಕರ್ತನೆಂದೆನಿಸಿ ಭೂ |
ತಳಗಳಂ ಪಾಲಿಪುದು ಮಚ್ಛಾಸನದೊಳೆಂದು ಪುನರಪಿ ನಿರೂಪಿಸಿದನು ‖ ೩ ‖

ಆವ ತೆರದೊಳಗೆಮ್ಮ ಕೀರ್ತನಂಗೈದಪರ |
ದಾವೆಡೆಯೊಳೆಮ್ಮನಾರಾಧಿಸುವರಲ್ಲಲ್ಲಿ |
ಭಾವಭಕ್ತಿಯೊಳು ಕರಗಳನುಗಿದು ನಿತ್ಯಸುಖಸಾರ ಭೋಕ್ತಾತ್ಮನಾಗಿ ‖
ಠೀವಿಯಿಂ ಕನಕಕದಳೀವನದೊಳಿರ್ದಗ್ರ |
ಭಾವಿ ಸಾಮ್ರಾಜ್ಯಾನುಭವಗೈದು ತುದಿಯೊಳಂ |
ಪಾವನಕೆಪಾವನ ಸ್ವರೂಪದಿಂದೆಸೆವುದು ಭವಲ್ಲೋಕ ವಾಸಿಗಳೊಳು ‖ ೪ ‖

ಹನುಮನೀ ರುದ್ರಾವತಾರನೆಮ್ಮಯ ಭಕುತಿ |
ಯನುವಿಡಿದು ಸೇವೆಯಿಂ ಮೆಚ್ಚಿಸುತಮಾರ್ಜಿಸಿದ |
ವನಜಭವ ಪದವಿಗಂ ಮಹಿಮಾತಿಶಯ ಪೆರ್ಚಲೋಸುಗಂ ಪೂರ್ವದೊಳಗೆ ‖
ಘನಕೇಶ ವಿಗ್ರಹಕ್ಕುಪದೇಶಗೈದಿರ್ಪ |
ಮನುವನೀ ಮೂರ್ತಿಯೊಳು ತೋರ್ವಂಧಕಾರಾತಿ |
ನಿನಗೆ ಬೋಧಿಸುವೆನಾದಿವ್ಯತರ ಮಂತ್ರವನೆನುತ್ತಮುಪದೇಶಿಸಿದನು ‖ ೫ ‖



ಈ ದಿವ್ಯಮಂತ್ರಮಂ ವಾರಣಾಸಿಯೊಳು ಶಿವ |
ಮೋದದಿಂದಖಿಳ ಜಂತುಗಳಿಗುಪದೇಶಿಸುವ |
ವೇದಮಕುಟಾಗ್ರ ಪಂಥಾನಮಂ ತೋರಿಸುವನನುದಿನಂ ತೆರಪಿಲ್ಲದೆ |
ಆದರಿಸದಿರೆ ಮಂತ್ರರಾಜಮಂ ನಿರ್ವಾಣ |
ಹಾದಿ ಸಮನಿಸಲರಿದು ಯೋಗೀಂದ್ರರಿಂಗಾಗ |
ಲೀ ಧರೆಯೊಳದರಿಂದ ಜಪಿಸುತಿಹುದನವರತ ಸರ್ವಾರ್ಥದಾಯಿಯೆನುತ ‖ ೬ ‖

ಈ ಮಂತ್ರ ರಾಜಮಹಿಮೆಯೊಳು ಕಮಲಜನಿಂದ್ರ |
ಸೋಮಾದಿಗಳು ಸೃಷ್ಟಿಕರ್ತೃತ್ವ ಮೊದಲಾದ |
ಸಾಮರ್ಥ್ಯಮಂ ಪಡೆದು ಸುಖದಲಿರುತಿಹರಬ್ಜಭವ ತನ್ನ ನಂದನನಿಗೆ ‖
ಪ್ರೇಮದಿಂ ಬೋಧಿಸಿದ ಕೌಶಿಕಂ ನಾರದ |
ಶ್ರೀಮಹಾಮೌನಿಗಳಿಗೈತಂದುದಖಿಳೇಷ್ಟ |
ಧಾಮಕಲ್ಪಕ ಕಾಮಧೇನು ಚಿಂತಾಮಣಿಯೆನುತ್ತ ಕೇಳಿ ಮನದಿ ತನಯ ‖ ೭ ‖

ಮಧುಪಾಸನಂಗೈವರಖಿಲ ದೇವಾಸುರ |
ರ್ವಿದಿತಾರ್ಥ ಮುನಿಗಳುಂ ಸ್ತ್ರೀವೈಶ್ಯ ಪಾಪಕುಲ |
ದುದಯಸ್ತಮತ್ತನ್ಯರಾದರುಂ ಮನ್ಮಂತ್ರ ಮದ್ಭಕ್ತಿಯುಂಟಾದರೆ ‖
ಪದವ ಸಾರುವರಿದಕೆ ತಪ್ಪಿಲ್ಲ ಸುರಧೇನು |
ಸದನದಲ್ಲಿರಲುಳಿದು ಕರಿಯ ಸೇವನೆಗೈವ |
[1]ಸದರರಿಂಗೀ ವಿದ್ಯೆ ದೊರೆಯದಖಿಲೇಷ್ಟಾರ್ಥ ಮೂಲಕಾರಣ ನಂದನ ‖ ೮ ‖

ಚತುರಮುಖ ಶಂಕರ ವಸಿಷ್ಠ ಕಾಶ್ಯಪ ಮಹಾ |
ಮತಿಯುತ ಪರಾಶರ ಭರದ್ವಾಜ ಕೌಶಿಕಂ |
ಯತಿ ಯಕ್ಷಪಾದ ವಾಲ್ಮೀಕಿ ವ್ಯಾಸಂ ಸುತೀಕ್ಷ್ಣಾದಿ ಮೌನಿಗಳೆಲ್ಲರು ‖
ಕ್ಷಿತಿಯೊಳಂ ಜಾಂಬವಂ ತರಣಿಸುತನು ಜಟಾಯು |
ಪತಿಶಯದ ಶಬರಿ ಜಾನಕಿ ಸುಮಿತ್ರಾತನಯ |
ರತಿಭಕ್ತಿಯಿಂದೆನ್ನ ಭಾವಪೂಜೆಯನಾಳ್ಪ ಮುಕ್ತರೆಂದರಿವುದನಘ ‖ ೯ ‖

ಪಶುಪಕ್ಷಿ ಮೃಗಕೀಟಮಾನವಾದಿಗಳೆಲ್ಲ |
ವೆಶವಾಗೆ ಮದ್ಭಕ್ತಿಯದರಿಂದ ಮುಕ್ತಿಪಥ |
ದೆಸಕಮಂ ಕರತಳಾಮಳಕಮೆನೆ ಕಾಣ್ಬರಿದು ನನ್ನಿ ಮದ್ಭಕ್ತಿಯುಳಿದು ‖
ರಸೆಯೊಳಗೆ ಪರಿಪರಿಯ ಕರ್ಮಗಳ ಮಾಡುತ್ತ |
ಬಸವಳಿವುದಲ್ಲದದರಿಂ ಬಂಧ ಪೋದಪುದು |
ಪುಸಿಕಣಾ ಭವಬಂಧ ಮುಕುತಿಗೆನ್ನಯ ಭಕುತಿ ಮೂಲಕಾರಣವು ತನಯ ‖ ೧೦ ‖

ಜಗದೀಶಸರ್ವಜ್ಞ ಕರುಣಾಸ್ಪದನೆನುತ್ತ |
ತುಗೆಪತ್ರ ಪುಷ್ಪಫಲತೋಯಂಗಳಾದರುಂ |
ಸೊಗಯಿಸುವ ಭಕ್ತಿಯಿಂದಿತ್ತರದರಿಂ ತುಷ್ಟಿವಡೆದು ಕೈವಲ್ಯವೀವ ‖
ಅಗಣಿತ ಗುಣಾಢ್ಯನೆಸಗುವುದನುಂ ಬುಧರಗ್ನಿ |
ಗೊಗೆದೀವುದೊರ್ವರಿಂ ಕುಡಿಸುವುದನೋಳ್ಪುದಂ |
ನಗುತೆನ್ನದೆಂದರೊಡಬಡುವ ಸರ್ವಾತ್ಮನೆಂದರಿಯರೈ ಮೂಢತಮರು ‖ ೧೧ ‖

---

1, ಸದಗ

ಇನಿತು ಕಷ್ಟಂಬಡದೆ ಭಕ್ತಿಯಿಂ ಮರೆವೊಕ್ಕು |
ಜನನಾದಿಗಳ ಕಳೆಯುದರಿಯದಾಯಾಸದಿಂ |
ತನತನಗೆ ಯಾಗಯೋಗಾದ್ಯನುಷ್ಟಾದಿಗಳ ಬಲೆಯೊಳಗೆ ಸಿಲ್ಕಿ ನರಳಿ ||
ಕೊನೆಗಾಣದೀ ಭವದ ಸಾಗರದಿ ಪೊರಳುತಿಹ |
ರನುದಿನಂ ಪಾಮರರು ಚಿತ್ತಶುದ್ಧಿಯೊಳು ಪದ |
ವನಜಗಳ ಶರಣೆಂದು ಸುಖಮಯಾನಂದಕರರೆನಿಸಲರಿಯರ್ಬಾಲಕ || ೧೨ ||

ಪಳವಾತೆನಿಪ್ಪ ಪೇರಡವಿಯೊಳು ಸಿಲ್ಕಿ ಮನ |
ಕಳವಲ್ಲದಾರಣ್ಯವಾ ಸ್ಮೃತಿಪುರಾಣದೊಳು |
ತೊಳಲಿ ಕಂಗಾಣದಲೆ ಪರಿಪರಿಯ ಮಾರ್ಗಗಳ ಪಿಡಿಪಿಡಿದು ಧಾವತಿಯೊಳು ||
ಬಳಲುವರದಲ್ಲದೀ ದುಷ್ಕರ್ಮ ಸಂತತಿಗ |
ಳೊಳಗೇನು ಫಲವಿಲ್ಲಮೆನುತರಿದು ಭಕ್ತಿಯಿಂ |
ಪೊಳಪಿಲ್ಲದೆನ್ನ ಮರೆವೊಕ್ಕರಾನುದ್ಧರಿಪೆನಿದು ನನ್ನಿಯೆಂದರಿವುದು || ೧೩ ||

ಕಾಲ ಕರ್ಮಾದಿಗಳು ಯಾಗಯೋಗಾದಿಗಳು |
ಮೇಲೆನಿಪ ಶ್ರುತಿತತಿ ಪುರಾಣೇತಿಹಾಸಗಳು |
ಲೀಲೆಯಿಂ ಜಲವರುದು ಸತ್ಪಕ್ಷಿಮೃಗಕುಲಗಳಣುರೇಣುತಾನೆನ್ನುತ ||
ಬಾಲ ನೀಂ ತಿಳಿ ಸರ್ವಭಾರದಿಂ ಭಜಿಸಿ ಸುರ |
ಜಾಲಕತಿಶಯನೆನಿಸು ಮದ್ವಿಭೂತಿಯ ತಿಳಿ ನಿ |
ರಾಲಸ್ಯದಿಂದ ಸಂಕುಚಿತ ಮಾತ್ರದಿ ನಿನಗೆ ಪೇಳ್ವೆ ತಿಳಿ ಭಕ್ತಿವಿಡಿದು || ೧೪ ||

ಅದರಿಂದಧರ್ಮಗಳನುಳಿದು ಸತ್ಯವ ತಿಳಿದು |
ವಿಧಿಯಿಂ ಪ್ರವೃತ್ತಿಪದ್ಧತಿ ನಿವೃತ್ತಿಗಳುಳಿದು |
ಚದುರಿಂದ ಸಕಲ ಧರ್ಮತ್ಯಜನೆಯಿಂ ಮಾಡುತೊಮ್ಮನದಿ ಭಕ್ತಿವಿಡಿಯೆ ||
ಮುದದಿಂದಮಖಿಲ ಪಾತಕತತಿಗಳಂ ತೆಗೆದು |
ಪದುಮಜಭವಾದಿಗಳಿಗಳವಲ್ಲದಿರ್ಪ ಸಂ |
ಪದವ ಪಾಲಿಪೆನಣುಗನಿದ ನಂಬಿ ಭಕ್ತಿಪರನೆನಿಸಿ ಸುಖಮಂ ಪಡೆವುದು || ೧೫ ||

ಪಾಲಿಪರೊಳಾಂ ವಿಷ್ಣು ಲಯದೊಳಗೆ ಕಾಲ ತಾಂ |
ಮೇಲೆ ಸೃಜಿಸುವಡೆ ಚತುರಾಸ್ಯ ವಿದ್ಯಾವತರ |
ಜಾಲದೊಳು ವಿದ್ಯವಾಂ ಯೋಗಗಳೊಳಾಂ ಯೋಗರೂಪ ಚಂಚಲದಿ ಮನವು ||
ಲೀಲಾಸ್ಪದದಜಯದೆ ಚಿತ್ತಜಯನಾಂ ಜಗ |
ತ್ಪಾಲನಾಂಶಿಯೊಳು ದಯೆ ಶತ್ರುಸಂಹಾರ ಕಾಂ |
ಮೇಲೆನಿಪಹಂಕಾರ ಜ್ಞಾನದೊಳು ಸ್ವಸ್ವರೂಪೈಕ ಚಿತ್ತೆನಿಪೆನನಘ || ೧೬ ||

ಕತ್ತಲೆಯೊಳಂ ಮಹಾಮೋಹ ತಿಳಿದಿಹ ಭಕ್ತ |
ಮೊತ್ತದೊಳು ಶಂಕರಂ ಭರತ ಸೌಮಿತ್ರಿಯಾಂ |
ಮತ್ತರುಂಧತಿಯ ಪತಿಯಾನು ಭಾರಾವಹರೊಳಾಂ ಕಮಠಶೇಷನಹೆನು ||
ಮತ್ತೆ ಬೆಳಗಿಗೆ ಬೆಳಗು ಬಂಧುಗಳೊಳಾಂ ಗುರುವು |
ಚಿತ್ತಶುದ್ಧಿಗೆ ಶುದ್ಧಿ ಶಕ್ತಿಗಾಂ ಶಕ್ತಿ ವಿನ |
ಯೋತ್ತರಕೆ ವಿನಯ ವೃಕ್ಷಂಗಳೊಳಗಶ್ವತ್ಥಮೆಂದರಿವುದಣುಗ ಮುದದಿ || ೧೭ ||



ಲೋಕಗುರುಜನನಿ ವಿದ್ಯೆಗಳೊಳಾಂ ಪಳವಾತು |
ಪ್ರಾಕಟದ ಮತಿಗೆ ಮತಿ ಭಕ್ತಿಗಾಂ ಭಕ್ತಿ ಜಗ |
ದೇಕಕಾರಣನು ಕ್ಷೇತ್ರಜ್ಞರೊಳಗಾಂ ಜೀವನಾಶ್ರಮದೆ ಸನ್ಯಾಸಿಯು ||
ಭೀಕರಕೆ ಭೀಕರಂ ಕವಿಗಳೊಳು ವಾಲ್ಮೀಕಿ |
ಶ್ರೀಕರಸ್ಥಾವರದೆ ಕನಕಗಿರಿ ಪಾದಪಾ |
ನೀಕದೊಳು ಸಂತಾನ ಮಾರ್ಗದೊಳಗೆ ನಿವೃತ್ತಿಮಾರ್ಗ ನಾನೆಂದರಿವುದು || ೧೮ ||

ಇನಿತೆಂದು ಭೂರೇಣುಗಳನೆಣಿಸಲಕ್ಕುಮಿಾ |
ವನಧಿ ಮೇಖಲೆಯೊಳಸ್ಮದ್ವಿಭೂತಿಗಳನ್ನು |
ಯೆಣಿಸಲಕ್ಕುಮೆ ವೊಂದರೊಳಗನೇಕದೊಳಾಗಲಾನೊರ್ವನಿರುಹೆನೆಂದು ||
ಮನದೊಳಗೆ ತಿಳಿದು ಸರ್ವೋಪಾಯದಿಂ ಚರಣ |
ವನು ಶರಣುವೊಗುವುದೆಂದುಸಿರಿ ಭಕ್ತಿಯಗ್ಗೈದ |
ರನುವನುಪದೇಶಿಸಿದ ವೊದಲು ಗುರುವಿಂ ನಿಖಿಲ ಶಾಸ್ತ್ರಂಗಳರಿವುದೆನುತ || ೧೯ ||

ಗುರುಕೃಪಾಲಬ್ಧ ಸನ್ಮತವ ಚಿತ್ತದೊಳಿಟ್ಟು |
ಮರುತ ಜಯಮಂ ಪಡೆದು ಯಿಂದ್ರಿಯಗಳಂ ಪಿಡಿದು |
ಪೆರತೊಂದನೆಣಿಸದತಿ ನೇಮದಿಂದನುದಿನಂ ಜಪಿಸುತಿರೆ ಮಾನಸದೊಳು ||
ನಿರುತಮಭ್ಯಾಸಬಲದಿಂ ಪುಟ್ಟಬರುತಿಹುದು |
ಗುರುದೇವತಾ ಭಕ್ತಿಯದರಿಂದ ತಾಮಸಂ |
ಪರಿದುಪೋಪುದು ಚಿದಾದಿತ್ಯನುದಿಸುವ ತಮಸ್ಸಂಗ ಪರಿವುದು ಬಾಲಕ || ೨೦ ||

ತಿಳಿದು ಋಷಿದೇವತಾಚ್ಛಂದಾದಿ ನೇಮಗಳ |
ಪೊಳಪರಿದು ದಿಕ್ಪಾಲದೇಶ ಭೇದಂಗಳಿಂ |
ದಳವಡಿಸಿ ಬದ್ಧಪದ್ಮಾಸನಾದಿಗಳಿಂದ ನಿಯಮವಿನಿತಂ ಮಿಾರದೆ ||
ಕಳವಿಟ್ಟು ಜಡಬಧಿರಮೂಕಮಂತ್ರಂಗಳ |
ನ್ನುಳಿದು ವಾರ್ಧಕಮನುಗಳುನ್ಮತ್ತಮಂ ಪಳಿದು |
ಬಳಸದಲೆ ನಿರ್ಜೀವ ಮಂತ್ರಗಳ ಗುರುಮಾರ್ಗಮಂ ಪಿಡಿದು ನಡೆವುದಣುಗ || ೨೧ ||

ಗುರುಮಂತ್ರನೇಮಮಂ ಬಿಡೆ ವಂಶನಾಶಮೆಂ |
ದರಿದು ತನ್ಮಂತ್ರನಿಯಮಂಗಳಿಂ ಸ್ನಾನಗಳ |
ವಿರಚಿಸುತಮೂರ್ಧ್ವಪುಂಡ್ರವನಿಟ್ಟು ಮದ್ಭಕ್ತ ಪೂಜನಂಗೈದು ಮುದದಿ ||
ಗುರುದೇವತಾಸೇವೆ ಭಜನೆಯು ನಿಷಿದ್ಧಕರ |
ಪೆರರನ್ನಮಂ ಬಿಟ್ಟು ಭಜನೆಗೈದನುದಿನಂ |
ಸ್ಮರಿಸುತೆನ್ನಯ ನಾಮದಾವೃತ್ತಿ ಚಿಂತನೆಯೊಳಿರೆ ಮುಕ್ತಿಯಹುದು ತನಯ || ೨೨ ||

ಕತಕ ಕಂದದ್ವಯಮಲಾಬು ಶಿಗ್ರ್ವಾದಿಗಳ |
ಹಿತಮೆನುತ ವರ್ಜಿಸುತ ಮಾಸಧರ್ಮಂಗಳಂ |
ಪತಿಕರಿಸಿ ನಿಷ್ಪಾವವರ್ಜನಂ ಗೈದಪುದು ಕಾರ್ತೀಕದೊಳಗೆ ತನ್ನಂ ||
ರತಿಮುಳಿವುದಷ್ಟಮಿಯೊಳಂ ನಾರಿಕೇಳಮಂ |
ಕತಿಪಯ ಸುಧಾತ್ರಿಗಳ ರವಿವಾರ ವರ್ಜಿಪುದು |
ಮತಿಯುತನೆ ಹರಿವಾಸರದ್ವಯದಿ ಭೋಜನದ್ವಯವ ಬಿಡುವುದು ನಿಷಿದ್ಧಂ || ೨೩ ||

ಈ ವಿಧದಿ ವೈಷ್ಣವೀ ಧರ್ಮಂಗಳಂ ಪಿಡಿದು |
ಪಾವನ ಪುನಶ್ಚರಣೆಗೈದು ಪ್ರತಿವಾಸರಂ |
ಠೀವಿಯಿಂ ಸಾಸಿರಂ ಶತತ್ರಿಶತವೀಪರಿಯ ನೇಮದಿಂ ಜಪಿಸುತಿರಲು ||
ಭಾವಸಿದ್ಧಿಯು ಜನಿಪುದೈಸೆ ಜಪದ ದಶಾಂಶ |
ಮೋವಿ ಹೋಮಾಧಿಕಗಳಂ ರಚಿಸಿ ಸ್ತ್ರೀ ಶೂದ್ರ |
ರಾವವಿಲ್ಲದ ತೆರದಿ ನೇಮದಿಂ ಮದ್ಭಜನೆಗೈವುದಿದು ನಿಯಮ ತನಯ || ೨೪ ||

ನೃತ್ಯಗೀತಾದಿಗಳ ದುಷ್ಟಭಾಷಣೆಗಳನು |
ಮತ್ತೆ ವರ್ಜಿಸಿ ಕಾಯದಂಡನೆಯೊಳಂ ಮನೋ |
ವೃತ್ತಿಗಳ ನಿಲಿಸಿ ನಿಯಮದೊಳೆನ್ನ ಮಂತ್ರಮಂ ಕಾಲತ್ರಯದಿ ಜಪಿಸಲು ||
ಪತ್ತಿರ್ಪ ಪ್ರಕೃತಿಸಂಬಂಧ ಜಾರುತವೇಗ |
ಚಿತ್ತಶುದ್ಧಿಯೊಳಹುದು ಜನನ ಮರಣಾದಿಗಳ |
ಮೊತ್ತಪುಸಿಯೆಂಡೆನಿಪುದಾನಂದ ಸ್ವಾಮ್ರಾಜ್ಯಮೊದಗಿ ಸುಖಮಹುದು ತನಯ || ೨೫ ||

ತಿಳಿ ಬಾಲ ಮನ್ಮಂತ್ರಮಿಹಪರಂಗಳ ನಿತ್ತು |
ನಳಿನಪೀಠಂಗಧಿಕಮೆನಿಸುವೈಸಿರಿಗಳಂ |
ಪಲವುವಿಧ ಕಾಂಕ್ಷೆಗಳ ಬಯಸದಂದಡೆ ತಾನೆ ಕೊಡುವುದಚ್ಚರಿಯೆಂಬೊಲು ||
ತೊಳಲದಟವಿಯೊಳು ಚಿಂತಾಮಣಿಯ ಜತನದಿಂ |
ದೊಳಗಿಟ್ಟು ನಿಷ್ಕಾಮನೆಯೊಳು ಭಕ್ತಿಯಗೈದ |
ರಳವಡುವುದಖಿಳ ಸಂಪದಮೆಂದು ತಿಳಿಯೆನುತ ಮೊರೆದರಘುವೀರ ದಯದೆ || ೨೬ ||

ಮೊದಲು ಗುರುವಿಂ ಕ್ರಿಯಾಕಾಂಡಮಂ ತಿಳಿದು ಮುಂ |
ದೊದಗಿ ಸುಜ್ಞಾನದಿಂ ಭಾವನೋಪಾಸನೆಯ |
ಚದುರಿಂದ ಸ್ವೀಕರಿಪುದೆಂತೆನಲು ವಿಸ್ತರಿಸಿ ಪೇಳ್ದಪೆನು ತಿಳಿವುದಣುಗ ||
ಇದುವೆ ಸುಜ್ಞಾನಕವಿನಾಭಾವ ಜೀವಸಂ |
ಮುದ ಪೂರ್ಣರೂಪಮೆಂದರಿತು ಭಾವನೆಗೈದ |
ರದನು ವೇದಾಂತಿಗಳು ವಾಸನಾಕ್ಷಣತತ್ವ ಸಂಧಾನಮೆಂದೊರೆವರು || ೨೭ ||

ಶ್ರವಣಮನನಂ ನಿಧಿಧ್ಯಾಸಮೆಂಬೀ ಮೂರ |
ಪವಣನರಿದಲ್ಲದಾತ್ಮಜ್ಞಾನ ನಿಜವು ಸಂ |
ಭವಿಸದಾ ಶ್ರವಣದಿಂದರಿದುದಂ ಚಿಂತನಂಗೈವುದದೆ ಮನನಮಣುಗ ||
ನವಕ ದೇಹಾತ್ಮವಾದಂ ಪೋಗಿ ಪ್ರಾಪಂಚ |
ಲವಲವಿಕೆಯುಳಿದು ರಾಮೋಹಮೆಂದನುದಿನದಿ |
ಘುವಿವೇಕದಿಂದಿರಲ್ವಾಸನಾಕ್ಷಯಮಹುದುಮಿದು ಸಿದ್ಧ ತಿಳಿ ಬಾಲಕ || ೨೮ ||

ಗುರುಮುಖದೊಳೀ ಹದನನರಿದು ತತ್ವಜ್ಞಾನ |
ಸರಣಿವಿಡಿದತಿನಿಯಮದಿಂದಾರ್ಯನುದಯದೊಳು |
ಸ್ಮರಣಪೂರ್ವಕದಿಂದಮೆಚ್ಚತ್ತು ಗಂಗಾದಿ ತೋಯಡೆಡೆಯುಂ ಜಾನಿಸಿ ||
ತ್ವರಿತದಿಂ ಭ್ರೂಮಧ್ಯದೇಶದೊಳು ದಿಟ್ಟಗಳ |
ನಿರಿಸಿ ಗಂಗಾಯಮುನೆಭಾರತೀ ಕೂಟದೊಳು |
ಭರದಿಂದ ಸ್ನಾನಗೈದಪುದು ಪ್ರತಿವಾಸರಂ ಖೇಚರಿಯನವಲಂಬಿಸಿ || ೨೯ ||



ಜ್ಞಾನಹೃದಯದೊಳು ಸುಜ್ಞಾನ ಜಳದಿಂದ ಸು |
ಮ್ಮಾನರಾಗಾಸೂಯಲೋಭಾದಿಮಲಗಳಂ |
ನೂನಮೆಂದೆನಿಸಿ ವೈರಾಗ್ಯೋಪಶಮವೆಂಬ ಸದ್ವಸ್ತ್ರಗಳನು ಧರಿಸಿ ||
ಸಾನಂದದಿಂ ನಾಮವಾಚಮನಗಳನೆಸಗಿ |
ಮಾನಸದೊಳಜಪಾಖ್ಯ ಗಾಯತ್ರಿಯಿಂದಲಾಂ |
ಭಾನುವಾದೆನ್ನ ಸಂಸ್ಮರಿಪುದನುದಿನ ಬಿಡದೆ ಭಕ್ತಿಯಿಂ ಪಿಡಿದು ತನಯ || ೩೦ ||

ಪ್ರಾರಬ್ಧವಶದಿಂದಮಾ [1]ಸುಪ್ತಿಪರಿಯಂತ |
ತೋರುವ ಶುಭಾಶುಭಕ್ರಿಯೆಗಳಂ ಕರ್ಮಮೆಂ |
ದಾರೈದು ಮತ್ತೊರ್ವರಿಲ್ಲ ತಾನದ್ವಿತಿಯನೆಂದು ಯೇಕಾಂತವಿಡಿದು ||
ಶ್ರೀರಮೇಶಧ್ಯಾನಗೈದು ಹೃತ್ಪಂಕಜದೊ |
ಳೋರಂತೆ ಬ್ರಹ್ಮಾಂಡಮಂಟಪವ ವಿರಚಿಸುತ |
ತಾರಾಗಣಂಗಳ ವಿತಾನತ್ವಮಾದರ್ಶ ಪುಷ್ಪವಂತರ ಮಾಳ್ಪುದು || ೩೧ ||

ಘನಕೆಘನವಣುವಿಗಣುವೆನಿಪ ಹರಿಯಂ ಪೀಠ |
ದನುವಿನೊಳ್ಭಾವಿಪುದು ಸರ್ವಭೂತಸಖತ್ವ |
ಮೆನಿಪುವಾವಾಹನಂಗೈದು ಪ್ರಾರಬ್ಧವಶ ದೇಹಮುದ್ರೆಯನು ತೋರಿ ||
ವಿನಯದಿಂ ನಿರ್ಮಲತೆಯೆನಿಪ ಪಾದ್ಯಾರ್ಘ್ಯಮಂ |
ಸನುಮತದೊಳಿತ್ತು ಶುದ್ಧತ್ವದಾಚಮನಂಗ |
ಳನು ಸಮರ್ಪಣೆಗೈದು ಭೂರೂಪ ಗಂಧಮಂ ಭಾವಿಪುದು ಮಾನಸದೊಳು || ೩೨ ||

ಅಂಬರದ ಪ್ರಾಸೂನಮಂಗೈದು ಮುದದಿಂ ದಿ |
ಗಂಬರವನರ್ಪಿಸುತ ಮರುತಧೂಪವ ದೀಪ |
ವೆಂಬ ಬೆಳಗಂ ನೆನೆವುತಮೃತದಾರೋಗಣೆಯನರ್ಪಿಸುತ ಪ್ರಕೃತಿಯನ್ನು ||
ಡಂಬರದ ಶ್ರೀವತ್ಸಪುರುಷ ಕೌಸ್ತುಭರತ್ನ |
ಮೆಂಬಂತೆ ಭಾವಿಸುತುದಾತ್ತಾದಿಸ್ವರದ ನಿಕು |
ರುಂಬಾತ್ಮವೆಂದರಿದಹಂಕಾರವೆಂದೆನಿಪ ಪಾಂಚಜನ್ಯವ ನೆನೆವುದು || ೩೩ ||

ಮನವ ಚಕ್ರಂಗೈದು ಸ್ವಾನಂದ ಬುದ್ಧಿಯಂ |
ನೆನೆದು ಕೌಮೋದಕಿಯ ಚಿಚ್ಛಕ್ತಿ ಜಾನಕಿಯ |
ನನಪಾಯಿನಿಯ ಭಾವನಂಗೈದು ವಿಶ್ವಾತ್ಮನೆಡೆಯಲಾನಂದದಿಂದ ||
ವಿನಯದೊಳಶೇಷ ಶಬ್ದಾನುವಾಚ್ಯತ್ವಂಗ |
ಳನು ಪೂಜೆಯೆನುತ ಭಾವಿಸುತ ಲೇಪನ ಧೂಪ |
ವನುಗೈದು ಸ್ವಪ್ರಭಾದೀಪಭಾವನೆಗೈವುದಣುಗ ಬೆಂಬಿಡದೆ ಬೇಗ | || ೩೪ ||

ಪ್ರಮುದಿತಾಶೇಷರಸ ನೈವೇದ್ಯಗೈದು ಮುಂ |
ದಮಲ ಮಂಗಳರೂಪ ತಾಂಬೂಲಮಂ ಕೊಟ್ಟು |
ಭ್ರಮೆಯುಳಿದು ಜ್ಞಾನೇಂದ್ರಿಯಂಗಳ ನಿರಾಜನವ ರಚಿಸಿ ಶ್ರೀರಾಮ ಮನವ ||
ಕ್ರಮದಿಂದ ಮಂತ್ರಪುಷ್ಪತ್ವೇನ ಭಾವಿಸುತ |
ಕ್ರಮಣಂ ಪ್ರದಕ್ಷಿಣೆ ನಮಸ್ಕಾರ ಶಯನಮೆಂ |
ದಮಲ ವಾಚಾಮಗೋಚರನೆನುತ ತುತಿಸುವುದು ಚಲನೆಯಿಲ್ಲದೆ ಬಾಲಕ || ೩೫ ||

---

1. ಸುಕ್ತಿ.

ಪರಿಪೂರ್ಣಕಾಮನೆಂದಖಿಲೋಪಚಾರಗಳ |
ಸ್ಮರಿಸಿ ತತ್ಕೇತನಾಧ್ವಜವ ನೆನೆದಾಗ ಜಡ |
ನಿರತನಶ್ವರ ಶರೀರಾತ್ಮಭಾವತ್ವಮಂ ಜಾತಿವರ್ಣಾಶ್ರಮಗಳ ||
ತರುಣಿಪುತ್ರಾದ್ಯಾಭಿಮಾನದಪರಾಧಗಳ |
ಮರೆವುದೆಂದೊರೆದು ತರುಪಾಷಾಣಲೋಹಾದಿ |
ವಿರಚಿತ ಪ್ರತಿಮೆಗಳ ನೀನೆಂದು ಭಾವಿಸಿದ ತಪ್ಪ ಮನ್ನಿಸುವುದೆನುತ || ೩೬ ||

ತನ್ನೊಳಿರ್ಪಪರಾತ್ಮನ ಜೀವರೂಪನಂ |
ಮನ್ನಿಸದೆ ದುರ್ಮೇಧೆಯಿಂದ ಬಾಹ್ಯದಿ ಹುಡುಕು |
ವನ್ಯಾಯಮಂ ಮರೆವುದೆಂದು ಬಿನ್ನಪಗೈದು ಸಂತತಾನಂದಮಯದೆ ||
ತನ್ನ ತನುರಥವಿಂದ್ರಿಯಂಗಳೇ ತುರಗಂಗ |
ಳುನ್ನತದ ಮತಿಸೂತ ಮನವೆ ರಜ್ಜುವೆನುತ್ತ |
ಚೆನ್ನಾಗಿ ಭಾವಿಪುದು ತನ್ನ ರಥಿಕನೆನುತ್ತಮನುದಿನಂ ಬಿಡದೆ ತನಯ || ೩೭ ||

ವೇದಾದಿ ಸಿಂಗಾಡಿ ಬ್ರಹ್ಮೋಹಮೆಂದೆಂಬ |
ಮೋದ ಶರವಿಷಯಕಾನನ[ಮಧ್ಯ]ದೊಳಗಿರ್ಪ |
ಮಾಧವನ ಗುರುವಾಕ್ಯ ಬಲೆಯ ನಾಲ್ದೆಸೆಯಲ್ಲಿ ಪರಪಿ ತಾಂ ತೊಳಲಿ ನೋಡಿ ||
ಭೇದವಿಲ್ಲದ ಚಿದಾತ್ಮತೆಯಿಂದಮಿರೆ ಜರುಗಿ |
ಪೋದಪುದಶೇಷ ಸಂಶಯರಾಶಿ ತೊಲಗಲಾ |
ಮೋದಸುಖಮಯನಖಂಡಾತ್ಮತೆಯೊಳಂ ತಾನೆ ಪೊರೆವನೆಂದರಿವುದಣುಗ || ೩೮ ||

ಪಾವನಪರಾತ್ಪರಂ ರಾಮೋಹಮೆಂದೆನುತ |
ಮಾವಗಂ ಭಾವಿಸುವನವ ರಾಮನೆನಿಸಿರ್ದು |
ಭಾವನಾ ಬಲದಿಂದ ದೊರೆದಪುದು ಸುಖಮಹುದು ನಿತ್ಯಾಪರೋಕ್ಷದಿಂದ ||
ಈ ವಿಧದೊಳನುದಿನಮನಾಯಾಸಮೆನೆ ಹೃದಯ |
ತಾವಿನೊಳು ಚಿಂತಿಸುತಮಿರಲು ಕೈವಲ್ಯಮೇ |
ಭಾವನಾರೂಪದವಿನಾಭಾವಮೆಂದೆಣಿಪುದಣುಗ ತಿಳಿದಾಚರಿಪುದು || ೩೯ ||

ಆಶುಕರನಾಶಮಲ್ಪಂ ಪ್ರತ್ಯವಾಯಗಳ |
ರಾಶಿದ್ರವ್ಯಾಯಾಸ ಸಾಧ್ಯಕರ್ಮವ ಪಿಡಿದು |
ಬೇಸರಂಗೊಳದೆ ಸರ್ವಾತ್ಮ ಶ್ರೀರಘುನಾಥನೆಂದರಿದು ಭಾವಿಸುತಿರೆ ||
ಭಾಸುರ ಮಹಾಸುಖಂ ವಶವಾಗಿ ಪ್ರಾಣಿಗಳ |
ಲೀಶತ್ವ ಸತ್ವ ಸಂಭವಿಸಲನುದಿನ ಯೋಗಿ |
ವಾಸವೋಪಮಿತಮೆಂದೆನಿಸಿ ನಿರ್ವ್ಯಾಕುಲದೊಳಿರ್ಪನಂಜನೆಯತನಯ || ೪೦ ||

ನರನಧಿಕನೀ ಚರಾಚರದ ಜಂತುಗಳೊಳಗೆ |
ಪುರುಷ ಶಿಶ್ನೋದರಪರಾಯಣದಿ ಮುಂದರಿಯ |
ದಿರಲು ಪಶುವೆನಿಪ ಭವರೋಗ ಸಂಬಾಧ ಕ್ಲೇಶದೆ ಧಾರಣಂಗೈದನು ||
ಗುರುಮುಖದೊಳಂ ತತ್ವವರಿತು ಸರ್ವಪ್ರಾಣ |
ಭರಿತ ಹರಿಯೆನುತ ಭಾವಿಸುತಖಂಡಾತ್ಮತೆಯ |
ಲುರುತರಾನಂದದಿಂದಿಹುದ ಚಿಂತಿಪುದತುಲ ದುರ್ಲಭಂ ಭೂತಳದೊಳು || ೪೧ ||



ಭವರೋಗಮೆಂದು ಪುಟ್ಟಿದುದು ಮತ್ತದು ವೃದ್ಧಿ |
ವಿವರವಾದುದದೆಂತು ತಚ್ಚಿಕಿತ್ಸೆಗಳೇನು |
ನವಕವೆನಲೆನಗಂ ನಿರೂಪಿಸಲ್ವೇಳ್ಕೆನುತ ಮರುತಸುತ ಬಿನ್ನವಿಸಲು ||
ಕುವಲಯದಳಶ್ಯಾಮ ರಾಮನುಪದೇಶಿಸಿದ |
ಕುವರನೆ ಭವಾಮಯ ಪುರಾತನಂ ಧರ್ಮಮುಂ |
ನವೆದಂದು ವೃದ್ಧಿಯಂ ಪೊಂದುವುದು ಮಗುಳದರ ಕಥೆಯ ತಿಳಿ ಬುದ್ಧಿಯಿಂದ || ೪೨ ||

ತನಯ ಕೇಳು ವಿದೇಹರಾಷ್ಟ್ರದೊಳಗೊರ್ವ ಬುಧ |
ಜನನಮೊದಲ್ಪಿಡಿದುಂ ಪರಾನ್ನಭೋಜನದಿಂದ |
ದಿನಗಳೆವುತಿರ್ದ ಪದಿನಾಲ್ಕುವತ್ಸರಜಾತಿಕರ್ಮಾದಿ ಕ್ರಿಯೆಗಳುಳಿದು ||
ವನಧಿಮೇಖಲೆಯೊಳೀ ಬ್ರಹ್ಮಬಂಧುವ ಕಂಡು |
ಮನಮರುಗುತೊರ್ವನುಪನಯನ ಮಾತ್ರಂಗೆಯ್ಯ |
ಲನುವಿಡಿದು ವಟುಕ ಬಾಡಬರೆಡೆಯಲನಿತಿನಿತು ಶ್ರುತ್ಯಾದಿಗಳ ಕಲಿತನು || ೪೩ ||

ಕರೆಯರಾರುಂ ದ್ವಿಜಾಧಮನೆಂದು ಗ್ರಾಮದೊಳು |
ಪೊರೆವುತೊಡಲಂ ಧನಾರ್ಜನೆಗೈದು ಕಷ್ಟದಿಂ |
ದಿರುತಿರುತಮಾತ್ಮೋಪಮಾನ ಜಾತಿಯೊಳೊಂದು ಕನ್ನಿಕಾಪರಿಣಯವನು ||
ಭರದಿಂದ ಗೈದಂದಿನಾರಭ್ಯ ಕರ್ಮಗಳ |
ಸರಣಿಯಂ ತುಳಿಯದೆ ಸುಖಾನುಭವದಾಸೆಯಿಂ |
ದಿರುತಿರ್ದನಲ್ತೆ ಶಿಶ್ನೋದರಪರಾಯಣಮೆ ತನಗೆ ಪರಮೆಂದರಿವುತ || ೪೪ ||

ಕೆಲಕಾಲ ಕಾಮಲೋಲುಪದೊಳಿರುತಿರೆ ಪ್ರಾಯ |
ದುಲಿಯೆಡೆಗೆ ಸತಿಸುತರ ಪೊರೆಯಲೋಸುಗ ನೀಚ |
ಕಲನೆಯಿಂ ಕೃಷಿದೈನ್ಯಚೌರ್ಯಗಳನನುಸರಿಸಿ ದೇಹರಕ್ಷಣೆಗೈವುತ ||
ನೆಲನೆಲ್ಲ ತೊಳಲುತಾ ವಿಪ್ರ ದುರ್ದಾನಾದಿ |
ಗಳ ಕೊಂಡು ಸ್ವಕುಟುಂಬ ರಕ್ಷಣಂ ಗೈವುತ್ತ |
ಕೆಲವು ದಿನಕಳೆದ ಕ್ರೋಧಾದಿ ವಶನೆಂದೆನಿಸಿ ತಾನೆ ತನ್ನಿಚ್ಛೆಯಿಂದ || ೪೫ ||

ಧನವಂತ ಪುತ್ರದಾರಾದಿ ಸಂಯುತ ಬಂಧು |
ಜನವರ್ಗಮುಳ್ಳನೀಶ್ವರ ಸಿದ್ಧಸುಖಭೋಗಿ |
ಯೆನುತಂ ಮನೋರಥದಿ ಪರಿಧಾವನಂಗೊಳುವ ಕ್ರೋಧಕಲುಷಿತನಾಗುತೆ ||
ಯೆನಗಿರ್ದ ಶತ್ರುಗಳೊಳೊರ್ವನಂ ಮರ್ದಿಸಿದೆ |
ಘನನೊರ್ವನಿಹನವನ ನಾಶನಂಗೊಳಿಪೆನೆಂ |
ದನುಪದದಿ ಕುದಿವುತಿರ್ದಂ ಬ್ರಹ್ಮಬಂಧುವದನೇನೆಂಬೆನಚ್ಚರಿಯನು || ೪೬ ||

ಇಂತುಪಲಕಾಲಮಿರಲಾಪಾರ್ವನಿಗೆ ಜರೆಯು |
ಕೊಂತಿ ವ್ಯಾಧ್ಯಾದ್ಯುಪದ್ರವದಿಂದ ಜರ್ಝರಿತ |
ಮಾಂತಂಗದಿಂದೊಂದು ತಾಣದೊಳ್ನಿಲುವಡಾಶ್ರಯಮಿಲ್ಲದಿರುತಿರ್ದನು ||
ಚಿಂತಿಸುತರಣ್ಯದೊಳ್ ಬರುತಿರಲು ಬಾಡಬಗೆ |
ಮುಂತೆ ಕಂಗೊಳಿಸೆ ನೈಮಿಷವಿಪಿನಮದ ನೋಡು |
ತಂತರಂಗದಿ ಭೀತಿಯಿಂದಮೈತಂದನಾ ಭೂಸುರರ ನೆರವಿಯೆಡೆಗೆ

ಬರುವ ಮುದಿಪಾರುವನ ಕಂಡಾ ಸಭಾಸದರು |
ತರತರದ ವಾಣಿಯಿಂ ಕೆಲರು ಭವರೋಗದೊ |
ಳ್ನರಳುತಿಹನೆನೆ ಕೆಲರು ತನುಜೀರ್ಣಮಾಗಿರ್ಪುದೆನುತ ಕೆಲಕೆಲರು ನುಡಿಯೆ |
ತರುನೆಳಲೊಳರೆನಿಮಿಷ ಕುಳ್ಳಿರ್ದು ಪಾನೀಯ |
ದುರಗಳಂ ಪೀರ್ದು ಸ್ವಸ್ಥತೆಯ ಪಡೆವುದೆನುತ್ತ |
ಪರಿಪರಿಯಲಾ ವಿಪ್ರರಾಡಿದರು ಮನಬಂದ ತೆರದೆ ವಿಪ್ರಾಧಮನನು || ೪೮ ||

ಅನಿತರೊಳು ಭವರೋಗ ವೈದ್ಯಮಂ ಬಲ್ಲಾತ |
ವಿನಯಪರ ಸಂಗವಿರಹಿತ ಮಂಡಲಾಗ್ರಮಂ |
ಬಿನದಮೆನೆ ಪಿಡಿದು ಯೋಗೋಪರತಿ ಪಾದುಕೆಗಳಾಂತು ಭವರೋಗಮೂಡೆ ||
ಘನಮಾತ್ರೆಗಳನುಪಾಸನೆ ಶಾಸ್ತ್ರಜಾನಂಗ |
ಳೆನಿಪ ಭಸ್ಮಿಕವ ಕಂಕುಳೊಳಿಟ್ಟು ಸಂತಸದೆ |
ಮಿನುಗುವ ದಿಗಂಬರಾಂಚಿತ ಶುಭ್ರಕೀರ್ತಿತರ ಭೂತ್ಯಂ ಚಿತಾಂಗನೆನಿಸಿ || ೪೯ ||

ತನ್ನ ಚಿದ್ವೇತ್ರಮಂ ಪಿಡಿದಾ ಜಟಾಮುರುಕ |
ಮನಾಂತು ನಿಜತತ್ವಪಾನ ಮಾಂದ್ಯತೆವೆತ್ತು |
ತನ್ನೊಳಗೆ ತಾನೆ ನಸುನಗುತಮಾತ್ಮಾನಂದದರ್ಥ ಪಾಲಿತನಯನದೆ ||
ಚೆನ್ನಾಗಿ ಭವರೋಗಹರಗೊಳಿಪ ವೈದ್ಯರೊಳ |
ಗುನ್ನತೋನ್ನತ ಭಿಷಗ್ವರನು ದತ್ತಾತ್ರೇಯ
ತನ್ನಿಚ್ಛೆಯಿಂದ ವೈದೋರ್ದನಾ ವಿಪ್ರಸಭೆಗಾ ಸಮಯಕಚ್ಚರಿಯೆನೆ || ೫೦ ||

ಕಂಡನಾವೇದಧರನವಧೂತ ವಿಗ್ರಹನ |
ಖಂಡತೇಜೋನಿಧಿಯ ನಿಟ್ಟಿಸಿದ ಮಾತುರದಿ |
ಬೆಂಡಾದುದಖಿಳ ಕಿಲ್ಬಿಷ ಸಾಧುಮತಿಯಿಂದಮೈತಂದು ಪದಕೆರಗುತೆ ||
ಕೊಂಡಾಡಿ ಭಕ್ತಿಯಿಂ ಬೆಸಗೊಂಡಭವರೋಗ|
ದಂಡಲೆಗೆ ಸಿಲ್ಕಿ ಸಂಬಾಧೆಗೊಳುತಿಹೆ ದಯೋ |
ದ್ದಂಡತೆಯೊಳಿದಕೌಷಧವನೊರೆದು ಪೊರೆವುದೆಂದಾವಿಪ್ರ ಬಿನ್ನವಿಸುತೆ || ೫೧ ||

ವೃದ್ಧಭೂದೇವ ಭವರೋಗ ತಾಪಂಗಳನು |
ಬದ್ಧತೆಯೊಳೆರಗಿ ಪ್ರಾರ್ಥಿಸೆ ಕೃಪಾರಸದಿಂದ |
ಸಿದ್ಧಪೂರುಷನು ದತ್ತಾತ್ರೇಯ ಮುನಿವರ್ಯ ಕೃಪೆಯಿಂ ಭವಾಮಯಕ್ಕೆ ||
ಮುದ್ದಾದ ಸಂಹಿತೆಯನುಸಿರಿದಂ ಮೊದಲೊಳಗೆ |
ಶುದ್ಧಾಂತರಂಗದಿಂ ನಾಡೀಪರೀಕ್ಷೆಗಳ |
ಸಿದ್ಧಮೆನಲರಿದು ರೋಗಕೆ ಚಿಕಿತ್ಸೆಯ ಮಾಳ್ಪುದೆನುತೊರೆದು ಮಗುಳೆಂದನು || ೫೨ ||

ನೋಡಿದರೆ ಕರ್ಮಯುತಜ್ಞಾನನಾಡಿಯು ತೀವ್ರ |
ಗೂಡಿ ಚರಿಸುವುದ ಭಕ್ತಾ ಶಿರದೆ ಸೂಕ್ಷ್ಮಗತಿ |
ಗೂಡಿದ ವಿವೇಕ ನಾಡಿಯನಾವಪರಿಗಳಿಂ ದಿಟ್ಟಿಸಲ್ಕಾಣದಿದಕೆ ||
ರೂಢಿಯೊಳಗಾನಾಡಿ ಗೋಚರಿಸದಿರೆ ಕಷ್ಟ |
ಗೂಡಿ ನಾನಾಯೋನಿಗತನೆನಿಪ ತಾಂ ತಿಳಿದು |
ನೋಡಲಾ ರೋಗಂ ಚಿಕಿತ್ಸಕರದೆಸೆಯಿಂದ ಸಾಧ್ಯಮಾಗದೆ ನಿಲುವುದು || ೫೩ ||



ಪ್ರಾರಬ್ಧವಶದಿಂದ ತನುವಿರ್ಪುದದನೇ ವಿ |
ಚಾರಿಸಲು ಸಂಸಾರಮುದರೊಳವಿವೇಕ ಸಂ |
ಭಾರ ಮಂದಾಗ್ನಿಯುದಿಸಿತು ಮಾನದಿಂ ವೃದ್ಧಿಯಾದುದವಿಚಾರದಿಂದೆ ||
ಆರಯ್ಯಲಾರೋಗವಖಿಲಪ್ರಾಯಗಳಾಯು |
ಸಾರಮಂ ಸಡಿಲಿಸುತ ಬಾಲಯಕ್ಷಿಣಿಯಂತು |
ದಾರ ಬಾಧೆಯೊಳಾಶರೀರಮಂ ತಿಕ್ಕುವುವನೇಕವಿಧದಿಂದ ಬಿಡದೆ || ೫೪ ||

ಮೊದಲು ಕಾಮಜ್ವರೋತ್ಪತ್ತಿಯಹುದಾ ತಾಪ |
ದುದಯಮಂ ಕುಗ್ಗಿಸೆ ವಧೂದುಷ್ಟ ನದಿಯೊಳಗೆ |
ಸದನಗೈದಾ ಮನೋವೇಣಿ ಧೃತಿಪರ್ವತವನೊಡೆದು ನರಕಾರ್ಣವದೊಳು ||
ಹದನರಿಯದಲೆ ಕೆಡೆವುದಾ ತರಂಗಿಣಿಯೊಳಗೆ |
ಮುದವಾಂತು ಸಾರಿದಡೆ ಮೋಹಾಂಧಕಾರ ಬಂ |
ದೊದಗುವುದೆನುತ್ತರಿತು ಸ್ಮರಿಸರು ವಿವೇಕಿಗಳು ಕನಸಿನೊಳಗಾದರೊಮ್ಮೆ || ೫೫ ||

ಚೆಲುವ ಜವ್ವನವು ಪಾನೀಯ ತ್ರಿವಳಿಯು ರಮ್ಯ |
ಲಲಿತವೀಚೀಗಣಗಳಾವರ್ತ ನಾಭಿಯುಂ |
ಕಲಿತ ಮೇದೋರಕ್ತಮಾಂಸಪಂಕಿಲನಯನ ಯುಗಮೆಪಾಠೀನಂಗಳು ||
ಜಲಪಾಶ ತೋಳ್ಗಳುಂ ಚಕ್ರವಾಕಸ್ತನಗ |
ಳಲಗು ಕಚ್ಛಪದಪರಭಾಗ ಮೇಗಾಲ್ಗಳಿಂ |
ಕಲಿತಾ ನಿತಂಬ ಪುಳಿನವ್ರಾತ ದಂತನಖಪಂಕ್ತಿ ಶುಕ್ತಿಕಗಳಿಂದೆ || ೫೬ ||

ವದನಕಮಲಂ ಕನೀನಕ ಭೃಂಗಶೈವಲಂ |
ಮುದವಿಾವ ಚೂರ್ಣಕುಂತಳವು ಕಾಳಾಹಿ ತಾ |
ನುದರಗತ ರೋಮಾಳಿ ದುರ್ವಚನ ಕರ್ಕಟೀಯುತ ಕುಟಿಲಯುತ ವೇಣಿಯ ||
ಮದಮುಖರ ಕಾಪಟ್ಯಮೆನಿಪ ಮಡುಹಿನ ಗರಳ |
ಸದನಮೆಂದೆನಿಸುವಾ ಕಾಮಿನಿಯ ನದಿಯೊಂದು |
ಕುಧರಧೈರ್ಯವನೊಡೆದು ಕೊಚ್ಚುವುದು ಮೂಲೋಕ ಸನ್ನಿಪಾತಕಕರಮದು || ೫೭ ||

ಆ ನದಿಯ ಪೆಸರ್ವಿಡಿಯಲಾವನಾದರು ದುರಾ |
ಜ್ಞಾನದಿಂ ಸಂತತಂ ಪರಿಚರ್ಯಮೆಸಗಿದರ |
ದೇನೆಂಬೆ ಸನ್ನಿಪಾತೋಪಮಿತ ಮೂರ್ಛಾಂತ ಪತ್ತವಸ್ಥೆಗಳುದಿಪುವು ||
ಜ್ಞಾನನಾಶನ ಮಹಾಮೋಹ ಮಡುವಿನೊಳು ಬಿ |
ದ್ದಾನನವ ಕಂದಿಸುತ ವಕ್ರಗತಿಯಿಂದ ಸ |
ಮ್ಲಾನಮಪ್ಪೊಲು ತಪ್ಪದದರಿಂದಮಾನದಿಯ ಪೆಸರ್ಗೊಂಬುದನುಚಿತವಲೆ || ೫೮ ||

ತರುಣೀನದಿಯ ಜ್ಞಾನಭರಿತ ನಿಟ್ಟಿಸಿದರುಂ |
ಕರಗದಿರನದರಿಂದಮಾಪ್ರಸಕ್ತಿಯನುಳಿದು |
ತ್ವರಿತದಿಂದ ವಿರಾಗ ನಾವೆಯಿಂದಂ ದಾಂಟಿಕೊಳಬೇಕು ಮತಿವಂತರು ||
ಸ್ಮರಿಸಿ ಸಂಸ್ಪರ್ಶಮಂ ಮಾಡಲು ಮಹಾವ್ಯಾಧಿ|
ದೊರೆದಪುದು ದುಸ್ಸಾಧ್ಯಮದಕಂ ಚಿಕಿತ್ಸೆಗಳ !
ನೊರೆವೆನೇಕಾಗ್ರಮಾನಸದಿಂದ ನೀನೊಲಿದು ತಿಳಿ ವೇದಧರ ವಿಪ್ರನೆ || ೫೯ ||

ಚಿದಚಿದಾತ್ಮಿಕ ಚಿತ್ತವೆನಿಪೊಂದು ಪುಟ್ಟಿದುದು |
ಮೊದಲದರದೆಸೆಯಿಂದ ಕಾಮಾದಿಕೀಟಗಳ್ |
ಸದನಗೈದಪುವದರ ಬಾಧೆಯಿಂ ಭವರೋಗ ಜನಿಸುವುದುತತ್ತಾಪದೆ ||
ಉದಿಪುದು ಮಮಾಹಮೆಂಬುರು ಭ್ರಾಂತಿ ದುರ್ಮಾರ್ಗ |
ಪದವಿಯಂ ಪಿಡಿದ ಚರ್ವಿಯು ಜನಿಸಿ ಪೈಶೂನ್ಯ |
ವಿಧಿಯೆನಿಪ ಕೃಷ್ಣಜಿಹ್ವೆಯು ಮನೋಭ್ರಮೆಯಿಂದ ಭಾವಿಸುತಮವಿಸುತಿಹುದು || ೬೦ ||

ಸಾಧುಸೇವಾಭಾವ ಬುದ್ಧಿಮಾಂದ್ಯತೆ ಪುಟ್ಟೆ |
ಭೇದಿಪುದು ರೋಷಚಿಂತಾಳಿ ದುರ್ಮಾರ್ಗ ಸಂ |
ವಾದ ಭಕ್ತ್ಯಭಾವ ಕ್ಷುತ್ತೃಷೆಗಳುಂ ಪುಟ್ಟೆ ತಾಪಾಗ್ನಿ ಪ್ರಬಲದಿಂದ ||
ಮಾಧವಾಂಘ್ರಿಧ್ಯಾನದನ್ನದಲರೋಚಕಾ |
ಪಾದನಂ ಸಂಭವಿಸಿ ಶುಭಕಥಾಶ್ರವಣಗಳ |
ಹಾದಿಗಾಣದ ಪುತ್ರಮಿತ್ರಸತಿಸಂಬಂಧಿ ಕಾನನಕೆ ಬೀಳ್ವುದಾಗ || ೬೧ ||

ಮೂರವಸ್ಥೆಗಳೆಂಬ ದುಸ್ವಪ್ನದೊಳು ತೇಜ |
ಜಾರಿ ದುರ್ವೃತ್ತಿಯಿಂ ನೀಚ ದೈನ್ಯತೆವೆರದು |
ಜಾರಾನುಕಂಪದತಿ ತೃಷ್ಣಾದಿದಾಹದಿಂ ಪಥ್ಯದಲರೋಚಿಕೆಗಳು ||
ತೋರುವುವು ಕರ್ತೃತ್ವ ಭೋಕ್ತೃತ್ವಮೆಂದೆಂಬ |
ಭಾರಹಿಕ್ಕೋತ್ಪತ್ತಿ ಶೇಕೋರ್ಧ್ವ ಮಾರುತ ವಿ |
ಹಾರಮೂರ್ಚ್ಛಾ ಮನೋರಥಮೆನಿಸುವುಪರೋಗವಪರಿಮಿತ ಸಂಭವಿಪುವು || ೬೨ ||

ಧನಲೋಪಮೆನಿಪ ಪೈಶಾಚ ಬಂದಡಸುವುದು |
ವನಿತಾನುಷೇಕಮತಿ ಸನ್ನಿಪಾತಂ ಪುಟ್ಟೆ |
ಘನತಾಪದಿಂ ಬೀಳುತೇಳುತ್ತ ಮುಂದರಿಯದನುದಿನಂ ಬಳಲಿ ತೊಳಲಿ ||
ಘನತರೋಪಾಯ ಯೋಚನೆ ಸಿಲ್ಕದನವರತ |
ಮನೆಮನೋವಾರ್ತೆ ಸತಿಸುತ ಬಂಧುವರ್ಗಮಂ |
ನೆನೆನೆನೆದು ದುಸ್ಸಾಧ್ಯ ಭವರೋಗದೊಳ್ ಸಿಲ್ಕಿ ಪೊರಳುತಿಹ ಮುಂದರಿಯದೆ || ೬೩ ||

ಭವರೋಗ ಹರಮಾದ ಭೇಷಜವನಿದನೊರೆವೆ |
ಸುವಿವೇಕದಿಂ ಗುರುವನಾಶ್ರಯಿಸಿಕೊಂಡೈದೆ |
ವಿವಿಧ ಭಕ್ತಿಯನೆಸಗಿ ರಾಮನಾಮಕಷಾಯಮಂ ಕೊಳುವುದಾದಿಯೊಳಗೆ ||
ನವೆದು ಪೋಪುದು ಮನೋಮಲಿನ ನಿರ್ಮಲತೆಯಿಂ |
ದವಿರಳದ ಶಾಂತಿಯ ಯಥಾಶಾಸ್ತ್ರದಿಂ ಮಾಡಿ |
ತವಕದಿಂದಾಮಯದ ಶಮೆಗೊಳಿಪುದಲ್ಲದಿರಲಾಗಲರಿದೊಂದರಿಂದೆ || ೬೪ ||

ಸಾಧನ ಚತುಷ್ಟಯದ ಮೂಲಿಕೆಗಳಂ ಕೊಂಡು |
ಮೋದದಿಂ ಗುರುವಾಕ್ಯ ಸಂಭೂತ ಶ್ರವಣಾಖ್ಯ |
ಮಾದಿಚೂರ್ಣಂಗೊಂಡು ಸರ್ವಸ್ವದಾನಮಂ ಚಿತ್ತಶುದ್ಧಿಯೊಳು ಮಾಡಿ ||
ಮೋದದಿಂ ಕಾಮಾದಿ ಹೋಮಮಂ ವಿರಚಿಸುತ |
ಸಾಧಕ ತಪೋಗ್ನಿಯೊಳು ಕೆಡಪಿ ಸಂತೋಷ ಸುಖ |
ದಾದರದ ತೃಪ್ತಿಯಂತ್ರವ ಹೃದಯದೊಳಗಿಡಲು ಪೋಪುದಾಶಾ ಪಿಶಾಚಂ || ೬೫ ||



ಮಾನದಂಭಾದಿ ವಿರಚಿತ ಮೂಲಿಕಾ ಚಂದ |
ನಾನುಮೋದದಿ ತತ್ವದಭ್ಯಾಸ ಬಲದಿಂದ |
ತಾನರುಗಿ ಕಾಮಿನೀಗ್ರಹ ಪೋಪುದದರಿಂದ ಭ್ರಮೆಗಳೆಲ್ಲಂ ನಿಲುವುವು ||
ಜ್ಞಾನಾಂಜನದೆ ಹಿತಾಹಿತ ವಿಚಾರಕವೆಂಬ |
ಭಾನುಲೇಪದೊಳು ಕಾಮಜ್ವರಂ ನಿಲ್ಲದಲೆ |
ತಾನು ಬಿಟ್ಟೈದುವುದು ಸಕಲ ದೋಷವು ತೊಲಗೆ ಚಿತ್ತನಿರ್ಮಲತೆಯಹುದು || ೬೬ ||

ಸುವಿವೇಕದನುಪಾನದಿಂದ ಗುರುವಾಕ್ಯಮೆಂ |
ಬವಿರಳದಮಾತ್ರೆಯಂ ಸೇವಿಸುತಮಿರೆ ರೋಗ |
ನಿವಹಂಗಳರುಗುವುವು ಸಾಧನಚತುಷ್ಟಯ ಪ್ರಭೃತಿ[illegible]ಮಳವಡುವನ್ನೆಗಂ ||
ಯುವತಿಯರಪೆಸರು ತತ್ಸಂನ್ನಿಧಿಯ ಗೋಷ್ಠಿಯಂ |
ನವಸುಗಂಧಾದಿ ಪರಿಮಳವಾರ್ತೆ ಲೋಕಾನು |
ಭವನುಡಿ ಪ್ರಮಾದನಿದ್ರಾಲಸ್ಯ ಮತ್ತಶನಮೆನಿಪಿವಂ ತೊರವುದಣುಗ || ೬೭ ||

ಭೋಗೇಚ್ಛೆ ಶುಷ್ಕತರ್ಕಾಭಿಮಾನಂ ಸದಾ |
ರೋಗ ಕರ್ಮದಜಾಡ್ಯ ಸ್ವಜನಸಂಪರ್ಕಮಂ |
ಮೇಗೆ ಪ್ರಾಯಶ್ಚಿತ್ತ ನಿಗ್ರಹಾನುಗ್ರಹಗಳಂ ತುತಿಗಳಂ ತ್ಯಜಿಪುದು ||
ಸಾಗಲೀಯದೆ ನಾಸ್ತಿಕತ್ವಮಂ ಪುಸಿ ನುಸುಳ |
ಪೋಗಾಡಿ ಹಿಂಸಾದಿ ಸಂಕಲ್ಪಗಳನುಳಿದು |
ಬೀಗಿಸುತ ವ್ಯರ್ಥಾನುಲಾಪದೈನ್ಯಾದಿಗಳ ಕೆಲಸಾರಿಸುವುದು ತನಯ || ೬೮ ||

ತನ್ನ ಜೀವನದಿಂದ ಜೀವನೋಪಾಯಂಗ |
ಳನ್ನು ಬಯಸದಲೆ ಭೂತದ್ರೋಹವಂಚನೆಗ |
ಳೆನ್ನುವೀ ಕೂಟಸಾಕ್ಷಿತ್ವಮುಂ ಮೊದಲಾದಮಶುಚಿ ಚಾಪಲ್ಯಗಳನು ||
ಮನ್ನಿಸದೆ ಶಿಶ್ನೋದರಂಗಳನುಸರಣೆಗಳ |
ಭಿನ್ನಮೆಂದೆನಿಸುತಮುಮಂಗಳಗಳಂ ನೆನೆಯು |
ದುನ್ನತಾಶ್ರಮ ಗೋತ್ರಜಾತ್ಯಾಭಿಮಾನಗಳ ಸಂಗಮಂ ಬಿಡುವುದಣುಗ | || ೬೯ ||

ಬಿಡು ದಃರಾನ್ನೇಕಾನ್ನಗಳ ಮದತ್ರಯ ವೈರ |
ಕೊಡಬಡದೆ ವಾಣಿಜ್ಯ ದುಷ್ಟಪರಿಭಾಷಣೆಗ |
ಳುಡುಗಿಸುತ ಪೈಶೂನ್ಯ ಪರನಿಂದೆಗಳನುಳಿದು ಸರ್ವದಾ ಪಥ್ಯಮಿರಲು ||
ಕೆಡುಗು ಭವರೋಗ ತಾವತ್ಪಥ್ಯಗಳ ಬಿಡದೆ |
ನಡೆಸು ಗುರು ದೇವತಾ ಯಜನಭೂತಹಿತಾರ್ಥ |
ಮೆಡೆಗೆಡೆಗೆ ಸಮದುಃಖ ಸುಖಗಳಂ ಸಂಗಡಿಸಿ ನೇಮದಿಂದಿರು ಬಾಲಕ || ೭೦ ||

ತುತಿನಿಂದೆ ಮಾನಾವಮಾನಂಗಳೊಂದೆನಿಸಿ |
ಹಿತಮಹಿತ ಲೋಹಕಾಂಚನ ರೂಪಮೊಂದೆನಿಸಿ |
ಕತಿಪಯಾರಾಧನಮ ಪೂಜನಗಳೊಂದೆನಿಸಿ ತಿಳಿದು ದುಶ್ಚೇಷ್ಟೆಯುಳಿದು ||
ಸತತ ವೇದಾಂತಪರಿಚರಣೆ ತತ್ಸಂಗತಿಯು |
ಕ್ಷಿತಿಜಾರಮಣಭಕ್ತಿ ಮಾತೃಪಿತೃಗಳಸೇವೆ |
ಜತೆಗೊಳೆ ಭವಾಮಯಂ ಪೋದಪುದು ಸಂಜೀರ್ಣಮೆನಿಸಿ ಮೇಲ್ಪಥ್ಯದಿಂದೆ || ೭೧ ||

ಶ್ರವಣಮನನಧ್ಯಾನಮೇಕಾಂತ ಸೇವನೆಯು |
ವಿವಿಧವಾಚಾರಂಭ ವಿರಹತ್ವ ಗುರುಮಾರ್ಗ |
ನವಸುಧಾರಸಸೇವೆ ಕ್ಷೇತ್ರಜ್ಞ ಚೈತನ್ಯರೈಕ್ಯಾನು ಪರಿಧಾವವು ||
ತವಕದಿಂದಳವಟ್ಟರಜ್ಞಾನ ತಾಮಸಂ |
ನವೆದು ತೃಷ್ಣಾ ಜ್ವರಂ ಸಡಿಲಿ ವಾಸನೆಗಳುಂ |
ಸುವಿವೇಕದುಷ್ಣದಿಂ ಜೀರ್ಣಮಾದಪುದು ಭವರೋಗ ಮಿನಿಸೆಡೆಯಿಲ್ಲದೆ || ೭೨ ||

ಎನುತೊರೆದು ಶಾಸ್ತ್ರದುಗ್ಧಾಬ್ಧಿ ಮಥನದಿಪುಟ್ಟ |
ಘನಸುಖವನೀವ ಗುರುವಾಕ್ಯ ಸುಧೆಯಂ ಪೀರ್ದು |
ವನಜನೇತ್ರನ ಭಕ್ತಿಯೆನಿಪ ತನ್ಮೂಲಿಕೆಯ ನಾಲಿಗೆಗೆ ಲೇಪಗೈದು ||
ತನುಮನಗಳೊಂದೆನಿಸಿ ಸುಖದಿಂದಮಿರುವುದೆಂ |
ದೆನುತಮಿಾಮಹವಾಕ್ಯಪೇಟಿಕಾಂತಸ್ಥ ಚಿ |
ದ್ಘನಮಾತ್ರೆಯಂ ವಿಷ್ಣುಭಕ್ತಿಯನುಪಾನದಿಂದಿತ್ತನತಿಮೋದದಿಂದ || ೭೩ ||

ಕೊಡಲು ದಿವ್ಯೌಷಧವನುಡುಗಿ ಭವರೋಗಂಗ |
ಳುಡಿಯಲ್ಕಿದಾತ್ಮಾಹಮೆಂದೆನಿಪ ಸುಖಭೋಧೆ |
ತೊಡರೆ ಭೇಧಜ್ಞಾನಮೆನಿಪ ದಾವಾನಳಂ ಶಾಂತಿಯಂ ಪೊಂದುತಿರಲು ||
ದೃಢಭಕ್ತಿಯಿಂದ ಶ್ರೀರಾಮನಂ ಸೇವಿಸುತ |
ಪಿಡಿದು ಲಕ್ಷವನಂಟೆ ಜೀವಾತ್ಮಸಮರಸದೆ |
ಮಿಡುಕದೆನಿವಾತಸ್ಥ ದೀಪಕಳಿಕೋಪಮಿತಮಾಗಿರ್ದ ಪವನಸುತನೆ || ೭೪ ||

ಹಿಂದುಮುಂದರಿಯದಾನಂದದಿಂದುರಿಗೊಂಡ |
ಚಂದ್ರನಂದದೆ ನಿರಾಲಂಬದಂತಃಕರಣ |
ದಿಂದ ವಾತಾತ್ಮಜಂ ನಿಸ್ತರಂಗಾಬ್ಧಿಯೊಳು ಮುಳುಗಿರ್ಪ ಕಲಶದಂತೆ ||
ಕುಂದಿಲ್ಲದಖಿಳ ಭೂತಂಗಳೆಲ್ಲವನು ತಾ |
ನೆಂದೆನಿಸಿ ಸರ್ವಾತ್ಮಭಾವದಿಂ ನಿಜಸುಖವ |
ಸಂದೆಗವನುಳಿದು ಸೇವಿಸುತಿರ್ದ ರಘುವರನ ದಯದಿ ತುಹಿನಾದ್ರಿಜಾತೆ || ೭೫ ||

ಈಪರಿಯಖಂಡ ಭಾವವ ತಿಳುಪಿ ತ್ರೈಲೋಕ |
ವ್ಯಾಪಕಮಹಾಪುರುಷನೆನಿಸುತಿಹ ಪರಗಳಂ |
ಗೋಪಿತದಿ ಕರಬದರ ಸದೃಶಗೈದಿತ್ತಮಿತ ಸಂತಸಂಗೊಳಿಸಿ ಮುದದೆ ||
ಶ್ರೀಪತಿಯು ರಾಮುಪುರದರಸ ವಾತಾತ್ಮಜನ |
ಸೋಪಾಧಿರಹಿತ ನಿತ್ಯಾನಂದ ಸಾಮ್ರಾಜ್ಯ |
ರೂಪನೆನಿಸಿದನದೇಂ ಭಕ್ತಾನುಕಂಪಯುತ ಹೃದಯನೋ ರಘುನಾಥನು || ೭೬ ||

**ಇಪ್ಪತ್ತೊಂದನೆಯ ಸಂಧಿ ಸಮಾಪ್ತಂ**

## ಇಪ್ಪತ್ತೆರಡನೆಯ ಸಂಧಿ

**ಸೂಚನೆ || ತಿಳುಪಿ ಕಲಿಧರ್ಮಗಳ ತತ್ವಸ್ವರೂಪಮಂ |**
**ಪಳಿದಖಂಡಾನಂದಕಂದಮೆಂದೆನಿಪಂತೆ |**
**ನಳಿನಾಕ್ಷ ರಘುವರಂ ನಳಿನಪೀಠನ ಪದಾರುಹಗೈದ ಪವನಸುತನ ||**

ಭವರೋಗಮಿರ್ಪನ್ನ ಲೋಕದೇಹಂ ಶಾಸ್ತ್ರ |
ದವಿರಳದ ವಾಸನೆಗಳಂಟಿರ್ಪುವಾರೋಗ |
ಸವೆಯಲಾತ್ಮಜ್ಞಾನ ಸಮನಿಸಲು ಹೃದ್ಗ್ರಂಥಿ ಪರಿದು ಪೋಪುದು ಬೇಗದಿ ||
ಶಿವಕರದ ಸರಣಿಯಂ ಪಿಡಿದು ನಿಜತತ್ವಾನು |
ಭವ ಬೋಧೆಯಿಂದಮಾತ್ಮಾರಾಮನೆಂದೆನಿಸು |
ತವಧೂತನವನಿಯೊಳ್ ಚರಿಪ ಜೀವನ್ಮುಕ್ತನಾತಗೆಣೆಯಿಲ್ಲಮಗಜೆ || ೧ ||

ಮನುಜರೊಳು ಸಾಸಿರಕ್ಕೊರ್ವನಾತ್ಮಜ್ಞಾನ |
ವನು ತಿಳಿಯಲಿಚ್ಛೈಪನುಕ್ತಸಾಧನಗಳಂ |
ಮನವೊಲಿಯಲನುಗೈದು ನಿತ್ಯಮುಕ್ತತೆವೆರೆದು ಪ್ರಾರಬ್ಧಮಿರುವನ್ನೆಗಂ ||
ಮನುಜನೊಲುಸಂಚರಿಪನವಧೂತಮಾನಸದೆ |
ಕನಸುಮುಗುಳಿಂದ್ರಜಾಲೋಪಮ ಪ್ರಪಂಚಮೆಂ |
ದನುದಿನಂ ಮಾನಾವಮಾನ ತುತಿನಿಂದೆಗಳನೊಂದೆನುತ ತಿಳಿವನನಘ || ೨ ||

ಸಮದುಃಖಸುಖಲೋಷ್ಟ ಕಾಂಚನಗಳೊಂದೆನಿಸಿ |
ಸಮದರಿಪುಸಖರೊಂದು ಕ್ರಮವಾಗಿ ಸಂಚರಿಪ |
ನಮಲಮತಿ ಸುಜ್ಞಾನ ಬೋಧೆಯಿಂದುನ್ಮತ್ತ ಬಾಲಪೈಶಾಚದಂತೆ ||
ಭ್ರಮೆಗಳೊಂದಂ ಸೋಂಕ ದೇವರಘುವರನಪದ |
ಕಮಲಗಳ ಮರೆಯೊಗುವನಾತ ಕರ್ಮದ ಘೋರ |
ಸಮುದಯಂಗಳ ಕಳೆದು ಮುಕ್ತಿಭಾಜನನಪ್ಪನಿದು ಸತ್ಯ ಪವನತನಯ || ೩ ||

ಕಲಿಯುಗದ ಪಾಪೈಕ ಭಾಜನರ ಮಧ್ಯದೊಳು |
ಸುಲಭ ಶ್ರೀರಾಮಪದ ಚಿಂತಕ ಮಹಾಪುರುಷ |
ರಲಿ ವೀತರಾಗ ಸಿಲ್ಕುವದಧಿಕಮೆಂತೆನುತ ಪವನಭವನಾಳೋಚಿಸಿ ||
ಪಲವು ಪಾತಕಪೋಗಿ ನಿರ್ವಾಣಲಕ್ಷ್ಮಿಲಬಂ |
ದೊಲಿವುಪಾಯವ ನೆನೆದು ರಾಮನಾಮವೆ ಜಗದೆ |
ಕಲಿಮಲಾಪಹಮೆನುತ ನಿಶ್ಚಯಂಗೈದಿತ್ತು ಶ್ರುತಿಶಾಸ್ತ್ರ ಸಮ್ಮತಮೆನೆ || ೪ ||

ಪಾತಕಾಯುತ ನಿಯುತಮರ್ಬುದಮಸಂಖ್ಯಾತ |
ಜಾತವಹವದರಿಂದ ಸತ್ಯಧರ್ಮಂ ಜ್ಞಾನ |
ರೀತಿಯೊಂದಿನಿಸಿಲ್ಲದೀತಿಬಾಧೆಗಳುದಿಸವದರಿಂದ ಸುಖಜನಿಸದು ||
ಸೀತಾಪತಿಯ ದಿವ್ಯಸಿರಿನಾಮಕೀರ್ತನಾ |
ಮಾತುರದೆ ಪಾಪಂಗಳೋಡಿ ಸುಜ್ಞಾನಕರ |
ದಾತಿಶಯಮಹುದು ನಾಮಸ್ಮರಣೆಯುಳಿದನ್ನ ಮಿಲ್ಲಮಿಾ ಕಲಿಯುಗದೊಳು || ೫ ||

ಕೃತಯುಗದಿ ಧರ್ಮಂ ಚತುಷ್ಪಾದವಿರಲು ಸಂ |
ಗತಿಯಿಂದ ಹರಿಭಕ್ತಿ ಶಾಂತಿ ವೈರಾಗ್ಯ ಸ |
ನ್ಮತ ತಪೋದಾನಾದಿ ನಿಷ್ಠೆಯಿಂದಖಿಲ ಜನರಿಹುದು ತ್ರೇತಾಯುಗದೊಳು ||
ಚ್ಯುತಿಯಹುದು ಪಾದತಾನೊಂದು ಮದ ಪುಸಿ ಹಿಂಸೆ |
ಯತಿಲೋಭಮುದಿಸುವುವು ಯಾಗಾದಿ ಕರ್ಮಗಳ |
ಹಿತಮೆಂದು ವಿಷ್ಣುಭಕ್ತಿಯನುಳಿದು ಸಂಚರಿಪರಖಿಳಜನರಾ ಯುಗದೊಳು || ೬ ||

ಮೂರನೆಯ ಯುಗದಿ ನಿಲಲರ್ಧಧರ್ಮಂ ಸದಾ |
ಚಾರವಿರಹಿತ ಠೌಳಿ ಶಾಸ್ತ್ರಹಿತಮೆಂದರಿಯ |
ದೋರಂತೆ ಕೀರ್ತಿ ಕಾಮುಕರೆನಿಸಿ ಶೌರ್ಯಾನುಗತ ಚಿತ್ತವ್ಯಕ್ತಿಗಳನು ||
ಸಾರಿರ್ಪರ್ಸೆ ಕಲಿಯುಗದಿ ಧರ್ಮಂ ಪಾದ |
ತೋರೆ ಶೌಚಾಚಾರ ದಾನದಯದಾಕ್ಷಿಣ್ಯ |
ನಾರಾಯಣಾಂಘ್ರಿ ಸೇವನೆಯನೆಣಿಸದೆ ಮತಾಚಾರ ವತರೆಂದೆನಿಪರು || ೭ ||

ಕೃತಯುಗಂ ಸತ್ವಪ್ರಧಾನ ಬ್ರಾಹ್ಮಣಜಾತಿ |
ಯತುಲರಾಜಸ ನೃಪತಿ ಯೆರಡನೆಯ ಯುಗತಮೋ |
ಹಿತ ವಣಿಗ್ಜಾತಿ ದ್ವಾಪರ ಶೂದ್ರ ಮಿಶ್ರಕರಜಾತಿ ಕಲಿಯುಗವದಲ್ತೆ ||
ಕ್ಷಿತಿಯೊಳಾಭಾಸಕರ ಜಾತಿ ಮಾತ್ರತೆಯಿಂದ |
ಕ್ಷಿತಿಯಮರರಿರ್ಪರಾಕಾರ ಮಾತ್ರಮದಲ್ಲ |
ದತಿಶಯದ ವಿಪ್ರಧರ್ಮಗಳಿಲ್ಲವೇನೆಂಬುದಾಯುಗದ ಮಹಿಮೆಗಳನು || ೮ ||

ಜಾತಿಮಾತ್ರೋಪಜೀವನಮಲ್ಲದಲೆ ವಿಪ್ರ |
ಜಾತಿ ಸಮುಚಿತಕ್ರಿಯಾ ಯಾಗಯೋಗಾದಿಗಳ |
ರೀತಿ ನೀತಿಗಳಿಲ್ಲದುರ್ದಾನ ದುಷ್ಪ್ರತಿಗ್ರಹ ದುಷ್ಟ ಸೇವನೆಗಳು ||
ಮಾತಾಪಿತೃದ್ರೋಹ ಗುರುದೇವಧಿಕ್ಕರಣ |
ಪ್ರೀತಿ ವಿರಹಿತ ದಯಾರಹಿತ ಲೋಭಂ ದಂಭ |
ದಾತಿಶಯದಿಂ ಜಗದ್ವಂಚನಾ ತತ್ಪರರ್ಭೂದಿವಿಜರುದಿಸಿರ್ಪರು || || ೯ ||

ಅಂತರಂಗದೊಳಮಿತ ಪಾತಕವ ಬೈಚಿಟ್ಟು |
ಸಂತಸದೊಳೆಲ್ಲರೊಳು ತತ್ವಮಂ ಪೇಳುತ್ತ |
ಚಿಂತಿಸದೆ ಪರಗಂಧಲೇಶಮಂ ಕನಸಿನೊಳಗಾಹಾರ ಮೈಥುನಗಳ ||
ಭ್ರಾಂತಿಯಿಂ ಪರವಿತ್ತಹರಗಳಾಳೋಚನೆಯ |
ಕಾಂತಾನುಸಂಕ್ತಿಯಿಂದಧ್ಯಯನ ನಾಮಮಂ |
ಪಿಂತಿರುಗಿ ದುಷ್ಕ್ರಿಯಾಚಾರದಿಂ ಸಂಚರಿಪರಲ್ತೆ ಭೂದಿವಿಜತತಿಯು ||೧೦||

ವೇದಂಗಳೋದರೋದಿದಡೆ ವಿಕ್ರಯಗೈವ |
ರಾದರದಿ ವೇದಾಂತಸಾರಮಂ ನಿಟ್ಟಿಸದೆ |
ವಾದಾರ್ಥಗಳ ಕಲಿತು ವಿದ್ವಾಂಸರೆಂದೆಂಬ ಹೆಮ್ಮೆಯಿಂದಖಿಲಃದ್ವಿಜರ ||
ಬಾಧಿಸಿ ತಿರಸ್ಕರಿಪರೌಪಾಸನಾಗ್ನಿಗಳ |
ಹಾದಿಯದೆ ನಿತ್ಯನೈಮಿತ್ತ ಕರ್ಮಂಗಳಾ |
ಸೋದೆಯಂ ಬಿಟ್ಟು ದ್ವಿಜವೇಷದಿಂ ಸಂಚರಿಪರಿದು ಸಿದ್ಧ ಕಲಿಯುಗದೊಳು || ೧೧ ||



ವೇದ ವಿಕ್ರೇಣನಂ ಕೃಷಿಯಶ್ವಪಣ್ಯ ಮುಂ |
ತಾದ ಜೀವನ ಯೋಗಿ ಜೀವನಾಂಧಃಕ್ರೈಣ |
ಭೂದಿವಿಜರೆನಿಸಿರ್ಪರೆಲ್ಲರುಂ ಪರತತ್ವವೇತ್ತರಂದದಿತಿಳಿವರು ||
ಕಾದಿ ಕಲುಮರ ಮೊರಡಿಗಳ ಪುಡುಕಿ ತತ್ವಸಂ |
ಭೋಧೆಯಿಲ್ಲದೆ ಕೃಪಣ ಶಿಶ್ನೋದರಂಗಳಂ |
ಸಾಧನಂಗೈವ ಪಾರುವರೆಸೆವರಾ ಕಲಿಯೊಳೇನೆಂಬುದಚ್ಚರಿಯನು || ೧೨ ||

ದಾನಧರ್ಮಂ ತತ್ವಬೋಧೆ ವೇದಾನುಸಂ |
ಧಾನ ಗೌರವ ಧರ್ಮಚಿಂತೆ ತಂತ್ರಾದಿ ಸಂ |
ಜ್ಞಾನ ಯೋಗಾಭ್ಯಾಸ ತತ್ಸಿದ್ಧಿಗಳ ಮಹಿಮೆಯಾಂತೆಲ್ಲರಂ ಪಳಿವರು ||
ಮಾನವೋತ್ತಮರೆನಿಸಿ ಶೂದ್ರರಿರ್ಪರು ಮಹಾ |
ಜ್ಞಾನದಿಂ ಸಂಕೇತದಾಚಾರ ವಿಪ್ರಹತಿ |
ತಾನುಮತದಿಂ ತುರಂಗಮುವ ಪೋಷಿಸಿ ಗೋವ ಪೊರಮಡಿಪರ್ಶೈ ವಿಪ್ರರು || ೧೩ ||

ಕನ್ನಿಕಾವಿಕ್ರಯಂಗೈದು ವೇದಾಧ್ಯಯನ |
ನನ್ನಿಯಲ್ಲಮೆನುತ್ತಮುಳಿದು ಭಾಷಾಂತರಗ |
ಳನ್ನು ಸಂಪಾದನಂಗೈದು ನೀಚಾಚಾರರತರೆನಿಸಿ ಧರ್ಮಮುಳಿದು ||
ಭಿನ್ನಚಾರಿತ್ರೆಯಂ ನೀಚದೇವಾರ್ಚನಗ |
ಳನ್ನು ಮಾಡುತ ವೈದಿಕಾದಿವಿದ್ಯೆಗಳುಳಿದು |
ತನ್ನರಿಯದುಳಿದುಪಾಸನೆಗಳಿಂ ಭೂದಿವಿಜರಿರ್ಪರಾ ಕಲಿಯುಗದೊಳು || ೧೪ ||

ಕತಿಪಯ ಕಲಾಲಾಭಮಾದ ಬಳಿಕಂ ಗುರುವ |
ನತಿಗಳೆವರತಿಶಯದ ಪುತ್ರರುದಿಸಿದ ಪಿಂತೆ |
ಪತಿಯ ಧಿಕ್ಕರಿಪರಂಬುಜನೇತ್ರೆಯರು ರೋಗನಿರ್ಹರಣಮಾದಬಳಿಕ ||
ಅತಿವೈರದಿಂ ಬೈದು ವೈದ್ಯನಂ ಪೊರಡಿಸುವ |
ರತುಲಭೋಜನ ಸ್ವಲ್ಪ ದೇಹಬಲ ವರ್ಜಿತದೆ |
ಕ್ಷಿತಿಯೊಳುದಿಪರ್ಜನರ್ಕಲಿಯುಗದೊಳೇನೆಂಬೆನಚ್ಚರಿಯ ಮಹಿಮೆಗಳನು || ೧೫ ||

ಪತಿಯೊಳಗೆ ವೈರ ನಿಜಪಿತಭಾವಮೈದುನರ |
ಹಿತಮಿಲ್ಲದನ್ಯ ಗೃಹದಾವಾಸದಿಂ ತನ್ನ |
ಮತಿಬಂದತೆರದಿ ಖೇಲನಗೈವುತತ್ತೆಯಂ ಬೈದು ಭಂಗಿಸುತ ಮುದದಿ ||
ಪತಿಕರಿಪರನ್ಯರಂ ಪತ್ತುವರುಷಕೆ ಮುನ್ನ |
ಸುತರಪಡೆದಪರಂಗನೆಯರು ನಾಲ್ಕಾರಾಗ |
ಲತಿಶಯದ ವಾರ್ಧಿಕ್ಯದಿಂ ತೋರ್ಪರಾಯುಗದೊಳತಿಶಯಮದೇನೆಂಬೆನು || ೧೬ ||

ಹಸಿವುತೃಷೆಭಯಮೋಹದಧಿಕದುರ್ಭಿಕ್ಷಮಾ |
ವಸಥಮನವರತಮಲ್ಪಾಯುಷ್ಯಮಲ್ಪಬಲ |
ಮಸುಳ ಶೂದ್ರಾಚಾರ ಗುರುದೇವತಾನಿಂದೆಯಾಂತು ಪಾರುವ ಸಂತತಿ ||
ವಸುಮತಿಯೊಳೆಸೆದಿಹರು ಕಲಿಯೊಳಗೆ ಪಾತಕಂ |
ವಸತಿಯೆನಿಪುದದಕ್ಕೆ ನಿಷ್ಕೃತಿಯು ಸಮನಿಸದು |
ಪಶುಗಳಂತಹುದಖಿಳಮಾನಸಾಚಾರಮದನೇನೆಂಬೆ ಕಲಿಯುಗದೊಳು || ೧೭ ||

ನಿಶೆಯೊಳಗೆ ಸೀಧು ಸಾಧನೆಗೈದು ಮನ್ಮಥನ |
ವಶನೆನಿಸಿ ಗಣಿಕಾಗೃಹಾಂತರಾಳದೊಳೊರಗಿ |
ಬಿಸಜಮಿತ್ರೋದಯದೊಳತಿನಿಷ್ಠರೆನಿಪಂತೆ ವೇಷಧಾರಣೆಯಮಾಡಿ ||
ಪುಸಿಯ ಪೊದ್ದದ ಮಹಾಪ್ರಾಜ್ಞದೀಕ್ಷಿತ ದೈವ |
ವಸಿಗಳತಿ ಸರ್ವಜ್ಞರಗ್ನಿಹೋತ್ರಿಗಳೆಂಬ |
ಪೆಸರಿಂದೆ ಸಂಚರಿಪರೈ ಪಾರ್ಥಿವಾಯುಗದೊಳೇನೆಂಬುದಚ್ಚರಿಯನು || ೧೮ ||

ಪರವಿತ್ತ ಹರಣಗೈದಪುದೆನಿಯಮಂ ಸದಾ |
ಪೆರರಪರಿವಾದಮಂ ಮಾಳ್ಪುದೇಜಪಮನವ |
ಕೊರಗಿಸುವುದೇತಪಂ ಭೇದನಂಗೈದನ್ಯ ಮರ್ಮಂಗಳನ್ನು ತಿಳಿದು ||
ನರಳಿಸುವುದದು ಜಾನವನ್ಯ ಕಾಂತಾಸಕ್ತಿ |
ವೆರೆದಿರುವುದೇ ಬ್ರಹ್ಮಚರ್ಯ ಕಲಿಯುಗವಿಪ್ರ |
ರಿರವನೆಂತೊರಯಲಪ್ಪುದು ಜಾತಿಮಾತ್ರೋಪಜೀವಿಗಳ ಕೃತ್ಯಂಗಳ || ೧೯ ||

ಮಾನಮದಮಾತ್ಸರ್ಯ ದಂಭಹಿಂಸಾಕೃತ್ಯ |
ಹೀನಸಂಸರ್ಗ ವೃಷಲೀಗಮನ ಶೂದ್ರ ಸ |
ನ್ಮಾನ ತಚ್ಛಿಷ್ಯತೆದೊಳನುಮೋದ ತದ್ದ್ವಾರರತಿರೂಪು,ಜೀವನೆಯರ ||
ಮಾನಿನೀತ್ವಂಪಾದಜಾಚಾರರತರೆನಿಪ |
ರೇನೆಂಬೆ ಕಲಿಯುಗದಿ ವೇಷಮೊಂದಲ್ಲದಿ |
ನ್ನೇನಿಲ್ಲ ವಿಪ್ರಧರ್ಮಗಳು ಕಪಟೋಪಾಯ ನಿಳಯರೆನಿಸುವರೆಲ್ಲರು || ೨೦ ||

ಪತಿತ ಪೈಶೂನ್ಯ ದುಷ್ಟಾಚಾರಹೀನರಿಂ |
ದತಿಶಯಂ ಯಾವನಕಿರಾತರಿಂಗರಸುತನ |
ಮತಿಯುತರಿಗತಿನೀಚಸೇವೆ ಚಂಡಾಲಾದಿಗಳಿಗಾಧಿಪತ್ಯದಿರವು ||
ಸುತನಿಂಗೆಸನ್ಮಾನ ಪಿತನಿಂಗೆ ಶುಶ್ರೂಷೆ |
ಸತಿಗೆ ದಾಸೀತ್ವಂ ಪರಾಂಗನೆಗೆ ಬಹುಮಾನ |
ಪೃಥುಕರಿಗೆ ತತ್ವದಾಳೋಚನೆಯು ವೃದ್ಧರಿಂಗತಿಕಾಮುಕತೆಯೆನಿಪುದು || ೨೧ ||

ಕುಡುವನಿಗೆದಾರಿದ್ರ್ಯ ಕೃಪಣಾಲ್ಪ ಜಾತಿಗಂ |
ಬಿಡದೆ ಧನಿಕತೆ ಕುಲಾಧಿಕಗೆ ನೀಚರ ಸೇವೆ |
ಯೊಡನೆ ದುರ್ನೀತನುರೆ ನೀಚಜಾತಿಗೆ ರಾಜ್ಯದರಸುತನ ಧರ್ಮಿಷ್ಠಗೆ ||
ಕೆಡುವುದಾಯುಷ್ಯ ಪಾತಕಿಗೆ ದೀರ್ಘಾಯು ಬಂ |
ದಡಸುವುದು ಕಲಿಧರ್ಮಮುಚ್ಚರಿಸಿ ಗಣಿಸಲೆಂ |
ತೊಡಬಡುವುದತಿ ಘೋರಪಾತಕ ಮಹಾರಾಶಿಯಂ ಪೇಳಲಳವಕ್ಕುಮೆ || ೨೨ ||

ಇನಿತನಿತೆನುತ್ತ ಕಲಿಧರ್ಮಗಳನುಚ್ಚರಿಸ |
ಲನುವಾಗದಿವಕೆ ಪ್ರಾಯಶ್ಚಿತ್ತ ಸಂಭವಿಸ |
ಲೆನಿತೆಂದು ಕಮಳಭವನಾಳೋಚನಂಗೈದು ತಪವನುಂ ಮಾಡಲಾಗ ||
ವನಜಲೋಚನ ದಯದೊಳೈತಂದು ನೀಂ ಕೇಳಿ |
ದನು ಕೊಡುವೆ ಯಾಚಿಸುವುದೆನೆ ಪದ್ಮಸಂಭವಂ |
ಮನದ ಹರುಷದೊಳೆರಗಿ ಬಿನ್ನಪಂಗೈದ ನಿಜಚಿತ್ತದಾಳೋಚನೆಗಳಂ || ೨೩ ||



ಕಲಿಯುಗ ಮಹಾಪಾಪ ಕೋಪನೇಮಗಳುವೈ |
ಫಲವಪ್ಪುವಬಲಮಾದುವು ಮಂತ್ರಜಾಲಗಳು |
ಕಲಿತಕಿಲ್ಬಿಷರಲ್ಪಮತಿಗಳಪ್ಪರು ಜನರು ವಿಪ್ರಪೂಜ್ಯತೆ ಪೋಪುದು ||
ಅಲಘು ಸಂಭಾವನೆಯು ಶೂದ್ರವರ್ಣಕ್ಕಹುದು |
ಸುಲಭಮಪ್ಪುದು ನಿಲಯ ಕಲಿಗೆ ಪ್ರಾಯಶ್ಚಿತ್ತ |
ನಿಲುಕಲಮ್ಮವು ಲೋಕಮೆಂತುಳಿಯುವೇಳೆನುತ ದಯೆಯೊಳಾಜ್ಞಾಪಿಸೆನಲು || ೨೪ ||

ಸರಸಿಜೋದ್ಭವನ ಬಿನ್ನಪವ ಪತಿಕರಿಸುತಂ |
ತರಳನೀಂ ಪೇಳ್ದುದೆಲ್ಲಂ ದಿಟಂ ಪಾತಕದ |
ನಿರುಗೆಗುಪಹತಿ ಜನಿಸದಾವ ಕರ್ಮಂಗಳಿಂದಾ ಮಹಾಪಾಪಯುಗದೆ ||
ಅರಸಿನೋಡಿದರಖಿಲಶಾಸ್ತ್ರಗಳ ಸಂತತಿಗ |
ಳೊರೆಯಲಮ್ಮವು ಪಾಪನಿಷ್ಕೃತಿಯನಾದಡಂ |
ಕರುಣದಿಂ ಕಲಿಮಲಾಪಹಮೆನಿಪ ದಿವ್ಯತರದೌಷಧಿಯ ಪೇಳ್ವೆ ಕೇಳು || ೨೫ ||

ಅಡವಿಯಂ ತಿರುಗಲಿಲ್ಲವು ತಂದು ಕಷ್ಟದಿಂ |
ಕಡಿದುಂ ಕಷಾಯಮಿಡಲಿಲ್ಲ [1]ಕಹಿಕಾರಗಳ |
ಕುಡಿದು ಸಂಕಟಗೊಳುವುದಿಲ್ಲ ಕೆಯ್ಯಿಂ ಕಾಸನೀಗುವವಸರಮಿಲ್ಲವು ||
ಒಡಲ ದಂಡನೆಯಿಲ್ಲ ಪಥ್ಯಪಾನಗಳಿಂದ |
ಮಡಿಗಡಿಗೆಸೇವನಾ ಕುಂದು ಹೆಚ್ಚುಗಳಿಲ್ಲ |
ದೊಡನೆ ಪಾತಕರಾಶಿ ಸಡಿಲಿ ನಿರ್ಮಲಮೆನಿಸುವೌಷಧಿಯದೊಂದಿರ್ಪುದು || ೨೬ ||

ಗುರುಮುಖದೊಳರಿತು ಮೂಲಿಕೆಯ ಗ್ರಹಿಸಿದಮಾತ್ರ |
ಕರಗುವುದು ಕಲಿಪಿಶಾಚಂ ಭೂತಳದಿ ನಿಲದೆ |
ಪರಮಪದ ಕರತಳಾಮಳಕಮೆನೆ ಕಾಣ್ಬಡುವದಿದು ಸತ್ಯಮೌಷಧಿಯನು ||
ಅರುಪಬಾರದು ಬೊಮ್ಮಶರಣೆಂದರತಿಕರುಣ |
ವೆರೆದುಂ ನಿರೂಪಿಸಲ್ವೇಳ್ಕಾದುದಾದರವ |
ಧರಿಸು ಚಂಚಲಮಿಲ್ಲದಖಿಳಾಗಮಂಗಳುರುಸಾರಸಾರಸವ ನೊರೆವೆ || ೨೭ ||

ರಾಮನೆಂಬೆರಡಕ್ಕರವನು ಗುರುಮುಖದಿಂದ |
ಪ್ರೇಮದಿಂ ಸಂಗ್ರಹಿಸಿ ನಿತ್ಯನೈಮಿತ್ತಿಕಾ |
ಕಾಮನಾ ಕರ್ಮಗಳನುಳಿದು ನಾಮಸ್ಮರಣೆ ಗೈಯುತಿರೆ ಪಾತಕಗಳ ||
ಸ್ತೋಮಂಗಳೆಲ್ಲ ಕೆಡೆದೋಡಿ ನಿರ್ಮಲನಿತ್ಯ |
ಧಾಮಮಾಗಾರಮೆಂದೆನಿಸುವುಮ ಕರ್ಮಂಗ |
ಳಾಮಯದಿ ಸಿಲ್ಕಿ ಕೋಟಲೆಗೊಂಡರದು ವಿಫಲಮಾದಪುದು ಕಲಿಯುಗದೊಳು || ೨೮ ||

ನಾಮಕೀರ್ತನೆಯ ಮಾಳ್ಪರಿಗೆ ಪಾತಕ ಸಂಗ |
ದಾಮಯಂ ಸೋಂಕಲಮ್ಮದು ಮುಕ್ತಿ ಕ್ರೀಡಿಪಾ |
ರಾಮಮೆಂದೆನಿಪುದಿದು ನನ್ನಿಯಖಿಲಾಮ್ನಾಯ ಮತಮಿದಂ ತಿಳಿದು ಸುಖದೆ ||
ನೀಮನೋಹರ್ಷದಿಂದಿಹುದೆಂದು ನೇಮಿಸುತ |
ತಾಮರಸಭವನ ಬೀಳ್ಕೊಂಡು ಹರಿಯರುಗಲ್ಕೆ |
ಪ್ರೇಮದಿಂ ಪದ್ಮಭವಲೋಕಕುಪದೇಶಿಸಿದ ನೀಮಹಾಗೋಪ್ಯತರಮಂ || ೨೯ ||

1. ಖೈಖಾರ

ಕಲಿಯುಗಕೆ ಕಲ್ಪತರು ಧೇನು ಚಿಂತಾಮಣಿಯು |
ಸುಲಭಮುಕ್ತಿಪ್ರದಂ ಸಾಮ್ರಾಜ್ಯ ಸಂಪದಗ |
ಳೊಲಿದೀವುದೊಂದು ನಾಮಸ್ಮರಣೆಯೆಂದರಿತು ಸುಖದಿಂದ ಬಾಳ್ವುದೆನುತ ||
ನಳಿನಾಕ್ಷಪ್ರೇಮದಿಂ ತಿಳುಪೆ ಮರುತಾತ್ಮಜಂ |
ಕಲಿತ ಸಂಭ್ರಮದಿಂದ ನಿತ್ಯಸುಖಮಯನೆನಿಸಿ |
ಪಲವು ವಿಧದಿಂದ ಸಂಕೀರ್ತನಂಗೈವುತಾನಂದಮಯನಾಗಿರ್ದನು || ೩೦ ||

ನಂಬಿದರ ಪೊರೆವನೆನಲೆಂತೊ ಶರಣಾಗತ ಕು |
ಟುಂಬಿ ಶ್ರೀರಾಮಪುರದರಸನಲ್ಲವೆ ಭವಾ |
ಡಂಬರವ ಪಳಿದು ಶರಣನಿಗಿಷ್ಟ ಸಂಪದವನಿತ್ತು ಸಲಹಿ ||
ಕುಂಭಿನಿಯ ಪರಿಪಾಲನಂಗೈವುದೆನುತನಿಲ |
ಸಂಭವಂಗಪ್ಪಣೆಯನಿತ್ತು ಭಾವಿಪ ಜನರ |
ಸಂಭ್ರಮಂ ಗೊಳಿಸಿದಂ ರಘುನಾಥ ಕರುಣಾಳುವಲ್ತೆ ತುಹಿನಾದ್ರಿಜಾತೆ || ೩೧ ||

**ಇಪ್ಪತ್ತೆರಡನೆಯ ಸಂಧಿ ಸಮಾಪ್ತಂ**

## ಗದ್ಯ

ಇದು ಶ್ರೀರಾಮಚಂದ್ರಪಾದಾರವಿಂದವಂದನ ಪವನನಂದನವರಪ್ರಸಾದಾಸಾಧಿತ
ಸಾರಸ್ವತಾಸಾಹಿತ್ಯ ಸಾಮ್ರಾಜ್ಯ ಸರ್ವಂಕಷ ಚತುರ್ವಿಧಕವಿತಾಪರಿಶೀಲಿತಾತ್ಮ
ನಿಷ್ಠಾಗರಿಷ್ಠಗಾಂಧರ್ವ ಕಲಾವಿದ ವಿವಿಧ ವಿದ್ವಜ್ಜನ ಜನೋಪಲಾಲನೀಯ
ರಾಮಪುರಿ ಹಂಪೆಯಾಮಾತ್ಯತನೂಭವ ವೆಂಕಾಹ್ವಯ ವಿರಚಿತಮಾದ
ಶ್ರೀಮದ್ರಾಮಾಯಣಮಹಾಪ್ರಬಂಧದೊಳ್

**ಸುಂದರಕಾಂಡಂ ಸಮಾಪ್ತಂ**

|| ಮಂಗಳ ಮಹಾ ಶ್ರೀಃ ಶ್ರೀ ||

## ಫಲಸ್ತುತಿ

ವೀರಮಾರುತಿಯು ಲವಣಾಂಬುಧಿಯ ದಾಂಟಬಹ |
ದಾರಿಯೊಳ್ಗಿರಿವರನ ಸಂತಸಂಗೊಳಿಸುತಂ |
ಘೋರರೂಪಾಂತ ಸುರಸೆಯ ತರಿದು ಸಿಂಹಿಕಾತನುವನಿಬ್ಬಗಿಯಮಾಡಿ ||
ಮಾರುತನ ಪಥದೊಳೈತಂದ ಸುಚರಿತ್ರೆಯ |
ನ್ನೋರಂತೆ ಭಕ್ತಿಯಿಂ ಕೇಳ್ವರಿಗಪಸ್ಮಾರ |
ದೂರಮಪ್ಪುದು ಜಡತೆಯರುಗಿ ಸಮ್ಯಗ್ಜ್ಞಾನ ಸಂಭೂತಮಪ್ಪುದಬಲೆ || ೧ ||
ವನದೊಳಣುರೂಪದಿಂ ವನಜಾಪ್ತ ಚರಮಗಿರಿ |
ಯನು ಸಾರ್ದುದಂ ನೋಡುತಿರ್ದ ಕಥೆಯಂ ಕೇಳ್ದ |
ಜನರಿಗಪ್ಪುದರೋಗಮಾಯುಷ್ಯವರ್ಧನಂ ನಿಶೆಯೊಳಾಪುರವ ಪೊಕ್ಕು ||
ದನುಜೆಯಂ ತರಿದು ತತ್ಪತ್ತಣವ ಶೋಧಿಸಿದ |
ಹನುಮನ ಚರಿತ್ರೆಯಂ ಕೆಳ್ದರಿಗದೆಂದಿಗುಂ |
ಜನಿಸದಸುಖಂ ಶೋಕಮೋಹಾದಿಕಂ ನೆಲದೊಳಾಲಿಸುವುದಬ್ಜನೇತ್ರೆ || ೨ ||
ನಿಶೆಯೊಳಗೆ ರಾವಣಾವಸಥಮಂ ಪೊಕ್ಕಲ್ಲಿ |
ಶಶಿಮುಖಿಯರಂ ಕಂಡು ದೈತ್ಯನಾಥನ ಪೊರೆಯ |
ಲೆಸೆವ ಮಂಡೋದರಿಯ ಧಿಕ್ಕರಿಸುತಾಪಾನ ಭೂಮಿಯಂ ಶೋಧಿಸುತಲಿ ||
ಪೊಸತೆನಿಪ ಪುಷ್ಪಕಾರೋಹಣಂಗೈದ ಮೇಲ್ |
ಜಸದ ವರ್ಣನೆಗಳಂ ಕೇಳ್ವಮಾತುರದಿಂದ |
ನಸಿದಪುದು ಮಾಯಾಬಲೋದ್ಧತಿಯು ಸುಜ್ಞಾನ ಸೌಖ್ಯಕ್ಕೆಸಾರ್ವುದಬಲೆ || ೩ ||
ಧರಣಿಜೆಯ ಕಾಣದಾ ಹನುಮ ಸೌಧಾಗ್ರದೊಳ್ |
ನಿರುಗೆಯೆನಿಸುತ ತೊಳಲಿದೀ ಚರಿತ್ರೆಯ ಕೇಳ್ದ |
ನರರಿಗೆಂದಿಗು ಮನೋವ್ಯಾಕುಲಂ ಸಂಭವಿಸದಿದುನನ್ನಿ ಭೂತಳದೊಳು ||
ಸುರಪನುದ್ಯಾವನವ ಸೋಲಿಸುವ ನಂದನವ |
ಹರುಷದಿಂದೊಳಪೊಕ್ಕ ಚರಿತೆಯನ್ನಾಲಿಸಿದ |
ಪುರುಷರಿಂಗೊದಗುವುದನೇಕ ಸಂತೋಷಕರವಿಾನೆಲದೊಳಬ್ಜವದನೆ || ೪ ||
ಜನಕಜೆಯ ಶಿಂಶುಪಾವನದೆಡೆಯೊಳಂ ನೋಡಿ |
ಹನುಮ ಸಂತಸಗೊಂಡ ಚರಿತೆಯಂ ಕೇಳ್ದರಿಗೆ |
ವನಜಮಂದಿರೆಯನುಗ್ರಹಮಪ್ಪುದಾಪ್ರಾರ್ಥನೆಯೊಳೆಂದು ತಿಳಿಯಂಗನೆ ||
ದನುಜೇಶನೈತಂದು ವಿಮುಖತೆಯೊಳ್ಪೈದಿದುದ |
ನನುವಿಂದ ಕೇಳ್ದರಿಗೆ ದುಷ್ಕಾಲಸಂಭೂತ |
ಮೆನಿಪ ದುರ್ವ್ಯಸನಂಗಳಡಗಿ ಮೋದದಿ ಬಾಳ್ವರಿದು ಸತ್ಯಮಬ್ಜನೇತ್ರೆ || ೫ ||
ಮರೆದು ನಿದ್ರಿಪ ತ್ರಿಜಟೆ ಮೈಮುರಿದು ಬೇಗದಿಂ |
ದುರುಳ ರಕ್ಕಸಿಯರ ತಿರಸ್ಕರಿಸಿ ಸುಸ್ವಪ್ನ |
ದಿರವ ಬಿತ್ತರಗೈದ ಕಥೆಯಕೇಳ್ವರಿಗಾಗದೈಸೆ ದುಸ್ವಪ್ನ ಫಲವು ||
ಧರಣೀಶನಂಗುಲೀಯಕವ ಮಾರುತಿ ಭಕ್ತಿ |
ವೆರದು ಧರಣೀಸುತೆಗೆ ಕೊಟ್ಟ ಕಥೆಯಂ ಕೇಳ್ದ |
ಡುರು ಶತ್ರುಹರಮಾಗಿ ಸ್ಥಿರರಾಜ್ಯಮನ್ನಾಳ್ವರಿದು ನನ್ನಿ ಭೂತಳದೊಳು || ೬ ||

ವೈದೇಹಿ ಪಾವಮಾನಿಯೊಳು ನಿಜವೃತ್ತಂಗ |
ಳೈದೆ ಬಿತ್ತರಗೈದ ಪರಿಯ ಕೇಳ್ದರ ಚಿತ್ತ |
ಭೇಧನಂಗೊಳಿಪ ಚಿಂತಾಶೋಕಗಳ್ಪೋಗಿ ನಿತ್ಯಸುಖದಿಂ ಬಾಳ್ವರು ||
ಆದಯಾನಿಧಿಯೆಡೆಗೆ ಪೋಗಿ ಬರ್ಪುದೆನುತ್ತ |
ಮೋದದಿಂದಪ್ಪಣೆಯನಿತ್ತ ಸಚ್ಚರಿತೆಯ |
ನ್ನಾದರಿಸಿದರಿಗಮಂದಾನಂದಸಂದೋಹ ಬಂದು ಸಾರುವುದಂಗನೆ || ೭ ||

ಆಶರನ ಕಣ್ಮನವಿನೋದಕರ ಬನಮಂ ವಿ |
ನಾಶನಂಗೈದ ಸತ್ಕಥೆಯನಾಲಿಸಿದರಿಗೆ |
ಲೇಸುಗಳ್ಕೈಸಾರಿ ಕಂಟಕಗಳೆನಿತುಳ್ಳವನಿತು ಪರಿಹರಮಪ್ಪುವು ||
ಆಸುರೋತ್ತಮತನೂಭವನ ದಂಡನೆಗೈದ |
ಭಾಸುರ ಶ್ರೀಚರಿತ್ರೆಯ ಕೇಳ್ದಮಾತುರದಿ |
ವಾಸವಾದಿಗಳತುಲ ಸಂಪ್ರೀತಿಯಿಂದೊಲಿದು ಕೊಡುವರಿಷ್ಟಾರ್ಥಗಳನು || ೮ ||

ಪೊಂಬೊಡೆಯನಸ್ತ್ರದಿಂ ಜಂಭರಿಪುರಿಪುಹರಿಯ |
ಡಿಂಭಕನ ಕಟ್ಟಿದೀ ಕಥೆಯನಾಲಿಸಿದರಿಗೆ |
ಡಂಭರದ ಬಂಧನೋನ್ಮುಕ್ತಿಯಪ್ಪುದು ಮಗುಳೆ ಸಂಶ್ರುತಿಗೆ ವಿಲಯಮಹುದು ||
ಮುಂಬರಿದು ದಶಗಳನ ಮುಖಭಂಗಿತಂಗೈದ |
ಶುಂಭತ್ಪ್ರತಾಪಮಂ ಕೇಳ್ದರಿಗೆ ಸೌಖ್ಯಮೆಡೆ |
ಗೊಂಬುದೆಂದರಿತೇಕಭಕ್ತಿಯಿಂದನುದಿನದಿ ಶ್ರವಣಪಠನಂಗೈವುದು || ೯ ||

ತ್ರಿದಶಾರಿನಗರಿಯನ್ನೊದಗಿ ದಹನಂಗೈದ |
ಬುಧವಿನೋದನ ಚರಿತೆಯಂ ಕೇಳ್ದ ಜನರಿಗ |
ಭ್ಯುದಯಮಪ್ಪುದು ಚಿರಾವಸಥ ತಾಪತ್ರಯಗಳೋಡಿಪೋದಪುವು ನಿಲದೆ ||
ಉದಧಿಯಂ ದಾಂಟಿ ನಿಜಗೋತ್ರದೊಡನೈತಂದು |
ಮಧುವನದೊಳುಲ್ಲಾಸದಿಂದ ಸತ್ಕಥೆಗಳಂ |
ದದುಭುತವನಾಲಿಸಿದಡಪ್ಪುದಾಧಿವ್ಯಾಧಿಹರ ನನ್ನಿ ಭೂತಳದೊಳು || ೧೦ ||

ದಿನಮಣಿಕುಲೋದ್ಭವಗೆ ಹನುಮ ಚೂಡಾಮಣಿಯ |
ನನುವಿಂದವಿತ್ತುದಂ ಕೇಳ್ದವಾತುರದಿಂದ |
ಮನಿತರೋಪಮಮೆನಿಸದಾನಂದಸಂದೋಹ ಕೈಸಾರ್ವುದವನಿಯೊಳಗೆ ||
ವನಜಪೀಠನ ಪದವನೊಲಿದಾ ಪ್ರಭಂಜನನ |
ತನಯಂಗೆ ಪಾಲಿಸಿದ ಕಥೆಯನಾಲಿಸಿದರಿಗೆ |
ಮನದ ಮಲಿನಂಪೋಗಿ ಮನುಜರಾನಂದಾನುಭವದಿಂದ ಬಾಳ್ವರರಸಿ || ೧೧ ||

ಕಲಿಯುಗ ಚರಿತ್ರೆಯಂ ಕಪಿವೀರನೊಡನೆ ರಘು |
ಕುಲನಾಥ ಪೇಳಿದಚ್ಚರಿಯನಾಲಿಸಿದರಿಗೆ |
ಕಲಿಕೃತಾಗಸ ಸೋಂಕದಾವಗಂ ನಿಷ್ಪಾಪರೆನಿಸಿ ರಾರಾಜಿಸುವರು ||
ಸಲಲಿತದ ಸಂದರ್ಭವೆನಿಸುವೀ ಕಾಂಡಮಂ |
ನೆಲದೊಳತಿಭಕ್ತಿಯಿಂದೋದಿ ಕೇಳಿದರಿಂಗೆ |
ಜಲಜಪೀಠನಲೋಕಮಹುದೆನುತಮನುದಿನದೊಳಾಲಿಪುದು ಗಿರಿತನೂಜೆ || ೧೨ ||



ಚಂಚರೀಕಾಳಿ ಕೇಳ್ಕೈದನೆಯ ಕಾಂಡದೊಳ |
ಗಂಚಿತಂ ಮಾರುತಿಯ ವಿಜಯೋತ್ಸವಂ ರಮಾ |
ಲಾಂಛನಂಗಾನಂದ ಸಿರಿಗೆ ಹರ್ಷೋತ್ಕರಂ ಮಿತ್ರಕುಲ ಸಂತೋಷದಿಂ ||
ಅಂಚಿತಮಿದಂ ಕೇಳ್ದರಿಂಗಾಯುರಾರೋಗ್ಯ |
ಸಂಚಲಿಸದೈಸಿರಿಯು ಸುಜ್ಞಾನ ಭಾಗ್ಯಗಳು |
ದಂಚಿತಮೆನಿಪ್ಪವನವರತ ಸುಂದರಕಾಂಡದತಿಶಯ ಶ್ರವಣದಿಂದ || ೧೩ ||

ಪರಮ ಪುರುಷಾರ್ಥ ವಿತರಣ ಶೌಂಡವೀ ಕಾಂಡ |
ಸುರತರುವೆನುತ್ತಮನುದಿನ ಮರುಸುತ ಭಕ್ತಿ |
ವೆರದು ಸಿರಿಯೊಳಗಾವನಾಲಿಸುವ ವಾಚಿಸುವನವನಿಗಿಷ್ಟಾರ್ಥ ತತಿಯು ||
ಸರಭಸದಿ ಕೈಸಾರಿ ಸಿರಿಪುತ್ರ ಸಂಪದದಿ |
ಬೆರೆದು ಚಿರಕಾಲಮಾನಂದದಿಂದೆಸೆದಿರ್ದು |
ಸರಸಿಜಾಸನಲೋಕಮಂ ಸಾರ್ವರಿದುನನ್ನಿ ಯೆಂದರಿವುದದ್ರಿಜಾತೆ || ೧೪ ||

ಸೊಗಯಿಸುವ ಸಕಲೇಷ್ಟಸಾಧನಗಳಿಂ ತೋರ್ಪ |
ಸೊಗಸೆನಿಸುವೀ ಕಾಂಡಮಂ ಭಕ್ತಿಯಿಂ ಪಿಡಿದು |
ಭೃಗುವಾಸರದಿ ನಿಶೆಯೊಳಾವಗಂ ಕೇಳುವಂ ಸಂತಸದಿ ವಾಚಿಸುವನು ||
ನಿಗಮಾಂತ ವೈದ್ಯನೆಂದೆನಿಸಿ ಷಡ್ಭಾವಂಗ |
ಳೊಗುಮಿಗೆಗಳಂ ನೀಗಿ ಪುರುಹೂತಸಂಪದದೊ |
ಳಗಣಿತೋತ್ಸವದಿಂದ ಬಾಳ್ವನೀ ಭೂತಳದೊಳಿದುನನ್ನಿ ಶೈಲಜಾತೆ || ೧೫ ||

ಆರಾದಡೀ ದಿವ್ಯ ಕಾವ್ಯಮಂ ಭಕ್ತಿಯೊಳು |
ನೂರೆಂಟುಬಾರಿ ವಾಚಿಸಿ ಕೇಳಿದರಿಗಹುದು |
ಧಾರಿಣೀಧವತೆ ಮನದಿಷ್ಟಸಾಧನಗಳುಂ ಕೈಸಾರ್ಗುಮತಿವೇಗದೆ ||
ವೀರ ಮಾರುತಿಯ ವಿಜಯಾಂಕಿತ ಚರಿತ್ರೆಯಂ |
ತೋರಭಕ್ತಿಯೊಳು ಬರೆದೋದಿ ಕೇಳಿದರಿಂಗ |
ಪಾರ ಸೌಖ್ಯಾನಂದ ಸಾರಸಾಸನಲೋಕ ಕರತಳಾಮಳಕಮಹುದು || ೧೬ ||

ಸರ್ವದೇವಾತ್ಮಕ ಸದಾನಂದ ಮಯದನುಜ |
ಗರ್ವದಲ್ಲಣ ಭಕ್ತಪರಿಪಾಲನೋತ್ಸುಕ ಸು |
ಪರ್ವಾಣನಾಥನುತನೆನಿಪ ರುದ್ರಾತ್ಮಭವನಭ್ಯುದಯ ಚರಿತೆಗಳನು ||
ಉರ್ವಿಯೊಳಗತಿಭಕ್ತಿಯಿಂದಾವ ಕೇಳಿದಡ |
ಖರ್ವ ಸುಖಸಂತಾನ ಸಾಮ್ರಾಜ್ಯದಿಂ ಬಾಳ್ದು |
ಸರ್ವೇಶ ರಾಮುಪುರದರಸನಂಘ್ರಿಯ ಸಾರ್ವರೆಂದರಿವುದಬ್ಜನಯನೆ || ೧೭ ||

ಮಂಗಳ ಮಹಾ ಶ್ರೀ || ಶ್ರೀ ||ಶ್ರೀ ||

BULLETIN OF THE GOVERNMENT ORIENTAL MANUSCRIPTS LIBRARY, MADRAS.

---

## AN APPEAL.

The Government Oriental Manuscripts Library, Madras, is unique in point of variety and vastness of collections covering a very wide field of Indian Literature in Sanskrit, Tamil, Telugu, Kannada, Malayalam, Mahratti, Arabic, Persian and Urdu. The dates of several of the manuscripts go back to many hundreds of years. From an academic point of view, these collections contain some very interesting specimens of Literary, Scientific, Historical and Artistic importance. A large number of them have not yet been printed and some of them are available only in this Library. With a view to placing these manuscripts in the hands of the public in a printed form, the Government of Madras were pleased to sanction the starting of a BULLETIN under the auspices of the Government Oriental Manuscripts Library. For the present only two numbers are issued in a year. They contain critical editions of original works in Sanskrit, Tamil, Telugu, Kannada, Malayalam, Mahratti, Persian and Urdu. The annual subscription is only Rs. 4 inland and 8 shillings foreign. Scholars, Patrons of Culture, Universities, Public Libraries and Educational Institutions are requested to enrol themselves as susbscribers for this Bulletin and thus encourage the cause of Oriental Studies and Culture.

A few copies of back numbers are available for sale, post free, at the following prices which should be sent in advance.

| | | |
|---|---|---|
| Vol. I, No. 2, July to December, 1948 | .. | Rs. 2. |
| Vol. II, 1949 | .. | Rs. 4. |
| Vol. III, 1950 | .. | Rs. 4. |
| Vol. IV, 1951 | .. | Rs. 4. |

T. CHANDRASEKHARAN,
*Curator,*
*Government Oriental Manuscripts Library.*

TRIPLICANE,
MADRAS-5.

# LIST OF CATALOGUES PUBLISHED BY THE GOVERNMENT ORIENTAL MANUSCRIPTS LIBRARY, MADRAS.

## SANSKRIT.

### DESCRIPTIVE CATALOGUES.

| | Numbers. | Price. RS. | A. | P. |
|---|---|---|---|---|
| * Vol. I.—Part I, Vedic Literature .. | 1 to 46 | 0 | 12 | 0 |
| * Vol. I.—Part II. Vedic Literature .. | 47 to 245 | 0 | 12 | 0 |
| * Vol. I —Part III. Vedic Literature .. | 246 to 852 | 2 | 0 | 0 |
| * Vol. II.—Vedic Literature .. | 853 to 1245 | 1 | 12 | |
| * Vol. III.—Grammar, Lexicography aod Prosody .. | 1246 to 1805 | 1 | 8 | 0 |
| * Vol. IV —Part I. Ithihāsa and Purāṇa .. | 1806 to 2337 | 1 | 8 | 0 |
| * Vol. IV.—Part II. Upapurāṇas and Sthalamāhātmyas .. | 2338 to 2610 | 1 | 4 | 0 |
| * Vol. V.—Dharmaśāstra .. | 2611 to 3045 | 1 | 8 | 0 |
| * Vol. VI.—Dharmaśāstra .. | 3046 to 3427 | 1 | 4 | 0 |
| * Vol. VII.—Dharmaśāstra .. | 3428 to 3872 | 1 | 4 | 0 |
| * Vol. VIII.—Arthaśāstra, Kāmaśāstra and Systems of Indian Philosophy—Nyāya .. | 3873 to 4334 | 1 | 4 | 0 |
| * Vol. IX.—Systems of Indian Philosophy—Vaiśeṣika, Yoga, Mīmāmsā and Vedānta-Advaita Philosophy .. | 4335 to 4780 | 1 | 12 | 0 |
| * Vol. X.—Systems of Indian Philosophy—Dvaita, Viśiṣṭādvaita and Śaiva Vedāntas .. | 4781 to 5122 | 1 | 12 | 0 |
| * Vol XI.—Systems of Indian Philosophy .. | 5123 to 5558 | 1 | 12 | 0 |
| Vol. XII.—Religion .. | 5559 to 6266 | 1 | 12 | 0 |
| Vol. XIII.—Religion .. | 6267 to 7006 | 1 | 12 | 0 |
| * Vol. XIV.—Religion .. | 7007 to 7729 | 1 | 12 | 0 |
| * Vol XV,—Religion .. | 7730 to 8165 | 1 | 12 | 0 |
| * Vol. XVI.—Religion, Vrata and Pūjā .. | 8166 to 8780 | 1 | 12 | 0 |
| Vol. XVII.—Stotras .. | 8781 to 9357 | 1 | 12 | 0 |
| Vol. XVIII.—Stotras—Praśaṃsā Stotras .. | 9358 to 10540 | 1 | 12 | 0 |
| Vol. XIX.—Stotras—Praśaṃsā Stotras .. | 10541 to 11450 | 1 | 12 | 0 |
| Vol XX.—Kāvyas .. | 11451 to 12143 | 2 | 12 | 0 |
| Vol. XXI.—Kāvyas .. | 12144 to 12783 | 3 | 0 | 0 |
| Vol. XXII.—Rhetoric, Poetics, Music, Dancing and Śilpa śāstra .. | 12784 to 13068 | | 4 | 0 |
| Vol. XXIII.—Medicine .. | 13069 to 13381 | 1 | 8 | 0 |
| Vol. XXIV.—Jyotiṣa .. | 13382 to 14076 | 3 | 2 | 0 |
| * Vol. XXV.—Supplemental .. | 14077 to 14560 | 2 | 4 | 0 |
| Vol. XXVI.—Supplemental .. | 14561 to 15000 | 2 | 12 | 0 |
| Vol. XXVII.—Supplemental .. | 15001 to 15692 | 5 | 14 | 0 |
| Vol. XXVIII.—Supplemental .. | 15693 to 16200 | 3 | 12 | 0 |
| Vol. XXIX —Supplemental .. | 16201 to 16700 | 3 | 2 | 0 |
| Vol. XXX.—Supplemental .. | 16701 to 17200 | 7 | 10 | 0 |
| Vol. XXXI.—Supplemental .. | 17201 to 17700 | 11 | 12 | 0 |

### TRIENNIAL CATALOGUES.

| | Numbers. | RS. | A. | P. |
|---|---|---|---|---|
| * Vol. I-A (1911—13) .. | 1 to 342 | 2 | 0 | 0 |
| * Vol. I-B (1911—13) .. | 343 to 573 | 1 | 6 | 0 |
| * Vol. I-C (1911—13) .. | 574 to 801 | 1 | 6 | 0 |
| Vol. II-A (1914—16) .. | 802 to 1329 } | | | |
| Vol. II-B (1914—16) .. | 1330 to 1456 } | 18 | 2 | 0 |
| Vol. II-C (1914—16) .. | 1457 to 1942 } | | | |
| * Vol. III-A (1917—19) .. | 1943 to 2348 | 6 | 0 | 0 |
| * Vol. III-B (1917—19) .. | 2349 to 2679 | 6 | 0 | 0 |
| * Vol. III-C (1917—19) .. | 2680 to 2894 | 4 | 4 | 0 |
| Vol. IV-A (1920—22) .. | 2895 to 3203 | 9 | 0 | 0 |
| Vol. IV-B (1920—22) .. | 3204 to 3634 | 8 | 0 | 0 |
| Vol. IV-C (1920—22) .. | 3635 to 4155 | 10 | 0 | 0 |
| * Vol, V-A (1923—25) .. | 4156 to 4300 | 4 | 0 | 0 |
| * Vol. V-B (1923—25) .. | 4301 to 4415 | 2 | 8 | 0 |



## SANSKRIT—*contd.*

### TRIENNIAL CATALOGUES—(*cont.*)

| | Numbers. | Price. RS. | A. | P. |
|---|---|---|---|---|
| * Vol. V-C (1923—25) .. | 4416 to 5041 | 5 | 12 | 0 |
| Vol. VI (1926—28) .. | 5042 to 5380 | 10 | 0 | 0 |
| Vol. VII (1929—31) .. | 5381 to 5532 | 2 | 14 | 0 |
| Vol. VIII (1931-32—1933-34) .. | 5533 to 5700 | 1 | 4 | 0 |
| Vol. IX (1934—37) .. | 5701 to 5996 | 6 | 0 | 0 |
| Vol. X-A (1937-38 to 1939-40) .. | 5997 to 6496 | 14 | 10 | 0 |
| Vol. X-B and X-C (1937-38 to 1939-40) .. | 6497 to 7496 | *In the press.* | | |

### GENERAL.

| | Numbers. | RS. | A. | P. |
|---|---|---|---|---|
| Alphabetical Index of Sanskrit Manuscripts, Part I. .. | | 13 | 12 | 0 |
| Alphabetical Index of Sanskrit Manuscripts, Part II .. | | 10 | 0 | 0 |
| Alphabetical Index of Sanskrit Manuscripts, Part III .. | | 3 | 6 | 0 |
| Author Index of Sanskrit Manuscripts .. | | 1 | 8 | 0 |

## TAMIL.

### DESCRIPTIVE CATALOGUES.

| | Numbers. | RS. | A. | P. |
|---|---|---|---|---|
| Vol. I.—Alphabet, Primer. Lexicography, Grammar and Literature .. | 1 to 511 | 1 | 14 | 0 |
| Vol. II.—Itihāsa, Purāṇa, Religion and Philosophy (Vaiṣṇavism) .. | 512 to 1122 | 2 | 2 | 0 |
| Vol. III.—Religion and Philosophy (Śaivism) .. | 1123 to 1620 | 6 | 0 | 0 |
| Vol. IV.—Religion and Philosophy (Śaivism) .. | 1621 to 1867 | 3 | 10 | 0 |
| Vol. V.—Alchemy, Medicine, Magic, Witchcraft and Supplement | 1868 to 2173 | 6 | 0 | 0 |
| Vol. VI.—Miscellaneous .. | 2174 to 2725 | 19 | 12 | 0 |
| Vol. VII.—Local Records .. | 2726 to 2949 | 13 | 4 | 0 |
| Vol. VIII.—Local Records .. | 2950 to 3169 | *In the press.* | | |

### TRIENNIAL CATALOGUES.

| | Numbers. | RS. | A. | P. |
|---|---|---|---|---|
| Vol. I.—Miscellaneous (1910-13) .. | 1 to 114 | 1 | 6 | 0 |
| Vol. II.—Miscellaneous (1914-16) .. | 115 to 310 | 4 | 14 | 0 |
| Vol. III.—Miscellaneous (1917-19) .. | 311 to 409 | 5 | 0 | 0 |
| Vol. IV.—Miscellaneous (1920-22) .. | 410 to 535 | 5 | 0 | 0 |
| Vol. V.—Miscellaneous (1923-25) .. | 536 to 859 | 6 | 8 | 0 |
| Vol. VI.—Miscellaneous (1926-28) .. | 860 to 952 | 4 | 10 | 0 |
| Vol VII.—Miscellaneous (1929-34) .. | 953 to 1055 | 2 | 6 | 0 |
| Vol. VIII.—Miscellaneous (1935-43) .. | 1056 to 1473 | 34 | 14 | 0 |
| Vol. IX.—Miscellaneous (1944-49) .. | 1474 to 1605 | 13 | 8 | 0 |

### GENERAL.

| | Numbers. | RS. | A. | P. |
|---|---|---|---|---|
| Alphabetical Index of Tamil Manuscripts. Vol. I .. | | 5 | 4 | 0 |
| Alphabetical Index of Tamil Manuscripts, Vol. II .. | | 12 | 6 | 0 |
| Alphabetical Index of Tamil Manuscripts, Vol. III Local Records .. | | 8 | 6 | 0 |
| Author Index of Tamil Manuscripts .. | | 3 | 10 | 0 |

## TELUGU.

### DESCRIPTIVE CATALOGUES.

| | Numbers. | RS. | A. | P. |
|---|---|---|---|---|
| Vol. I.—Ithihāsa, Purāṇa and Māhātmya .. | 1 to 369 | 2 | 12 | 0 |
| Vol. II (1).—Śṛṅgāra Prabandhas .. | 370 to 616 | 1 | 0 | 0 |
| Vol. II (2).—Śṛṅgāra Prabandhas .. | 617 to 806 | 4 | 0 | 0 |
| Vol. III.—Śṛṅgāra Prabandhas .. | 807 to 941 | 3 | 14 | 0 |
| Vol. IV.—Prabandhas—Dvipadakāvya .. | 942 to 1221 | 5 | 12 | 0 |
| Vol. V.—Grammar, Prosody and Lexicography .. | 1222 to 1395 | 3 | 6 | 0 |
| Vol. VI.—Vacana Kāvyas .. | 1396 to 1466 | 1 | 4 | 0 |
| Vol. VII.—Śatakas .. | 1467 to 1833 | 5 | 6 | 0 |
| Vol. VIII.—Yakṣagānams and Daṇḍakams .. | 1834 to 2040 | 4 | 10 | 0 |
| Vol IX.—Vedānta .. | 2041 to 2273 | 21 | 12 | 0 |
| Vol. X.—Gaṇita and Jyotiṣa .. | 2274 to 2399 | 13 | 0 | 0 |
| Vol. XI.—Medicine .. | 2400 to 2481 | 6 | 8 | 0 |
| Vol. XII —Music (Saṅgīta) .. | 2482 to 2592 | 7 | 6 | 0 |
| Vol. XIII.—History .. | 2593 to 2657 | 4 | 14 | 0 |
| Vol. XIV.—Local tracts (Mackenzie Collections) .. | 1 to 150 | *In the press.* | | |

### TRIENNIAL CATALOGUES.

| | Numbers. | RS. | A. | P. |
|---|---|---|---|---|
| * Vol. I.—Miscellaneons (1910-13) .. | 1 to 137 | 1 | 6 | 0 |
| Vol. II.—Miscellaneous (1913-16) .. | 138 to 292 | 2 | 6 | 0 |
| Vol. III.—Miscellaneous (1916-19) .. | 293 to 539 | 6 | 0 | 0 |
| Vol. IV.—Miscellaneous (1919-22) .. | 560 to 715 | 7 | 14 | 0 |
| Vol. V,—Miscellaneous (1922-28) .. | 716 to 812 | 3 | 0 | 0 |
| Vol. VI.—Miscellaneous (1928-41) .. | 813 to 1069 | 25 | 12 | 0 |

TELUGU—*contd.*

| | Numbers. | Price. RS. A. P. |
|---|---|---|
| **GENERAL.** | | |
| Alphabetical Index of Telugu Manuscripts .. | | 3 12 0 |
| **KANNADA.** | | |
| DESCRIPTIVE CATALOGUES. | | |
| Vol. I.—Grammar, Lexicography, Prosody, Itihāsa and Purāṇa | 1 to 138 | 6 0 0 |
| Vol. II.—Itihāsa and Purāṇa .. | 139 to 317 | 4 12 0 |
| Vol. III.—Religion—Āgama .. | 318 to 476 | 6 12 0 |
| Vol. IV.—Religion—Āgama, Vīraśaiva and Christianity .. | 477 to 825 | 21 12 0 |
| Vol. V.—Religion and Kāvyas .. | 826 to 1038 | 35 2 0 |
| Vol. VI.—Kāvyas | | *In the press.* |
| **GENERAL.** | | |
| Alphabetical Index of Kannada Manuscripts .. | | 2 4 0 |
| **MALAYALAM.** | | |
| DESCRIPTIVE CATALOGUES. | | |
| Vol. I Miscellaneous .. | 1 to 351 | 8 2 0 |
| Vol. II Do. .. | 352 to 368 | 2 8 0 |
| **GENERAL.** | | |
| Alphabetical Index of Malayalam Manuscripts .. | | 0 2 0 |
| **ISLAMIC LANGUAGES.** | | |
| Descriptive Catalogue of Islamic Manuscripts, Vol. I .. | .. | 13 14 0 |
| Descriptive Catalogue of Islamic Manuscripts, Vol. II .. | .. | 16 12 0 |
| Alphabetical Index of Urdu Manuscripts .. | .. | 0 2 0 |
| Alphabetical Index of Persian Manuscripts .. | .. | 1 2 0 |
| Alphabetical Index of Arabic Manuscripts .. | .. | 0 8 0 |
| **MARATHI.** | | |
| Alphabetical Index of Marāṭhī Manuscripts | In one volume | 9 14 0 |
| Subject Index of Marāṭhī Manuscripts | (In one volume) | (9 14 0) |
| Descriptive Catalogue of Marāṭhī Manuscripts—Kaifiyats .. | | *In the press.* |

*N. B.*—*The books marked with an asterisk are out of stock.

# LIST OF BOOKS PUBLISHED BY THE GOVERNMENT ORIENTAL MANUSCRIPTS LIBRARY, MADRAS, UNDER THE MADRAS GOVERNMENT ORIENTAL MANUSCRIPTS SERIES.

| Serial Number | Name of the work. | Name of the Editor. | Language | Price. Rs. A. P. |
|---|---|---|---|---|
| 1. | *Sarva-siddhānta-saṅgraha | M. Rangacarya, M. A. Rao Bahadur. | SANSKRIT. | 0 12 0 |
| 2. | *Gaṇita-sārasaṅgraha | Do. | Do. | 2 4 0 |
| 3. | Padya-cūḍāmaṇi with commentary | Do. | Do. | 2 8 0 |
| 4. | Brahma-siddhi with commentary | Mahāmahopādhyāya S. Kuppuswami Sastri. | Do. | 7 12 0 |
| 5. | Ratneśvara-prasādana-nāṭakam | P. P. S. Sastri | Do. | 1 2 0 |
| 6. | Rāmānuja-campū with commentary | Do. | Do. | 3 0 0 |
| 7. | Mahābhāṣya with the commentary of Kaiyaṭa and super-commentary - Pradīpoddyotana of Annambhaṭṭa, Vol. I. Āhnikas 1 to 4. | P. P. S. Sastri & Dr. A. Sankaran. | Do. | 20 12 0 |
| 8. | Śāstradīpikā with the commentary Mayūkhāvaḷi | P. P. S. Sastri | Do. | *In the press.* |
| 9. | Bāla-bhārata with commentary | Do. | Do. | 2 0 0 |
| 10. | Nayā-mañjarī | Do. | Do. | 2 0 0 |
| 11. | Ḍamarukam with commentary | Do. | Do. | 0 8 0 |
| 12. | Śṛṅgāra-prakāśa, Part I. | Do. | Do. | 1 8 0 |
| 13. | Mahābhāṣya with the commentary of Kaiyaṭa and the super commentary Pradīpoddyotana of Annambhaṭṭa. Vol. II. Āhnikas 5 to 9. | T. Chandrasekharan, M. A., L. T. | Do. | *In the press.* |
| 14. | Naṉṉūṟ Kāṇḍikaiyurai. | Do. | TAMIL. | *In the press.* |
| 15. | Māṇikka-vācakar Ammāṉai. | Do. | Do. | Do. |
| 16. | Ādi-parvattādi-parvam. | Do. | Do. | Do. |
| 17. | Vasu-carittiram. | Do. | Do. | Do. |
| 18. | Sakala-nīti-kathā-nidhānamu. | Do. | TELUGU. | Do. |
| 19. | Pañca-tantramu. | Do. | Do. | Do. |
| 20. | Sundara-kāṇḍam (Rāmāyanam) by Venkamatya. | Do. | KANNADA. | Do. |
| 21. | Bhāgavatam Bhāṣā | Do. | MALAYALAM | Do. |
| 22. | Raṅgābhyāsam. | Do. | Do. | Do. |

*N. B.*—No. 5 is available at the Balamanorama Press, Mylapore, Madras.
Nos. 8 to 12 are available at the Sri Vani Vilas Press, Srirangam.
*The books marked with an asterisk are out of stock.

# LIST OF BOOKS PUBLISHED BY THE GOVERNMENT ORIENTAL MANUSCRIPTS LIBRARY, MADRAS, UNDER THE MADRAS GOVERNMENT ORIENTAL SERIES.

| Serial Number. | Name of the work. | Name of the Editor. | Language. | Price. Rs. A. P. |
|---|---|---|---|---|
| I. | Kappal Śāttiram | T. P. Palaniappa Pillai, B.O. L. | *Tamil* | 1 10 0 |
| II. | Anubhava Vaiddiya Murai. Volumes I & II. | Dr. C. Dorairajan & Dr. C. S. Uttamarayan, H. P. I. M. | Do. | |
| | Vol. I | | | 3 14 0 |
| | Vol. II | | | 4 8 0 |
| III. | Āṭṭāṉa Kōlāhalam | Tirumalai Sri Saila Sarma | Do. | 5 0 0 |
| IV. | Upadēsa-kāṇḍam Volumes I, II & III. | V. S. Chengalvaraya Pillai, M. A. | Do. | |
| | Vol. I | | | 4 10 0 |
| | Vol. II | | | 5 0 0 |
| | Vol. III | | | 5 8 0 |
| V. | Cōlaṉ Pūrva Paṭṭayam | C. M. Ramachandra Chettiar, B.A., B.L. | Do. | 5 0 0 |
| VI. | Koṅgadeśa Rājākkaḷ | Do. | Do. | 1 8 0 |
| VII. | Śivajñāṉa-dīpam | T. P. Palaniappa Pillai, B O L. | Do. | 1 6 0 |
| VIII. | Daṭca-nāyaṉār Vaiddiya Aṭṭavaṇai | Dr. K. Tyagarajan, L.I.M. | Do. | 1 8 0 |
| IX. | Abhinaya-darpaṇamu | T. V. Subba Rao, B.A., B.L. | *Telugu* | 1 12 0 |
| X. | Auṣadha-yōgamulu | Dr. Veturi Sankara Sastri | Do. | 3 12 0 |
| XI. | Vaidya Nighaṇṭuvu | Do. | | 2 12 0 |
| XII. | Dhanur-vidyā Vilāsamu | Veturi Prabhakara Sastri | Do. | 4 14 0 |
| XIII. | Yōga-darśana-viṣayamu | Vedam Lakshmi Narayana Sastri, B.O L. | Do. | 1 2 0 |
| XIV. | Khaḍgalakṣaṇa Sirōmaṇi | N. Venkata Rao, M.A. | Do. | 1 12 0 |
| XV. | Tantra-sāra-saṅgraha (Viṣanārāyaṇīya) | Vaidyaratna. Dr. M. Doraiswami Ayyangar | *Sanskrit* | 15 4 0 |
| XVI. | Bhārgava-nāḍikā | Dr. C. Kunhan Raja, M.A., D. Phil. | Do. | 6 0 0 |
| XVII. | Hariharacaturaṅgam | S. K. Ramanatha Sastri | Do. | 6 8 0 |
| XVIII. | Brahma - sūtravṛtti-Mitākṣarā of Annambaṭṭa | P. S. Rama Sastri | Do. | 7 0 0 |
| XIX. | Nyāyasiddhānta-tattvāmṛtam of Srinivasa | S. Subrahmanya Sastri, B. O. L. | Do. | 2 8 0 |
| XX. | Garbha-cikitsā | Dr. N. Madhava Menon, A.M.A.C., | *Malayālam* | 3 8 0 |
| XXI. | Vāstulakṣaṇam and Śilpaviṣayam | S. K. Ramanatha Sastri | Do. | 2 0 0 |
| XXII. | Kaṇakku - sāram - Bālaprabōdham | Dr. C. Achuta Menon, B.A., Ph. D. | Do. | 2 0 0 |
| XXIII. | Kaṇakku-sāram | Do. | Do. | 2 12 0 |
| XXIV. | Kriyākramam | P. Narayanan Kutty Menon, M.A. | Do. | 2 4 0 |
| XXV. | Lōkōpakāra of Cāmuṇḍarāya | H. Sesha Ayyangar | *Kannada* | 8 0 0 |
| XXVI. | Raṭṭa atam | Do. | Do. | 4 4 0 |
| XXVII. | Vaidya-sāra-saṅgraha | Vaidyaratna Dr. G. Srinivasamurti, B.A., B.L., M.B. & C.M. | Vol. I | *In the press* |



| Serial Number. | Name of the work | Name of the Editor | Language. | Price. |
|---|---|---|---|---|
| XXVIII. | Aśva-śāstram of Abhinavacandra | Dr. P. Srinivasa Rao & H Sesha Ayyangar | *Kannada* | 4 2 0 |
| XXIX. | Auṣadhagalu-Vaidya Viṣaya | Vaidyaratna Dr. G. Srinivasamurthi, B.A., B.L., M.B. & CM. | Do | 6 14 0 |
| XXX. | Saṅgīta-ratnākara | M. Mariappa Bhat, M.A., L.T. | Do. | 1 8 0 |
| XXXI. | Sūpa Śāstra | U. Sitaramacarya | Do. | 2 0 0 |
| XXXII | Jami-al-Ashya | Afzal-ul-Ulama Hakim Abdul Qadir Ahmed Sahib | *Persian* | 13 8 0 |
| XXXIII. | Tibb-e-Faridi | Do. | Do. | 8 4 0 |
| XXXIV. | Tahqiq-al-Buhran | Do. | Do. | 1 8 0 |
| XXXV. | Safinat-al-Najat | Janab Rahim Ahmed Farooqui, M.A. | Do. | 1 10 0 |

Serial Nos. XXXVI to LXX were published under the auspices of the TANJORE MAHARAJA SERFOJI'S SARASWATHI MAHAL LIBRARY. TANJORE.

| Serial Number. | Name of the work | Name of the Editor | Language. | Price. |
|---|---|---|---|---|
| LXXI. | Vaiddiyak Kaḷañciyam | Dr. C. N. Kuppuswami, H.P.I.M., & Dr. V. S. Parvati, L.I.M. | *Tamil* | 2 8 0 |
| LXXII. | Anubhava-vaiddiya-muṟai, Vol. III. | Do. | Do. | 5 0 0 |
| LXXIII. | Anubhava Vaidyamu | Dr. Mulugu Visvesvara Sastri, H.P.I M. | *Telugu* | 6 0 0 |
| LXXIV. | Saivācāra-saṅgrahamu | Vidvan G. J. Somayaji, M.A., L T. | Do. | 2 0 0 |
| LXXV. | Ārogya-cintāmaṇi | Dr. N. Visvanatha Sarma | *Sanskrit* | 9 0 0 |
| LXXVI. | Tattvasāra with Ratnasāriṇī | Karappankad V. S. Venkatacaryaswami, | Do. | 6 0 0 |
| LXXVII. | Sūtrārthāmṛtalaharī | Dr. R. Nāgaraja Sarma. M.A, Ph.D., L.T. | Do. | 3 4 0 |
| LXXVIII. | Ratna-dīpikā and Ratna śāstram | Sri P. S. Rama Sastri | Do. | 2 4 0 |
| LXXIX. | Aśva-cikitsā | Dr. C. K. Velayudhan Nair, B. V. Sc. | *Malayālam* | 1 8 0 |
| LXXX. | Phalasāra-samuccaya | Dr. C. Achutha Menon, B.A. Ph.D | Do. | 8 0 0 |
| LXXXI. | Mahā-sāram | Dr. M. K. Vaidyar, A.M.A.C. | Do | 11 0 0 |
| LXXXII. | Saptariṣi-nāḍi | Professer K. Natesan | *Tamil* | 20 0 0 |
| LXXXIII. | Karnāṭaka Rājākkaḷ Savistāra Carittiram | V. R. Ramachandra Dikshitar, M.A. | Do. | *In the press.* |
| LXXXIV. | Bharata-siddhāntam | P. Sambamurti, B.A., B.L. | Do. | Do. |
| LXXXV. | Piḷḷaippiṇi-Vākaṭam | Vaidyaratna Dr. M. Duraiswami Ayyangar | Do. | Do. |
| LXXXVI. | Anubhava Vaiddiyam Vol. IV | Dr. C N. Kuppuswami, H. P. I. M. | Do. | Do. |
| LXXXVII. | Māṭṭu-Vākaṭam | Dr. I. M. Azizuddin, B.A., G.M.V C.; B.V. Sc., Ph. D. (Edin.) | Do. | Do. |
| LXXXVIII. | Brahma Vidyā Sudhārṇavamu | V. V. Krişna Rao, B.A. | *Telugu* | Do. |
| LXXXIX. | Rāgatāḷa Cintāmaṇi | T. V Subba Rao, B.A., B.L. | Do. | Do. |
| XC. | Vaidya-cintāmaṇi | Dr. Mulugu Visvesvara Sastri, H.P.I.M. | Do. | Do. |
| XCI. | Kumāra Rāmuni Kathā | Dr. N. Venkataramanayya, M.A., Ph.D. | Do. | Do. |
| XCII. | Kāṭamarāju Caritra | Sri V. Prabhakara Sastri | Do. | Do. |
| XCIII. | **Deva-keraḷam (Candrakalā-nāḍi)** | Sri T. S. Ranganatha **Josyar** | *Sanskrit* | Do |

| Serial Number. | Name of the work. | Name of the Editor. | Language. | Price. |
|---|---|---|---|---|
| XCIV. | Pātañjala - Yogasūt r a-bhāṣya-vivaraṇam | P. S Rama Sastri and S. R. Krishanamurti Sastri | *Sanskrit* | *In the Press* |
| XCV. | Kiḷi-vaṇḍu-saṃvādam | V. H. Subrahamanya Sastri | *Malayālam* | Do. |
| XCVI. | Advaita-vedāntam | S. K. Ramanatha Sastri | Do. | Do. |
| XCVII. | Bārhaspatya-sūtra with Commentary | Dr. C. Achyuta Menon, B.A., Ph. D. | Do. | Do. |
| XCVIII. | Karaṇa-paddhati | Do. | Do. | Do. |
| XCIX. | Yōga-sāram | Dr. M. K. Vaidyar A.M. A.C. | Do. | Do. |
| C. | Vaidya-sāra-saṅgraha Volume II | Vaidyaratna Dr. G Srinivasamurti, B.A., B.L., M.B. & C. M. | *Kannaḍa* | Do. |
| CI. | Sadguru-rahasya | Sri M. Mariappa Bhat, M.A., L.T | Do. | 2 6 0 |
| CII. | Shawakil-al-Hur | Dr. M. Abdul Haq, M.A. D. Phil. | *Arabic* | *In the press* |

*Terms of Sales*

Packing, Postage and Sales Tax extra.

25 per cent. discount will be allowed to all *bona fide* book-sellers.

Books will not be sent by V. P. P.

The cost of the books together with the sales tax, packing and postal charges, should be sent in advance to:

THE CURATOR,
GOVERNMENT ORIENTAL MANUSCRIPTS
LIBRARY, UNIVERSITY BUILDINGS.
TRIPLICANE, MADRAS 5.
INDIA.

M. L. J. PRESS, MADRAS—4.